ಮಂಗಳವಾರ, ನವೆಂಬರ್ 16, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 317 | ಪುಟ 14

www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಚಳಿಗಾಲ ಎಂದರೆ ಆರೋಗ್ಯಸಂಪದದ ಬುತ್ತಿಯನ್ನು ಕಟ್ಟಿಕೊಳ್ಳುವ ಕಾಲ. ನವಚೈತನ್ಯವನ್ನು ಗಳಿಸಿಕೊಳ್ಳುವ ಸವಿಗಾಲ

ಆಳ-ಅಗಲ ರಾಷ್ಟ್ರ ರಾಜಧಾನಿ ಮಾಲಿನ್ಯದ ಕೂಪ

₹600 ಕೋಟಿ ಮೌಲ್ಯದ 120 ಕೆ.ಜಿ ಹೆರಾಯಿನ್ ವಶ, ಮೂವರ ಬಂಧನ 6

ಪುಸ್ತಕ ವಿವಾದ: ಕಾಂಗ್ರೆಸ್ ನಾಯಕ ಖುರ್ಷಿದ್ ಮನೆಗೆ ಬೆಂಕಿ 11

ಸೆನ್ಸೆಕ್ಸ್	ನಿಫ್ಟಿ	₹/$
60,718 ▲	18,109 ▲	74.46 ▼

ಮಧುರವಾದ ಬಾಂಧವ್ಯಕ್ಕಾಗಿ "ಬ್ರೂಮೆಕ್ಸ್ ಫೋರ್ಟೆ"

ಸುಮಧುರ ಸಂಬಂಧವನ್ನು 'ಬ್ರೂಮೆಕ್ಸ್ ಫೋರ್ಟೆ' ಸೇವಿಸಿ ಬಲಪಡಿಸಿಕೊಳ್ಳಿ. ಇದು ಸಾಂಪ್ರದಾಯಿಕ ಮಹಾರಾಜ ಪ್ರಸರಣ ತೈಲ ಇವರು ತಯಾರಿಸಿದ ನಿತ್ರಾಣ ಹೋಗಲಾಡಿಸುವ ಔಷಧ.

ನರ ಮತ್ತು ರಕ್ತನಾಳಗಳನ್ನು ಪುನಶ್ಚೇತನಗೊಳಿಸುವುದಲ್ಲದೇ, ದೇಹದ ಆಯಾಸಕ್ಕೆ ಬಲು ಉಪಯೋಗಕಾರಿಯಾಗಿದೆ. ದುರ್ಬಲ ನರಗಳಿಂದಾಗಿ ಹೊರಹೊಮ್ಮುವ ನಿತ್ರಾಣ, ಮರಗಟ್ಟುವಿಕೆ, ಶಕ್ತಿ ಕುಂದುವಿಕೆ ಹಾಗೂ ಇನ್ನಿತರ ಅನೇಕ ಕಾಯಿಲೆಗಳಿಗೆ ಪರಿಣಾಮಕಾರಿ ಚಿಕಿತ್ಸೆ ಇದರ ಸೇವನೆಯಿಂದ ಪಡೆಯಬಹುದು. ವಯಸ್ಸಿನ ಅಂತರವನ್ನು ಮರೆತು, ನರದೌರ್ಬಲ್ಯ ಹೋಗಲಾಡಿಸಿ ಬಲ ಯುತಗೊಳಿಸಿ ನಿಕಟ ಸಂಬಂಧವನ್ನು ನಿರಂತರ ಶಕ್ತಿಯ ತರಂಗದೊಡನೆ ಉದ್ದೀಪನಗೊಳಿಸಿ. ಎಲ್ಲಾ ವಯಸ್ಸಿನ ವರಿಗೆ ಇದೊಂದು ಮೃದುವಾದ ಜೆಲ್ ರೂಪದ ಎನರ್ಜಿ ಬೂಸ್ಟರ್.

BRUMEX FORTE FLY ABOVE — ಬ್ರೂಮೆಕ್ಸ್ ಫೋರ್ಟೆ

ಆರೋಗ್ಯಕ್ಕಾಗಿ ಅಡ್ಡ ಪರಿಣಾಮಗಳ ಬಗ್ಗೆ ಚಿಂತೆಯೇ?

ಶಂಕರ್ ಫಾರ್ಮಸಿ ಯಾ ಡಯಾಬಿಟಿಕ್ ರಿಸರ್ಚ್ ಸೆಂಟರ್ ಇವರು ಅಭಿವೃದ್ಧಿಪಡಿಸಿರುವ ಔಷಧಿ

ಮಧುಮೇಹ -ಎನ್

ಆರೋಗ್ಯಕ್ಕಾಗಿ ಜೊತೆಯಾಗಿ ಹೋರಾಡೋಣ

ಆರೋಗ್ಯಕ್ಕಾಗಿ ಅಡ್ಡ ಪರಿಣಾಮಗಳಿಂದ ಸರ್ವಾಂಗಗಳನ್ನು ಕಾಪಾಡುವ ಆಯುರ್ವೇದಿಕ್ ಔಷಧಿ ಮಧುಮೇಹ-ಎನ್ ಸದಾ ಉಪಯೋಗಿಸಿರಿ ಮತ್ತು ಆರೋಗ್ಯಕರ ಜೀವನ ಸಾಗಿಸಿ

ಇದು ಮಧುಮೇಹ-ಎನ್ ಇದರ ಲಕ್ಷಣಗಳು:
- ಆಗಾಗ್ಗೆ ರಾತ್ರಿ ವೇಳೆ ಮೂತ್ರಶಂಕೆ
- ಅತಿಯಾದ ನೀರಡಿಕೆ
- ಶ್ರಮವಿಲ್ಲದ ತೂಕ ಇಳಿಕೆ
- ಅತಿಯಾದ ಹಸಿವು
- ಮಂಜು ಮಂಜಾದ ದೃಷ್ಟಿ
- ಕೈ ಅಥವಾ ಕಾಲಿನಲ್ಲಿ ಮಟ್ಟುಗಟ್ಟುವುದು
- ಅತಿಯಾದ ಆಯಾಸ
- ಅತಿಯಾದ ಶುಷ್ಕ ಚರ್ಮ
- ಮೆಲ್ಲನೆ ಗುಣವಾಗುವ ಗಂಟಲು ಕೆರೆತ
- ಸಾಮಾನ್ಯಕ್ಕಿಂತ ಅಧಿಕವಾದ ಸೋಂಕು

ಸದಾ ಉಪಯೋಗಿಸಿ ಮಧುಮೇಹ-ಎನ್

ಸಿಹಿಯಾದ ನೆನಪುಗಳು

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ: From the house of A & J Health Care, Bangalore
For a Healthy Society
Ph: 8762226000, 9243112373.

ಒಗ್ಗಟ್ಟು ತೋರಿದ ಸಚಿವತ್ರಯರು • ದಾಖಲೆ ಕೊಡುವಂತೆ ಕಾಂಗ್ರೆಸ್‌ಗೆ ಸವಾಲು

ಬಿಸಿ ಏರಿಸಿದ ಬಿಟ್‌ಕಾಯಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಭಾಗಿಯಾಗಿರುವ 'ಬಿಟ್‌ಕಾಯಿನ್ ಹ್ಯಾಕಿಂಗ್' ಪ್ರಕರಣಕ್ಕೆ ಸಂಬಂಧಿಸಿ ಬಿಜೆಪಿ–ಕಾಂಗ್ರೆಸ್ ಮಧ್ಯದ ಜಟಾಪಟಿ ಸೋಮವಾರ ತಾರಕಕ್ಕೇರಿದೆ.

ಈ ಪ್ರಕರಣದಲ್ಲಿ ರಾಜಕೀಯ ನಂಟಿನ ಕುರಿತು ದಾಖಲೆ ಬಹಿರಂಗಪಡಿಸುವಂತೆ ಬಿಜೆಪಿ ಸೋಮವಾರ ಸವಾಲು ಹಾಕಿದ್ದರೆ, ಅಧಿಕಾರದಲ್ಲಿದ್ದವರು ಆ ಛಾತಿ ಪ್ರದರ್ಶಿಸಬೇಕು ಎಂದು ಕಾಂಗ್ರೆಸ್ ತಿರುಗೇಟು ನೀಡಿದೆ.

ಶ್ರೀಕೃಷ್ಣ ಪೊಲೀಸ್ ವಶದಲ್ಲಿರುವಾಗಲೇ ಹ್ಯಾಕಿಂಗ್ ಮೂಲಕ ಸಾವಿರಾರು ಕೋಟಿ ರೂಪಾಯಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಲಾಗಿದೆ ಎಂಬ ಆರೋಪ ಹಲವು ದಿನಗಳಿಂದಲೂ ಸದ್ದು ಮಾಡುತ್ತಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸೂಚನೆಯಂತೆ ಶನಿವಾರ ಪತ್ರಿಕಾ ಹೇಳಿಕೆ ನೀಡಿದ್ದ ಬೆಂಗಳೂರು ಪೊಲೀಸ್ ಕಮಿಷನರ್ ಕಮಲ್ ಪಂತ್, ಆರೋಪ ಅಲ್ಲಗಳೆದಿದ್ದರು. ಅದೇ ದಿನ ಪತ್ರಿಕಾಗೋಷ್ಠಿ ನಡೆಸಿದ್ದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಪೊಲೀಸರ ಹೇಳಿಕೆಯನ್ನು ಪುನರುಚ್ಚರಿಸಿದ್ದರು.

ವಿಧಾನಸೌಧದಲ್ಲಿ ಸೋಮವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿದ ಸಚಿವರಾದ ಆರ್.ಅಶೋಕ, ವಿ.ಸೋಮಣ್ಣ ಮತ್ತು ಕೆ.ಗೋಪಾಲಯ್ಯ, ಬಿಟ್‌ಕಾಯಿನ್ ಹ್ಯಾಕಿಂಗ್ ವಿಚಾರದಲ್ಲಿ ಕಾಂಗ್ರೆಸ್ ನಾಯಕರು ಮಾಡುತ್ತಿರುವ ಆರೋಪಗಳನ್ನು ಅಲ್ಲಗಳೆದರು. ಬಿಜೆಪಿ ನಾಯಕರು ಹಗರಣದಲ್ಲಿ ಭಾಗಿಯಾಗಿರುವುದಕ್ಕೆ ದಾಖಲೆಗಳಿದ್ದರೆ ಬಹಿರಂಗಪಡಿಸುವಂತೆ ಸವಾಲೆಸೆದರು.

'ಚುನಾವಣಾ ರಾಜಕೀಯದಲ್ಲಿ ಸೋತು ಸುಣ್ಣವಾಗಿರುವ ಕಾಂಗ್ರೆಸ್ ಪಕ್ಷ ಸುಳ್ಳು ಸುದ್ದಿ ಹರಡುವುದರಲ್ಲೇ ಮಗ್ನವಾಗಿವೆ' ಎಂದರು.

4ನೇ ಪುಟ ನೋಡಿ

'ಇಲ್ಲದ ವಿವಾದ ಜೀವಂತವಿಡಲು ಯತ್ನ'



ಬಿಟ್‌ಕಾಯಿನ್ ಹೆಸರಿನಲ್ಲಿ ನಡೆಯದೇ ಇರುವ ಪ್ರಕರಣವನ್ನು ಮುಂದಿಟ್ಟುಕೊಂಡು ವಿವಾದ ಜೀವಂತವಾಗಿಡಲು ಕಾಂಗ್ರೆಸ್ ಯತ್ನಿಸುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಿಟ್‌ಕಾಯಿನ್ ಹ್ಯಾಕಿಂಗ್ ಹಗರಣ ನಡೆದೇ ಇಲ್ಲ. ಪದೇ ಪದೇ ಅದನ್ನೇ ಪ್ರಸ್ತಾಪಿಸಿ, ರಾಜಕೀಯ ಮಾಡಲು ಮುಂದಾಗಿದೆ' ಎಂದರು.

'ಬಿಟ್‌ಕಾಯಿನ್ ಕುರಿತು ಏನೇ ಪ್ರಶ್ನೆಗಳಿದ್ದರೂ ಕಾಂಗ್ರೆಸ್‌ನವರಿಗೇ ಕೇಳಬೇಕು. ಅವರ ಬಳಿ ದಾಖಲೆಗಳಿದ್ದರೆ ಜಾರಿ ನಿರ್ದೇಶನಾಲಯ ಅಥವಾ ಇತರ ತನಿಖಾ ಸಂಸ್ಥೆಗಳಿಗೆ ನೀಡಲಿ. ಈ ಬಗ್ಗೆ ಗಂಭೀರವಾದ ತನಿಖೆಗೆ ತನಿಖೆ ನಡೆಸಲು ನಾವು ಸಿದ್ಧರಿದ್ದೇವೆ' ಎಂದರು.

ಶ್ರೀಕಿಗೆ ರಕ್ಷಣೆ ಕೊಡಿ: ಸಿದ್ದರಾಮಯ್ಯ



ಬಿಟ್‌ಕಾಯಿನ್ ಹಗರಣದ ಸೂತ್ರಧಾರ ಎನ್ನಲಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಗೆ ಪ್ರಾಣಾಪಾಯದ ಸಾಧ್ಯತೆ ಇದ್ದು, ತಕ್ಷಣವೇ ಸೂಕ್ತ ಪೊಲೀಸ್ ಭದ್ರತೆ ಒದಗಿಸಬೇಕು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಈ ಸಂಬಂಧ ಸೋಮವಾರ ಸರಣಿ ಟ್ವೀಟ್ ಮಾಡಿದ್ದು, 'ಬಿಟ್‌ಕಾಯಿನ್ ಹಗರಣ ತಂತ್ರಜ್ಞಾನ ಅವಲಂಬಿಸಿರುವ 'ಬಿಳಿಕಾಲರ್ ಅಪರಾಧ'. ಇದಕ್ಕೆ ಸಂಬಂಧಿಸಿದ ಖಾತೆಗಳ ಪಾಸ್‌ವರ್ಡ್ ಸೇರಿದಂತೆ ಬಹಳಷ್ಟು ಮಾಹಿತಿಗಳು ಶ್ರೀಕಿಯ ನೆನಪಲ್ಲಿ ಮಾತ್ರ ಇದೆ, ಲಿಖಿತ ದಾಖಲೆಗಳಿಲ್ಲ ಎನ್ನಲಾಗುತ್ತಿದೆ. ಈ ಕಾರಣದಿಂದ ಶ್ರೀಕಿಯ ಪ್ರಾಣಕ್ಕೆ ಅಪಾಯದ ಸಾಧ್ಯತೆ ಇದೆ' ಎಂದು ಸಂಶಯ ವ್ಯಕ್ತಪಡಿಸಿರುವ ಅವರು, ರಕ್ಷಣೆ ಕೊಡುವಂತೆ ಮುಖ್ಯಮಂತ್ರಿಗೆ ಒತ್ತಾಯಿಸಿದ್ದಾರೆ.

4ನೇ ಪುಟ ನೋಡಿ

'ನನಗೆ ನೋಟಿಸ್ ಕೊಟ್ಟರೆ ಏನಾಗುತ್ತದೆ?'



'ಶ್ರೀಕೃಷ್ಣನನ್ನು ಬಳಸಿಕೊಂಡು ಜನ್‌ಧನ್ ಖಾತೆಗಳ ಸರ್ವರ್‌ಗೂ ಕನ್ನಹಾಕಿ ₹ 6,000 ಕೋಟಿ ದೋಚಲಾಗಿದೆ ಎಂಬ ಸುದ್ದಿ ಕುರಿತು ನಾನು ಮಾತನಾಡಿದ್ದೇನೆ. ಅದಕ್ಕಾಗಿ ಜಾರಿ ನಿರ್ದೇಶನಾಲಯದವರು ನನಗೆ ನೋಟಿಸ್ ಕೊಟ್ಟರೆ ಏನಾಗುತ್ತದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

4ನೇ ಪುಟ ನೋಡಿ

ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ಸುರಿವ ಮಳೆಯಲ್ಲೇ ಪಾದಚಾರಿಗಳು ನಡೆದುಕೊಂಡು ಹೋದರು – ಪ್ರಜಾವಾಣಿ ಚಿತ್ರ

ಬೆಳಿಗ್ಗೆ ಬಿಸಿಲು, ಮಧ್ಯಾಹ್ನ ಮೋಡ ಕವಿದ ವಾತಾವರಣ

ಜೋರು ಮಳೆ: ಮನೆಗಳಿಗೆ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲದಿನಗಳಿಂದ ನಿರಂತರವಾಗಿ ಸುರಿದು ಸೋಮವಾರ ಬೆಳಿಗ್ಗೆ ಬಿಡುವು ಪಡೆದಿದ್ದ ಮಳೆ, ಮಧ್ಯಾಹ್ನದ ನಂತರ ಜೋರಾಗಿ ಸುರಿಯಿತು. ಕಾವಲ್‌ಭೈರಸಂದ್ರದಲ್ಲಿ 10 ಮನೆಗಳಿಗೆ ನೀರು ನುಗ್ಗಿತು. ನಗರದ ಅನೇಕ ಕಡೆ ಕಾಲುವೆಗಳು ತುಂಬಿಹರಿದವು. ರಸ್ತೆಗಳು ನೀರಿನಿಂದ ಆವೃತವಾದವು.

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿರುವುದರಿಂದ ರಾಜ್ಯದಲ್ಲೂ ಉತ್ತಮ ಮಳೆ ಸುರಿಯುತ್ತಿದೆ. ನಗರದಲ್ಲೂ ಮೋಡ ಕವಿದ ವಾತಾವರಣ ಕಾಣಿಸಿಕೊಂಡು, ಜೋರು ಮಳೆ ಆಗುತ್ತಿದೆ. ಸೋಮವಾರ ಬೆಳಿಗ್ಗೆ ಹಲವೆಡೆ ಬಿಸಿಲು ಇತ್ತು. ಅಲ್ಲಲ್ಲಿ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನದ ನಂತರ ಬಹುತೇಕ ಕಡೆ ಮೋಡಗಳ ಛಾಯೆ ಇತ್ತು. ದೊಡ್ಡ ದೊಡ್ಡ ಹನಿಗಳ ಮೂಲಕವೇ ಮಳೆ ಆರಂಭವಾಯಿತು. ಹನಿಗಳ ಸದ್ದು ಜೋರಾಗಿತ್ತು. ಸಂಜೆ ಹಾಗೂ ರಾತ್ರಿಯೂ ಮಳೆ ಅಬ್ಬರ ಹೆಚ್ಚಾಗಿತ್ತು.

ಕಾವಲ್‌ಭೈರಸಂದ್ರದ ಕಾವೇರಿ ನಗರದ ಎ ಹಂತದಲ್ಲಿ 10 ಮನೆಗಳಿಗೆ ನೀರು ನುಗ್ಗಿದ್ದರಿಂದ ನಿವಾಸಿಗಳು ತೊಂದರೆ ಅನುಭವಿಸಿದರು. ಮನೆಗೆ ನುಗ್ಗಿದ್ದ ನೀರು ಹೊರ ಹಾಕುವುದರಲ್ಲೇ ನಿವಾಸಿಗಳು ರಾತ್ರಿ ಕಳೆದರು. ನೀರಿನ ಜೊತೆಯಲ್ಲಿ ಕೊಳಚೆಯೂ ಮನೆಗೆ ನುಗ್ಗಿದ್ದರಿಂದ ದುರ್ನಾತ ಹೆಚ್ಚಿತ್ತು. ಪೀಠೋಪಕರಣ ಹಾಗೂ ಎಲೆಕ್ಟ್ರಾನಿಕ್ ವಸ್ತುಗಳು ನೀರಿನಲ್ಲೇ ಮುಳುಗಿದ್ದವು. ಅವುಗಳನ್ನು ತೆರವು ಮಾಡಲು ನಿವಾಸಿಗಳು ಪರದಾಡಿದರು.

'ಕಾವೇರಿ ನಗರದಲ್ಲಿ ಬಿಬಿಎಂಪಿ ಹಾಗೂ ಜಲಮಂಡಳಿ ವತಿಯಿಂದ ಕಾಮಗಾರಿಗಳು ನಡೆಯುತ್ತಿದೆ. ಇದಕ್ಕಾಗಿ ರಸ್ತೆ ಅಗೆಯಲಾಗಿದ್ದು, ನೀರು ಹರಿಯುವಿಕೆ ದಿಕ್ಕನ್ನೇ ಬದಲಿಸಲಾಗಿದೆ. ಇದೇ ಕಾರಣಕ್ಕೆ ಮನೆಗಳಿಗೆ ನೀರು ನುಗ್ಗಿದೆ' ಎಂದು ಸ್ಥಳೀಯ ನಿವಾಸಿಯೊಬ್ಬರು ದೂರಿದರು.

3B ಪುಟ ನೋಡಿ

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹4510 /-gm
ಬೆಳ್ಳಿ ₹ 62,000/-
ಚಿಕ್ಕಪೇಟೆ: 41300355

ತಮಿಳುನಾಡು, ಕೇಂದ್ರಕ್ಕೆ 'ಸುಪ್ರೀಂ' ನೋಟಿಸ್

ನವದೆಹಲಿ: ಕಾವೇರಿ ನದಿಯನ್ನು ವೆಲ್ಲಾರು, ವೈಗೈ ಮತ್ತು ಗುಂಡಾರು ನದಿಗಳಿಗೆ ಜೋಡಿಸುವ ಯೋಜನೆಗೆ ಸಂಬಂಧಿಸಿದಂತೆ ಆರು ವಾರಗಳಲ್ಲಿ ಪ್ರತಿಕ್ರಿಯೆ ನೀಡಲು ಸೂಚಿಸಿ ತಮಿಳುನಾಡು, ಪುದುಚೇರಿ ಮತ್ತು ಕೇಂದ್ರ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ಜಾರಿ ಮಾಡಿದೆ.

6

ತೆರಿಗೆ: ರಾಜ್ಯಗಳಿಗೆ ₹ 95,082 ಕೋಟಿ ಬಿಡುಗಡೆಗೆ ನಿರ್ಧಾರ

ನವದೆಹಲಿ: ಸುಧಾರಣಾ ಕಾರ್ಯಕ್ರಮಗಳು ಮತ್ತು ಬಂಡವಾಳ ವೆಚ್ಚವನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಇದೇ ತಿಂಗಳಲ್ಲಿ ರಾಜ್ಯಗಳಿಗೆ ₹95 ಸಾವಿರ ಕೋಟಿಗೂ ಅಧಿಕ ತೆರಿಗೆಯ ಮೊತ್ತವನ್ನು ವರ್ಗಾಯಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ.

3B

ನಿರ್ಮಾಣ ವಲಯದಲ್ಲಿ ಎಂ– ಸ್ಯಾಂಡ್ ಬಳಕೆ

ಅಭಾವ ಸೃಷ್ಟಿಸಿದ ಮರಳು ಮಾಫಿಯಾ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಮರಳಿನ ಬೇಡಿಕೆ–ಪೂರೈಕೆ ವ್ಯವಸ್ಥೆಗಳೇ 'ಕೃತಕ ಅಭಾವ' ಸೃಷ್ಟಿಸಿ ವ್ಯವಹಾರ ಕುದುರಿಸುವ ಕಾರಣದಿಂದ ದರ ಗಗನಕ್ಕೆ ಏರಿ, ಈ ವ್ಯಾಪಾರ ದಂಧೆಯಾಗಿ ಮಾರ್ಪಟ್ಟಿದೆ. ಎಂ–ಸ್ಯಾಂಡ್ (ಮ್ಯಾನುಫ್ಯಾಕ್ಚರ್ಡ್ ಸ್ಯಾಂಡ್) ಲಭ್ಯ ಇದ್ದರೂ ನದಿ ಮರಳಿನ ಗುಣಮಟ್ಟ ಹೆಚ್ಚು ಎಂಬ ಭಾವನೆಯಿಂದ 'ಮಾಫಿಯಾ' ಸ್ವರೂಪ ಪಡೆದಿದೆ ಎನ್ನುವುದು ಕಟ್ಟಡ ನಿರ್ಮಾಣ ವಲಯದ ಅಭಿಪ್ರಾಯ.

ಮರಳು ಕೊರತೆ ನೀಗಿಸಲು ಮೂರು ವರ್ಷದ ಹಿಂದೆ ಮಲೇಷ್ಯಾದಿಂದ ಆಮದು ಮಾಡಿಕೊಂಡ ಟನ್‌ಗಟ್ಟಲೆ ಮರಳು, ನವ ಮಂಗಳೂರು ಮತ್ತು ಆಂಧ್ರಪ್ರದೇಶದ ಕೃಷ್ಣ ಪಟ್ಟಣಂ ಬಂದರು ಹಾಗೂ ಸ್ಟಾಕ್ ಯಾರ್ಡ್‌ಗಳಲ್ಲಿ ದಾಸ್ತಾನಿದೆ. ಬಂದರುಗಳಲ್ಲಿ 2.50 ಲಕ್ಷ ಟನ್‌ಗೂ ಹೆಚ್ಚು, ಸ್ಟಾಕ್ ಯಾರ್ಡ್‌ಗಳಲ್ಲಿ 1.50 ಲಕ್ಷ ಟನ್‌ಗೂ ಹೆಚ್ಚು ಮರಳು ಕೊಳ್ಳುವವರೇ ಇಲ್ಲದೆ ರಾಶಿ ಬಿದ್ದಿದೆ.

ರಾಜ್ಯದಲ್ಲಿ ಗುರುತಿಸಿದ ನೈಸರ್ಗಿಕ ಮರಳು ನಿಕ್ಷೇಪಗಳ ಪೈಕಿ 251ನ್ನು ಹರಾಜು ಮಾಡಲಾಗಿದೆ. ಉಳಿದ 102 ನಿಕ್ಷೇಪಗಳನ್ನು ಸರ್ಕಾರಿ ಸ್ವಾಮ್ಯದ ಹಟ್ಟಿ ಚಿನ್ನದ ಗಣಿ (ಎಚ್‌ಜಿಎಂಎಲ್) ಮತ್ತು ಕರ್ನಾಟಕ ರಾಜ್ಯ ಖನಿಜ ನಿಗಮಕ್ಕೆ (ಕೆಎಸ್‌ಎಂಸಿ– ಹಿಂದಿನ ಎಂಎಂಎಲ್) ವಹಿಸಿ ಗ್ರಾಹಕರಿಗೆ ಪೂರೈಸಲು ಹೊಸ ಮರಳು ನೀತಿಯಲ್ಲಿ ಪ್ರಸ್ತಾಪಿಸಲಾಗಿದೆ. ಮರಳು ಗಣಿಗಾರಿಕೆಗೆ ಗುತ್ತಿಗೆ ಪಡೆದ ಸಂಸ್ಥೆಗಳ ಅವಧಿ ಮುಗಿದ ಬಳಿಕ ಆ ನಿಕ್ಷೇಪಗಳಲ್ಲಿ ಮರಳು ಗಣಿಗಾರಿಕೆ ಮತ್ತು ಸಾಗಣೆ ಹೊಣೆಯನ್ನು ಈ ಸಂಸ್ಥೆಗಳೇ ವಹಿಸಿಕೊಳ್ಳಲಿದೆ. ಜೊತೆಗೆ ಉಡುಪಿ, ಮಂಗಳೂರಿನಲ್ಲಿ ತಲಾ 4, ಕೊಪ್ಪಳ, ರಾಯಚೂರು ಜಿಲ್ಲೆಯಲ್ಲಿ ತಲಾ 1 ಮರಳು ನಿಕ್ಷೇಪ ಗುರುತಿಸಲಾಗಿದೆ.

ಮರಳು ಗಣಿಗಾರಿಕೆ, ವ್ಯಾಪಾರದ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ನಿಯಮಗಳಿಲ್ಲ. ಅಂತರ್ ಜಿಲ್ಲಾ ಮರಳು ಸಾಗಣೆಗೆ ನಿರ್ಬಂಧಗಳಿದ್ದರೂ ಕರಾವಳಿ ಭಾಗದಿಂದ ಬೆಂಗಳೂರು, ಕೇರಳಕ್ಕೆ ವಾಮಮಾರ್ಗದಿಂದ ಸಾಗಣೆಯಾಗಿ ಮರಳು ಮಾಫಿಯಾ ದೊಡ್ಡ ಪ್ರಮಾಣದಲ್ಲಿ ದುಡ್ಡು ಕೊಳ್ಳೆ ಹೊಡೆಯಿತು.

ನದಿ ಮರಳಿಗೆ ಬಂಗಾರದ ಬೆಲೆ, ಜೊತೆಗೆ ಸಿಗದೇ ಇದ್ದಾಗ ಎಂ–ಸ್ಯಾಂಡ್‌ಗೆ ಬೇಡಿಕೆ ಹೆಚ್ಚಿತು. ಈಗ ಬೆಂಗಳೂರು, ಮಂಡ್ಯ, ಮೈಸೂರಿನಲ್ಲಿ ಶೇ 80ರಿಂದ 95ರಷ್ಟು ಜನ ಎಂ–ಸ್ಯಾಂಡ್ ಬಳಸುತ್ತಾರೆ.

4ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

ರಾಜ್ಯದಲ್ಲಿ ಮರಳು ಸ್ಥಿತಿ (ಟನ್‌ಗಳಲ್ಲಿ)	
ವಾರ್ಷಿಕ ಬೇಡಿಕೆ	4.50 ಕೋಟಿ
ಎಂ– ಸ್ಯಾಂಡ್	3 ಕೋಟಿ
ನದಿ ಮರಳು	50 ಲಕ್ಷ
ಹೊರ ರಾಜ್ಯಗಳಿಂದ	20 ಲಕ್ಷ
ಕೊರತೆ	80 ಲಕ್ಷ

ರಾಜ್ಯದಲ್ಲಿ ಮರಳು ದರ (ಟನ್‌ಗಳಲ್ಲಿ)

₹800-1,200 ಎಂ–ಸ್ಯಾಂಡ್

₹2,400- 3,000 ನದಿ ಮರಳು

545 ರಾಜ್ಯದಲ್ಲಿ ಎಂ– ಸ್ಯಾಂಡ್ ಉತ್ಪಾದಿಸುವ ಕ್ರಷರ್‌ಗಳು

ನದಿ ಮರಳಿನಿಂದ ಬೇಡಿಕೆ ನೀಗಿಸಲು ಎಂ–ಸ್ಯಾಂಡ್ ಪರ್ಯಾಯ ಆಯ್ಕೆಯಾಗಿದೆ. ನಿರ್ಮಾಣ ವಲಯ ಈಗ ನದಿ ಮರಳು ಆಶ್ರಯಿಸಿಲ್ಲ

ಜಿ.ಎಂ. ರವೀಂದ್ರ, ಅಧ್ಯಕ್ಷ, ಭಾರತೀಯ ಬಿಲ್ಡರ್‌ಗಳ ಒಕ್ಕೂಟ (ಬೆಂಗಳೂರು ಕೇಂದ್ರ)

'ಮರಳು ಆಮದಿನಿಂದ ₹ 5 ಕೋಟಿ ನಷ್ಟ'

'2018ರಲ್ಲಿ ₹11 ಕೋಟಿ ಹೂಡಿಕೆ ಮಾಡಿ ಮಲೇಷ್ಯಾದಿಂದ 56,400 ಟನ್ ಮರಳನ್ನು ನವ ಮಂಗಳೂರು ಬಂದರಿಗೆ ತರಿಸಿದ್ದೆವು. ಟನ್‌ಗೆ ₹ 2,200 ಸಾಗಣೆ ವೆಚ್ಚವಾಗಿದೆ. ಬೇಡಿಕೆ ಇಲ್ಲದ್ದರಿಂದ ಟನ್‌ಗೆ ₹ 1,400ಕ್ಕೆ ಮಾರಿದೆವು. ಅಷ್ಟೂ ಮರಳು ಖಾಲಿ ಮಾಡಲು ಎರಡು ವರ್ಷ ಬೇಕಾಯಿತು.₹ 5 ಕೋಟಿ ನಷ್ಟ ಆಗಿದೆ' ಎಂದು ಮರಳು ಆಮದು ಮಾಡಿದ್ದ ಚೆನ್ನೈನ ಇಂಟೆಗ್ರೇಟೆಡ್ ಸರ್ವೀಸ್ ಪಾಯಿಂಟ್ ಕಂಪನಿಯ ನಿರ್ದೇಶಕರೊಬ್ಬರು ತಿಳಿಸಿದರು.

ಮೂಲಭೂತ ನಿಯಮಗಳಿಗೆ ತಿದ್ದುಪಡಿ

ಪ್ರಮುಖ ಹುದ್ದೆಗಳ ಸೇವಾ ನಿಯಮ ಬದಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು 'ಮೂಲಭೂತ ನಿಯಮಗಳು–1922'ಕ್ಕೆ ತಿದ್ದುಪಡಿ ತಂದಿದ್ದು, ಈ ನಿಯಮಗಳ ವ್ಯಾಪ್ತಿಯಿಂದ ವಿದೇಶಾಂಗ ಕಾರ್ಯದರ್ಶಿಯ ಹುದ್ದೆಯನ್ನು ತೆಗೆದುಹಾಕಿದೆ. ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ ನಿರ್ದೇಶಕರ ಹುದ್ದೆಯ ಅಧಿಕಾರದ ಅವಧಿಯನ್ನು ಎರಡರಿಂದ ಐದು ವರ್ಷಗಳಿಗೆ ಹೆಚ್ಚಿಸಲು ಸುಗ್ರೀವಾಜ್ಞೆ ಹೊರಡಿಸಿದ ಮರುದಿನವೇ, ಈ ತಿದ್ದುಪಡಿ ತಂದಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಈ ಸಂಬಂಧ ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯವು ಸೋಮವಾರ ಅಧಿಸೂಚನೆ ಹೊರಡಿಸಿದೆ. ಆದರೆ, ಬದಲಾವಣೆ ತಂದಿರುವುದರ ಉದ್ದೇಶ ಏನು ಎಂಬುದನ್ನು ಅಧಿಸೂಚನೆಯಲ್ಲಿ ವಿವರಿಸಿಲ್ಲ.

'ವಿದೇಶಾಂಗ ಕಾರ್ಯದರ್ಶಿಯ ಹುದ್ದೆಯು ಭಾರತೀಯ ವಿದೇಶಾಂಗ ಸೇವಾ ನಿಯಮಗಳ ವ್ಯಾಪ್ತಿಯಲ್ಲಿ ಬರುತ್ತದೆ. ಹೀಗಾಗಿ ಆ ಹುದ್ದೆಯನ್ನು ಮೂಲಭೂತ ನಿಯಮಗಳ ವ್ಯಾಪ್ತಿಯಿಂದ ತೆಗೆದುಹಾಕಲಾಗಿದೆ' ಎಂದು ಸಚಿವಾಲಯದ ಮೂಲಗಳು ಹೇಳಿವೆ. ಆದರೆ ಇಂತಹುದೇ ಸೇವಾ ನಿಯಮಗಳ ವ್ಯಾಪ್ತಿಯಲ್ಲಿ ಬರುವ ಗೃಹ ಕಾರ್ಯದರ್ಶಿ ಮತ್ತು ರಕ್ಷಣಾ ಕಾರ್ಯದರ್ಶಿ ಹುದ್ದೆಗಳು, ಮೂಲಭೂತ ನಿಯಮಗಳ ವ್ಯಾಪ್ತಿಯಲ್ಲಿಯೂ ಬರುತ್ತವೆ. ಈ ಎರಡೂ ಹುದ್ದೆಗಳನ್ನು ಮೂಲಭೂತ ನಿಯಮಗಳ ವ್ಯಾಪ್ತಿಯಲ್ಲಿಯೇ ಉಳಿಸಿಕೊಳ್ಳಲಾಗಿದೆ.

ಅಧಿವೇಶನದಲ್ಲಿ ಪ್ರಸ್ತಾಪಕ್ಕೆ ಸಿದ್ಧತೆ

ಸಂಸತ್ತಿನ ಅಧಿವೇಶನ ಆರಂಭವಾಗಲು ಎರಡು ವಾರವಷ್ಟೇ ಇರುವಾಗ ಸುಗ್ರೀವಾಜ್ಞೆ ಮೂಲಕ ಸಿಬಿಐ ಮತ್ತು ಇ.ಡಿ. ನಿರ್ದೇಶಕರ ಅಧಿಕಾರದ ಅವಧಿಯನ್ನು ಐದು ವರ್ಷಗಳಿಗೆ ವಿಸ್ತರಿಸಿದ ಕೇಂದ್ರ ಸರ್ಕಾರದ ಕ್ರಮವನ್ನು ಸಂಸತ್ತಿನಲ್ಲಿ ಪ್ರಶ್ನಿಸಲು ವಿರೋಧ ಪಕ್ಷಗಳು ಸಿದ್ಧತೆ ನಡೆಸಿವೆ.

'ಇನ್ನೆರಡು ವಾರಗಳಲ್ಲಿ ಸಂಸತ್ತಿನ ಅಧಿವೇಶನ ಆರಂಭವಾಗಲಿದೆ. ಭಾರತವು ಚುನಾಯಿತ ನಿರಂಕುಶ ಪ್ರಭುತ್ವವಾಗುವುದನ್ನು ತಡೆಯಲು ಏನು ಬೇಕೋ ಅವೆಲ್ಲವನ್ನೂ ವಿರೋಧ ಪಕ್ಷಗಳು ಮಾಡುತ್ತವೆ ಎಂಬ ಭರವಸೆ ನೀಡುತ್ತೇನೆ' ಎಂದು ಟಿಎಂಸಿ ಸಂಸದ ಡೆರೆಕ್ ಒಬ್ರಿಯಾನ್ ಹೇಳಿದ್ದಾರೆ. ಈ ಸುಗ್ರೀವಾಜ್ಞೆಗಳ ವಿರುದ್ಧ ರಾಜ್ಯಸಭೆಯಲ್ಲಿ ನಿರ್ಣಯ ಮಂಡಿಸುವುದಾಗಿ ಟಿಎಂಸಿ ಹೇಳಿದೆ.

ಅವಧಿ ವಿಸ್ತರಣೆ

ರಕ್ಷಣಾ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಗುಪ್ತಚರ ಇಲಾಖೆ ನಿರ್ದೇಶಕ, ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್ (ರಾ) ಕಾರ್ಯದರ್ಶಿ, ಸಿಬಿಐ ನಿರ್ದೇಶಕ ಮತ್ತು ಜಾರಿ ನಿರ್ದೇಶನಾಲಯದ ನಿರ್ದೇಶಕರ ಅಧಿಕಾರದ ಅವಧಿಯನ್ನು ವಿಸ್ತರಿಸಲು ಅವಕಾಶ ಮಾಡಿಕೊಡುವಂತೆ ಮೂಲಭೂತ ನಿಯಮಗಳು–1922ಕ್ಕೆ ಇದೇ ಅಧಿಸೂಚನೆಯಲ್ಲಿ ತಿದ್ದುಪಡಿ ತರಲಾಗಿದೆ.

'ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಈ ಹುದ್ದೆಗಳ ಅಧಿಕಾರದ ಅವಧಿಯನ್ನು ವಿಸ್ತರಿಸಬಹುದು' ಎಂದು ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಜಯದೇವ ಹೃದ್ರೋಗ ಸಂಸ್ಥೆ ಆವರಣದಲ್ಲಿ ನಿರ್ಮಾಣ

350 ಹಾಸಿಗೆಯ ಹೃದ್ರೋಗ ಆಸ್ಪತ್ರೆ ನಾಳೆ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ಆವರಣದಲ್ಲಿ ಇನ್ಫೊಸಿಸ್ ಫೌಂಡೇಷನ್ ವತಿಯಿಂದ ನಿರ್ಮಿಸಿರುವ 350 ಹಾಸಿಗೆಗಳ ಸಾಮರ್ಥ್ಯದ ಹೊಸ ಆಸ್ಪತ್ರೆಯ ಉದ್ಘಾಟನೆ ಇದೇ 17ರಂದು ನಡೆಯಲಿದೆ.

'₹103 ಕೋಟಿ ವೆಚ್ಚದಲ್ಲಿ ಈ ಸುಸಜ್ಜಿತ ಆಸ್ಪತ್ರೆ ನಿರ್ಮಿಸಲಾಗಿದೆ. ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾ ಮೂರ್ತಿ ಅವರು ಆಸ್ಪತ್ರೆ ನಿರ್ಮಾಣಕ್ಕೆ ಈ ದೇಣಿಗೆ ನೀಡಿದ್ದಾರೆ. ಈ ಹೊಸ ಆಸ್ಪತ್ರೆ ಸೇರಿದರೆ ದೇಶದ ಅತ್ಯಂತ ದೊಡ್ಡ ಹೃದ್ರೋಗ ಆಸ್ಪತ್ರೆ ಎನ್ನುವ ಹೆಗ್ಗಳಿಕೆಗೆ ಜಯದೇವ ಹೃದ್ರೋಗ ಸಂಸ್ಥೆ ಪಾತ್ರವಾಗಲಿದೆ' ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಸೋಮವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ನಾಲ್ಕು ಅಂತಸ್ತಿನ ಹೊಸ ಕಟ್ಟಡದಲ್ಲಿ ಎರಡು ಕಾರ್ಡಿಯಾಕ್ ಕ್ಯಾಥ್ ಲ್ಯಾಬ್, ಎರಡು ಶಸ್ತ್ರಚಿಕಿತ್ಸೆಯ ಕೊಠಡಿಗಳು, ಒಂದು ಹೈಬ್ರಿಡ್ ಶಸ್ತ್ರಚಿಕಿತ್ಸೆ ಕೊಠಡಿ, 100 ಐಸಿಸಿಯು ಬೆಡ್‌ಗಳು, 250 ಸಾಮಾನ್ಯ ಹಾಸಿಗೆ ವ್ಯವಸ್ಥೆ ಇದೆ. ಹೊಸ ಎರಡು ಕಾರ್ಡಿಯಾಕ್ ಕ್ಯಾಥ್‌ಲ್ಯಾಬ್‌ಗಳೂ ಸೇರಿ ಸಂಸ್ಥೆಯ ಕ್ಯಾಥ್‌ಲ್ಯಾಬ್‌ಗಳ ಸಂಖ್ಯೆ 15ಕ್ಕೆ ಹೆಚ್ಚಲಿದೆ' ಎಂದು ವಿವರಿಸಿದರು.

'ಜಯದೇವ ಆಸ್ಪತ್ರೆಯಲ್ಲಿ 650 ಹಾಸಿಗೆ ಸಾಮರ್ಥ್ಯ ಇದ್ದರೂ ಪ್ರತಿ ದಿನ 1500ಕ್ಕೂ ಹೆಚ್ಚು ಹೊರರೋಗಿಗಳು ತಪಾಸಣೆಗೆ ಬರುತ್ತಿದ್ದಾರೆ. ರಾತ್ರಿ 8ಗಂಟೆಯಿಂದ ಬೆಳಿಗ್ಗೆ 6ರವರೆಗೆ ಪ್ರತಿ ಐದು ನಿಮಿಷಕ್ಕೆ ಒಬ್ಬ ರೋಗಿ ತುರ್ತು ಚಿಕಿತ್ಸೆಗೆ ದಾಖಲಾಗುತ್ತಿದ್ದಾರೆ. ಇದರಿಂದ ಆಸ್ಪತ್ರೆ ಮೇಲೆ ಒತ್ತಡ ಹೆಚ್ಚಾಗಿದೆ. ಈಗಿರುವ ಎಲ್ಲ ಐಸಿಯುಗಳು ಹಾಗೂ ವಾರ್ಡ್‌ಗಳು ಭರ್ತಿಯಾಗಿವೆ. ಹೀಗಾಗಿ, ಇನ್ಫೊಸಿಸ್ ಫೌಂಡೇಷನ್ ಕೊಡುಗೆಯಾಗಿ ನೀಡುತ್ತಿರುವ ಈ ಆಸ್ಪತ್ರೆಯಿಂದ ಒತ್ತಡ ನಿವಾರಣೆಯಾಗಲಿದೆ' ಎಂದರು.

'ಕೇವಲ 36 ಗುಂಟೆಯಲ್ಲಿ ಸುಸಜ್ಜಿತ ಆಸ್ಪತ್ರೆ ನಿರ್ಮಿಸಿರುವುದು ಎಂಜಿನಿಯರಿಂಗ್ ಕೌಶಲಕ್ಕೆ ಸಾಕ್ಷಿಯಾಗಿದ್ದು, 20 ತಿಂಗಳಲ್ಲಿ ಕಾಮಗಾರಿ ಮುಗಿಸಲಾಗಿದೆ. ಈಗಿರುವ ಆಸ್ಪತ್ರೆಗೂ ಹೊಸದಾಗಿ ನಿರ್ಮಿಸಿರುವ ಆಸ್ಪತ್ರೆಗೂ ಸಂಪರ್ಕ ಸೇತುವೆ ನಿರ್ಮಿಸಲಾಗಿದ್ದು, ಭೌತಿಕವಾಗಿ ಒಂದೇ ಘಟಕವಾಗಿರುತ್ತವೆ' ಎಂದರು.

'ಹೃದ್ರೋಗಿಗಳ ಸಂಖ್ಯೆಯಲ್ಲಿ ಹೆಚ್ಚಳ'

'ನಟ ಪುನೀತ್ ರಾಜಕುಮಾರ್ ಅವರ ನಿಧನದ ಬಳಿಕ ಆಸ್ಪತ್ರೆಗೆ ತಪಾಸಣೆಗೆ ಬರುತ್ತಿರುವವರ ಸಂಖ್ಯೆಯಲ್ಲಿ ಶೇಕಡ 30ರಷ್ಟು ಹೆಚ್ಚಳವಾಗಿದೆ. ಎಲ್ಲರಿಗೂ ಕಾಯಿಲೆ ಇಲ್ಲ. ಆದರೆ, ಕೆಲವರಲ್ಲಿ ಕೊಲೆಸ್ಟ್ರಾಲ್ ಹೆಚ್ಚಾಗಿರುವುದು ಕಂಡುಬಂದಿದೆ' ಎಂದು ಡಾ.ಸಿ.ಎನ್. ಮಂಜುನಾಥ್ ಹೇಳಿದರು.

'ಹೃದಯ ಸಂಬಂಧಿ ಕಾಯಿಲೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿವೆ. ಬದಲಾದ ಜೀವನ ಶೈಲಿ, ನಗರೀಕರಣ, ಆಹಾರ ಪದ್ಧತಿಯಿಂದ ಶ್ರೀಮಂತರು ಹಾಗೂ ಬಡವರಲ್ಲಿಯೂ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗುತ್ತಿವೆ. 1960ರಲ್ಲಿ ಶೇಕಡ 3ರಷ್ಟು ಇದ್ದ ಹೃದಯ ಸಂಬಂಧಿ ಕಾಯಿಲೆ ಪ್ರಮಾಣವು, ಪ್ರಸ್ತುತ ಶೇಕಡ 10ಕ್ಕೆ ಏರಿಕೆಯಾಗಿದೆ. ಅದರಲ್ಲೂ ಯುವಕರಲ್ಲಿ ಹೃದಯಾಘಾತಗಳು ಹೆಚ್ಚಾಗುತ್ತಿವೆ. ಜಯದೇವ ಹೃದ್ರೋಗ ಸಂಸ್ಥೆ ಅಧ್ಯಯನದ ಪ್ರಕಾರ ಶೇಕಡ 35ರಷ್ಟು ಹೃದಯಾಘಾತ 40 ವರ್ಷಕ್ಕಿಂತ ಕಡಿಮೆ ವಯಸ್ಸಿನವರಲ್ಲಿ ಉಂಟಾಗುತ್ತಿದೆ. ಯುವಕರು ಜಿಮ್ ಸೇರಿಕೊಳ್ಳುವ ಮುನ್ನ ಹೃದಯದ ತಪಾಸಣೆ ಮಾಡಿಕೊಳ್ಳಬೇಕು' ಎಂದು ವಿವರಿಸಿದರು.

'ಕೋವಿಡ್ ಮೂರನೇ ಅಲೆ ಬಗ್ಗೆ ಗೊತ್ತಿಲ್ಲ. ಆದರೆ, ಎಚ್ಚರವಹಿಸುವುದು ಅಗತ್ಯ' ಎಂದು ಹೇಳಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: 'ರಾಜ್ಯ ಒಕ್ಕಲಿಗರ ಒಕ್ಕೂಟ ಟ್ರಸ್ಟ್ ವತಿಯಿಂದ 2020–21ನೇ ಸಾಲಿನ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರಕ್ಕೆ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಸಿ.ವಿ.ದೇವರಾಜ್ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದ್ವಿತೀಯ ಪಿಯುಸಿ ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಗಳಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದ ಒಕ್ಕಲಿಗ ಹಾಗೂ ಇತರ ಸಮುದಾಯಗಳ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು' ಎಂದರು.

'ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ, ವರ್ಗಾವಣೆ ಪತ್ರಗಳ ಪ್ರತಿ, ಅಂಚೆ ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಭಾವಚಿತ್ರದೊಂದಿಗೆ ಸ್ವವಿವರವನ್ನು ಅಂಚೆ ಅಥವಾ ಖುದ್ದಾಗಿ ಡಿಸೆಂಬರ್ 15ರೊಳಗೆ ಟ್ರಸ್ಟ್‌ನ ವಿಳಾಸಕ್ಕೆ ಸಲ್ಲಿಸಬಹುದು' ಎಂದು ಮಾಹಿತಿ ನೀಡಿದರು.

ವಿಳಾಸ: ರಾಜ್ಯ ಒಕ್ಕಲಿಗರ ಒಕ್ಕೂಟ ಟ್ರಸ್ಟ್, ಶ್ರೀವಾರಿ ಕಾಂಪ್ಲೆಕ್ಸ್, ಚಾಮರಾಜಪೇಟೆ

ಸಂಪರ್ಕ: 9535504176

ಟೆಕ್ವಾಂಡೊ ನಗರದ 'ದೇವ್-ಇನ್ ನ್ಯಾಷನಲ್ ಸ್ಕೂಲ್'ನಲ್ಲಿ ಟೆಕ್ವಾಂಡೊ ಅಸೋಸಿಯೇಷನ್ ಆಯೋಜಿಸಿದ್ದ 20ನೇ ರಾಜ್ಯಮಟ್ಟದ 'ಐಟಿಎಫ್ ಟೆಕ್ವಾಂಡೊ ಚಾಂಪಿಯನ್‌ಷಿಪ್–2021'ನಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಚರಂಡಿ ಕಾಮಗಾರಿಯಲ್ಲಿ ₹8.5 ಕೋಟಿ ದುರುಪಯೋಗ: ಬಿಎನ್‌ಪಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾರ್ಡ್‌ಮಟ್ಟದ ಯೋಜನೆಗಳ ವೆಚ್ಚಗಳಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ತರುವ ನಿಟ್ಟಿನಲ್ಲಿ ಬೆಂಗಳೂರು ನವನಿರ್ಮಾಣ ಪಕ್ಷವು (ಬಿಎನ್‌ಪಿ) 'ಲೆಕ್ಕ ಬೇಕು' ಹೆಸರಿನಲ್ಲಿ ಅಭಿಯಾನ ಕೈಗೊಂಡಿದೆ.

ತೆರಿಗೆದಾರರ ಹಣವನ್ನು ಬಿಬಿಎಂಪಿಯು ಪ್ರತಿ ವಾರ್ಡ್‌ಗಳ ಮೇಲೆ ಯಾವ ರೀತಿ ಖರ್ಚು ಮಾಡುತ್ತದೆ ಎನ್ನುವ ಪ್ರಶ್ನೆಗೆ ಇದುವರೆಗೆ ನಿಖರವಾದ ಉತ್ತರ ದೊರೆತಿಲ್ಲ. ಬಿಬಿಎಂಪಿ ಕೈಗೊಳ್ಳುವ ಯೋಜನೆಗಳಲ್ಲಿ ನಾಗರಿಕರ ಭಾಗವಹಿಸುವಿಕೆ, ಖರ್ಚು–ವೆಚ್ಚಗಳಲ್ಲಿ ಪಾರದರ್ಶಕತೆ ಮತ್ತು ಯೋಜನೆಗಳ ಗುಣಮಟ್ಟದ ವಿಷಯಗಳನ್ನು ಜನರ ಮುಂದಿಡುವುದು ಆಡಳಿತದ ಜವಾಬ್ದಾರಿ. ಅಭಿವೃದ್ಧಿ ಯೋಜನೆಗಳಿಗೆ ಖರ್ಚು ಮಾಡಿದ ಹಣದ ಬಗ್ಗೆ ವಿವರವಾದ ಲೆಕ್ಕವನ್ನು ನೀಡಲು ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ಮೇಲೆ ಒತ್ತಡ ಹೇರಲು ಈ ಅಭಿಯಾನ ಕೈಗೊಳ್ಳಲಾಗಿದೆ ಎಂದು ಬಿಎನ್‌ಪಿ ತಿಳಿಸಿದೆ.

ಬೆಳ್ಳಂದೂರಿನ ವಾರ್ಡ್ 150ರಲ್ಲಿ ಅಸ್ತಿತ್ವದಲ್ಲಿ ಇಲ್ಲದ ಮತ್ತು ಅಪೂರ್ಣ ಚರಂಡಿ ಕಾಮಗಾರಿಗಳಿಗೆ ₹8.5 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಯ ವಿವರವಾದ ಸಮೀಕ್ಷೆ ಮತ್ತು ಅಧ್ಯಯನವನ್ನು ಕೈಗೊಂಡಾಗ ತಿಳಿದು ಬಂದ ವಿಷಯಗಳು ಆಘಾತಕಾರಿಯಾಗಿವೆ. ಈ ಯೋಜನೆಯನ್ನು ಏಕೆ ರೂಪಿಸಲಾಗಿದೆ ಮತ್ತು ಉದ್ದೇಶ ಏನು ಎನ್ನುವುದೇ ಸ್ಪಷ್ಟವಾಗಿಲ್ಲ. ಜತೆಗೆ, ಕೆಲವು ಕಿಲೋ ಮೀಟರ್ ಮಾತ್ರ ಚರಂಡಿ ನಿರ್ಮಿಸಲಾಗಿದೆ. ಹಣ ಸಂಪೂರ್ಣ ವ್ಯಯಿಸಿದ್ದರೂ ಕಾಮಗಾರಿಗಳು ಸಂಪೂರ್ಣಗೊಂಡಿಲ್ಲ ಎಂದು ದೂರಿದೆ.

ಈ ಯೋಜನೆಯು ಬೆಂಗಳೂರು ಮತ್ತು ಮುಖ್ಯವಾಗಿ ಬೆಳ್ಳಂದೂರನ್ನು ಸಂಪೂರ್ಣವಾಗಿ ನಾಶಪಡಿಸುವುದಾಗಿದೆ. ಈ ಯೋಜನೆಯನ್ನು ವಾರ್ಡ್‌ನ ಕಾರ್ಪೊರೇಟರ್ ಮತ್ತು ಶಾಸಕರು ಸರಿಯಾಗಿ ಯೋಚಿಸದೆಯೇ ಕೈಗೊಂಡಿದ್ದಾರೆ. ಕೇವಲ ವಾಣಿಜ್ಯ ಹಿತಾಸಕ್ತಿ ಈ ಯೋಜನೆಯಲ್ಲಿ ಅಡಗಿದ್ದು, ಬಹುಪಾಲು ಹಣ ದುರುಪಯೋಗವಾಗಿರುವುದು ಸ್ಪಷ್ಟವಾಗಿದೆ. ಯೋಜನೆಗಳ ಬಗ್ಗೆ ನಾಗರಿಕರ ಭಾಗವಹಿಸುವಿಕೆ ಮತ್ತು ಅಭಿಪ್ರಾಯಗಳನ್ನು ಕಡೆಗಣಿಸಿರುವುದರಿಂದ ಒಟ್ಟು ₹8.5 ಕೋಟಿ ಚರಂಡಿ ಪಾಲಾಗಿದೆ ಎಂದು ಬಿಎನ್‌ಪಿ ಆರೋಪಿಸಿದೆ.

ಯಾವುದೇ ವಾರ್ಡ್ ಮಟ್ಟದ ಯೋಜನೆಯನ್ನು ನಿರ್ಧರಿಸುವ ಮೊದಲು ನಾಗರಿಕರನ್ನು ಸಮಾಲೋಚನೆಗಳಲ್ಲಿ ತೊಡಗಿಸಿಕೊಳ್ಳಬೇಕು ಮತ್ತು ವಾರ್ಡ್ ಸಮಿತಿಗಳು ಅನುಷ್ಠಾನದ ಮೇಲ್ವಿಚಾರಣೆಯನ್ನು ವಹಿಸಿಕೊಳ್ಳಬೇಕು ಎಂದು ಬಿಎನ್‌ಪಿ ಪ್ರತಿಪಾದಿಸಿದೆ.

ಬಿಎನ್‌ಪಿಯ ನಾಗರಿಕ ಪೋರ್ಟಲ್, ಕಳೆದ ಐದು ವರ್ಷಗಳಲ್ಲಿ ಅನುಮೋದಿಸಲಾದ ಎಲ್ಲ ವಾರ್ಡ್ ಮಟ್ಟದ ಯೋಜನೆಗಳ ವಿವರಗಳನ್ನು ಒಳಗೊಂಡಿದೆ. ಪ್ರತಿ ವಾರ್ಡ್‌ನ ಎಲ್ಲ ಅನುಮೋದಿತ ಮತ್ತು ಕಾರ್ಯಗತಗೊಳಿಸಿದ ಯೋಜನೆಗಳ ವಿವರಗಳನ್ನು https://bright.nammabnp.org/citizen-portal ಮೂಲಕವೂ ತಿಳಿದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಪ್ತಕ ಸಂಸ್ಥೆಯು ಮಲ್ಲೇಶ್ವರದಲ್ಲಿ ಆಯೋಜಿಸಿದ್ದ 'ಸ್ವರ ಸಂಜೆ' ಕಾರ್ಯಕ್ರಮದಲ್ಲಿ ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ ಅವರು ತಬಲಾ ವಾದಕ ರವೀಂದ್ರ ಯಾವಗಲ್ ಅವರನ್ನು ಸನ್ಮಾನಿಸಿದರು. ಸಪ್ತಕ ಸಂಸ್ಥೆಯ ಸಂಚಾಲಕ ಜಿ.ಎಸ್.ಹೆಗಡೆ ಇದ್ದಾರೆ

100 ಬಡ ಮಕ್ಕಳಿಗೆ ಉಚಿತ ಶಸ್ತ್ರಚಿಕಿತ್ಸೆ

ಬೆಂಗಳೂರು: ಆಸ್ಟರ್ ಆಸ್ಪತ್ರೆಗಳ ಸಮೂಹವು ಆರ್ಥಿಕವಾಗಿ ಹಿಂದುಳಿದಿರುವ ಕನಿಷ್ಠ 100 ಮಕ್ಕಳಿಗೆ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ನಡೆಸಲು ನಿರ್ಧರಿಸಿದೆ.

ಮಕ್ಕಳ ದಿನಾಚರಣೆಯ ದಿನ ಈ ಯೋಜನೆ ಅಂಗವಾಗಿ 'ಸೆಕೆಂಡ್ ಲೈಫ್-ಬಿಕಾಸ್ ಲಿಟಲ್ ಲೈವ್ಸ್ ಮ್ಯಾಟರ್' ಎಂಬ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ.

'ಆಸ್ಟರ್ ವಾಲಂಟಿಯರ್ಸ್ ಗ್ಲೋಬಲ್ ಸಿಎಸ್‌ಆರ್' ಕಾರ್ಯಕ್ರಮದ ಭಾಗವಾಗಿ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಒಂದು ವರ್ಷದಲ್ಲಿ 12 ವರ್ಷದೊಳಗಿನ ಕನಿಷ್ಠ 100 ಮಕ್ಕಳಿಗೆ ಶಸ್ತ್ರಚಿಕಿತ್ಸೆ ನಡೆಸುವುದು ಅಭಿಯಾನದ ಉದ್ದೇಶ. ಬಳಿಕ ಇದನ್ನು ಇತರ ವಯೋಮಾನದ ಮಕ್ಕಳಿಗೂ ವಿಸ್ತರಿಸಲಾಗುತ್ತದೆ. ಯೋಜನೆಯ ಅಡಿ ಅಪೆಂಡಿಸೈಟಿಸ್, ಇಂಟ್ಯೂಸೆಪ್ಶನ್, ಎಂಪೀಮಾ, ಮೂಳೆ ಮಜ್ಜೆಯ ಕಸಿ, ಯಕೃತ್ತಿನ ಕಸಿ ಹಾಗೂ ಹೃದಯದ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗುತ್ತದೆ' ಎಂದು ಕರ್ನಾಟಕ ಮತ್ತು ಮಹಾರಾಷ್ಟ್ರ ವಿಭಾಗದ ಪ್ರಾದೇಶಿಕ ನಿರ್ದೇಶಕ ಡಾ.ನಿತೀಶ್ ಶೆಟ್ಟಿ ತಿಳಿಸಿದ್ದಾರೆ.

ಆಸ್ಟರ್ ಡಿಎಂ ಹೆಲ್ತ್‌ಕೇರ್‌ನ ಸಂಸ್ಥಾಪಕ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ಆಜಾದ್ ಮೂಪೆನ್, 'ಬಡತನದಿಂದಾಗಿ ಅನೇಕ ಪೋಷಕರು ತಮ್ಮ ಮಕ್ಕಳಿಗೆ ಅಗತ್ಯ ಶಸ್ತ್ರಚಿಕಿತ್ಸೆ ಕೊಡಿಸಲಾಗದೆ ಪರಿತಪಿಸುತ್ತಿದ್ದಾರೆ. ಎಳೆಯ ಮಕ್ಕಳ ಜೀವ ಉಳಿಸುವ ಉದ್ದೇಶದಿಂದ ಈ ಅಭಿಯಾನ ಆರಂಭಿಸಿದ್ದೇವೆ' ಎಂದು ಹೇಳಿದರು.

ನೈಋತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ. 19 ಯುಬಿಎಲ್ 2021–22
ದಿನಾಂಕ : 11–11–2021

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗ : ದಕ್ಷಿಣ ಹುಬ್ಬಳ್ಳಿ ಮತ್ತು ಕುಂದಗೋಳ ನಿಲ್ದಾಣಗಳ ನಡುವೆ ಕಿ.ಮೀ. 463/500–600 ರಲ್ಲಿ ಎಲ್‌ಸಿ ಸಂ. 281 ಬದಲಿಗೆ ಸೀಮಿತ ಎತ್ತರದ ಸಬ್‌ವೇ ನಿರ್ಮಾಣ.	ರೂ. 4,42,69,285/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 08–12–2021 ರಂದು 11.00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ವಿಭಾಗೀಯ ರೈಲ್ವೆ ವ್ಯವಸ್ಥಾಪಕರು / ಕಾಮಗಾರಿಗಳು ಹುಬ್ಬಳ್ಳಿ

ಪಿಯುಬಿ/284/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22

S.W.Railways SWRRLY SWRRLY

ಸ್ವರ್ಣಭಾರತಿ ಸಹಕಾರ ಬ್ಯಾಂಕ್ ನಿಯಮಿತ

ನಂ.2229, 23ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070.

ಪ್ರಕಟಣೆ

ಬ್ಯಾಂಕಿನ 23ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕೋವಿಡ್ 19 ಸಾಂಕ್ರಮಿಕ ರೋಗದ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ ವರ್ಚುಯಲ್ ಮೀಟಿಂಗ್ ಮುಖಾಂತರ ದಿನಾಂಕ: 28.11.2021ನೇ ಭಾನುವಾರ ಬೆಳಿಗ್ಗೆ 10–00 ಗಂಟೆಗೆ ನಡೆಸಲು ನಿರ್ಣಯಿಸಲಾಗಿದೆ. ಈ ಸಭೆಯಲ್ಲಿ ಭಾಗವಹಿಸಲು ಬ್ಯಾಂಕಿನ ಖಾಯಂ ಸದಸ್ಯರು ಕೆಳಗೆ ಕೊಟ್ಟಿರುವ ಯು ಆರ್ ಎಲ್ ಲಿಂಕ್‌ನಲ್ಲಿ ನಿಮ್ಮ ಹೆಸರು ಮತ್ತು ಸದಸ್ಯತ್ವದ ಸಂಖ್ಯೆ ಎಂಟ್ರಿ ಮಾಡುವ ಮುಖಾಂತರ ಲಾಗಿನ್ ಆಗಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಮೂಲಕ ಸಂಪರ್ಕಿಸಬಹುದು ಎಂದು ಈ ಮೂಲಕ ಕೋರಿದೆ.

ಲಾಗಿನ್ ಆಗುವುದರ ವಿವರ www.seeall.live/swarnabharthi ಎಂದು ಎಂಟ್ರಿ ಮಾಡಿ ಕೆಳಗಿನ ವಿವರವನ್ನು ಭರ್ತಿ ಮಾಡಬೇಕು.

ಹೆಸರು
ಸದಸ್ಯತ್ವದ ಸಂಖ್ಯೆ

ದೂರವಾಣಿ: 080–26762629, 9606933950
ದಿನಾಂಕ: 15–11–2021

ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಕೃಷಿ ವಿಶ್ವವಿದ್ಯಾನಿಲಯ

ಆಸ್ತಿ ಅಧಿಕಾರಿಗಳ ಕಛೇರಿ, ಗಾ.ಕೃ.ವಿ.ಕೆ, ಬೆಂಗಳೂರು –560 065

ಸಂ: ಆಅ/ಟಿ.ಎನ್/454/2021–22 ದಿನಾಂಕ: 18–10–2021

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ನೋಂದಣಿ ಪಡೆದ ಏಜೆನ್ಸಿಗಳಿಂದ ಒಂದು ವರ್ಷದವರೆಗೆ ಬಾಡಿಗೆ ಆಧಾರದಲ್ಲಿ ವಾಹನಗಳನ್ನು ಒದಗಿಸಲು ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ನ ವಿವರಗಳು ವೆಬ್‌ಸೈಟ್: **www.eproc.karnataka.gov.in** ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮಾದರಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಈ ಕೆಲಸದ ದ್ವಿ–ಲಕೋಟೆ ಪದ್ಧತಿಯ ವಿವರಗಳು ಮತ್ತು ಷರತ್ತುಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಕೃಷಿ ವಿಶ್ವವಿದ್ಯಾನಿಲಯವು ಯಾವುದೇ ಟೆಂಡರ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತದೆ.

ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು **www.eproc.karnataka.gov.in** ಇಂದ ಪಡೆಯಬಹುದು ಮತ್ತು ಟೆಂಡರ್ ಸಲ್ಲಿಸುವ ಕೊನೆ **ದಿನಾಂಕ: 25–11–2021ರಂದು ಅಪರಾಹ್ನ 4:00 ಘಂಟೆಯವರೆಗೆ** ಆಗಿರುತ್ತದೆ. ತಾಂತ್ರಿಕ ಬಿಡ್ಡನ್ನು **ದಿನಾಂಕ: 29–11–2021ರಂದು ಬೆಳಿಗ್ಗೆ 10:30ಕ್ಕೆ** ಮತ್ತು ಹಣಕಾಸಿನ ಬಿಡ್ಡನ್ನು **ದಿನಾಂಕ: 6–12–2021ರಂದು ಬೆಳಿಗ್ಗೆ 10:30ಕ್ಕೆ** ತೆರೆಯಲಾಗುವುದು. ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಪಡೆಯುವುದು ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭಾಗವಹಿಸಲು User ID ಮತ್ತು ಪಾಸ್‌ವರ್ಡ್ ಅನ್ನು ಪಡೆಯುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು. ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: **support@eprochelpdesk.com** ಮತ್ತು **8046010000** ಮತ್ತು **8068948777 ದೂರವಾಣಿ ಸಂಖ್ಯೆ: 080–23332765.**

DIPR/DDU/RO2161/21-22

ಸಹಿ/– ಆಸ್ತಿ ಅಧಿಕಾರಿ

ಕೋವಿಡ್-19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

Accounts & Finance

IMMEDIATELY REQUIRED! A qualified accountant, with basic knowledge of book keeping, auditing & taxation. Apply roadsafety@corps.in

Teachers/ Professors

WANTED TRAINED LADY TEACHERS to teach in Kindergarten, All Subjects in Lower Primary (except Kannada). English, Maths, Chemistry, Biology & Computer in English Medium Primary and Highschools. Walk-in Interview on 17.11.2021 between 11.00 AM and 1.00 PM at 'PRATHIBHA SHIKSHANA SAMITHI', #9, 18th Main, BSK II Stage, Bangalore-70. Phone: 080-26710170/ 74833-77387

BUSINESS

Business to Business

Hotel & Restaurant

OPPORTUNITY TO Run Food Counters in IT & Industrial Sector. Further Details Contact: 6366367258, 6366226523.

Business Offers

Distributors

PARTNER TO manage the teamat Rajajinagar with zero investment. Call 7019246661

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

BUILDERS ESSENTIAL

Building Contractors

WE CONSTRUCT Your Projects, Residential Commercial and Interior's Reasonable Rates in time Completion. 9481183707

SOCIAL SERVICES

Old Age Home

"AGRASEN OLDAGE HOME" Provides Luxurious Facilities like Furnished Rooms, Vegetarian Food, Laundry, Nursing, Yoga, Games, Library. Contact:- 9513362681/ 9886037111/ 9620304864

PERSONAL

Change of Name

I, SERVICE #8034872M, Rank- HAV, Name: V. Solairaj, Unit-9, KAR BN, NCC, declare that my daughter's name is wrongly entered in Service Record as SIVAPRIYA instead of S. SIVAPRIYA, vide affidavit dated 11.11.2021 before Notary Gangaraju B.N., Bangalore.

POONAM W/O 14851506Y HAV/CLK Divesh Kumar VPO Ojatoo, Teh- Chirawa, Dist- Jhunjhunu, Rajasthan, have changed my name POONAM to POONAM MANN, Notary KV Mani, Bangalore

I, SAVITRI LAKADI have changed my name to ROHINI SAGAREPPAGOL vide affidavit dated: 15/11/2021 Before Notary Shreeshail.B. Gobbani Bangalore.

I, VASUKI, Spouse of #8034872M, Rank- HAV, Name: V. Solairaj, residing at #2/330, JegathaNagar, ParidiyanNagar, Thirumangalam Taluk, Madurai District, Tamil Nadu- 625706, have changed my name to S. VASUGI, vide affidavit dated 09.09.2021 before Notary Meer Hassan, Bangalore.

I, MADHUSHREE .R., Spouse of No. 15314984Y, Rank Ex-HAV Ashok .C., residing at No. 6, 7th main, KHM Block, Opp. RT.Nagar Post Office, RT.Nagar, Bangalore-560032, have changed my name from MADHSHREE. R. to MADHUSHREE. R., vide affidavit dated 02.11.2021 before Notary L. Gopalakrishna, Bangalore.

I, K. MUNISWAMY, aged 58 years, S/o Late Kalidas, R/a #7, F-Street, Jayaraj Nagar, Halasuru, Bangalore North, HAL II Stage, Bangalore-08, have changed my name to K. EDWIN, vide affidavit dated 11.11.2021 before VI Addl. Chief Metropolitan Magistrate, Bangalore.

I, ASHIKA N alias ASHIKA NAZEER, resident of Block No.8, Ward No.8, Near Ajmeer Timber, Ranipet, Madikeri-571201 have changed my name to ASHIKA ARYA vide affidavit dated 13/11/2021 sworn before notary Ambika.S, Bangalore.

PRATIMA W/O 14838036A– Ex-Hav/Skt-SRINIVASA R/a #2-467, Yakshananda Gaddemane, 52 Heroor, Udupi, Karnataka-576213 changed name from PRATIMA to PRATHIMA dated 15-11-2021 notary KV Mani, Bangalore.

Lost

ಕಳೆದಿದೆ
ನೆಲಮಂಗಲ ತಾ, ಕಸಬಾ ಹೋ, ಅರಿಸಿನಕುಂಟೆ ಗ್ರಾಮದ ಸ.ನಂ.63/2ರಲ್ಲಿನ ಖಾ. ನಂ. 689/, ಸೈಟ್ ನಂ. 124ರ $\frac{20 \times 65.5+63}{2}$ ರ ಅಳತೆಯ ನಿವೇಶನ ದಿ. 05/08/2011ರಲ್ಲಿ ನೋಂದಣಿಯಾಗಿರುವ ರಿ.ನಂ. 2943/11–12 ರ ಅಸಲು ಕ್ರಯಪತ್ರ ಕಳೆದು ಹೋಗಿರುತ್ತದೆ. ಪತ್ತೆಯಾದಲ್ಲಿ ಶ್ರೀ. ರಾಮಮೂರ್ತಿ ಅವರನ್ನು ಸಂಪರ್ಕಿಸಿ: ಮೊ: 9739293636

I, JEEVAN PRASAD from,(Aricent Business Solutions) I-have Lost-my ICICI-bank original ID-card, No.2167412 while traveling-in Bangalore on12-11-2021, registered police complaint also-on 12-11-2021, finder-please Contact: 9036618497

For Online Classified Booking
Name Change / Education / Property / Job / Services and many more contact
9880856233
9886213331
dhclassifieds.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪಿಇಎಸ್ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವದಲ್ಲಿ ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಅಭಿಮತ

ಭಾರತೀಯ ಭಾಷೆಗಳ ರಕ್ಷಣೆ ಆದ್ಯತೆಯಾಗಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ಭಾಷೆಗಳನ್ನು ಉಳಿಸಿ ಬೆಳೆಸುವ ಕೆಲಸ ಆಗಬೇಕು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಯಾ ಭಾಷೆಗಳಲ್ಲೇ ಪಠ್ಯವಸ್ತು ರಚಿಸಬೇಕು' ಎಂದು ಉಪರಾಷ್ಟ್ರಪತಿ ಎಂ.ವೆಂಕಯ್ಯ-ನಾಯ್ಡು ಹೇಳಿದರು.

ಪಿಇಎಸ್ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ರ್‍ಯಾಂಕ್ ವಿಜೇತರಿಗೆ ಪದಕ ಹಾಗೂ ಪ್ರಮಾಣ ಪತ್ರ ಪ್ರದಾನ ಮಾಡಿ ಸೋಮವಾರ ಮಾತನಾಡಿದರು.

'ವೈದ್ಯಕೀಯ ಸೇರಿದಂತೆ ಎಲ್ಲ ಶಿಕ್ಷಣವನ್ನೂ ಮಾತೃಭಾಷೆಯಲ್ಲೇ ಬೋಧಿಸಬೇಕು. ನನ್ನನ್ನೂ ಒಳಗೊಂಡಂತೆ ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರಪತಿ ರಾಮನಾಥ ಕೋವಿಂದ್, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಹೀಗೆ ಅನೇಕ ಗಣ್ಯರು ಮಾತೃಭಾಷೆಯಲ್ಲೇ ಕಲಿತವರು. ಹೀಗಾಗಿ ಆಡುಭಾಷೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು' ಎಂದರು.

'ಕೃಷಿಯು ರಾಷ್ಟ್ರದ ಬೆನ್ನೆಲುಬು. ಅದರ ಬಲವರ್ಧನೆಗೆ ಎಲ್ಲರೂ ಕಟಿಬದ್ಧರಾಗಬೇಕು. ಈಗ ಬಹುಪಾಲು ಮಂದಿ ವ್ಯವಸಾಯದಿಂದ ವಿಮುಖರಾಗುತ್ತಿದ್ದಾರೆ. ಅವರನ್ನು ಆ ಕಾಯಕದಲ್ಲೇ ತೊಡಗಿಕೊಳ್ಳುವಂತೆ ಮಾಡಬೇಕು. ಮಾರುಕಟ್ಟೆ, ಬೆಳೆದ ಬೆಳೆಗೆ ಸೂಕ್ತ ದರ, ಹವಾಮಾನ ಬದಲಾವಣೆ ಸೇರಿದಂತೆ ಅನೇಕ ಸಮಸ್ಯೆಗಳನ್ನು ರೈತರು ಎದುರಿಸುತ್ತಿದ್ದಾರೆ. ಅವುಗಳಿಗೆ ಸೂಕ್ತ ಪರಿಹಾರ ಕಂಡುಹಿಡಿಯುವ ದಿಸೆಯಲ್ಲಿ ವಿಶ್ವವಿದ್ಯಾಲಯಗಳು ಚಿಂತಿಸಬೇಕು. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು' ಎಂದು ತಿಳಿಸಿದರು.

'ಪರಿಸರ ಮತ್ತು ಸಂಸ್ಕೃತಿ ಸಮ್ಮಿಳಿತಗೊಂಡಾಗ ಮಾತ್ರ ಭವಿಷ್ಯ ಉಜ್ವಲವಾಗಿರುತ್ತದೆ. ಸ್ವಾವಲಂಬಿ ಭಾರತದ ನಿರ್ಮಾಣ ನಮ್ಮೆಲ್ಲರ ಕನಸಾಗಬೇಕು. ನಾವೀಗ ಉಪಗ್ರಹಗಳನ್ನು ತಯಾರಿಸಿ ವಿದೇಶಗಳಿಗೆ ರಫ್ತು ಮಾಡುತ್ತಿದ್ದೇವೆ. ಕೋವಿಡ್‌ಗೆ ಲಸಿಕೆ ಕಂಡುಹಿಡಿಯುವ ಮೂಲಕ ನಮ್ಮ ವಿಜ್ಞಾನಿಗಳು ಜಗತ್ತಿಗೆ ಹೊಸ ಸಂದೇಶ ರವಾನಿಸಿದ್ದಾರೆ. ಭಾರತವನ್ನು ಜ್ಞಾನದ ಶಕ್ತಿ ಕೇಂದ್ರವನ್ನಾಗಿ ಪರಿವರ್ತಿಸಬೇಕು. ಈ ಕಾರ್ಯದಲ್ಲಿ ತಾಂತ್ರಿಕ ವಿಶ್ವವಿದ್ಯಾಲಯಗಳ ಪಾತ್ರ ಬಹುಮುಖ್ಯ' ಎಂದು ಹೇಳಿದರು.

'ನಾವೀಗ 4ನೇ ಕೈಗಾರಿಕಾ ಕ್ರಾಂತಿಯ ಹೆಬ್ಬಾಗಿಲಿನಲ್ಲಿದ್ದೇವೆ. ಹೀಗಾಗಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳನ್ನು 5ಜಿ ಸೇರಿದಂತೆ ಇನ್ನಿತರ ಹೊಸ ತಂತ್ರಜ್ಞಾನಗಳಿಗೆ ಅಣಿಗೊಳಿಸಬೇಕಿದೆ. ಕೃಷಿ ಸೇರಿದಂತೆ ಎಲ್ಲಾ ವಲಯಗಳೂ ಡ್ರೋನ್ ತಂತ್ರಜ್ಞಾನದತ್ತ ತೆರೆದುಕೊಳ್ಳುತ್ತಿವೆ' ಎಂದೂ ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಚಿವ ಬೈರತಿ ಬಸವರಾಜ್, ವಿಶ್ವವಿದ್ಯಾಲಯದ ಸಹಕುಲಾಧಿಪತಿ ಪ್ರೊ. ಡಿ.ಜವಹರ್, ಕುಲಪತಿ ಜೆ.ಸೂರ್ಯಪ್ರಸಾದ್, ಕುಲಸಚಿವ ಕೆ.ಎಸ್.ಶ್ರೀಧರ್ ಇದ್ದರು.

ವಿವಿಧ ವಿಷಯಗಳಲ್ಲಿ ರ್‍ಯಾಂಕ್ ಪಡೆದವರು (ಎಡದಿಂದ) ಭಾವಿಕ್ ಆನಂದ್ ಕಾರಿಯಾ (ಬಿಬಿಎ), ಟಾಮ್ ಪಾಲ್ ಮರೊಟ್ಟಿಕಲ್ (ಮೆಕ್ಯಾನಿಕಲ್ ಎಂಜಿನಿಯರಿಂಗ್), ಮನಿಷಾ ಮಲ್ಲಿಕ್ (2ನೇ ರ್‍ಯಾಂಕ್; ಎಂಸಿಎ), ಸಂಜನಾ ಸುರೇಂದ್ರಕುಮಾರ್ (ಬ್ಯಾಚುಲರ್ ಆಫ್ ಡಿಸೈನ್), ರಿಶಾ ಅನಿಲ್ (ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್), ವೈ.ಎಂ.ಪ್ರದ್ಯುಮ್ನ (ಕಂಪ್ಯೂಟರ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ) ಹಾಗೂ ಶ್ರೀಹರಿ ಜೆ.ಅಗ್ನಿಹೋತ್ರಿ (ಸಿವಿಲ್ ಎಂಜಿನಿಯರಿಂಗ್) –ಪ್ರಜಾವಾಣಿ ಚಿತ್ರ

ಉಪರಾಷ್ಟ್ರಪತಿಯವರಿಂದ ಚಿನ್ನದ ಪದಕ ಸ್ವೀಕರಿಸಿದ್ದು ಹೆಮ್ಮೆಯ ವಿಷಯ. ಪೋಷಕರು ಹಾಗೂ ಬೋಧಕರ ಸಹಕಾರದಿಂದ ಇದು ಸಾಧ್ಯವಾಗಿದೆ
ಭಾವಿಕ್ ಆನಂದ್ ಕಾರಿಯಾ
ಬಿಬಿಎಯಲ್ಲಿ ಚಿನ್ನದ ಪದಕ ಗೆದ್ದ ವಿದ್ಯಾರ್ಥಿ

ತರಗತಿಯಲ್ಲಿ ಪ್ರಾಧ್ಯಾಪಕರು ಹೇಳಿಕೊಡುತ್ತಿದ್ದ ಪಾಠ ಗಮನವಿಟ್ಟು ಕೇಳುತ್ತಿದ್ದೆ. ಪ್ರಾಯೋಗಿಕ ಕಲಿಕೆಯ ವೇಳೆಯೂ ಆಸ್ಥೆವಹಿಸುತ್ತಿದ್ದೆ
ಟಾಮ್ ಪಾಲ್ ಮರೊಟ್ಟಿಕಲ್
ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಮೊದಲ ರ್‍ಯಾಂಕ್ ಪಡೆದ ವಿದ್ಯಾರ್ಥಿ

ಇದು ಬದುಕಿನ ಅತ್ಯಂತ ಸ್ಮರಣೀಯ ಕ್ಷಣ. ಎಲ್ಲ ವಿಷಯವನ್ನು ಇಷ್ಟಪಟ್ಟು ಓದುತ್ತಿದ್ದೆ. ಹೀಗಾಗಿ ಹೆಚ್ಚು ಅಂಕ ಗಳಿಸಲು ಸಾಧ್ಯವಾಯಿತು
ಸಂಜನಾ ಸುರೇಂದ್ರಕುಮಾರ್
ಬ್ಯಾಚುಲರ್ ಆಫ್ ಡಿಸೈನ್‌ನಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿನಿ

₹35 ಕೋಟಿ ವಿದ್ಯಾರ್ಥಿ ವೇತನ

'ವಿದ್ಯಾರ್ಥಿಗಳನ್ನು ಕಲಿಕೆಯತ್ತ ಉತ್ತೇಜಿಸುವ ಸಲುವಾಗಿ 2013ರಿಂದ ಇಲ್ಲಿಯವರೆಗೆ ಅಂದಾಜು ₹35 ಕೋಟಿ ವಿದ್ಯಾರ್ಥಿ ವೇತನ ನೀಡಲಾಗಿದೆ' ಎಂದು ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್.ದೊರೆಸ್ವಾಮಿ ಹೇಳಿದರು.

'ನಮ್ಮ ವಿಶ್ವವಿದ್ಯಾಲಯವು ಗುಣಮಟ್ಟದ ಹಾಗೂ ಕೌಶಲಾಧಾರಿತ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದೆ. ವಿದ್ಯಾರ್ಥಿಗಳನ್ನು ಉದ್ಯೋಗದಾತರನ್ನಾಗಿ ರೂಪಿಸಲು ಒತ್ತು ಕೊಡಲಾಗುತ್ತಿದೆ. ಡಿಆರ್‌ಡಿಒ ಹಾಗೂ ಇಸ್ರೊ ಸಹಯೋಗದಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಎರಡು ಉಪಗ್ರಹಗಳನ್ನು ತಯಾರಿಸಿದ್ದಾರೆ. ವಿಶ್ವವಿದ್ಯಾಲಯದಲ್ಲಿ ಸದ್ಯ 20 ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ' ಎಂದರು.

ಕನ್ನಡದಲ್ಲೇ ಶುಭ ಕೋರಿದ ಉಪರಾಷ್ಟ್ರಪತಿ

ಕನ್ನಡದಲ್ಲೇ ಮಾತು ಆರಂಭಿಸಿದ ವೆಂಕಯ್ಯನಾಯ್ಡು ಅವರು ಪದವಿ ಪಡೆದ ಹಾಗೂ ರ್‍ಯಾಂಕ್ ವಿಜೇತರಾದವರಿಗೆ ಕನ್ನಡದಲ್ಲೇ ಶುಭಕೋರಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಕೂಡ ಕನ್ನಡದಲ್ಲೇ ಮಾತು ಆರಂಭಿಸಿದರು. ಬಳಿಕ ಹಿಂದಿಯಲ್ಲಿ ಭಾಷಣ ಮಾಡಿದರು.

FOR SALE
PRIME LAND
BASAVANAGUDI, BENGALURU
Area: 945.26 Sq mtrs* (10,175 Sq ft*)
Suitable for Commercial / Residential
*Approx area
EXCLUSIVELY MARKETED BY KNIGHT FRANK
Knight Frank
For more details, please contact
Raja M +91 98452 36306
raja.m@in.knightfrank.com
Knight Frank (India) Pvt. Ltd.
Unit no. 204 & 205, 2nd Floor Embassy Square, #148 Infantry Road, Bengaluru, India Tel: +91 80 6818 5600
CIN No. – U74140MH1995PTC093179 Knight Frank: RERA Registration No. PRM/KA/RERA/1251/309/AG/170823/000049

ಪಂಚಾಯಿತಿ ಆವರಣದಲ್ಲಿರುವ ಕಸದ ರಾಶಿ

ಪಂಚಾಯಿತಿ ಆವರಣದಲ್ಲಿಯೇ ಕಸ: ಸಾರ್ವಜನಿಕರ ಆಕ್ರೋಶ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ನರಸೀಪುರ ಗ್ರಾಮ ಪಂಚಾಯಿತಿ ಆವರಣದಲ್ಲಿ ಕಸ ರಾಶಿ ಬಿದಿದ್ದು ಚರಂಡಿಗಳು ಕಟ್ಟಿಕೊಂಡು ದುರ್ವಾಸನೆ ಬೀರುತ್ತಿದೆ. ಜೊತೆಗೆ ಪಾರ್ಥೇನಿಯಂ ಕಳೆ ದಟ್ಟವಾಗಿ ಬೆಳೆದು ಸಾರ್ವಜನಿಕರಿಗೆ ವಿವಿಧ ರೋಗಗಳನ್ನು ತರುವ ಆತಂಕ ಎದುರಾಗಿದ್ದರೂ ಇಲ್ಲಿನ ಪಂಚಾಯಿತಿ ಆಡಳಿತ ಕಸ ಹಾಗೂ ಕಳೆ ತೆಗೆದು ಚರಂಡಿ ಸ್ವಚ್ಛ ಮಾಡುವ ಪ್ರಕ್ರಿಯೆಗೆ ಮುಂದಾಗಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಪಕ್ಕದಲ್ಲಿಯೇ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದೆ. ಅಲ್ಲಿ ನೂರಾರು ಮಕ್ಕಳು ಕಲಿಯುತ್ತಿದ್ದಾರೆ. ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವೂ ಇದೆ. ಅಲ್ಲಿಗೆ ರೋಗಿಗಳು ಬರುತ್ತಾರೆ. ಸುತ್ತಮುತ್ತಲ ಹಳ್ಳಿಗಳಿಗೆ ಹೋಗುವ ಕೇಂದ್ರ ಬಿಂದುವಾಗಿರುವ ಇಲ್ಲಿ ಹತ್ತಾರು ಅಂಗಡಿಗಳಿದ್ದು, ದಿನನಿತ್ಯ ನೂರಾರು ಜನ ಇಲ್ಲಿಗೆ ಬರುತ್ತಾರೆ. ಹೀಗಿರುವಾಗಲೂ ಕಸ ಮತ್ತು ಪಾರ್ಥೇನಿಯಂ ಕಳೆಯನ್ನು ತೆಗೆಸದೇ ಪಂಚಾಯಿತಿಯವರು ನಿರ್ಲಕ್ಷ್ಯ ವಹಿಸಿದ್ದಾರೆ' ಎನ್ನುತ್ತಾರೆ ಗ್ರಾಮಸ್ಥ ರವೀಶ್.

ಈ ಸಂಬಂಧ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅವರಿಗೆ ದೂರು ನೀಡಲಾಗಿದೆ ಎಂದು ಅವರು ಹೇಳಿದರು.

'ಪಾರ್ಥೇನಿಯಂ ಕಳೆ ದಟ್ಟವಾಗಿರುವುದರಿಂದ ವಿಷ ಜಂತುಗಳು ಸೇರಿಕೊಂಡಿವೆ. ಸಂಜೆಯಾದರೆ ಸೊಳ್ಳೆ ಕಾಟ. ಜೋರು ಗಾಳಿ ಬೀಸಿದರೆ ಕೆಟ್ಟ ವಾಸನೆ ಬರುತ್ತದೆ' ಎಂಬುದು ಸ್ಥಳೀಯರ ಆರೋಪ.

ಸಂಕ್ಷಿಪ್ತ ಸುದ್ದಿ

'ಹಂಸಲೇಖ ಹೇಳಿಕೆ ಘನತೆಗೆ ತಕ್ಕದ್ದಲ್ಲ'

ಬೆಂಗಳೂರು: 'ಸಂಗೀತ ನಿರ್ದೇಶಕ ಹಂಸಲೇಖ ಅವರು ವಿಶ್ವೇಶ ತೀರ್ಥ ಸ್ವಾಮೀಜಿಯವರ ಬಗ್ಗೆ ವ್ಯಂಗ್ಯದಿಂದ ಮಾತನಾಡಿರುವುದು ಅವರ ಘನತೆಗೆ ತಕ್ಕದ್ದಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ ಖಂಡಿಸಿದ್ದಾರೆ.

'ವಿಶ್ವೇಶ ತೀರ್ಥರು ದಲಿತರ ಬಗ್ಗೆ ತೋರಿಸುತ್ತಿದ್ದ ಕಾಳಜಿ ತೋರಿಕೆಯದ್ದಾಗಿರಲಿಲ್ಲ. ಅದು, ಅವರ ಅಂತಃಕರಣದಿಂದ ಬಂದ ಅನಿಸಿಕೆಗಳಾಗಿದ್ದವು'.

'ಜನ ಚಪ್ಪಾಳೆ ತಟ್ಟುತ್ತಾರೆ ಎನ್ನುವ ಕಾರಣಕ್ಕೆ ಸಾರ್ವಜನಿಕ ಸಮಾರಂಭಗಳಲ್ಲಿ ಆಲೋಚಿಸಿ ಮಾತನಾಡಬೇಕು. ತಮ್ಮ ಮಾತಿಗೆ ಕ್ಷಮೆಯಾಚಿಸಿರುವುದು ಸಮಾಧಾನಕರ ಸಂಗತಿ. ಗೌರವಾನ್ವಿತರ ಬಗ್ಗೆ ಹಗುರವಾಗಿ ಮಾತನಾಡಿ, ಒತ್ತಡಕ್ಕೆ ಕ್ಷಮೆಯಾಚಿಸಿ ಸಣ್ಣವರಾಗುವುದು ಬೇಡ' ಎಂದೂ ಅವರು ಹೇಳಿದ್ದಾರೆ.

ಸ್ತನ ಕ್ಯಾನ್ಸರ್: ಆರಂಭಿಕ ತಪಾಸಣೆಯೇ ರೋಗಕ್ಕೆ ಮದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ತನ ಕ್ಯಾನ್ಸರ್‌ಗೆ ಒಳಗಾದವರು ಆರಂಭಿಕ ಹಂತದಲ್ಲೇ ಚಿಕಿತ್ಸೆ ಪಡೆದುಕೊಳ್ಳುವುದರಿಂದ ಶೇ 100ರಷ್ಟು ಗುಣಮುಖರಾಗಬಹುದು' ಎಂದು ಮಣಿಪಾಲ್ ಆಸ್ಪತ್ರೆಯ ಗ್ರಂಥಿಶಾಸ್ತ್ರ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಎಸ್.ಪಿ.ಸೋಮಶೇಖರ್ ತಿಳಿಸಿದರು.

ಮಣಿಪಾಲ್ ಆಸ್ಪತ್ರೆ ಹಾಗೂ ಡಿಎಚ್ ಬ್ರ್ಯಾಂಡ್‌ಸ್ಪಾಟ್‌ನ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ 'ಸ್ತನ ಕ್ಯಾನ್ಸರ್ ಕುರಿತು ಯುವಜನರಿಗೆ ಮಾಹಿತಿ ಮತ್ತು ಆರಂಭಿಕ ಹಂತದಲ್ಲೇ ತಡೆಗಟ್ಟುವಿಕೆ' ಕುರಿತು ಆನ್‌ಲೈನ್ ಚರ್ಚೆಯಲ್ಲಿ ಅವರು ಮಾತನಾಡಿದರು.

'ಶೇ 70ರಷ್ಟು ಮಂದಿ ಕ್ಯಾನ್ಸರ್‌ನ ಮುಂದುವರಿದ ಹಂತದಲ್ಲಿ ಚಿಕಿತ್ಸೆಗೆ ಬರುತ್ತಾರೆ. ಜನರಲ್ಲಿ ಅರಿವಿನ ಕೊರತೆ ಹಾಗೂ ತಪಾಸಣೆಗೆ ವಿಳಂಬ ತೋರುವುದರಿಂದ ಗುಣಪಡಿಸಲು ಸಾಧ್ಯವಿರುವ ಸ್ತನ ಕ್ಯಾನ್ಸರ್‌ನ ಪ್ರಮಾಣವು ಏರುತ್ತಿದೆ. ಭಾರತದಲ್ಲಿ ಸ್ತನ ಕ್ಯಾನ್ಸರ್‌ನ ಪ್ರಮಾಣ ಪ್ರತಿ ವರ್ಷ ಶೇ 3ರಷ್ಟು ಹೆಚ್ಚಳವಾಗುತ್ತಿದೆ' ಎಂದು ವಿವರಿಸಿದರು.

ಮಣಿಪಾಲ್ ಆಸ್ಪತ್ರೆಯ ಗ್ರಂಥಿಶಾಸ್ತ್ರಜ್ಞ ಸಲಹೆಗಾರ್ತಿ ಡಾ.ಪೂನಂ ಪಾಟೀಲ್, 'ಸ್ತನ ಕ್ಯಾನ್ಸರ್‌ನ ಆರಂಭಿಕ ಹಂತ ನೋವುರಹಿತವಾಗಿರುತ್ತದೆ. ಹಾಗಾಗಿ, ಬಹುತೇಕರು ನೋವು ಕಾಣಿಸುತ್ತಿಲ್ಲ, ವೈದ್ಯರ ಬಳಿಗೆ ಹೋಗುವ ಅಗತ್ಯವಿಲ್ಲ ಎಂದು ನಿರ್ಲಕ್ಷಿಸುತ್ತಾರೆ. ಇದರಿಂದ ಆರಂಭಿಕ ಹಂತದಲ್ಲೇ ಕ್ಯಾನ್ಸರ್ ಗುಣಪಡಿಸಿಕೊಳ್ಳುವಲ್ಲಿ ಎಡವುತ್ತಿದ್ದಾರೆ' ಎಂದರು.

'ಸ್ತನ ಕ್ಯಾನ್ಸರ್‌ಗೆ ಮಹಿಳೆಯರ ದೇಹದಲ್ಲಿನ ಹಾರ್ಮೋನ್‌ಗಳು ಪರಿಣಾಮ ಬೀರುತ್ತವೆ. ಇಂದಿನ ಜೀವನಶೈಲಿಯಿಂದಲೂ ಯುವಜನರಲ್ಲಿ ಸ್ತನ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದ್ದು, ಇದರ ಬಗ್ಗೆ ಜನರು ಜಾಗೃತರಾಗಿರಬೇಕು' ಎಂದು ಸಲಹೆ ನೀಡಿದರು.

ವಿಕಿರಣಶಾಸ್ತ್ರ ಸಲಹೆಗಾರ್ತಿ ಡಾ.ರೂಪಾ ಅನಂತಶಿವನ್, 'ಸ್ತನ ರೇಖನ' (ಮ್ಯಾಮೊಗ್ರಫಿ) ಮೂಲಕ ಸ್ತನ ಕ್ಯಾನ್ಸರ್‌ನ ಪತ್ತೆ ನಡೆಯುತ್ತಿದೆ. ವಿವಿಧ ತಪಾಸಣೆಗಳ ಮೂಲಕ ಸ್ತನ ಕ್ಯಾನ್ಸರ್ ಇರುವ ಅಥವಾ ಇಲ್ಲದಿರುವುದನ್ನು ದೃಢಪಡಿಸಿಕೊಳ್ಳಬಹುದು. ಸಾಧ್ಯವಾದಷ್ಟು ನೋವುರಹಿತವಾಗಿ ಹಾಗೂ ಸುಲಭ ವಿಧಾನದಲ್ಲಿ ಚಿಕಿತ್ಸೆ ಲಭ್ಯವಿದೆ. ಸ್ತನಗಳಲ್ಲಿ ಬದಲಾವಣೆ ಕಂಡುಬಂದ ಕೂಡಲೇ ವೈದ್ಯರನ್ನು ಸಂಪರ್ಕಿಸುವುದು ಸೂಕ್ತ' ಎಂದರು.

ಪ್ಲಾಸ್ಟಿಕ್, ಕಾಸ್ಮೆಟಿಕ್ ಹಾಗೂ ಪುನರ್‌ರಚನೆ ಶಸ್ತ್ರಚಿಕಿತ್ಸೆಯ ಸಲಹೆಗಾರ ಡಾ.ಬಿ.ಸಿ.ಅಶೋಕ್, 'ಸ್ತನ ಕ್ಯಾನ್ಸರ್ ಚಿಕಿತ್ಸೆ ಬಗ್ಗೆ ಜನರಲ್ಲಿ ತಪ್ಪು ಮಾಹಿತಿ ಇದೆ. ಸ್ತನ ಕ್ಯಾನ್ಸರ್‌ಗೆ ಸರಳ ವಿಧಾನದಲ್ಲಿ ಚಿಕಿತ್ಸೆ ನಡೆಯುತ್ತದೆ. ರೋಗಿ ಬೆಳಿಗ್ಗೆ ಚಿಕಿತ್ಸೆಗೆ ಒಳಗಾದರೆ, ಸಂಜೆ ವೇಳೆಗೆ ಮನೆಗೆ ಮರಳಬಹುದು' ಎಂದು ಹೇಳಿದರು.

'ಭಾರತವು ಇಡೀ ವಿಶ್ವಕ್ಕೆ ಮಾದರಿ'

ಬೆಂಗಳೂರು: 'ಸಂಸ್ಕೃತಿಯ ಆಗರವಾಗಿರುವ ಭಾರತವು ಇಡೀ ವಿಶ್ವಕ್ಕೆ ಮಾದರಿಯಾಗಿದೆ. ಇದಕ್ಕೆ ಕಲಾವಿದರ ಕೊಡುಗೆ ಅಪಾರ' ಎಂದು ವಿದ್ವಾನ್ ಎಚ್.ಎಸ್. ವೇಣುಗೋಪಾಲ್ ತಿಳಿಸಿದರು.

ರಂಗ ವಿಜಯ ಸಂಸ್ಥೆಯು ವೈಯಾಲಿಕಾವಲ್‌ನ 5ನೇ ಮುಖ್ಯರಸ್ತೆಯಲ್ಲಿ ಸ್ಥಾಪಿಸಿರುವ ರಂಗವಿಠಲ ಸಂಗೀತ ನೃತ್ಯ ನಾಟಕ ಶಾಲೆ ಉದ್ಘಾಟಿಸಿ ಮಾತನಾಡಿದರು.

'ರಂಗವಿಠಲ ಶಾಲೆಯು ಹಲವರ ಬಾಳಿಗೆ ಬೆಳಕಾಗಲಿ, ಕಲಾವಿದರ ತವರು ನೆಲಯಾಗಲಿ' ಎಂದು ಹಾರೈಸಿದರು.

ದೊಡ್ಡಬೆಲೆ ಆಶ್ರಮದ ಮೋಹನ್ ಗುರೂಜಿ 'ಮುಕ್ತಾಬಾಯಿ ಮತ್ತು ಶ್ರೀನಿವಾಸರಾವ್ ಅವರು ಹಾಕಿಕೊಟ್ಟಿರುವ ಧಾರ್ಮಿಕ ಪಥದಲ್ಲಿ ಅವರ ಮಕ್ಕಳಾದ ಸತ್ಯನಾರಾಯಣ ಹಾಗೂ ಸುನಿತಾ ಸಿನ್ಹ ಸಾಗುತ್ತಿದ್ದಾರೆ. ಅವರ ಈ ಕಲಾಸೇವೆ ಹೀಗೆ ಮುಂದುವರಿಯಲಿ' ಎಂದರು.

ಪಲ್ಲವಿ ಮಣಿ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಮಲರ್ ವಿಳಿ, ಲೆಫ್ಟಿನೆಂಟ್ ಕರ್ನಲ್ ಗಂಗಾದತ್ತ, ಉದ್ಯಮಿ ಚಂದ್ರಕುಮಾರ್ ಚಾವ್ಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಕುಮಾರ್, ದ್ರಾವಿಡ ವಿಶ್ವವಿದ್ಯಾಲಯದ ನರಸಿಂಹ ಪ್ರಸಾದ್, ನಾಟಕಕಾರರಾದ ಟಿ.ಲಕ್ಷ್ಮೀನಾರಾಯಣ, ರಂಗ ವಿಜಯದ ಕಾರ್ಯದರ್ಶಿ ಗೀತಾ ರಾಘವೇಂದ್ರ, ಮಾಲೂರು ವಿಜಿ ಇದ್ದರು.

ಪ್ರಯಾಣಿಕನನ್ನು ಹತ್ತಿಸಿಕೊಳ್ಳದೆ ಬಂದ ಕೆಎಸ್‌ಆರ್‌ಟಿಸಿ ಬಸ್

₹ 1 ಸಾವಿರ ಪರಿಹಾರ ನೀಡಲು ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿರಿಯ ನಾಗರಿಕರೊಬ್ಬರನ್ನು ನಿಗದಿತ ನಿಲ್ದಾಣದಿಂದ ಹತ್ತಿಸಿಕೊಳ್ಳದೆ ಬಿಟ್ಟು ಬಂದಿದ್ದಕ್ಕೆ ₹ 1 ಸಾವಿರ ಪರಿಹಾರ ನೀಡುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ (ಕೆಎಸ್‌ಆರ್‌ಟಿಸಿ) ಗ್ರಾಹಕರ ನ್ಯಾಯಾಲಯ ಆದೇಶಿಸಿದೆ.

'ಟಿಕೆಟ್ ಕಾಯ್ದಿರಿಸಿದ್ದರೂ ನನ್ನನ್ನು ಬಸ್ ನಿಲ್ದಾಣದಲ್ಲೇ ಬಿಟ್ಟು ಬರಲಾಯಿತು. ಇದರಿಂದಾಗಿ ನಾನು ತಮಿಳುನಾಡಿನಿಂದ ಎರಡು ಬಸ್ಸುಗಳನ್ನು ಬದಲಿಸಿ ಬರುವಂತಾಯಿತು' ಎಂದು ದೂರಿ, ಬೆಂಗಳೂರಿನ ಬನಶಂಕರಿ ನಿವಾಸಿ ಎಸ್. ಸಂಗಮೇಶ್ವರನ್ ನಗರದ ಎರಡನೇ ಹೆಚ್ಚುವರಿ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ನೀಡಿದ್ದರು.

ದೂರಿನ ವಿಚಾರಣೆ ನಡೆಸಿದ ನ್ಯಾಯಾಲಯ ಅರ್ಜಿದಾರರಿಗೆ ಆದ ಅನಾನುಕೂಲಕ್ಕೆ ₹ 1 ಸಾವಿರ ಪರಿಹಾರ ಪಾವತಿಸುವಂತೆ ನಿಗಮಕ್ಕೆ ಆದೇಶಿಸಿದೆ.

ಏನಿದು ಪ್ರಕರಣ: ಎಸ್. ಸಂಗಮೇಶ್ವರನ್ ಬೆಂಗಳೂರಿನಿಂದ ತಮಿಳುನಾಡಿನ ತಿರುವಣ್ಣಾಮಲೈಗೆ ಹೋಗಿ ಬರಲು ಕೆಎಸ್‌ಆರ್‌ಟಿಸಿ ಐರಾವತ ಬಸ್‌ಗೆ ಆನ್‌ಲೈನ್‌ನಲ್ಲಿ ಟಿಕೆಟ್ ಬುಕ್ ಮಾಡಿದ್ದರು. ಅದರಂತೆ, 2019ರ ಅಕ್ಟೋಬರ್ 12 ಬೆಂಗಳೂರಿನಿಂದ ಹೊರಟು ಮರುದಿನ ನಗರಕ್ಕೆ ಹಿಂತಿರುಗಬೇಕಿತ್ತು. ಗೊತ್ತುಪಡಿಸಿದ ಸಮಯಕ್ಕೆ ಬಸ್ ನಿಲ್ದಾಣ ತಲುಪಿದ್ದರು. ಆದರೆ, ಒಂದು ಗಂಟೆ ಕಾದರೂ ಬಸ್ ಬಂದಿರಲಿಲ್ಲ.

ಈ ಹಿನ್ನೆಲೆಯಲ್ಲಿ ಸಂಗಮೇಶ್ವರನ್ ಟಿಕೆಟ್ ಬುಕಿಂಗ್ ಟೈಮ್‌ನ ಎಸ್‌ಎಂಎಸ್‌ನಲ್ಲಿದ್ದ ಕಂಡಕ್ಟರ್ ನಂಬರ್‌ಗೆ ಫೋನ್ ಮಾಡಿದ್ದರು. ಕರೆ ಸ್ವೀಕರಿಸಿದ ಕಂಡಕ್ಟರ್, 'ಪೊಲೀಸರ ಸೂಚನೆಯಂತೆ ಪಿಕಪ್ ಪಾಯಿಂಟ್ ಬದಲಾದ ಕಾರಣ, ಬಸ್ ತಿರುವಣ್ಣಾಮಲೈ ನಿಲ್ದಾಣಕ್ಕೆ ಬರಲಿಲ್ಲ. ಹೊಸ ತಾತ್ಕಾಲಿಕ ನಿಲ್ದಾಣದಿಂದ ಈಗಾಗಲೇ ಬೆಂಗಳೂರಿನ ಕಡೆ ಹೊರಟಾಗಿದೆ' ಎಂದು ತಿಳಿಸಿದ್ದರು.

ಇದಕ್ಕೆ ಪ್ರತಿವಾದ ಮಂಡಿಸಿದ್ದ ನಿಗಮದ ಪರ ವಕೀಲರು, 'ಹುಣ್ಣಿಮೆ ಸಮಯದಲ್ಲಿ ಜನಸಂದಣಿ ನಿಯಂತ್ರಿಸಲು ಸ್ಥಳೀಯ ಪೊಲೀಸರು ಬಸ್ ನಿಲ್ದಾಣವನ್ನು ತಾತ್ಕಾಲಿಕವಾಗಿ ಹೊರವಲಯಕ್ಕೆ ಸ್ಥಳಾಂತರಿಸಿದ್ದರು. ಈ ಬಗ್ಗೆ ಬಸ್ ಕಂಡಕ್ಟರ್ ದೂರುದಾರರಿಗೆ ಎಸ್‌ಎಂಎಸ್ ಕಳುಹಿಸಿದ್ದಾರೆ. ಉಳಿದ 23 ಪ್ರಯಾಣಿಕರೆಲ್ಲಾ ಬಸ್‌ಗೆ ಹತ್ತಿದ್ದರೂ, ದೂರುದಾರರು ಬಂದಿರಲಿಲ್ಲ. ಇದು ಅವರದೇ ತಪ್ಪು' ಎಂದು ವಾದಿಸಿದ್ದರು.

ಇದನ್ನು ಒಪ್ಪದ ನ್ಯಾಯಾಲಯ, ಹಿರಿಯ ನಾಗರಿಕರು ತೊಂದರೆ ಎದುರಿಸಿದ್ದಕ್ಕೆ ಒಟ್ಟು 1 ಸಾವಿರ ಪರಿಹಾರವನ್ನು 1 ತಿಂಗಳಲ್ಲಿ ಪಾವತಿಸಬೇಕು ಎಂದು ನಿಗಮಕ್ಕೆ ಆದೇಶಿಸಿದೆ.

ಬಿಎಂಟಿಸಿ ಬಸ್‌ಗಳ ರಾತ್ರಿ ಸೇವೆ ಆರಂಭ

ಬೆಂಗಳೂರು: ನಗರದ ವಿವಿಧ ಪ್ರದೇಶಗಳಿಗೆ ರಾತ್ರಿ ಸಾರಿಗೆ ಸೇವೆಯನ್ನು ಮತ್ತೆ ಆರಂಭಿಸಲಾಗಿದೆ ಎಂದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ತಿಳಿಸಿದೆ.

48 ಮಾರ್ಗಗಳಲ್ಲಿ ಒಟ್ಟು 70 ಬಸ್‌ಗಳು ಕಾರ್ಯಾಚರಣೆ ಆರಂಭಿಸಿವೆ. ಇದರಿಂದ, ನಗರ ಮತ್ತು ನಗರದ ಹೊರವಲಯದ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಸರ್ಕಾರದ ಮಾರ್ಗಸೂಚಿ ಅನ್ವಯ ಬಸ್‌ಗಳ ಸಂಚಾರವನ್ನು ರಾತ್ರಿ ವೇಳೆ ಆರಂಭಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಅಶೋಕ್ ಕುಮಾರ್‌ಗೆ 'ಮುದ್ರಣ ರತ್ನ' ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಪ್ರಸಕ್ತ ಸಾಲಿನಿಂದ ಆರಂಭಿಸಿರುವ 'ಮುದ್ರಣ ರತ್ನ' ಪ್ರಶಸ್ತಿಯು ಲಕ್ಷ್ಮೀ ಮುದ್ರಣಾಲಯದ ಬಿ.ಆರ್.ಅಶೋಕ್ ಕುಮಾರ್ ಅವರಿಗೆ ಲಭಿಸಿದೆ.

ಅಶೋಕ್ ಕುಮಾರ್

ಕರ್ನಾಟಕ ಮುದ್ರಣಕಾರರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅಶೋಕ್ ಅವರು ಹಲವು ಮೇರು ಕೃತಿಗಳನ್ನು ಮುದ್ರಿಸಿದ್ದರು.

ಕರೂರ್ ವೈಶ್ಯ ಬ್ಯಾಂಕ್ ಲಾಭ ₹ 165 ಕೋಟಿ

ಬೆಂಗಳೂರು: ಕರೂರ್ ವೈಶ್ಯ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್‌ಗೆ ಅಂತ್ಯವಾದ ತ್ರೈಮಾಸಿಕದಲ್ಲಿ ₹ 165 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 115 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 43.5ರಷ್ಟು ಹೆಚ್ಚಾಗಿದೆ ಎಂದು ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಿದೆ.

ನಿವ್ವಳ ಬಡ್ಡಿ ಆದಾಯವು ₹ 601 ಕೋಟಿಗಳಿಂದ ₹ 680 ಕೋಟಿಗಳಿಗೆ, ಅಂದರೆ ಶೇ 13.1ರಷ್ಟು, ಹೆಚ್ಚಾಗಿದೆ ಎಂದು ಅದು ಹೇಳಿದೆ.

ನಳಿನ್‌ಗೆ ಭ್ರಷ್ಟಾಚಾರದ ಕಲ್ಪನೆಯೇ ಇಲ್ಲ: ಎಂ.ಪಿ. ರೇಣುಕಾಚಾರ್ಯ

ಬೆಂಗಳೂರು: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಹಸುವಿನಂತಹ ಮನುಷ್ಯ. ಅವರಿಗೆ ಭ್ರಷ್ಟಾಚಾರದ ಕಲ್ಪನೆಯೇ ಇಲ್ಲ' ಎಂದು ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

'ಬಿಟ್‌ಕಾಯಿನ್ ಪ್ರಕರಣದ ಬಗ್ಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ಏಕೆ ಮಾತನಾಡುತ್ತಿಲ್ಲ' ಎಂಬ ವಿರೋಧ ಪಕ್ಷದ ಮುಖಂಡರ ಪ್ರಶ್ನೆಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ನಳಿನ್ ಅವರು ಸಂಘಟನೆಯಲ್ಲೇ ತಮ್ಮನ್ನು ತೊಡಗಿಸಿಕೊಂಡವರು. ಅವರದ್ದು ಸೌಮ್ಯ ಸ್ವಭಾವ. ಕಾಂಗ್ರೆಸ್‌ನವರು ಸುದ್ದಿಗಾಗಿ ಏನು ಬೇಕಾದರೂ ಮಾಡುತ್ತಾರೆ. ಅವರು ತಮ್ಮ ಕರ್ಮಕಾಂಡವನ್ನು ನೋಡಿಕೊಳ್ಳಲಿ' ಎಂದರು.

ಬಿಟ್‌ಕಾಯಿನ್ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕರ ಮಕ್ಕಳು ಶಾಮೀಲಾಗಿದ್ದಾರೆ. ವಿಧಾನ ಪರಿಷತ್‌ನ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿ ಹೆಚ್ಚು ಸ್ಥಾನ ಪಡೆಯುತ್ತದೆ ಎಂಬ ಹತಾಶೆಯಿಂದ ಈ ರೀತಿ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಹೇಳಿದರು.

ಆಸ್ತಿ ತೆರಿಗೆ ಬಾಕಿ: ಮಂತ್ರಿ ಮಾಲ್‌ಗೆ ಮತ್ತೆ ಬೀಗ

ಬೆಂಗಳೂರು: ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಮಂತ್ರಿ ಮಾಲ್‌ಗೆ ಬಿಬಿಎಂಪಿ ಅಧಿಕಾರಿಗಳು ಸೋಮವಾರ ಮತ್ತೆ ಬೀಗ ಹಾಕಿದರು. ಕಟ್ಟಡದ ಮಾಲೀಕರ ಕೋರಿಕೆ ಮೇರೆಗೆ ತೆರಿಗೆ ಪಾವತಿಗೆ ಮತ್ತೆ 15 ದಿನಗಳ ಕಾಲಾವಕಾಶ ನೀಡಿದರು.

'ಕಟ್ಟಡದ ಮಾಲೀಕರು ₹ 36 ಕೋಟಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದಾರೆ. ನಾವು ನೋಟಿಸ್ ನೀಡಿದ ಬಳಿಕ ಅಕ್ಟೋಬರ್‌ನಲ್ಲಿ ₹ 5 ಕೋಟಿ ತೆರಿಗೆಯನ್ನು ಮಾತ್ರ ಕಟ್ಟಿದ್ದಾರೆ. ತಿಂಗಳ ಒಳಗೆ ಬಾಕಿ ಪಾವತಿ ಮಾಡುವುದಾಗಿ ಭರವಸೆ ನೀಡಿದ್ದರು. ಅವರು ಬಾಕಿ ಹಣ ಪಾವತಿಸದ ಕಾರಣ ಮಾಲ್‌ಗೆ ಬೀಗ ಹಾಕಿದ್ದೆವು' ಎಂದು ಬಿಬಿಎಂಪಿ ಪಶ್ಚಿಮ ವಲಯದ ಕಂದಾಯ ಉಪ ಆಯುಕ್ತರು 'ಪ್ರಜಾವಾಣಿ'ಗೆ ತಿಳಿಸಿದರು.

'ಅವಲಂಬಿತರಿಗೆ ಸರ್ಕಾರಿ ಕೆಲಸ ಕೊಡಿಸಲು ಕ್ರಮ'

90 ಕುಟುಂಬಗಳಿಗೆ ₹ 2.70 ಕೋಟಿ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಸಾರ್ವಜನಿಕರ ಜೀವ ಉಳಿಸಲು ಕರ್ತವ್ಯ ನಿರ್ವಹಿಸಿ, ಸೋಂಕಿಗೆ ತುತ್ತಾಗಿ ಮೃತಪಟ್ಟ 90 ಪೊಲೀಸರ ಕುಟುಂಬಗಳಿಗೆ 'ಮ್ಯಾನ್‌ಕೈಂಡ್' ಫಾರ್ಮಾ ಕಂಪನಿಯಿಂದ ₹ 2.70 ಕೋಟಿ ಪರಿಹಾರ ವಿತರಿಸಲಾಯಿತು.

ನೃಪತುಂಗ ರಸ್ತೆಯಲ್ಲಿರುವ ರಾಜ್ಯ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪೊಲೀಸ್ ಕುಟುಂಬಗಳಿಗೆ ಪರಿಹಾರದ ಚೆಕ್ ಹಸ್ತಾಂತರಿಸಲಾಯಿತು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್, 'ಕೋವಿಡ್‌ನಿಂದ ಮೃತಪಟ್ಟ ಪೊಲೀಸರ ಕುಟುಂಬಗಳಿಗೆ ಸರ್ಕಾರದಿಂದ ಈಗಾಗಲೇ ತಲಾ ₹30 ಲಕ್ಷ ಪರಿಹಾರ ಕೊಡಿಸಲಾಗಿದೆ. ಕುಟುಂಬದ ಅವಲಂಬಿತರಿಗೂ ಸರ್ಕಾರಿ ಕೆಲಸ ಕೊಡಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದರು.



ಕೊರೊನಾ ಸೋಂಕಿಗೆ ತುತ್ತಾಗಿ ಮೃತಪಟ್ಟ ಪೊಲೀಸರ ಕುಟುಂಬಗಳಿಗೆ 'ಮ್ಯಾನ್‌ಕೈಂಡ್' ಫಾರ್ಮಾ ಕಂಪನಿ ವತಿಯಿಂದ ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರು ಪರಿಹಾರದ ಚೆಕ್ ವಿತರಿಸಿದರು

'ಪೊಲೀಸರ ಕುಟುಂಬಗಳಿಗೆ ಮ್ಯಾನ್‌ಕೈಂಡ್ ಫಾರ್ಮಾ ಕಂಪನಿ ಪರಿಹಾರ ನೀಡುತ್ತಿರುವುದು ಶ್ಲಾಘನೀಯ. ಪ್ರತಿಯೊಬ್ಬ ಪೊಲೀಸರ ಕುಟುಂಬಕ್ಕೆ ತಲಾ ₹ 3 ಲಕ್ಷ ಪರಿಹಾರ ಸಿಕ್ಕಿದೆ' ಎಂದೂ ಹೇಳಿದರು.

ಎಡಿಜಿಪಿ ಎಂ.ಎ. ಸಲೀಂ, ಕಂಪನಿಯ ಹಿರಿಯ ವ್ಯವಸ್ಥಾಪಕ ಮನೀಶ್ ಅರೋರಾ ಇದ್ದರು.

ಸೂತ್ರೀಕರಣ ನಿರ್ಮಿತಿ : ರಸಿಕ್‌ಲಾಲ್ ಮಾಣಿಕ್‌ಚಂದ್ ಧಾರಿವಾಲ್
ಶಾಸನೀಯ ಎಚ್ಚರಿಕೆ : ಪಾನ್ ಮಸಾಲಾ ಸೇವನೆ ಆರೋಗ್ಯಕ್ಕೆ ಹಾನಿಕರ. ಅಪ್ರಾಪ್ತ ವಯಸ್ಕರಿಗೆ ಪ್ರತಿಬಂಧಿತ
NO TOBACCO, NO NICOTINE

ಎಐಡಿಎಸ್‌ಒ ಪ್ರತಿಭಟನಾ ದಿನ ಇಂದು

ಬೆಂಗಳೂರು: 'ದ್ವಿತೀಯ ಪಿಯುಸಿ ಮಧ್ಯ ವಾರ್ಷಿಕ ಪರೀಕ್ಷೆಯನ್ನು ಬೋರ್ಡ್ ಪರೀಕ್ಷೆಯಾಗಿ ನಡೆಸುವ ನಿರ್ಧಾರವನ್ನು ಹಿಂಪಡೆಯಬೇಕು' ಎಂದು ಆಗ್ರಹಿಸಿ ಎಐಡಿಎಸ್‌ಒ ರಾಜ್ಯ ಸಮಿತಿ ವತಿಯಿಂದ ನವೆಂಬರ್ 16ರಂದು ರಾಜ್ಯದಾದ್ಯಂತ 'ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಪ್ರತಿಭಟನಾ ದಿನ' ಹಮ್ಮಿಕೊಳ್ಳಲಾಗಿದೆ.

'ಮಧ್ಯವಾರ್ಷಿಕ ಪರೀಕ್ಷೆಯನ್ನು ರಾಜ್ಯ ಬೋರ್ಡ್ ಪರೀಕ್ಷೆಯಾಗಿ ನಡೆಸುವುದಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ನ.29ರಿಂದ ಪರೀಕ್ಷೆಗಳು ನಡೆಯಲಿದ್ದು, ಕೇವಲ 15 ದಿನಗಳಲ್ಲಿ ವಿದ್ಯಾರ್ಥಿಗಳು ಏಕಾಏಕಿ ಬೋರ್ಡ್ ಪರೀಕ್ಷೆಯೊಂದಕ್ಕೆ ಸಿದ್ಧರಾಗಬೇಕು. ಇಲಾಖೆಯ ಈ ಅವೈಜ್ಞಾನಿಕ ನಡೆ ಖಂಡನೀಯ' ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಕೋವಿಡ್ ಪರಿಸ್ಥಿತಿಯಲ್ಲಿ ಇಲಾಖೆಯ ದಿಢೀರ್ ನಿರ್ಧಾರ ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಆತಂಕ ಮೂಡಿಸಿದೆ' ಎಂದಿದ್ದಾರೆ.

ರಾಜ್ಯದಲ್ಲಿ 30 ಲಕ್ಷ ಬಾಲಕಿಯರು ಲಸಿಕೆ ಪಡೆಯಲು ಅರ್ಹ

ಗರ್ಭಕಂಠದ ಕ್ಯಾನ್ಸರ್ ತಡೆಗೆ ಲಸಿಕೆ

• ವರುಣ ಹೆಗಡೆ

ಬೆಂಗಳೂರು: ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಗರ್ಭಕಂಠದ ಕ್ಯಾನ್ಸರ್ ತಡೆಯಲು ರಾಜ್ಯದಲ್ಲಿ 9 ವರ್ಷಗಳಿಂದ 15 ವರ್ಷಗಳ ನಡುವಿನ ಬಾಲಕಿಯರಿಗೆ ಎರಡು ಡೋಸ್ ಲಸಿಕೆ ನೀಡಲು ಸರ್ಕಾರ ಚಿಂತನೆ ನಡೆಸಿದೆ. ಈ ಬಗ್ಗೆ ವರದಿ ಸಿದ್ಧಪಡಿಸುವಂತೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಸೂಚಿಸಿದೆ.

ಕ್ಯಾನ್ಸರ್ ಕೋಶಗಳ ವಿರುದ್ಧ ನಿರೋಧಕ ಶಕ್ತಿ ವೃದ್ಧಿಸುವ 'ಹ್ಯೂಮನ್ ಪ್ಯಾಪಿಲೋಮ ವೈರಸ್' (ಎಚ್‌ಪಿವಿ) ಲಸಿಕೆಗೆ ವಿಶ್ವ ಆರೋಗ್ಯ ಸಂಸ್ಥೆ ಅನುಮೋದನೆ ನೀಡಿದೆ. ಈ ಲಸಿಕೆಯನ್ನು ಈಗಾಗಲೇ ಸಿಕ್ಕಿಂ ರಾಜ್ಯದಲ್ಲಿ ವಿತರಿಸಲಾಗಿದೆ. ಇದು ಎರಡು ಡೋಸ್‌ಗಳನ್ನು ಹೊಂದಿದ್ದು, ಮೊದಲ ಹಾಗೂ ಎರಡನೇ ಡೋಸ್ ನಡುವಿನ ಅಂತರ ಆರು ತಿಂಗಳು ಇರಲಿದೆ. ರಾಜ್ಯದಲ್ಲಿ 9ರಿಂದ 15 ವರ್ಷಗಳೊಳಗಿನ 30 ಲಕ್ಷ ಬಾಲಕಿಯರಿದ್ದು, ಇವರಿಗೆ ಲಸಿಕೆ ವಿತರಣೆಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಕಾರ್ಯಯೋಜನೆ ರೂಪಿಸಲಿದೆ.

ಕ್ಯಾನ್ಸರ್ ಬಗ್ಗೆ ಇತ್ತೀಚೆಗೆ ಜನರಲ್ಲಿ ಅರಿವು ಮೂಡುತ್ತಿದೆ. ಆದರೆ, ಹೆಚ್ಚಿನವರು ರೋಗ ಉಲ್ಬಣಗೊಂಡ ಬಳಿಕ ಸಂಸ್ಥೆಗೆ ಚಿಕಿತ್ಸೆಗಾಗಿ ಬರುತ್ತಿದ್ದಾರೆ

ಡಾ.ಸಿ. ರಾಮಚಂದ್ರ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಈ ಲಸಿಕೆಗೆ ತಗಲುವ ವೆಚ್ಚ, ಫಲಿತಾಂಶ ಹಾಗೂ ವಿತರಣೆಗೆ ಸಂಬಂಧಿಸಿದ ವರದಿಯನ್ನು ಸಂಸ್ಥೆಯು ಸಿದ್ಧಪಡಿಸಲಿದೆ. ಸಂಸ್ಥೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ 20 ಸಾವಿರ ಮಂದಿ ಸದ್ಯ ಗರ್ಭಕಂಠದ ಕ್ಯಾನ್ಸರ್ ಎದುರಿಸುತ್ತಿದ್ದಾರೆ. ರಾಜ್ಯದಾದ್ಯಂತ ತಪಾಸಣೆ ನಡೆಸಿದ್ದೇ ಆದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಈ ಕ್ಯಾನ್ಸರ್ ಹೊಂದಿರುವವರು ಪತ್ತೆಯಾಗುವ ಸಾಧ್ಯತೆ ಇದೆ ಎಂದು ಸಂಸ್ಥೆಯ ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಸಂಸ್ಥೆಯ ದಾಖಲೆಗಳ ಪ್ರಕಾರ 2019ರಲ್ಲಿ ಕ್ಯಾನ್ಸರ್ ಚಿಕಿತ್ಸೆಗೆ ದಾಖಲಾದ 5,791 ಮಹಿಳೆಯರಲ್ಲಿ 1,301 ಮಂದಿ ಗರ್ಭಕಂಠದ ಕ್ಯಾನ್ಸರ್ ಹೊಂದಿದ್ದರು. 1,108 ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ದೃಢಪಟ್ಟಿತ್ತು.

₹200 ಕೋಟಿ ವೆಚ್ಚ: 'ಗರ್ಭಕಂಠದ ಕ್ಯಾನ್ಸರ್ ತಡೆಗೆ 'ಗಾರ್ಡಾಸಿಲ್' ಮತ್ತು 'ಸರ್ವಾರಿಕ್ಸ್' ಕಂಪನಿಗಳು ಲಸಿಕೆ ತಯಾರಿಸುತ್ತಿವೆ. ರಾಷ್ಟ್ರೀಯ ಆರೋಗ್ಯ ಅಭಿಯಾನದ ಸಭೆಯಲ್ಲಿ ಈ ಲಸಿಕೆ ಬಗ್ಗೆ ಚರ್ಚೆ ನಡೆಸಲಾಗಿದೆ. ಅರ್ಹ ಬಾಲಕಿಯರಿಗೆ ಈ ಲಸಿಕೆ ನೀಡಲು ₹ 200 ಕೋಟಿ ಅನುದಾನ ಅಗತ್ಯ. ಸಿಕ್ಕಿಂನಲ್ಲಿ ಈ ಲಸಿಕೆಯಿಂದ ಗರ್ಭಕಂಠದ ಕ್ಯಾನ್ಸರ್ ನಿಯಂತ್ರಣಕ್ಕೆ ಬಂದಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಲಸಿಕೆಯ ಬಗ್ಗೆ ವರದಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗುವುದು. ಕ್ಯಾನ್ಸರ್ ತಪಾಸಣೆಗೆ ಬರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಪ್ರಾರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿದಲ್ಲಿ ಹೆಚ್ಚಿನ ಚಿಕಿತ್ಸೆ ಇಲ್ಲದೆಯೇ ಕಾಯಿಲೆ ವಾಸಿ ಮಾಡಬಹುದು' ಎಂದು ಹೇಳಿದರು.

ಮಹಿಳೆಯರಲ್ಲಿ ಕ್ಯಾನ್ಸರ್ ವಿವರ

ಕ್ಯಾನ್ಸರ್ ವಿಧ	ಪ್ರಮಾಣ (%)
ಗರ್ಭಕಂಠದ ಕ್ಯಾನ್ಸರ್	22.6
ಸ್ತನ ಕ್ಯಾನ್ಸರ್	19.2
ಬಾಯಿ ಕ್ಯಾನ್ಸರ್	10.8
ಅಂಡಾಶಯದ ಕ್ಯಾನ್ಸರ್	6.7
ಥೈರಾಯ್ಡ್ ಕ್ಯಾನ್ಸರ್	4.3

• ಸಂಸ್ಥೆಯಲ್ಲಿ 2019ರಲ್ಲಿ ದಾಖಲಾದ ಪ್ರಕರಣಗಳನ್ನು ಆಧರಿಸಿ

ರೋಗಿಗಳು ದಾಖಲಾದ ಹಂತ

14.5% ಮೊದಲ ಮತ್ತು ಎರಡನೇ ಹಂತ

49.9% ಮೂರು ಮತ್ತು ನಾಲ್ಕನೇ ಹಂತ

• ಸಂಸ್ಥೆಯಲ್ಲಿ 2019ರಲ್ಲಿ ದಾಖಲಾದ ಪ್ರಕರಣಗಳನ್ನು ಆಧರಿಸಿ

ಸುದ್ದಿ 2 ನಿಮಿಷ

ಚಾಲನಾ ಪರವಾನಗಿ: ಕಟ್ಟುನಿಟ್ಟಿನ ನಿಯಮ ಪಾಲನೆಗೆ ತಾಕೀತು

ಬೆಂಗಳೂರು: 'ವಾಹನ ಚಾಲನಾ ಪರವಾನಿಗೆ ನೀಡುವ ಮುನ್ನ ಅಗತ್ಯ ಪರೀಕ್ಷೆ ನಡೆಸುವ ಸಂದರ್ಭದಲ್ಲಿ, 'ಮೋಟಾರು ವಾಹನ ಕಾಯ್ದೆ-1989ರ ಕಲಂ 15 (2) ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಚಾಲನಾ ಪರವಾನಿಗೆ ನೀಡುವ ಸಂಸ್ಥೆಗಳಿಗೆ ಹೈಕೋರ್ಟ್ ಕಟ್ಟುನಿಟ್ಟಿನ ತಾಕೀತು ಮಾಡಿದೆ.

ಈ ಸಂಬಂಧ ಎಸ್. ಗೌರಿಶಂಕರ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರ ಎಸ್.ಗೌರಿಶಂಕರ್ ಖುದ್ದು ವಾದ ಮಂಡಿಸಿ, 'ಒಂದು ಕೇಂದ್ರದಲ್ಲಿ ದಿನವೊಂದಕ್ಕೆ 200 ಮಂದಿಗೆ ಪರೀಕ್ಷೆ ನಡೆಸಲಾಗುತ್ತದೆ. ಇದು ಪ್ರಾಯೋಗಿಕವಾಗಿ ಸಾಧುವಲ್ಲ. ಹೀಗಾಗಿ ರಸ್ತೆ ಅಪಘಾತ ಹೆಚ್ಚಾಗುತ್ತಿವೆ. ಇದು ಜನರ ಜೀವ ಮತ್ತು ಸುರಕ್ಷತೆಯ ವಿಚಾರವಾಗಿದ್ದು, ನ್ಯಾಯಾಲಯ ಗಂಭೀರವಾಗಿ ಪರಿಗಣಿಸಬೇಕು' ಎಂದು ಕೋರಿದರು.

ಸರ್ಕಾರಿ ವಕೀಲರು, 'ಚಾಲನಾ ಪರವಾನಿಗೆ ನೀಡುವ ಮೊದಲು ನಡೆಸಲಾಗುವ ಪರೀಕ್ಷೆಗಳನ್ನು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ನೋಡಲಾಗುತ್ತಿದೆ. ಈ ಬಗ್ಗೆ 2021ರ. ಆಗಸ್ಟ್ 13ರಂದು ಸಂಬಂಧಪಟ್ಟ ಎಲ್ಲರಿಗೂ ಸೂಚನೆ ನೀಡಲಾಗಿದೆ' ಎಂದು ತಿಳಿಸಿದರು.

ಇದನ್ನು ಪುರಸ್ಕರಿಸಿದ ನ್ಯಾಯಪೀಠ, 'ಸಂಬಂಧಿಸಿದ ಪ್ರಾಧಿಕಾರಗಳು, ಮೋಟಾರು ವಾಹನ ಕಾಯ್ದೆಯ ಕಲಂ 15 (2)ರ ಅನ್ವಯ ನೋಂದಣಿ ಪುಸ್ತಕ ನಿರ್ವಹಿಸಬೇಕು' ಎಂದು ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿತು.

ಪಬ್ಲಿಕ್ ಪ್ರಾಸಿಕ್ಯೂಟರ್‌ಗಳ ನೇಮಕ

ಬೆಂಗಳೂರು: 'ರಾಜ್ಯದಲ್ಲಿ ಖಾಲಿ ಇದ್ದ 24 ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗಳ ಪೈಕಿ 19 ಹಾಗೂ 28 ಹಿರಿಯ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನು ನೇಮಕ ಮಾಡಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಕುರಿತಂತೆ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಮಾಹಿತಿ ನೀಡಿ, 'ಅರ್ಹರು ಸಿಗದ ಕಾರಣ 5 ಹುದ್ದೆಗಳಿಗೆ ನೇಮಕಾತಿ ಸಾಧ್ಯವಾಗಿಲ್ಲ. 68 ಹಿರಿಯ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳ ಪೈಕಿ 28 ಮಂದಿಯನ್ನು ನೇಮಕ ಮಾಡಲಾಗಿದೆ. ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗಳ ನೇಮಕಾತಿಗೆ ರಾಷ್ಟ್ರೀಯ ಕಾನೂನು ಶಾಲೆ ಪ್ರಾಥಮಿಕ ಹಂತದ ಪರೀಕ್ಷೆ ನಡೆಸಿದೆ. ಡಿಸೆಂಬರ್ ಅಂತ್ಯದೊಳಗೆ ಪರೀಕ್ಷಾ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು' ಎಂದು ವಿವರಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ನೇಮಕಾತಿ ಪ್ರಕ್ರಿಯೆ ಮುಂದುವರಿಸುವಂತೆ ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

ಮಾಲಿನ್ಯ ನಿಯಂತ್ರಣ ಮಂಡಳಿ ಶಾಂತ್ ಅವ್ವೇರಹಳ್ಳಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷರನ್ನಾಗಿ ನಗರದ ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ನಿವಾಸಿ ಡಾ. ಶಾಂತ್ ಅವ್ವೇರಹಳ್ಳಿ ತಿಮ್ಮಯ್ಯ ಅವರನ್ನು ನೇಮಕ ಮಾಡಿ ಸೋಮವಾರ ಆದೇಶ ಹೊರಡಿಸಲಾಗಿದೆ.

ಮೆಟಾಮಾರ್ಫೋಸಿಸ್ ಪ್ರಾಜೆಕ್ಟ್ಸ್ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾಗಿರುವ ಶಾಂತ್ ಅವ್ವೇರಹಳ್ಳಿ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪೂರೈಸಿದ್ದು, ಪಿಎಚ್‌.ಡಿ ಪಡೆದಿದ್ದಾರೆ. ಮೂರು ವರ್ಷಗಳ ಅವಧಿಗೆ ಅವರನ್ನು ಮಂಡಳಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ಕೆಎಸ್‌ಪಿಸಿಬಿ ಅಧ್ಯಕ್ಷರ ನೇಮಕಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಬಾಕಿ ಇರುವ ಆರು ರಿಟ್ ಅರ್ಜಿಗಳ ವಿಚಾರಣೆಯ ಬಳಿಕ ಹೊರಬೀಳುವ ತೀರ್ಪಿನ ವ್ಯಾಪ್ತಿಗೆ ಈ ನೇಮಕಾತಿ ಒಳಪಟ್ಟಿರುತ್ತದೆ ಎಂದು ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ಆದೇಶದಲ್ಲಿ ತಿಳಿಸಿದೆ.

ಖನಿಜ ನಿಧಿ ಪಾಲು: ರಾಜ್ಯದ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣಿಗಾರಿಕೆಯಿಂದ ಬಾಧಿತವಾದ ಜಿಲ್ಲೆಯ ಅಭಿವೃದ್ಧಿಗೆ ಸೀಮಿತವಾಗಿ ಮೀಸಲಿರಿಸುವ ಜಿಲ್ಲಾ ಖನಿಜ ನಿಧಿಯ (ಡಿಎಂಎಫ್) ಒಂದು ಭಾಗವನ್ನು ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲು ಅನುಮತಿ ನೀಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಒತ್ತಾಯಿಸಿದರು.

ಕೇಂದ್ರ ಹಣಕಾಸು ಸಚಿವರು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಸೋಮವಾರ ನಡೆಸಿದ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಗಣಿಗಾರಿಕೆ ನಡೆದ ಜಿಲ್ಲೆಯೊಳಗೆ ಮಾತ್ರ ಡಿಎಂಎಫ್ ಮೊತ್ತ ಬಳಕೆ ಮಾಡಬೇಕೆಂಬ ನಿಯಮವಿದೆ. ಅದನ್ನು ಸಡಿಲಿಸಿ, ರಾಜ್ಯ ಸರ್ಕಾರಕ್ಕೆ ಒಂದು ಭಾಗವನ್ನು ವರ್ಗಾಯಿಸಲು ಅವಕಾಶ ಕಲ್ಪಿಸಬೇಕು. ಇದರಿಂದ ಅದಿರು ಸಾಗಣೆಯಿಂದ ಹಾನಿಯಾದ ಜಿಲ್ಲೆಗಳಲ್ಲೂ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ' ಎಂದು ಹೇಳಿದರು.

ವಿವಿಧ ಯೋಜನೆಗಳಿಗೆ ಅನುಮತಿ ನೀಡಲು ಪರಿಸರ ಮತ್ತು ಅರಣ್ಯ ಸಚಿವಾಲಯಗಳಲ್ಲಿ ಸ್ಪಷ್ಟವಾದ ಒಂದು ನೀತಿಯನ್ನು ರೂಪಿಸಬೇಕು. ದೇಶದಲ್ಲಿ ಹೂಡಿಕೆಗೆ ಆಸಕ್ತಿ ತೋರುವ ಕಂಪನಿಗಳ ಕುರಿತು ರಾಜ್ಯಗಳ ಜತೆ ಪಾರದರ್ಶಕವಾಗಿ ಮಾಹಿತಿ ಹಂಚಿಕೊಳ್ಳಬೇಕು. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಹೂಡಿಕೆ ಹೆಚ್ಚಿಸಲು ಪ್ರೋತ್ಸಾಹ ಕ್ರಮಗಳನ್ನು ಕೈಗೊಳ್ಳಬೇಕು. ವಿದ್ಯುತ್ ವಾಹನಗಳು ಸೇರಿದಂತೆ ಹೊಸ ಉದ್ಯಮ ವಲಯಗಳ ಯೋಜನೆಗಳಿಗೆ ತ್ವರಿತವಾಗಿ ಸಾಲ ಮಂಜೂರು ಮಾಡಲು ಬ್ಯಾಂಕ್‌ಗಳಿಗೆ ನಿರ್ದೇಶನ ನೀಡುವಂತೆ ಮನವಿ ಮಾಡಿದರು.

ವಿವಿಧ ವಿಶೇಷ ಆರ್ಥಿಕ ವಲಯಗಳನ್ನು 'ಟೌನ್‌ಶಿಪ್'ಗಳನ್ನಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಅದಕ್ಕೆ ಪೂರಕವಾಗುವ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಆಡಳಿತಕ್ಕೆ ಸಂಬಂಧಿಸಿದ ಕಾಯ್ದೆಗಳಿಗೆ ತಿದ್ದುಪಡಿ ತರಬೇಕು. ಕರಾವಳಿ ನಿಯಂತ್ರಣ ವಲಯದ ವ್ಯಾಪ್ತಿಯಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಲು ನಿಯಮಗಳಿಗೆ ತಿದ್ದುಪಡಿ ಮಾಡಬೇಕು ಎಂದು ಒತ್ತಾಯಿಸಿದರು.

ವಿವಾದಗಳನ್ನು ನ್ಯಾಯಾಲಯದ ಹೊರಗೆ ಪರಿಹರಿಸಲು ಪ್ರತ್ಯೇಕವಾದ ವಿವಾದ ಪರಿಹಾರ ವ್ಯವಸ್ಥೆ ರೂಪಿಸಬೇಕು ಎಂದು ಬೊಮ್ಮಾಯಿ ಸಲಹೆ ನೀಡಿದರು.

ಬೈಯಪ್ಪನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಘಟನೆ: ಆರೋಪಿಗಳು ಪರಾರಿ

ಕಾರ್ಮಿಕನ ಅಡ್ಡಗಟ್ಟಿ ಇರಿದು ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂಪು ಪಾನೀಯ ಕುಡಿಯಲೆಂದು ಸ್ನೇಹಿತರ ಜೊತೆ ಅಂಗಡಿಗೆ ಹೋಗಿದ್ದ ಭೂಪತ್ ಸಿಂಗ್ (25) ಅವರನ್ನು ಅಡ್ಡಗಟ್ಟಿದ್ದ ದುಷ್ಕರ್ಮಿಗಳು, ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದಾರೆ.

'ಮಧ್ಯಪ್ರದೇಶದ ಭೂಪತ್ ಸಿಂಗ್, ಕೆಲ ವರ್ಷಗಳ ಹಿಂದಷ್ಟೇ ನಗರಕ್ಕೆ ಬಂದಿದ್ದರು. ಹೊಸ ಬೈಯ್ಯಪ್ಪನಹಳ್ಳಿಯ ನಿರ್ಮಾಣ ಹಂತದ ಕಟ್ಟಡವೊಂದರಲ್ಲಿ ಡ್ರಿಲ್ಲಿಂಗ್ ಯಂತ್ರದ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದರು' ಎಂದು ಬೈಯಪ್ಪನಹಳ್ಳಿ ಪೊಲೀಸರು ಹೇಳಿದರು.

'ಸ್ಥಳೀಯ ಐವರು ಯುವಕರ ಗುಂಪು ಕೃತ್ಯ ಎಸಗಿ ಪರಾರಿಯಾಗಿದೆ' ಎಂದು ತಿಳಿಸಿದರು.

'ಪ್ರೇಮ ವೈಫಲ್ಯ; ಚಾಕು ತಂದಿದ್ದ ಆರೋಪಿ'

'ಕೊಲೆ ಆರೋಪಿಗಳ ಮಾಹಿತಿ ಸಿಕ್ಕಿದ್ದು, ಆದಷ್ಟು ಬೇಗ ಎಲ್ಲರನ್ನೂ ಬಂಧಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಭೂಪತ್ ಸಿಂಗ್ ಅವರಿಗೆ ಚಾಕುವಿನಿಂದ ಇರಿದಿದ್ದ ಆರೋಪಿ ಹೆಸರು ಗೊತ್ತಾಗಿದೆ. ಆತ, ತನ್ನನ್ನು ಪ್ರೀತಿಸುವಂತೆ ಯುವತಿಯೊಬ್ಬರ ಹಿಂದೆ ಬಿದ್ದಿದ್ದ. ಆದರೆ, ಯುವತಿ ನಿರಾಕರಿಸಿದ್ದರು. ಅಷ್ಟಕ್ಕೆ ಸಿಟ್ಟಾಗಿದ್ದ ಆರೋಪಿ, ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿ ಚಾಕು ಹಿಡಿದುಕೊಂಡು ಓಡಾಡುತ್ತಿದ್ದ' ಎಂದೂ ಮೂಲಗಳು ತಿಳಿಸಿವೆ.

ರಸ್ತೆಯಲ್ಲಿ ಹೋಗದಂತೆ ಎಚ್ಚರಿಕೆ: 'ನಿರ್ಮಾಣ ಹಂತದ ಕಟ್ಟಡದ ಜಾಗದಲ್ಲೇ ಶೆಡ್‌ನಲ್ಲಿ ಭೂಪತ್ ಸಿಂಗ್ ಹಾಗೂ ಸ್ನೇಹಿತರು ವಾಸವಿದ್ದರು. ಭಾನುವಾರ ರಾತ್ರಿ ಎಲ್ಲರೂ ಒಟ್ಟಿಗೆ ಊಟ ಮಾಡಿದ್ದರು. ತಂಪು ಪಾನೀಯ ಕುಡಿಯಲು ರಾತ್ರಿ 9.30ರ ಸುಮಾರಿಗೆ ಅಂಗಡಿಯತ್ತ ಹೊರಟಿದ್ದರು' ಎಂದು ಪೊಲೀಸರು ಹೇಳಿದರು.

'ಭೂಪತ್ ಸಿಂಗ್ ಅವರನ್ನು ಅಡ್ಡಗಟ್ಟಿದ್ದ ದುಷ್ಕರ್ಮಿಯೊಬ್ಬ, 'ಈ ರಸ್ತೆಯಲ್ಲಿ ಹೋಗಬೇಡಿ. ವಾಪಸು ಹೋಗಿ' ಎಂದು ಎಚ್ಚರಿಸಿದ್ದರು. ಪಾನೀಯ ಕುಡಿಯಲು ಹೊರಟಿರುವುದಾಗಿ ಹೇಳಿ ಭೂಪತ್ ಸಿಂಗ್ ಹಾಗೂ ಸ್ನೇಹಿತರು ಮುಂದಕ್ಕೆ ಹೋಗಿದ್ದರು. ಆದರೆ, ಪಾನೀಯ ಅಂಗಡಿ ತೆರೆದಿರಲಿಲ್ಲ. ಹೀಗಾಗಿ, ಅದೇ ರಸ್ತೆಯಲ್ಲಿ ವಾಪಸು ಶೆಡ್‌ನತ್ತ ಬರುತ್ತಿದ್ದರು.'

'ಎರಡನೇ ಬಾರಿ ಅಡ್ಡಗಟ್ಟಿದ್ದ ದುಷ್ಕರ್ಮಿಗಳು, ಭೂಪತ್ ಸಿಂಗ್ ಮೇಲೆ ಹಲ್ಲೆ ಮಾಡಿದ್ದರು. ಬಿಡಿಸಲು ಬಂದ ಸ್ನೇಹಿತರ ಮೇಲೂ ಹಲ್ಲೆಗೆ ಯತ್ನಿಸಿದ್ದರು. ದುಷ್ಕರ್ಮಿಯೊಬ್ಬ, ಚಾಕುವಿನಿಂದ ಭೂಪತ್ ಸಿಂಗ್ ಅವರ ಹೊಟ್ಟೆ ಹಾಗೂ ಎದೆಗೆ ಇರಿದು ಕೊಂದಿದ್ದರು. ಸ್ನೇಹಿತರು ನಿಯಂತ್ರಣ ಕೊಠಡಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗುವಷ್ಟರಲ್ಲೇ ಆರೋಪಿಗಳು ಓಡಿಹೋದರು' ಎಂದೂ ಪೊಲೀಸರು ತಿಳಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	25.43 ಕೋಟಿ ▲	3.44 ಕೋಟಿ
ಸಕ್ರಿಯ ಪ್ರಕರಣ	1.92 ಕೋಟಿ	1.34 ಲಕ್ಷ ▼
ಗುಣಮುಖ	22.99 ಕೋಟಿ ▲	3.38 ಕೋಟಿ
ಸಾವು	51.18 ಲಕ್ಷ ▲	4.63 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.61 ಲಕ್ಷ ▼	10,229 ▼
ಗುಣಮುಖ	2.97 ಲಕ್ಷ ▼	11,926 ▲
ಸಾವು	6,449 ▲	125 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
24,193 ▼	36,517 ▼	38,823 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ರಷ್ಯಾ
92.14 ▲	15.93 ▲	10.30 ▲

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

ರಾಜ್ಯ	ಸಾವು
ಮಹಾರಾಷ್ಟ್ರ	1.40 ಲಕ್ಷ
ತಮಿಳುನಾಡು	36,284 ▲
ಕೇರಳ	35,750 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ರಾಜ್ಯ	ಪ್ರಕರಣ
ಮಹಾರಾಷ್ಟ್ರ	66.24 ▲
ಕೇರಳ	50.61 ▲
ತಮಿಳುನಾಡು	27.14

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: ಮರಣ ಪ್ರಮಾಣ ದರ ಶೇಕಡ 0.58ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಬಿಟ್ಟರೆ ಬೇರೆ ಯಾವ ಜಿಲ್ಲೆಯಲ್ಲೂ ಕೋವಿಡ್ ಮರಣ ಪ್ರಕರಣ ಸೋಮವಾರ ವರದಿಯಾಗಿಲ್ಲ.

ಮೈಸೂರಿನಲ್ಲಿ ಒಬ್ಬರು ಮೃತಪಟ್ಟಿದ್ದು, ಇದರೊಂದಿಗೆ ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,146ಕ್ಕೆ ಹೆಚ್ಚಿದೆ. ಮರಣ ಪ್ರಮಾಣ ದರವು ಶೇ 0.58ಕ್ಕೆ ಇಳಿದಿದೆ.

ಕೋವಿಡ್ ಹೊಸ ಪ್ರಕರಣಗಳೂ ಕಡಿಮೆಯಾಗಿದ್ದು, ಹಿಂದಿನ 24 ಗಂಟೆಗಳಲ್ಲಿ 171 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಈವರೆಗೆ ಸೋಂಕಿಗೊಳಪಟ್ಟವರ ಸಂಖ್ಯೆ 29.92 ಲಕ್ಷಕ್ಕೆ ಏರಿದ್ದು, ಸೋಂಕು ದೃಢ ಪ್ರಮಾಣವು ಶೇ 0.25ರಷ್ಟಿದೆ.

ಸೋಮವಾರ 255 ಜನರಿಗೆ ಕಾಯಿಲೆ ವಾಸಿಯಾಗಿದೆ. ಇದರಿಂದಾಗಿ ಗುಣಮುಖರ ಸಂಖ್ಯೆ 29.45 ಲಕ್ಷಕ್ಕೆ ಹೆಚ್ಚಿದೆ. ಸಕ್ರಿಯ ಪ್ರಕರಣಗಳೂ ಕಡಿಮೆಯಾಗಿವೆ. ಸದ್ಯ 7,912 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರಿನಲ್ಲಿ ಹೊಸದಾಗಿ 118 ಜನರಿಗೆ ಸೋಂಕು ತಗುಲಿದೆ. ಮೈಸೂರಿನಲ್ಲಿ 14 ಪ್ರಕರಣಗಳು ವರದಿಯಾಗಿವೆ. ಬಾಗಲಕೋಟೆ, ಬೀದರ್, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ರಾಮನಗರ, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ದಾಖಲಾಗಿಲ್ಲ. 17 ಜಿಲ್ಲೆಗಳಲ್ಲಿ ಇದು ಒಂದಂಕಿಯಷ್ಟಿದೆ. ಬೆಂಗಳೂರಿನಲ್ಲಿ ಗರಿಷ್ಠ (6,574) ಸಕ್ರಿಯ ಪ್ರಕರಣಗಳಿವೆ.

ಸೋಮವಾರ ಮೃತಪಟ್ಟಿರುವ ಮಹಿಳೆಗೆ 29 ವರ್ಷ ವಯಸ್ಸಾಗಿದ್ದು, ಜ್ವರ, ಕೆಮ್ಮು ಹಾಗೂ ಉಸಿರಾಟದ ಸಮಸ್ಯೆ ಎದುರಿಸುತ್ತಿದ್ದರು.

ಐವರಿಗೆ 'ಶ್ರೀಮಧ್ವ ವಿಜಯ' ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಾಸ–ದಾಸ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡುತ್ತಿರುವ ಐವರು ವಿದ್ವಾಂಸರಿಗೆ ವಿಶ್ವ ಮಧ್ವಮತ ವೆಲ್‌ಫೇರ್ ಅಸೋಸಿಯೇಷನ್‌ನ 'ಶ್ರೀಮಧ್ವ ವಿಜಯ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಾಂಶುಪಾಲ ಎಸ್.ಆರ್. ರಾಘವೇಂದ್ರ, ಕನ್ನಡ ಪ್ರಾಧ್ಯಾಪಕಿ ಬಿ.ಎಂ.ವಾಣಿಶ್ರೀ, ದಾಸ ಸಾಹಿತ್ಯ ಪ್ರಚಾರಕಿ ಗೀತಾಬಾಯಿ, ಭಾರತೀಯ ಹರಿದಾಸ ಸಾಹಿತ್ಯ ವಿದ್ಯಾಲಯದ ಪರಶುರಾಮ ಬೆಟಗೇರಿ ಹಾಗೂ ಸಂಸ್ಕೃತಿ ಚಿಂತಕ ಗುರುರಾಜ ಪೋಶೆಟ್ಟಿಹಳ್ಳಿ ಅವರು ಪ್ರಶಸ್ತಿ ಪಡೆದರು.

ಶ್ರೀ ಸುವಿದ್ಯೇಂದ್ರ ತೀರ್ಥರು ಮಾತನಾಡಿ, 'ಮಧ್ವಾಚಾರ್ಯರು ನಿಜ ಅರ್ಥದ ವಿಶ್ವಗುರು. ಅವರ ತತ್ವಜ್ಞಾನ ವಿಕೇಂದ್ರೀಕರಣದಿಂದ ಹರಿದಾಸ ಸಾಹಿತ್ಯ ಜನ್ಮತಾಳಿತು. ಸಮಗ್ರ ಮಾನವತೆಯನ್ನೇ ಇತಿಹಾಸ, ಪುರಾಣಗಳ ಭದ್ರ ಬುನಾದಿಯ ಮೇಲೆ ನಿಲ್ಲಿಸುವುದೇ ಈ ಸಾಹಿತ್ಯದ ಕಾರ್ಯ. ಮಧ್ವಾಚಾರ್ಯರು ಎಲ್ಲಾ ಧರ್ಮದವರು, ಪೀಠಾಧಿಪತಿಗಳು ಹಾಗೂ ಪಂಡಿತ, ಪಾಮರರನ್ನು ಏಕ ವಿಚಾರಧಾರೆಯ ಅಡಿ ಸೇರಿಸಿದ್ದರು' ಎಂದರು. ಕಾರ್ಯಕ್ರಮದಲ್ಲಿ ಯುವ ವಿದ್ವಾಂಸರಾದ ಭೀಮಸೇನ ದೇಸಾಯಿ, ರಾಘವೇಂದ್ರ ಆಚಾರ್ಯ, ಸಂಜೀವ ಆಚಾರ್ಯ, ಪ್ರಭಂಜನ, ಮಧ್ವೇಶ ಮೌದ್ಗಲ್ಯ ಅವರನ್ನು ಗೌರವಿಸಲಾಯಿತು. ಬಿ.ಕೆ.ವೆಂಕೋಬ ರಾವ್, ಎ.ಪಿ.ಕೃಷ್ಣ, ಕೆ.ಆರ್.ಜಯತೀರ್ಥ ಹಾಗೂ ಅನಿರುದ್ಧ್ ಇದ್ದರು.

'ಮಾನಸಿಕ ಆರೋಗ್ಯ ಮಂಡಳಿಗೆ ಅಧ್ಯಕ್ಷರ ನೇಮಕ ಶೀಘ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮಾನಸಿಕ ಆರೋಗ್ಯ ಮಂಡಳಿಗೆ ಅಧ್ಯಕ್ಷರು ಹಾಗೂ ಸದಸ್ಯರನ್ನು ಶೀಘ್ರವೇ ನೇಮಕ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

'ರಾಜ್ಯದಲ್ಲಿ ಮಾನಸಿಕ ಆರೋಗ್ಯ ಆರೈಕೆ ಕಾಯ್ದೆ ಜಾರಿ ಮಾಡಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ನಗರದ ಎನ್. ಸಂಜಯ್ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಕೀಲರು, 'ಮಂಡಳಿಯ ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿಗೆ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದೆ. ಅಧ್ಯಕ್ಷರ ಹುದ್ದೆಗೆ 19 ಮತ್ತು ಸದಸ್ಯ ಹುದ್ದೆಗೆ 17 ಅರ್ಜಿ ಬಂದಿವೆ. ಈ ಅರ್ಜಿಗಳನ್ನು ಪರಿಗಣಿಸಿ ಅರ್ಹರನ್ನು ನೇಮಕ ಮಾಡಲಾಗುವುದು' ಎಂದು ತಿಳಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯರನ್ನು ಶೀಘ್ರವೇ ನೇಮಕ ಮಾಡಿ ಅದಕ್ಕೆ, ಹಣಕಾಸು ಮತ್ತು ಮೂಲ ಸೌಕರ್ಯ ಕಲ್ಪಿಸಿ ಕಾರ್ಯಾರಂಭ ಮಾಡುವಂತೆ ನೋಡಿಕೊಳ್ಳಬೇಕು' ಎಂದು ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿದೆ.

ವಿದೇಶಿ ಪ್ರಯಾಣಿಕರಿಗೆ ಕ್ವಾರಂಟೈನ್ ಮುಕ್ತ ಪ್ರವೇಶ:

ನವದೆಹಲಿ (ಪಿಟಿಐ): ಕೋವಿಡ್ ಪರಿಸ್ಥಿತಿಯು ಸುಧಾರಣೆಗೊಂಡ ಹಿಂದೆಯೇ 99 ದೇಶಗಳ ಪ್ರಯಾಣಿಕರಿಗೆ ಭಾರತಕ್ಕೆ ಬರಲು ಕ್ವಾರಂಟೈನ್ ಮುಕ್ತ ಪ್ರವೇಶ ಕಲ್ಪಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರೇಲಿಯಾ, ರಷ್ಯಾ ಸೇರಿದಂತೆ 'ಎ ವರ್ಗ' ಪಟ್ಟಿಯಲ್ಲಿರುವ 99 ದೇಶಗಳ ಪ್ರಯಾಣಿಕರು ಪ್ರಯಾಣಕ್ಕೆ ಮುನ್ನ ಏರ್ ಸುವಿಧಾ ವೆಬ್‌ಸೈಟ್‌ನಲ್ಲಿ ಸ್ವಯಂ ಘೋಷಣಾ ಅರ್ಜಿ ನಮೂನೆಯನ್ನು ಭರ್ತಿ ಮಾಡಬೇಕಿದೆ ಎಂದು ಹೇಳಿಕೆ ತಿಳಿಸಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,54,093 ಒಟ್ಟು ಪ್ರಕರಣಗಳು ▲ (12,53,975 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,574 ▼	12,31,206 ▲	16,312

ದಿನದ ಏರಿಕೆ

ಹೊಸ ಪ್ರಕರಣ	118 ▼
ಗುಣಮುಖ	144 ▼
ಸಾವು	0 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಚಿತ್ರಾವಳಿ

ನಗರದಲ್ಲಿ ಭಾನುವಾರ 'ಬಂಜಾರ (ಲಂಬಾಣಿ) ಜನ ಸೇವಾ ಸಂಘ' ಆಯೋಜಿಸಿದ್ದ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ನುಡಿನಮನ, ಬಂಜಾರ ದೀಪಾವಳಿ ಸಾಂಸ್ಕೃತಿಕ ಹಾಗೂ ಸಾಮಾಜಿಕ ಉತ್ಸವ, ವಧು–ವರರ ಅನ್ವೇಷಣೆ ಕಾರ್ಯಕ್ರಮದಲ್ಲಿ (ಎಡದಿಂದ) ಕಂದಾಯ ಇಲಾಖೆ ಅಧಿಕಾರಿ ಎಸ್. ಕೆ ರವಿಕುಮಾರ್, ಮಿಂಟೊ ಕಣ್ಣಿನ ಆಸ್ಪತ್ರೆಯ ನಿರ್ದೇಶಕಿ ಸುಜಾತಾ ರಾಥೋಡ್, ವಿಧಾನ ಪರಿಷತ್ ಸದಸ್ಯ ಕೆ.ಟಿ ಪ್ರಕಾಶ್ ರಾಥೋಡ್, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯೆ ರುದ್ರಾಕ್ಷಿ ಬಾಯಿ, ಸಾಹಿತಿ ಬಿ.ಟಿ ಲಲಿತಾ ನಾಯಕ್, ರಂಗತಜ್ಞ ಎ.ಆರ್ ಗೋವಿಂದಸ್ವಾಮಿ ಮತ್ತು ಬಿಂದುಶ್ರೀ ನಟ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ತಿರುಪತಿ ತಿರುಮಲದಲ್ಲಿ ₹200 ಕೋಟಿ ವೆಚ್ಚದಲ್ಲಿ ಕರ್ನಾಟಕ ಸರ್ಕಾರ ನಿರ್ಮಿಸುತ್ತಿರುವ ಕರ್ನಾಟಕ ಭವನದ ಕಾಮಗಾರಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ಪರಿಶೀಲಿಸಿದರು. ಈ ವೇಳೆ ಸಚಿವ ಮುನಿರತ್ನ, ಟಿಟಿಡಿ ಸದಸ್ಯರೂ ಆಗಿರುವ ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಇದ್ದರು

ಕ್ಯಾಬ್ ಚಾಲಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರಾಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಮಂಜುನಾಥ್ (36) ಎಂಬುವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ತುರುವೇಕೆರೆಯ ಮಂಜುನಾಥ್, ಕ್ಯಾಬ್ ಚಾಲಕರಾಗಿದ್ದರು. ಪತ್ನಿ ಜೊತೆ ಚಂದ್ರಾಲೇಔಟ್ ಒಂದನೇ ಹಂತದಲ್ಲಿ ವಾಸವಿದ್ದರು. ತಮ್ಮ ಮನೆಯಲ್ಲೇ ಆತ್ಮಹತ್ಯೆಗೆ ಶರಣಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪತ್ನಿಯು ಸೋಮವಾರ ಬೆಳಗ್ಗೆ ಅಂಗಡಿಗೆ ಹೋಗಿದ್ದರು. ಈ ವೇಳೆ, ಮಂಜುನಾಥ್ ವೇಲ್‌ನಿಂದ ಕಿಟಕಿಗೆ ನೇಣು ಹಾಕಿಕೊಂಡಿದ್ದರು. ಮಂಜುನಾಥ್ ಅವರು ಸಾಲ ಮಾಡಿಕೊಂಡಿದ್ದರು. ಲಾಕ್‌ಡೌನ್‌ನಿಂದಾಗಿ ಕ್ಯಾಬ್‌ನಿಂದ ದುಡಿಮೆ ಆಗಿರಲಿಲ್ಲ. ಸಾಲ ಪಾವತಿಸಲೂ ತೊಂದರೆ ಆಗಿತ್ತು. ಇದರಿಂದ ನೊಂದ ಅವರು, ಆತ್ಮಹತ್ಯೆ ಮಾಡಿಕೊಂಡಿರುವ ಅನುಮಾನವಿದೆ. ಈ ಬಗ್ಗೆ ಪತ್ನಿ ಸಹ ದೂರು ನೀಡಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದೂ ಮೂಲಗಳು ಹೇಳಿವೆ.

ಬಿಬಿಎಂಪಿ ಕೇಂದ್ರ ಕಚೇರಿ ಬಳಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ಗೌರವಧನ ಬಾಕಿ ಪಾವತಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರವ ಧನವನ್ನು ಆಯಾ ತಿಂಗಳು ಪಾವತಿ ಮಾಡದೇ ಇರುವುದನ್ನು ಖಂಡಿಸಿ, ಗೌರವ ಧನ ಮತ್ತು ಪ್ರೋತ್ಸಾಹ ಧನ ಬಾಕಿ ಮೊತ್ತವನ್ನು ತಕ್ಷಣವೇ ಪಾವತಿಸಬೇಕು ಎಂದು ಒತ್ತಾಯಿಸಿ ಆಶಾ ಕಾರ್ಯಕರ್ತೆಯರು ಬಿಬಿಎಂಪಿ ಕೇಂದ್ರ ಕಚೇರಿ ಬಳಿ ಸೋಮವಾರ ಪ್ರತಿಭಟನೆ ನಡೆಸಿದರು.

ಎಐಟಿಯುಸಿ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಮಾತನಾಡಿದ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಉಪಾಧ್ಯಕ್ಷೆ ರಮಾ ಟಿ.ಸಿ, 'ಒಂದೂವರೆ ವರ್ಷದಿಂದ ಕೊರೊನಾ ನಿಯಂತ್ರಣಕ್ಕಾಗಿ ಆಶಾ ಕಾರ್ಯಕರ್ತೆಯರು ಜೀವದ ಹಂಗು ತೊರೆದು ಕಾರ್ಯನಿರ್ವಹಿಸುತ್ತಿದ್ದಾರೆ. ಕೋವಿಡ್ ಲಸಿಕೆ ವಿತರಣೆ, ಆರೋಗ್ಯ ಸಮೀಕ್ಷೆಗಳ ಜೊತೆಗೆ ಸುಗಮ ಹೆರಿಗೆ, ಸ್ವಸ್ಥ ಮಗುವಿನ ಜನನ, ತಾಯಿ-ಶಿಶು ಆರೈಕೆ, ನೈರ್ಮಲ್ಯ ಜಾಗೃತಿಯ ಹೊಣೆಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದಾರೆ. ಆದರೂ ಇವರಿಗೆ ನ್ಯಾಯಯುತವಾಗಿ ಸಲ್ಲಬೇಕಾದ ಗೌರವಧನ ಪಾವತಿಗೆ ಮೂರು ನಾಲ್ಕು ತಿಂಗಳು ಕಾಯಿಸಲಾಗುತ್ತದೆ. ಪ್ರೋತ್ಸಾಹ ಧನವನ್ನೂ ಬಾಕಿ ಉಳಿಸಿಕೊಂಡಿರುವುದು ಸರಿಯಲ್ಲ' ಎಂದರು.

'ಆಶಾ ಕಾರ್ಯಕರ್ತೆ ದಿನಕ್ಕೆ 2 ಗಂಟೆ ಕೆಲಸ ಮಾಡಿದರಷ್ಟೇ ಸಾಕು ಎಂದು ಹೇಳಿದ್ದ ಸರ್ಕಾರ ಈಗ ಅವರನ್ನು ದಿನವಿಡೀ ದುಡಿಸಿಕೊಳ್ಳುತ್ತಿದೆ. ಆರೋಗ್ಯ ಇಲಾಖೆಯು ಆಶಾ ಕಾರ್ಯಕರ್ತೆಯರಿಗೆ ಹೊಸ ಹೊಸ ಹೊಣೆಗಳನ್ನು ಹೇರುತ್ತಿದೆ. ಆದರೂ ಆಶಾ ಕಾರ್ಯಕರ್ತೆಯರು ಆ ಜವಾಬ್ದಾರಿಗಳನ್ನು ಸ್ಫೂರ್ತಿಯಿಂದ ನಿರ್ವಹಿಸುತ್ತಿದ್ದಾರೆ. ಇವರ ಶ್ರಮಕ್ಕೆ ನ್ಯಾಯ ಸಿಗುತ್ತಿಲ್ಲ' ಎಂದು ಆರೋಪಿಸಿದರು.

'ಬಿಬಿಎಂಪಿ ವ್ಯಾಪ್ತಿಯ ಎಲ್ಲ ಆಶಾ ಕಾರ್ಯಕರ್ತೆಯರಿಗೆ ಉಚಿತ ಬಸ್ ಪಾಸ್ ನೀಡಬೇಕು. ಗೌರವ ಧನವನ್ನು ತಿಂಗಳಿಗೆ ₹ 5 ಸಾವಿರಕ್ಕೆ ಹೆಚ್ಚಿಸಬೇಕು' ಎಂದು ಪ್ರತಿಭಟನನಿರತರು ಒತ್ತಾಯಿಸಿದರು.

ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ.ಕೆ.ವಿ.ತ್ರಿಲೋಕಚಂದ್ರ ಅವರು ಪ್ರತಿಭಟನಕಾರರಿಂದ ಮನವಿಪತ್ರ ಸ್ವೀಕರಿಸಿದರು. ಆಶಾ ಕಾರ್ಯಕರ್ತೆಯರ ಸಮಸ್ಯೆಗಳನ್ನು ಬಗೆಹರಿಸಲು ಶೀಘ್ರವೇ ಸಭೆ ಆಯೋಜಿಸುವುದಾಗಿ ಭರವಸೆ ನೀಡಿದರು.

ಸಂಘಟನೆಯ ಪ್ರಮುಖರಾದ ಶ್ರೀಕಾಂತ್, ನಾಗಲಕ್ಷ್ಮಿ, ಫರ್ಹಾನಾ ಹಾಗೂ ದುರ್ಗೇಶ್ ಉಪಸ್ಥಿತರಿದ್ದರು.

ಆಶಾ ಕಾರ್ಯಕರ್ತೆಯರು ಬಿಬಿಎಂಪಿ ಕೇಂದ್ರ ಕಚೇರಿ ಬಳಿ ಸೋಮವಾರ ಪ್ರತಿಭಟನೆ ನಡೆಸಿದರು– ಪ್ರಜಾವಾಣಿ ಚಿತ್ರ

ಪಾಲಿಕೆಯ ವ್ಯಾಪ್ತಿ ವಿಸ್ತರಣೆ ಇಲ್ಲ • ಇರುವ ವಾರ್ಡ್‌ಗಳಷ್ಟೇ ಮರುವಿಂಗಡಣೆಗೆ ರಾಜ್ಯ ಸರ್ಕಾರ ತೀರ್ಮಾನ

ಬಿಬಿಎಂಪಿ: ಹೊಸ ಗ್ರಾಮಗಳ ಸೇರ್ಪಡೆಗೆ ಎಳ್ಳುನೀರು?

• ಪ್ರವೀಣ ಕುಮಾರ್ ಪಿ.ವಿ.

ಬೆಂಗಳೂರು: ನಗರದ ಹೊರವಲಯದಲ್ಲಿ ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದಿರುವ ಗ್ರಾಮ ಪಂಚಾಯಿತಿಗಳನ್ನು ಸೇರ್ಪಡೆ ಮಾಡಿಕೊಂಡು ಬಿಬಿಎಂಪಿ ವ್ಯಾಪ್ತಿಯನ್ನು ವಿಸ್ತರಿಸುವ ಪ್ರಸ್ತಾಪಕ್ಕೆ ಸರ್ಕಾರ ಎಳ್ಳುನೀರು ಬಿಟ್ಟಿದೆಯೇ? ಹೌದು ಎನ್ನುತ್ತವೆ ಸರ್ಕಾರದ ಉನ್ನತ ಮೂಲಗಳು.

'ಈಗಿರುವಷ್ಟೇ ವ್ಯಾಪ್ತಿಯನ್ನು ಉಳಿಸಿಕೊಂಡು ಬಿಬಿಎಂಪಿ ವಾರ್ಡ್‌ಗಳ ಮರುವಿಂಗಡಣೆ ನಡೆಸುವ ತೀರ್ಮಾನಕ್ಕೆ ಸರ್ಕಾರ ಬಂದಿದೆ' ಎಂದು ಉನ್ನತ ಮೂಲಗಳು 'ಪ್ರಜಾವಾಣಿ'ಗೆ ಮಾಹಿತಿ ನೀಡಿವೆ.

'ಪಾಲಿಕೆಯ ಚುನಾಯಿತ ಕೌನ್ಸಿಲ್ ಅವಧಿ ಮುಗಿದು ಒಂದು ವರ್ಷ ಕಳೆದ ಬಳಿಕ ಸರ್ಕಾರ ಈ ನಿರ್ಧಾರಕ್ಕೆ ಬಂದಿದೆ. ಬಿಬಿಎಂಪಿ ವ್ಯಾಪ್ತಿಯನ್ನು ಹೆಚ್ಚಿಸದೆಯೇ ವಾರ್ಡ್‌ಗಳ ಪುನರ್ ವಿಂಗಡನೆ ನಡೆಸಲು ಒಂದು ವರ್ಷ ವ್ಯರ್ಥ ಮಾಡುವ ಅವಶ್ಯಕತೆ ಇತ್ತೇ' ಎಂದು ಬಿಬಿಎಂಪಿಗೆ ತ್ವರಿತವಾಗಿ ಚುನಾವಣೆ ನಡೆಸುವಂತೆ ಒತ್ತಾಯಿಸುತ್ತಿದ್ದವರು ಪ್ರಶ್ನಿಸಿದ್ದಾರೆ.

ನಗರದ ಗಡಿ ಪ್ರದೇಶದ 1 ಕಿ.ಮೀ ವ್ಯಾಪ್ತಿಯ ಗ್ರಾಮಗಳನ್ನು ತೆಕ್ಕೆಗೆ ಸೇರಿಸಿಕೊಂಡು ಬಿಬಿಎಂಪಿಯ ಪರಿಧಿ ವಿಸ್ತರಿಸಲು ಹಾಗೂ ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸಲು ನಗರಾಭಿವೃದ್ಧಿ ಇಲಾಖೆಯು 2020ರ ಅ.14ರಂದು ಅಧಿಸೂಚನೆ ಹೊರಡಿಸಿತ್ತು. ಹೊಸತಾಗಿ ಸೇರ್ಪಡೆ ಮಾಡಬೇಕಾದ ಗ್ರಾಮಗಳ ಬಗ್ಗೆ ಶಿಫಾರಸು ಮಾಡಲು ಬಿಬಿಎಂಪಿ ಆಯುಕ್ತರ ಅಧ್ಯಕ್ಷತೆಯಲ್ಲಿ ವಾರ್ಡ್‌ಗಳ ಪುನರ್ವಿಂಗಡಣಾ ಸಮಿತಿಯನ್ನು ರಚಿಸಿ ಅದೇ ದಿನ ಅಧಿಸೂಚನೆ ಹೊರಡಿಸಲಾಗಿತ್ತು. ಬೆಂಗಳೂರು ನಗರ ಜಿಲ್ಲಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು, ಬಿಬಿಎಂಪಿಯ ವಿಶೇಷ ಆಯುಕ್ತರು (ಕಂದಾಯ) ಸದಸ್ಯರಾಗಿದ್ದರು.

ಆ ಬಳಿಕ, 2020ರ ಬಿಬಿಎಂಪಿ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ನಗರದ ಹೊರವಲಯದಲ್ಲಿ ತೀವ್ರಗತಿಯಲ್ಲಿ ಬೆಳವಣಿಗೆ ಹೊಂದುತ್ತಿರುವ ಗ್ರಾಮಗಳನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರಿಸುವುದೂ ಇದರ ಹಿಂದಿನ ಆಶಯ ಎಂದು ಸರ್ಕಾರದ ಸಚಿವರು ಆಗ ಪ್ರತಿಪಾದಿಸಿದ್ದರು. ಈ ಕಾರಣದಿಂದಲೇ ಹೊಸ ಕಾಯ್ದೆಯನ್ವಯ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಲು ಸರ್ಕಾರ ತೀರ್ಮಾನಿಸಿತ್ತು. ಅಲ್ಲದೇ, ಈ ಕುರಿತು ಅಧ್ಯಯನ ನಡೆಸಿ ಶಿಫಾರಸು ಮಾಡುವುದಕ್ಕೆ ಪಾಲಿಕೆಯ ಮುಖ್ಯ ಆಯುಕ್ತರ ನೇತೃತ್ವದಲ್ಲಿ 2021ರ ಜ.29ರಂದು ಅಧಿಕಾರಿಗಳ ಸಮಿತಿಯನ್ನೂ ರಚಿಸಿತ್ತು. ಈ ಸಮಿತಿಯ ಅವಧಿ 2021ರ ಜು. 28ಕ್ಕೆ ಕೊನೆಗೊಂಡಿತ್ತು. ಸಮಿತಿಯು ತನ್ನ ಅಧಿಕಾರದ ಅವಧಿ ಮುಗಿಯುವ ಮುನ್ನ ಒಮ್ಮೆ ಮಾತ್ರ ಸಭೆ ನಡೆಸಿತ್ತು. ಈ ಸಮಿತಿಯ ಅಧಿಕಾರಾವಧಿಯನ್ನು ಮತ್ತೆ ಆರು ತಿಂಗಳವರೆಗೆ ಸರ್ಕಾರ ವಿಸ್ತರಿಸಿದೆ.

ಗ್ರಾಮ ಪಂಚಾಯಿತಿಗಳ ಚುನಾಯಿತ ಸದಸ್ಯರು ಪೂರ್ತಿ ಐದು ವರ್ಷಗಳ ಕಾಲ ಆಡಳಿತ ನಡೆಸುವುದಕ್ಕೆ ಅವಕಾಶ ನೀಡಬೇಕು ಎನ್ನುತ್ತದೆ 1993ರ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ. ಗ್ರಾಮ ಪಂಚಾಯಿತಿ ಅಧ್ಯಕ್ಷರ ಆಯ್ಕೆಗಾಗಿ ನಡೆಯುವ ಮೊದಲ ಸಭೆಯ ದಿನದಿಂದ ಐದು ವರ್ಷಗಳವರೆಗೆ ಅವರ ಅಧಿಕಾರಾವಧಿ ಇರುತ್ತದೆ. ಒಂದು ವೇಳೆ ಗ್ರಾಮ ಪಂಚಾಯಿತಿ ಪ್ರದೇಶವನ್ನು ನಗರಾಡಳಿತ ಸಂಸ್ಥೆಗೆ ಸೇರ್ಪಡೆಗೊಳಿಸಿದರೂ ಚುನಾಯಿತ ಸದಸ್ಯರನ್ನು ಮುಂದುವರಿಸಬೇಕಾಗುತ್ತದೆ ಎನ್ನುತ್ತಾರೆ ಪಂಚಾಯತ್‌ರಾಜ್ ತಜ್ಞರು.

'ಯಾವುದೇ ಗ್ರಾಮ ಪಂಚಾಯಿತಿಯ ಪ್ರದೇಶವು, ಪಟ್ಟಣ ಪಂಚಾಯಿತಿ ಅಥವಾ ಪುರಸಭೆಯಾಗಿ ಮೇಲ್ದರ್ಜೆಗೇರಿದರೆ ಅಲ್ಲಿನ ಗ್ರಾಮ ಪಂಚಾಯಿತಿ ಸದಸ್ಯರೂ ಆಯಾ ನಗರ ಸ್ಥಳೀಯ ಸಂಸ್ಥೆಯ ಸದಸ್ಯರಾಗಿ ಮುಂದುವರಿಯುತ್ತಾರೆ ಎಂಬ ಅಂಶವು ಪಂಚಾಯತ್ ರಾಜ್ ಕಾಯ್ದೆಯಲ್ಲಿದೆ. ಹಾಗಾಗಿ, ಬಿಬಿಎಂಪಿಗೆ ಗ್ರಾಮ ಪಂಚಾಯಿತಿಗಳ ಪ್ರದೇಶ ಸೇರ್ಪಡೆಯಾದರೆ ಅಲ್ಲಿನ ಪಂಚಾಯಿತಿ ಸದಸ್ಯರನ್ನು ಅವರ ಅಧಿಕಾರದ ಅವಧಿ ಮುಗಿಯುವವರೆಗೆ ಮುಂದುವರಿಸಬೇಕಾಗುತ್ತದೆ' ಎಂದು ಪಂಚಾಯತ್‌ರಾಜ್ ತಜ್ಞ ಟಿ.ಬಿ. ಶೆಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

ಹೊಸತಾಗಿ ಸೇರ್ಪಡೆಯಾಗುವ ಪ್ರದೇಶದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿ ಸದಸ್ಯರು ಬಿಬಿಎಂಪಿಯ ಹೆಚ್ಚುವರಿ ಸದಸ್ಯರಾಗಲು 2020ರ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 365 ಕೆ ಅವಕಾಶ ಕಲ್ಪಿಸುತ್ತದೆ.

ನಗರದ ಹೊರವಲಯದ 10ಕ್ಕೂ ಅಧಿಕ ಗ್ರಾಮಗಳನ್ನು ಬಿಬಿಎಂಪಿ ತೆಕ್ಕೆಗೆ ಸೇರ್ಪಡೆಗೊಳಿಸುವ ಬಗ್ಗೆ ಸರ್ಕಾರಕ್ಕೆ ಅರ್ಜಿಗಳು ಸಲ್ಲಿಕೆಯಾಗಿದ್ದವು. ಆದರೆ, ಈ ಗ್ರಾಮಗಳಲ್ಲಿನ ಚುನಾಯಿತ ಸದಸ್ಯರ ಐದು ವರ್ಷಗಳ ಅಧಿಕಾರಾವಧಿ ಪೂರ್ಣಗೊಂಡಿಲ್ಲ. ಈ ಗ್ರಾಮಗಳನ್ನು ಬಿಬಿಎಂಪಿ ತೆಕ್ಕೆಗೆ ಸೇರ್ಪಡೆ ಮಾಡಿದರೆ ಮತ್ತೆ ಕಾನೂನು ಬಿಕ್ಕಟ್ಟು ಎದುರಾಗಬಹುದು. ಇವುಗಳ ಗಡಿ ಗುರುತಿಸುವಿಕೆಗೂ ಹೆಚ್ಚಿನ ಕಾಲಾವಕಾಶ ಬೇಕಾದೀತು. ಈ ಹಂತದಲ್ಲಿ ಹೊಸ ಗ್ರಾಮಗಳನ್ನು ಸೇರ್ಪಡೆ ಮಾಡದಿರುವುದೇ ಲೇಸು ಎಂದು ಉನ್ನತಾಧಿಕಾರಿಗಳು ಸರ್ಕಾರಕ್ಕೆ ಸಲಹೆ ನೀಡಿದ್ದಾರೆ ಎಂದು ಗೊತ್ತಾಗಿದೆ.

ಇನ್ನೊಂದೆಡೆ, ಬಿಬಿಎಂಪಿಯ ಚುನಾಯಿತ ಕೌನ್ಸಿಲ್‌ನ ಅಧಿಕಾರಾವಧಿ ಪೂರ್ಣಗೊಳ್ಳುವ ಮುನ್ನ ಚುನಾವಣೆ ನಡೆಸದಿರುವ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ಡಿ. 6ಕ್ಕೆ ನಿಗದಿ ಆಗಿರುವುದರಿಂದ ಸರ್ಕಾರ ಬಿಬಿಎಂಪಿ ಮರುವಿಂಗಡಣೆ ಕುರಿತು ಸ್ಪಷ್ಟ ನಿಲುವು ತಳೆಯಬೇಕಿದೆ. ಬಿಬಿಎಂಪಿಯ ಈಗಿನ ಪರಿಮಿತಿಯನ್ನೇ ಉಳಿಸಿಕೊಂಡು ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಿ ಮರುವಿಂಗಡಣೆ ನಡೆಸಲು ಸರ್ಕಾರ ಮುಂದಾಗಿದೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಬಿಬಿಎಂಪಿಗೆ ಗ್ರಾಮ ಪಂಚಾಯಿತಿಯ ಪ್ರದೇಶ ಸೇರ್ಪಡೆಗೊಳಿಸುವ ಬಗ್ಗೆ ಸರ್ಕಾರ ಅಧಿಕೃತವಾಗಿ ಯಾವುದೇ ಆದೇಶ ಮಾಡಿಲ್ಲ. ಸರ್ಕಾರ ಏನು ಸೂಚನೆ ನೀಡಿದೆಯೋ ಅದರಂತೆ ವಾರ್ಡ್ ಮರುವಿಂಗಡಣೆ ಸಾಧಕ–ಬಾಧಕಗಳ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸುವುದಷ್ಟೇ ನಮ್ಮ ಕೆಲಸ. ಹೊಸ ಗ್ರಾಮ ಪಂಚಾಯಿತಿಗಳನ್ನು ಸೇರ್ಪಡೆಗೊಳಿಸುವ ಬಗ್ಗೆ ನಮಗಂತೂ ಯಾವುದೇ ಆದೇಶ ಬಂದಿಲ್ಲ' ಎಂದು ವಾರ್ಡ್ ಪುನರ್ವಿಂಗಡಣೆ ಸಮಿತಿಯ ಸದಸ್ಯರೊಬ್ಬರು ತಿಳಿಸಿದರು.

ವರ್ಷ ಕಳೆಯುವಷ್ಟರಲ್ಲಿ ಮತ್ತೆ ಮರುವಿಂಗಡಣೆ

2011ರ ಜನಗಣತಿ ಆಧಾರದಲ್ಲಿ ಬಿಬಿಎಂಪಿಯ 198 ವಾರ್ಡ್‌ಗಳ ಮರುವಿಂಗಡಣೆ ನಡೆಸಲು ಸರ್ಕಾರ 2020ರ ಮಾರ್ಚ್ 2ರಂದು ಕರಡು ಅಧಿಸೂಚನೆ ಪ್ರಕಟಿಸಿತ್ತು. ಈ ಕುರಿತು ಸಾರ್ವಜನಿಕರಿಂದ ಆಕ್ಷೇಪಣೆ, ಸಲಹೆ ಸೂಚನೆಗಳನ್ನು ಆಹ್ವಾನಿಸಿದ ಬಳಿಕ 2020ರ ಜೂನ್ 23ರಂದು ರಾಜ್ಯಪತ್ರದಲ್ಲಿ ಅಂತಿಮ ಅಧಿಸೂಚನೆಯನ್ನೂ ಪ್ರಕಟಿಸಲಾಗಿತ್ತು. ಮರುವಿಂಗಡಣೆಗೊಂಡ 198 ವಾರ್ಡ್‌ಗಳ ಮತದಾರರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗದ ಸೂಚನೆ ಮೇರೆಗೆ ಪರಿಷ್ಕರಿಸಲಾಗಿತ್ತು. ವಾರ್ಡ್‌ಗಳ ಮರುವಿಂಗಡಣೆಯಾಗಿ ವರ್ಷ ಪೂರ್ಣಗೊಂಡ ಬೆನ್ನಲ್ಲೇ ಬಿಬಿಎಂಪಿಯ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಿ ಮತ್ತೆ ಮರುವಿಂಗಡಣೆ ಮಾಡುವ ಪ್ರಕ್ರಿಯೆ ನಡೆಯುತ್ತಿದೆ

ಸರ್ಕಾರ 198 ವಾರ್ಡ್‌ಗಳಿಗಾದರೂ ಚುನಾವಣೆ ನಡೆಸಲಿ, 243 ವಾರ್ಡ್‌ಗಳನ್ನು ರಚಿಸಿಯಾದರೂ ಚುನಾವಣೆ ನಡೆಸಲಿ. ಆದಷ್ಟು ಬೇಗ ಬಿಬಿಎಂಪಿ ಚುನಾವಣೆ ನಡೆಸಿ ಪ್ರಜಾಪ್ರಭುತ್ವದ ಆಶಯವನ್ನು ಎತ್ತಿಹಿಡಿಯಬೇಕು ಎಂ.ಶಿವರಾಜು, ಕಾಂಗ್ರೆಸ್ ಮುಖಂಡ

ಬಿಬಿಎಂಪಿ ವಾರ್ಡ್‌ಗಳ ಪುನರ್ವಿಂಗಡಣೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಕುರಿತು ಸರ್ಕಾರಕ್ಕೆ ಶೀಘ್ರವೇ ವರದಿಯನ್ನು ಸಲ್ಲಿಸಲಿದ್ದೇವೆ
ಗೌರವ್ ಗುಪ್ತ, ಬಿಬಿಎಂಪಿ ಪುನರ್ವಿಂಗಡಣೆ ಸಮಿತಿ ಅಧ್ಯಕ್ಷ

'ವಿವರ ಬಹಿರಂಗಪಡಿಸಲಾಗದು'

'ಸರ್ಕಾರದ ಸೂಚನೆ ಮೇರೆಗೆ ವಾರ್ಡ್ ಮರುವಿಂಗಡಣೆ ಬಗ್ಗೆ ಸರ್ಕಾರಕ್ಕೆ ಶೀಘ್ರವೇ ವರದಿ ಸಲ್ಲಿಸಲಿದ್ದೇವೆ. ನಾವು ಈ ವರದಿಯ ವಿವರ ಬಹಿರಂಗಪಡಿಸುವಂತಿಲ್ಲ. ಮರುವಿಂಗಡಣೆ ಬಗ್ಗೆ ಸರ್ಕಾರವೇ ಅಂತಿಮ ತೀರ್ಮಾನ ಕೈಗೊಳ್ಳಲಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

ಮತ್ತಷ್ಟು ಚಿಕ್ಕದಾಗಲಿವೆ ವಾರ್ಡ್‌ಗಳು

2020ರಲ್ಲಿ ಸರಾಸರಿ ವಾರ್ಡ್‌ನ ಸರಾಸರಿ ಜನಸಂಖ್ಯೆಯನ್ನು 42,645 ಎಂದು ಪರಿಗಣಿಸಿ 198 ವಾರ್ಡ್‌ಗಳನ್ನು ಮರುವಿಂಗಡಣೆ ಮಾಡಲಾಗಿತ್ತು. ಈಗ ಬಿಬಿಎಂಪಿಯ ವ್ಯಾಪ್ತಿಯನ್ನು ಹೆಚ್ಚಳ ಮಾಡದೆಯೇ ವಾರ್ಡ್‌ಗಳ ಸಂಖ್ಯೆ 243ಕ್ಕೆ ಹೆಚ್ಚಳ ಮಾಡಿ ಪುನರ್ವಿಂಗಡಣೆ ನಡೆಸಿದರೆ ವಾರ್ಡ್‌ಗಳ ವ್ಯಾಪ್ತಿ ಮತ್ತಷ್ಟು ಚಿಕ್ಕದಾಗಲಿವೆ. ವಾರ್ಡ್‌ವಾರು ಸರಾಸರಿ ಜನಸಂಖ್ಯೆ ತಲಾ 35 ಸಾವಿರಕ್ಕೆ ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಚುನಾವಣೆ ನಡೆಸಲು ಕನಿಷ್ಠ 3 ತಿಂಗಳು ಬೇಕು'

ಸಮಿತಿಯು ವರದಿ ಸಲ್ಲಿಸಿದ ಬಳಿಕ ಬಿಬಿಎಂಪಿ ಪುನರ್ವಿಂಗಡಣೆ ಪ್ರಕ್ರಿಯೆ ಪೂರ್ಣಗೊಳಿಸಲು ಕನಿಷ್ಠ ಮೂರು ತಿಂಗಳು ಬೇಕಾಗುತ್ತದೆ. 'ಪರಿಷ್ಕೃತ ವಾರ್ಡ್‌ಗಳ ವಿವರವನ್ನು ಒಳಗೊಂಡ ಕರಡು ಅಧಿಸೂಚನೆ ಹೊರಡಿಸಿ ಅದಕ್ಕೆ ಆಕ್ಷೇಪಣೆ ಸಲ್ಲಿಸಲು ಕನಿಷ್ಠ 15 ದಿನ ಕಾಲಾವಕಾಶ ಬೇಕು. ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ಈ ಕುರಿತು ಅಂತಿಮ ಅಧಿಸೂಚನೆ ಪ್ರಕಟಿಸಬೇಕು. ಆ ಬಳಿಕ ಪರಿಷ್ಕೃತ ವಾರ್ಡ್‌ಗಳ ಮತದಾರರ ಕರಡು ಪಟ್ಟಿ ಸಿದ್ಧಪಡಿಸಬೇಕು. ಇದಕ್ಕೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು. ಈ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಿ ಚುನಾವಣೆ ನಡೆಸಲು ಏನಿಲ್ಲವೆಂದರೂ ಮೂರು ತಿಂಗಳು ತಗಲುತ್ತದೆ' ಎಂದು ಅಧಿಕಾರಿಯೊಬ್ಬರು ವಿವರಿಸಿದರು.

20ರಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 20ರಂದು ನಗರದ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ.

ಸ್ಥಳಗಳು: ಶಾಕಾಂಬರಿ ನಗರ ಪೈಪ್‌ಲೈನ್ ರಸ್ತೆ, ರಾಘವೇಂದ್ರ ಸ್ವಾಮಿ ಮಠ, ಜೆ.ಪಿ. ನಗರ ಮೊದಲ ಹಂತ, ಪುಟ್ಟೇನಹಳ್ಳಿ, ಜಯನಗರ 8 ಮತ್ತು 5ನೇ ಬ್ಲಾಕ್, ಎಸ್‌ಬಿಐ ಕಾಲೊನಿ, ಆರ್.ವಿ. ದಂತ ಮಹಾವಿದ್ಯಾಲಯ ಸುತ್ತಮುತ್ತ ಪ್ರದೇಶ, ಎಲ್‌ಐಸಿ ಕಾಲೊನಿ, ಜೆ.ಪಿ. ನಗರ, ಸಿದ್ಧಲಿಂಗೇಶ್ವರ, ಸಾರಕ್ಕಿ ಮಾರುಕಟ್ಟೆ, ಎಸ್‌ಬಿಐ ಕಾಲೊನಿ, ಆರ್ಯನಗರ, ಪಿ.ಕೆ. ಕಾಲೊನಿ, ಆರ್‌ಬಿಐ ಬಡಾವಣೆ, ಕೊತ್ತನೂರು, ಜೆ.ಪಿ. ನಗರ, ಶ್ರೇಯಸ್ ಕಾಲೊನಿ, ನಟರಾಜ ಬಡಾವಣೆ, ನೃಪತುಂಗ ನಗರ, ಜಂಬುಸವಾರಿ ದಿಣ್ಣೆ ಸುತ್ತಮುತ್ತ ಪ್ರದೇಶಗಳು.

ಎರಡು ಸಂಸ್ಥೆಗಳ ಮೇಲೆ ದಾಳಿ, ₹ 600 ಕೋಟಿ ಕಪ್ಪುಹಣ ಪತ್ತೆ

ನವದೆಹಲಿ: 'ಹರಿಯಾಣದ ಗುರುಗ್ರಾಮದಲ್ಲಿರುವ ಎರಡು ವ್ಯಾಪಾರಿ ಸಂಸ್ಥೆಗಳ ಮೇಲೆ ಆದಾಯ ತೆರಿಗೆ ಇಲಾಖೆ ಇತ್ತೀಚೆಗೆ ದಾಳಿ ನಡೆಸಿದ ಬಳಿಕ ₹ 600 ಕೋಟಿ ಲೆಕ್ಕಕ್ಕೆ ಸಿಗದ ಕಪ್ಪುಹಣ ಪತ್ತೆಯಾಗಿದೆ' ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಸೋಮವಾರ ತಿಳಿಸಿದೆ.

'ರಿಯಲ್ ಎಸ್ಟೇಟ್ ಮತ್ತು ಆತಿಥ್ಯ ಕ್ಷೇತ್ರದಲ್ಲಿ ತೊಡಗಿರುವ ಸಂಸ್ಥೆ ಹಾಗೂ ಟೂಲ್ಸ್ ಮತ್ತು ಉಪಕರಣಗಳನ್ನು ತಯಾರಿಸುವ ಸಂಸ್ಥೆಯ ಮೇಲೆ ನ. 10ರಂದು ದಾಳಿ ನಡೆಸಲಾಗಿತ್ತು.

'₹3.54 ಕೋಟಿ ನಗದು ಮತ್ತು ₹ 5.15 ಕೋಟಿ ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ತೆರಿಗೆ ಇಲಾಖೆಯ ನೀತಿ ನಿರೂಪಣಾ ಮಂಡಳಿಯು ತಿಳಿಸಿದೆ.

ನಗರದಲ್ಲಿ ಮಳೆ ಸುರಿಯುತ್ತಿದ್ದ ಸಂದರ್ಭದಲ್ಲೇ ಮಿನ್ಸ್ಕ್ ವೃತ್ತದಲ್ಲಿ ವಾಹನಗಳು ಸಂಚರಿಸಿದವು (ಎಡಚಿತ್ರ), ಹೊರಮಾವು ವಡ್ಡರಪಾಳ್ಯದಲ್ಲಿ ಮಳೆ ನೀರು ನಿಂತಿರುವ ದೃಶ್ಯ – ಪ್ರಜಾವಾಣಿ ಚಿತ್ರಗಳು

ಜೋರು ಮಳೆ: ಮನೆಗಳಿಗೆ ನೀರು

ಒಂದನೇ ಪುಟದಿಂದ

ಬಹುತೇಕ ಕಡೆ ಅಬ್ಬರದ ಮಳೆ: ಮಡಿವಾಳ, ಎಚ್‌ಎಸ್‌ಆರ್ ಲೇಔಟ್, ಕೋರಮಂಗಲ, ವಿವೇಕನಗರ, ಎಚ್‌ಎಎಲ್, ಹೆಬ್ಬಾಳ, ಆರ್.ಟಿ.ನಗರ, ಸಂಜಯನಗರ, ವಸಂತನಗರ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್, ಅಶೋಕನಗರ, ಎಂ.ಜಿ. ರಸ್ತೆ, ಹಲಸೂರು, ಇಂದಿರಾನಗರ, ನಾಗವಾರ, ಹೆಣ್ಣೂರು, ಬಾಣಸವಾಡಿ, ಈಜಿಪುರ, ಚಿಕ್ಕಜಾಲ, ಪೀಣ್ಯ, ಬಾಗಲಗುಂಟೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಹೆಚ್ಚು ಸುರಿಯಿತು.

ಮೆಜೆಸ್ಟಿಕ್, ಗಾಂಧಿನಗರ, ಮಲ್ಲೇಶ್ವರ, ಶೇಷಾದ್ರಿಪುರ, ಯಶವಂತಪುರ, ರಾಜಾಜಿನಗರ, ವಿಜಯನಗರ, ಬಸವೇಶ್ವರನಗರ, ಗಿರಿನಗರ, ಬಸವನ ಗುಡಿ, ಬನಶಂಕರಿ, ಕೆಂಗೇರಿ, ರಾಜರಾಜೇ ಶ್ವರಿನಗರ, ಕುಮಾರಸ್ವಾಮಿ ಲೇಔಟ್, ಹನುಮಂತನಗರ, ಕುಮಾರ ಸ್ವಾಮಿ ಲೇಔಟ್, ಜೆ.ಪಿ.ನಗರ, ಜಯನಗರ ಪ್ರದೇಶದಲ್ಲೂ ಜೋರು ಮಳೆ ಇತ್ತು. ಜಿಕೆವಿಕೆ, ಯಲಹಂಕ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಹೆಚ್ಚಿತ್ತು. ರಸ್ತೆಯಲ್ಲಿ ಹರಿಯುತ್ತಿದ್ದ ನೀರಿನಲ್ಲಿ ಸಂಚರಿಸುತ್ತಿದ್ದ ಕೆಲ ವಾಹನಗಳು ಕೆಟ್ಟು ನಿಂತಿದ್ದವು.

ನಗರದಲ್ಲಿ ಸೋಮವಾರ ಸಂಜೆ ಸುರಿವ ಮಳೆಯಲ್ಲೇ ಹೊಸೂರು ರಸ್ತೆಯಲ್ಲಿ ಸಾಗಿದ ಮಹಿಳೆಯರು —ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಕಚೇರಿ ಹಾಗೂ ಇತರೆ ಕೆಲಸ ಮುಗಿಸಿ ಮನೆಗೆ ಹೊರಟಿದ್ದ ಜನ, ಮಳೆಯಲ್ಲಿ ಸಿಲುಕಿದರು.

ಮಳೆ ಕಡಿಮೆಯಾಗಬಹುದೆಂಬ ನಿರೀಕ್ಷೆಯಲ್ಲಿ ಸುರಕ್ಷಿತ ಸ್ಥಳಗಳಲ್ಲಿ ಕಾಯುತ್ತ ನಿಂತಿದ್ದರು. ದ್ವಿಚಕ್ರ ವಾಹನಗಳನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಜನ, ಕೆಳ ಸೇತುವೆ ಹಾಗೂ ಅಂಗಡಿಗಳಲ್ಲಿ ಆಶ್ರಯ ಪಡೆದಿದ್ದ ದೃಶ್ಯಗಳು ಕಂಡವು.

ಹೆಚ್ಚು ಜನರು ಬಂದು ಹೋಗುವ ಕೆ.ಆರ್. ಮಾರುಕಟ್ಟೆ, ಗಾಂಧಿನಗರ ಹಾಗೂ ಮೆಜೆಸ್ಟಿಕ್ ಪ್ರದೇಶಗಳಲ್ಲೂ ಮಳೆ ಜೋರಾಗಿತ್ತು. ಅಲ್ಲಲ್ಲ ವಸ್ತುಗಳ ಖರೀದಿಗೆ ಬಂದಿದ್ದ ಜನರಿಗೂ ತೊಂದರೆ ಆಯಿತು. ಪೆಟ್ರೋಲ್ ಬಂಕ್ ಹಾಗೂ ಮಾಲ್‌ಗಳ ಒಳಗೂ ಜನ ಗುಂಪು ಗುಂಪಾಗಿ ನಿಂತಿದ್ದು ಕಾಣಿಸಿತು. ಶಾಲಾ–ಕಾಲೇಜು ವಿದ್ಯಾರ್ಥಿಗಳು ಸುರಿವ ಮಳೆಯಲ್ಲೇ ಕೊಡೆ ಹಿಡಿದು ಹಾಗೂ ರೇನ್‌ಕೋಟ್ ಧರಿಸಿ ಮನೆಯತ್ತ ಹೆಜ್ಜೆ ಹಾಕಿದರು. ಮೆಜೆಸ್ಟಿಕ್ ಕೆಳ ಸೇತುವೆ, ಶಿವಾನಂದ ವೃತ್ತ, ಕಸ್ತೂರಬಾ ನಗರ ಹಾಗೂ ಬಳ್ಳಾರಿ ರಸ್ತೆಯಲ್ಲಿ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ಇದರಿಂದಾಗಿ ಸಂಚಾರ ದಟ್ಟಣೆ ಉಂಟಾಯಿತು.

'ಕೆಲದಿನಗಳಿಂದ ನಗರದಲ್ಲಿ ಮಳೆ ಆಗುತ್ತಿದೆ. ರಸ್ತೆಯಲ್ಲಿ ಹೆಚ್ಚು ನೀರು ಹರಿಯುತ್ತಿದ್ದು, ಆ ಬಗ್ಗೆ ದೂರುಗಳು ಬರುತ್ತಿವೆ. ಸಿಬ್ಬಂದಿ, ಸ್ಥಳಕ್ಕೆ ಹೋಗುವಷ್ಟರಲ್ಲೇ ಹಲವೆಡೆ ನೀರು ಹರಿದು ಹೋಗುತ್ತಿದೆ. ಕೆಲವೆಡೆ ಮಾತ್ರ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ನೀರು ತೆರವು ಮಾಡುತ್ತಿದ್ದಾರೆ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ತೆರಿಗೆ: ರಾಜ್ಯಗಳಿಗೆ ₹ 95,082 ಕೋಟಿ ಬಿಡುಗಡೆಗೆ ಕೇಂದ್ರದ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಧಾರಣಾ ಕಾರ್ಯಕ್ರಮಗಳು ಮತ್ತು ಬಂಡವಾಳ ವೆಚ್ಚವನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಇದೇ ತಿಂಗಳಲ್ಲಿ ರಾಜ್ಯಗಳಿಗೆ ₹95 ಸಾವಿರ ಕೋಟಿಗೂ ಅಧಿಕ ತೆರಿಗೆಯ ಮೊತ್ತವನ್ನು ವರ್ಗಾಯಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ.

ಇದು, ರಾಜ್ಯಗಳಿಗೆ ವರ್ಗಾವಣೆ ಮಾಡುತ್ತಿದ್ದ ಮೊತ್ತದ ದುಪ್ಪಟ್ಟಾಗಿದೆ. ಬಂಡವಾಳ ವೆಚ್ಚವನ್ನು ಚುರುಕುಗೊಳಿಸಲು ತನ್ನ ಪಾಲಿನ ತೆರಿಗೆ ಮೊತ್ತವನ್ನು ಅವಧಿಗೆ ಮೊದಲೇ ಬಿಡುಗಡೆ ಮಾಡಬೇಕು ಎಂಬ ಕೆಲ ರಾಜ್ಯಗಳ ಮನವಿ ಹಿನ್ನೆಲೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

'ಈಗ ಹಂಚಿಕೆ ಮಾಡುತ್ತಿದ್ದ ₹ 47,541 ಕೋಟಿಗೆ ಬದಲಾಗಿ, ಒಟ್ಟು ₹ 95,082 ಕೋಟಿ ಅನ್ನು ನ. 22ರಂದು ರಾಜ್ಯಗಳಿಗೆ ಬಿಡುಗಡೆ ಮಾಡಲು ಹಣಕಾಸು ಕಾರ್ಯದರ್ಶಿಗೆ ಸಲಹೆ ಮಾಡಿದ್ದೇನೆ' ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ತಿಳಿಸಿದರು.

ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರ ಸಭೆಯ ನಂತರ ಮಾತನಾಡಿದ ಅವರು, 'ಮೂಲಸೌಕರ್ಯ ಕಾಮಗಾರಿಗಳಿಗೆ ಹಣ ವ್ಯಯಿಸಲು ರಾಜ್ಯಗಳ ಬಳಿ ಹಣ ಇರಬೇಕು ಎಂಬ ಕೆಲ ರಾಜ್ಯಗಳ ಮನವಿ ಆಧರಿಸಿ ಈ ಕ್ರಮವಹಿಸಲಾಗಿದೆ' ಎಂದರು.

ತೆರಿಗೆಯ ಮೊತ್ತವನ್ನು ರಾಜ್ಯಗಳಿಗೆ ಕೇಂದ್ರ ಸರ್ಕಾರ ವಾರ್ಷಿಕ 14 ಕಂತುಗಳಲ್ಲಿ ಬಿಡುಗಡೆ ಮಾಡಲಿದೆ. ಸುಮಾರು 20 ರಾಜ್ಯಗಳು ವಾರ್ಷಿಕ ಬಂಡವಾಳ ವೆಚ್ಚ ಗುರಿಯಲ್ಲಿ ಈಗಾಗಲೇ ಶೇ 80ಕ್ಕೂ ಹೆಚ್ಚು ವ್ಯಯಮಾಡಿವೆ.

'ಅಭಿವೃದ್ಧಿ ಚಟುವಟಿಕೆಗಳಿಗೆ ನೆರವಾಗಲು ಈ ವರ್ಷದಲ್ಲಿ ನೀಡಲು ಸಮ್ಮತಿಸಿದ್ದ ಜಿಎಸ್‌ಟಿ ಪರಿಹಾರದ ಮೊತ್ತವನ್ನು ನವೆಂಬರ್ ತಿಂಗಳ ಆರಂಭದಲ್ಲಿಯೇ ರಾಜ್ಯಗಳಿಗೆ ಬಿಡುಗಡೆ ಮಾಡಲಾಗಿದೆ' ಎಂದು ಅವರು ತಿಳಿಸಿದರು.

ರಾಜ್ಯಗಳಿಗೆ ಬಹುತೇಕ ಅನುದಾನದ ಸ್ವರೂಪದಲ್ಲಿ 50 ವರ್ಷದ ಅವಧಿಗೆ ಬಡ್ಡಿರಹಿತವಾಗಿ ನೀಡಲಿರುವ ಬಂಡವಾಳವೆಚ್ಚದ ಮೊತ್ತಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಹಲವು ರಾಜ್ಯಗಳು ಯೋಜನೆಯನ್ನು ಮುಂದುವರಿಸುವಂತೆ ಕೋರಿವೆ ಎಂದೂ ಅವರು ಹೇಳಿದರು.

ಪ್ರಕೃತಿ ಮೇಲೆ ಆಕ್ರಮಣ ನಡೆಸಿದರೆ ಕಂಟಕ: ನಿರ್ಮಲಾನಂದನಾಥ ಸ್ವಾಮೀಜಿ

ಕೆಂಗೇರಿ: 'ಪರಿಸರವು ದೇವರ ಅಮೂಲ್ಯ ಕೊಡುಗೆ. ಇದನ್ನು ರಚನಾತ್ಮಕವಾಗಿ ಬಳಸಿಕೊಳ್ಳಬೇಕು. ಸಂಪನ್ಮೂಲಗಳ ಎಲ್ಲೆ ಮೀರಿದ ಬಳಕೆ ಹಾಗೂ ಕೊಳ್ಳುಬಾಕತನದಿಂದ ಪರಿಸರಕ್ಕೆ ಧಕ್ಕೆಯಾಗುತ್ತದೆ. ಪ್ರಕೃತಿಯ ಮೇಲೆ ಆಕ್ರಮಣ ನಡೆಸಿದರೆ ಕಂಟಕ ಕಟ್ಟಿಟ್ಟ ಬುತ್ತಿ. ಇದರಿಂದ ಮನುಜ ಕುಲ ವಿನಾಶವಾಗುತ್ತದೆ' ಎಂದು ಆದಿ ಚುಂಚನಗಿರಿ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಎಚ್ಚರಿಸಿದರು.

ಬಿಜಿಎಸ್ ಸ್ಕೂಲ್ ಆಫ್ ಆರ್ಕಿಟೆಕ್ಚರ್ ಮತ್ತು ಪ್ಲ್ಯಾನಿಂಗ್ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ನೀಡಿ ಅವರು ಮಾತನಾಡಿದರು.

ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ಸ್ ಕರ್ನಾಟಕದ ಪ್ರತಿನಿಧಿ ವಿದ್ಯಾಧರ್ ಒಡೆಯರ್, 'ಹಣ ಗಳಿಸುವುದು, ಪ್ರಶಸ್ತಿ ಪಡೆಯುವುದು ಯಶಸ್ಸಿನ ವ್ಯಾಖ್ಯಾನವಲ್ಲ. ಸಮಾಜಕ್ಕೆ ವೈಯಕ್ತಿಕ ಕಾಣಿಕೆ ನೀಡುವುದೇ ನಿಜವಾದ ಯಶಸ್ಸು' ಎಂದು ಹೇಳಿದರು.

ವಾಸ್ತುಶಿಲ್ಪಿ ಲೀನಾ ಕುಮಾರ್, 'ಆತ್ಮವಿಶ್ವಾಸದಿಂದ ಮುನ್ನುಗಿದರೆ ಯಶಸ್ಸು ತನ್ನಿಂದತಾನೆ ಒಲಿಯುತ್ತದೆ. ವಿದ್ಯಾರ್ಥಿಗಳು ನಿರ್ದಿಷ್ಟ ಗುರಿಯೊಂದಿಗೆ ಸಾಗುವ ಮೂಲಕ ದೇಶದ ಅಭಿವೃದ್ಧಿಗೆ ಸಹಕರಿಸಬೇಕು' ಎಂದು ಹೇಳಿದರು.

ಬಿಜಿಎಸ್ ಶಿಕ್ಷಣ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥಸ್ವಾಮೀಜಿ, ಪ್ರಾಂಶುಪಾಲ ನಿತಿನ್, ಎಸ್‌ಜೆಬಿಐಟಿ ಪ್ರಾಂಶುಪಾಲ ಸಿ.ಕೆ.ಅಜಯ್ ಚಂದ್ರನ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಒಟ್ಟು 124 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಆದಿ ಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಬಿಜಿಎಸ್ ಶಿಕ್ಷಣ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ ಇದ್ದಾರೆ

ನಗರದಲ್ಲಿ ಇಂದು

ರಮೇಶ್ ಅರವಿಂದ್

ರಾಷ್ಟ್ರೀಯ ಪತ್ರಿಕಾ ದಿನ–'ಮಾಧ್ಯಮ ಕಂಡರೆ ಯಾರಿಗೆ ಭಯವಿಲ್ಲ' ಕುರಿತು ವಿಚಾರ ಸಂಕಿರಣ: ಉದ್ಘಾಟನೆ–ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಜಗದೀಶ್, ಅತಿಥಿ–ನಟ ರಮೇಶ್ ಅರವಿಂದ್, ಅಧ್ಯಕ್ಷತೆ–ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ಆಯೋಜನೆ ಮತ್ತು ಸ್ಥಳ–ಕರ್ನಾಟಕ ಮಾಧ್ಯಮ ಅಕಾಡೆಮಿ, ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ. ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಬೆಳಿಗ್ಗೆ 11

ರಾಷ್ಟ್ರೀಯ ಪತ್ರಿಕಾ ದಿನಾಚರಣೆ: ಉದ್ಘಾಟನೆ–ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಜಗದೀಶ್, ಅಧ್ಯಕ್ಷತೆ–ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಅತಿಥಿಗಳು–ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ಗುರುಲಿಂಗ ಸ್ವಾಮಿ ಹೋಳಿಮಠ, ಆಯೋಜನೆ ಮತ್ತು ಸ್ಥಳ–ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣ, ಕಂದಾಯ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 12.45

ಕನ್ನಡ ಸಂಘರ್ಷ ಸಮಿತಿ ಸಂಸ್ಥಾಪನಾ ದಿನ–ಕನ್ನಡ ಕಟ್ಟಾಳು ಮತ್ತು ನಿಸ್ಸೀಮ ಕನ್ನಡತಿ ಪ್ರಶಸ್ತಿಗಳ ಪ್ರದಾನ: ಉದ್ಘಾಟನೆ–ಸಾಹಿತಿ ಬಿ.ಟಿ.ಲಲಿತಾ ನಾಯಕ್, ಅಧ್ಯಕ್ಷತೆ ಹಾಗೂ ಪ್ರಶಸ್ತಿ ಪ್ರದಾನ–ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಅತಿಥಿಗಳು–ವರದಾ ಶ್ರೀನಿವಾಸ್, ರಾಮಣ್ಣ ಎಚ್.ಕೋಡಿಹೊಸಹಳ್ಳಿ, ಎ.ಎಸ್.ನಾಗರಾಜಸ್ವಾಮಿ, ಸ್ಥಳ–ಕಸ್ತೂರಬಾ ಸಭಾಂಗಣ, ಗಾಂಧಿ ಭವನದ ಆವರಣ, ಸಂಜೆ 5.30

ವಿಧಾನ ಪರಿಷತ್ ಚುನಾವಣೆ ನಗರದಲ್ಲಿ 2,059 ಮತದಾರರು

ಬೆಂಗಳೂರು: 'ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ನಗರದ 2,059 ಮಂದಿ ಮತ ಚಲಾಯಿಸಲು ಅರ್ಹರಾಗಿದ್ದಾರೆ' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ತಿಳಿಸಿದರು.

ಚುನಾವಣಾಧಿಕಾರಿಯೂ ಆಗಿರುವ ಅವರು ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದರು.

'ನಗರದಲ್ಲಿ 86 ಮತಗಟ್ಟೆಗಳಿದ್ದು, ಮಂಗಳವಾರ ಬೆಳಿಗ್ಗೆಯಿಂದಲೇ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಬಹುದು. ಎಲ್ಲ ತಾಲ್ಲೂಕು, ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಮತದಾರರ ಕರಡು ಪಟ್ಟಿ ಹಾಕಲಾಗಿದೆ. ವೆಬ್‌ಸೈಟ್‌ನಲ್ಲೂ ಈ ಪಟ್ಟಿಯನ್ನು ಪ್ರಕಟಿಸಲಾಗಿದೆ. ಈ ಪಟ್ಟಿಯ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಹಾಗೂ ತಿದ್ದುಪಡಿಗಳಿದ್ದರೆ ತಿಳಿಸಲು 7 ದಿನ ಕಾಲಾವಕಾಶ ನೀಡ ಲಾಗಿದೆ' ಎಂದು ಹೇಳಿದರು.

'ಒಂದಕ್ಕಿಂತ ಹೆಚ್ಚು ಮತಗಟ್ಟೆಗಳಲ್ಲಿ ಹೆಸರಿರುವವರು ಯಾವ ಮತಗಟ್ಟೆಗೆ ಹೋಗಿ ಮತ ಚಲಾಯಿಸುತ್ತಾರೆ ಎಂಬುದನ್ನು ಖಾತರಿಪಡಿಸಬೇಕು. ಈ ಕುರಿತು ಸಂಬಂಧಪಟ್ಟವರಿಂದ ಲಿಖಿತ ಹೇಳಿಕೆ ಪಡೆಯಲಾಗುತ್ತದೆ. ಅವರು ಆಯ್ಕೆಮಾಡಿಕೊಂಡ ಮತಗಟ್ಟೆ ಬಿಟ್ಟು ಉಳಿದೆಡೆ ಮತ ಚಲಾಯಿಸಲು ಅವರಿಗೆ ಅವಕಾಶ ಇರುವುದಿಲ್ಲ' ಎಂದರು.

'ಮೂರು ಪುರಸಭೆ, 83 ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮತದಾರರು ಈ ಬಾರಿ ಮತ ಚಲಾಯಿಸಬಹುದು' ಎಂದರು.

ಲಖಿಂಪುರ–ಖೇರಿ: ಆಶಿಶ್ ಮಿಶ್ರಾ, ಇನ್ನಿಬ್ಬರ ಜಾಮೀನು ಅರ್ಜಿ ತಿರಸ್ಕೃತ

ಲಖಿಂಪುರ –ಖೇರಿ, ಉತ್ತರ ಪ್ರದೇಶ (ಪಿಟಿಐ): ಲಖಿಂಪುರ-ಖೇರಿ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳೀಯ ನ್ಯಾಯಾಲಯವು ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಮತ್ತು ಇತರ ಇಬ್ಬರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ.

ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಾದ ಮುಕೇಶ್ ಮಿಶ್ರಾ ಅವರು ಆಶಿಶ್ ಮಿಶ್ರಾ, ಅಶಿಶ್ ಪಾಂಡೆ, ಲವ್‌ಕುಶ್ ರಾಣಾ ಅವರ ಜಾಮೀನು ಅರ್ಜಿ ತಿರಸ್ಕರಿಸಿದರು. ಅ.3ರಂದು ನಡೆದಿದ್ದ ಹಿಂಸಾಚಾರ ಪ್ರಕರಣದಲ್ಲಿ ನಾಲ್ವರು ರೈತರು ಸೇರಿ ಎಂಟು ಜನರು ಮೃತಪಟ್ಟಿದ್ದರು.

ವಿಚಾರಣೆಯ ವೇಳೆ ಪ್ರಕರಣದ ಸಂಬಂಧ ಪ್ರಯೋಗಾಲಯದ ವರದಿಗಳು, 60 ಸಾಕ್ಷಿಗಳ ಹೇಳಿಕೆಗಳನ್ನು ಕೋರ್ಟ್‌ಗೆ ಹಾಜರುಪಡಿಸಲಾಗಿತ್ತು. ವಾದ ಆಲಿಸಿದ ಬಳಿಕ ಕೋರ್ಟ್ ಅರ್ಜಿ ತಿರಸ್ಕರಿದರು ಎಂದು ಸರ್ಕಾರಿ ವಕೀಲ ಅರವಿಂದ್ ತ್ರಿಪಾಠಿ ಹೇಳಿದರು.

ಪ್ರಕರಣದ ತನಿಖೆಗೆ ರಚಿಸಲಾಗಿದ್ದ ವಿಶೇಷ ತನಿಖಾ ಸಮಿತಿಯು 12 ಆರೋಪಿಗಳನ್ನು ಬಂಧಿಸಿತ್ತು.

ನಿಧನ ವಾರ್ತೆ

ನಾಗರತ್ನಮ್ಮ

ತುಮಕೂರು: ಶಾಸಕ ಡಾ.ಜಿ.ಪರಮೇಶ್ವರ ಅವರ ಸಹೋದರಿ ನಾಗರತ್ನಮ್ಮ (74) ಭಾನುವಾರ ರಾತ್ರಿ ಅನಾರೋಗ್ಯದಿಂದ ನಿಧನ ಹೊಂದಿದರು.

ಪತಿ, ನಿವೃತ್ತ ಪ್ರಾಂಶುಪಾಲ ನರಸಿಂಗಪ್ಪ, ಪುತ್ರಿ, ಇಬ್ಬರು ಗಂಡು ಮಕ್ಕಳು ಇದ್ದಾರೆ.

ಗೊಲ್ಲಹಳ್ಳಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನೆರವೇರಿತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕಾಂಗ್ರೆಸ್: ಶಂಕರ್ ಹೆಸರು ಅಂತಿಮ

ಪ್ರಜಾವಾಣಿ ವಾರ್ತೆ

ಹಾಸನ: ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಚನ್ನರಾಯಪಟ್ಟಣ ಎಪಿಎಂಸಿ ನಿರ್ದೇಶಕ ಎಂ.ಶಂಕರ್ ಹೆಸರು ಅಂತಿಮಗೊಂಡಿದೆ.

ಕಳೆದ ಬಾರಿ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಎಂ.ಎ.ಗೋಪಾಲಸ್ವಾಮಿ ಅವರು ಶ್ರವಣಬೆಳಗೊಳ ಕ್ಷೇತ್ರದಿಂದ ಸ್ಪರ್ಧಿಸುವ ಆಕಾಂಕ್ಷೆ ಹೊಂದಿದ್ದಾರೆ. ಹಾಗಾಗಿ ಈ ಬಾರಿ ವರಿಷ್ಠರು ಕಣಕ್ಕಿಳಿಯುವಂತೆ ನೀಡಿದ ಸೂಚನೆಯನ್ನು ನಿರಾಕರಿಸಿದ್ದರಿಂದ ಶಂಕರ್ ಅವರಿಗೆ ಅದೃಷ್ಟ ಒಲಿದಿದೆ. ಬೆಂಗಳೂರಿನಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶಂಕರ್ ಹೆಸರು ಅಂತಿಮಗೊಳಿಸಲಾಗಿದೆ.

ಅಭ್ಯರ್ಥಿ ಆಯ್ಕೆಯಲ್ಲಿ ಜೆಡಿಎಸ್–ಬಿಜೆಪಿಯಲ್ಲಿ ಹೊಯ್ದಾಟ ಮುಂದುವರಿದಿದೆ. ಭವಾನಿ ರೇವಣ್ಣ, ಸೂರಜ್ ರೇವಣ್ಣ ಪೈಕಿ ಒಬ್ಬರು ಕಣಕ್ಕಿಳಿಯುವುದು ಖಚಿತವಾಗಿದ್ದರೆ, ಬಿಜೆಪಿಯಿಂದ ನಗರಾಧ್ಯಕ್ಷ ಎಸ್.ಕೆ. ವೇಣುಗೋಪಾಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಜಯ್ ವಿಕ್ರಂ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮಂಥರ್ ಗೌಡ ಹೆಸರು ಚರ್ಚೆಯಲ್ಲಿದೆ.

ಟಿಕೆಟ್ ಆಕಾಂಕ್ಷಿಯಲ್ಲ: ಲಖನ್

ಬೆಳಗಾವಿ: 'ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ನಾನು ಬಿಜೆಪಿ ಟಿಕೆಟ್ ಆಕಾಂಕ್ಷಿಯಲ್ಲ' ಎಂದು ಗೋಕಾಕದ ಮುಖಂಡ ಲಖನ್ ಜಾರಕಿಹೊಳಿ ಸೋಮವಾರ ಪ್ರತಿಕ್ರಿಯಿಸಿದರು.

'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು, 'ಹಿರಿಯ ಸಹೋದರ, ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ನನಗೆ ಟಿಕೆಟ್ ಕೊಡುವಂತೆ ಬಿಜೆಪಿ ಮುಖಂಡರನ್ನು ಕೋರಿರುವ ಸುದ್ದಿಯನ್ನು ಮಾಧ್ಯಮದಲ್ಲಿ ನೋಡಿದೆ. ಅವರ ಅಭಿಪ್ರಾಯವನ್ನು ಅವರು ಹೇಳಿದ್ದಾರೆ' ಎಂದರು.

ಅಭ್ಯರ್ಥಿಗಳಿಗೆ ಬಿಜೆಪಿ, ಜೆಡಿಎಸ್ ಶೋಧ

• ಕೆ.ಜೆ. ಮರಿಯಪ್ಪ

ತುಮಕೂರು: ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಗೆ ನಾಮಪತ್ರ ಸಲ್ಲಿಕೆ ಮಂಗಳವಾರದಿಂದ ಆರಂಭವಾಗಲಿದ್ದು, ರಾಜಕೀಯ ಪಕ್ಷಗಳು ಅಭ್ಯರ್ಥಿಗಳ ಹುಡುಕಾಟದಲ್ಲಿ ತೊಡಗಿವೆ.

ಆರ್.ರಾಜೇಂದ್ರ

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಎನ್. ರಾಜಣ್ಣ ಪುತ್ರ ಆರ್. ರಾಜೇಂದ್ರ ಅವರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ಖಚಿತ ಎಂದು ಹೇಳಲಾಗುತ್ತಿದ್ದು, ಅವರು ಈಗಾಗಲೇ ಒಂದು ಸುತ್ತು ಪ್ರಚಾರ ಮುಗಿಸಿದ್ದಾರೆ. ಜೆಡಿಎಸ್, ಬಿಜೆಪಿಯಲ್ಲಿ ಅಭ್ಯರ್ಥಿಗಾಗಿ ಶೋಧ ಮುಂದುವರೆದಿದ್ದು, ಯಾರನ್ನು ನಿಲ್ಲಿಸಿದರೆ 'ಬಲ' ಬರಲಿದೆ ಎಂಬ ಲೆಕ್ಕಾಚಾರ ನಡೆದಿದೆ. ಕಾಂಗ್ರೆಸ್‌ನಲ್ಲಿ ಸಮಸ್ಯೆ ಇದ್ದಂತಿಲ್ಲ. ಜೆಡಿಎಸ್, ಬಿಜೆಪಿಯಲ್ಲಿ ದಿನೇ ದಿನೇ ಗೊಂದಲ ಹೆಚ್ಚುತ್ತಿದೆ.

ಕೆಎಎಸ್ ಹಿರಿಯ ಅಧಿಕಾರಿ ಹಾಗೂ ಕೆಐಎಡಿಬಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅನಿಲ್ ಅವರನ್ನು ರಾಜೀನಾಮೆ ಕೊಡಿಸಿ ಕಣಕ್ಕೆ ಇಳಿಸುವ ಪ್ರಯತ್ನದಲ್ಲಿ ಜೆಡಿಎಸ್ ಮುಖಂಡರು ತೊಡಗಿದ್ದಾರೆ. ಎರಡು ತಿಂಗಳ ಹಿಂದೆಯೇ ರಾಜೀನಾಮೆ ಕೊಡಿಸಿದ್ದು, ಇನ್ನು ಅಂಗೀಕಾರವಾಗಿಲ್ಲ. ಸರ್ಕಾರದ ಮೇಲೆ ಒತ್ತಡ ಹಾಕಲಾಗುತ್ತಿದ್ದು, ಅಂಗೀಕರಿಸಿದರೆ ಸ್ಪರ್ಧಿಸಲಿದ್ದಾರೆ. ಈ ಪ್ರಯತ್ನದ ನಡುವೆಯೂ ಪರ್ಯಾಯ ಅಭ್ಯರ್ಥಿಗೆ ದಳಪತಿಗಳು ಹುಡುಕಾಟ ನಡೆಸಲಿದ್ದಾರೆ.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಹಿಂದೆ ಕೆಲಸ ಮಾಡಿದ್ದ ಗೋವಿಂದರಾಜು ಅವರನ್ನು ಕರೆತರುವ ಪ್ರಯತ್ನ ಯಶಸ್ವಿಯಾಗಿಲ್ಲ. ಜಿಲ್ಲೆಯಲ್ಲಿ ಕೆಲಸ ಮಾಡಿದ ಅನುಭವ, ಹಳ್ಳಿಗಳ ಪರಿಚಯ, ಜನರ ಒಡನಾಟ ಇರುವುದರಿಂದ ಸ್ಪರ್ಧಿಸುವಂತೆ ಜೆಡಿಎಸ್ ವರಿಷ್ಠರು ಮಾಡಿದ ಮನವಿಗೆ ಅವರು ಸ್ಪಂದಿಸಿಲ್ಲ. ಬಿಜೆಪಿ ಸಹ ಇದೇ ರೀತಿ ಪ್ರಯತ್ನ ಮಾಡಿದ್ದು, ಅದಕ್ಕೂ ಅವರು ಒಪ್ಪಿಕೊಂಡಿಲ್ಲ.

ಮಾಜಿ ಸಚಿವ ಹಾಗೂ ಜೆಡಿಎಸ್ ನಾಯಕ ಡಿ.ನಾಗರಾಜಯ್ಯ ಪುತ್ರ ಹಾಗೂ ಜಿ.ಪಂ ಮಾಜಿ ಅಧ್ಯಕ್ಷ ಡಾ.ರವಿ ಹೆಸರು ಸಹ ಮುಂಚೂಣಿಗೆ ಬಂದಿದೆ. ಮಾಜಿ ಶಾಸಕ ಎಚ್.ನಿಂಗಪ್ಪ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಆರ್. ಸಿ.ಅಂಜನಪ್ಪ ಟಿಕೆಟ್ ಕೇಳಿದ್ದಾರೆ. ಈಗ ಪ್ರಸ್ತಾಪವಾಗಿರುವ ಹೆಸರು ಬಿಟ್ಟು ಕೊನೆಗಳಿಗೆಯಲ್ಲಿ ಬೇರೊಬ್ಬರು ಅಭ್ಯರ್ಥಿಯಾದರೂ ಆಶ್ಚರ್ಯಪಡಬೇಕಿಲ್ಲ ಎಂದು ಮೂಲಗಳು ತಿಳಿಸಿವೆ.

ಬಿಜೆಪಿಗೂ ಅಭ್ಯರ್ಥಿ ಬರ: ಬಿಜೆಪಿಗೂ ಸಮರ್ಥ ಅಭ್ಯರ್ಥಿ ಸಿಗದಾಗಿದೆ. ಕಾಂಗ್ರೆಸ್, ಜೆಡಿಎಸ್‌ನಿಂದ ಯಾರು ಸ್ಪರ್ಧಿಸಲಿದ್ದಾರೆ ಎಂಬುದನ್ನು ನೋಡಿಕೊಂಡು ಕಣಕ್ಕಿಳಿಸುವ ಚಿಂತನೆಯಲ್ಲಿದ್ದಾರೆ. ಅಭ್ಯರ್ಥಿ ಆಯ್ಕೆಗೂ ಮೊದಲೇ ತಾಲ್ಲೂಕು ಮಟ್ಟದಲ್ಲಿ ಸಭೆ ನಡೆಸಲಾಗುತ್ತಿದೆ. ಕಳೆದ ಬಾರಿ ಸ್ಪರ್ಧಿಸಿ ಸೋತಿರುವ ಡಾ.ಎಂ. ಆರ್.ಹುಲಿನಾಯ್ಕರ್ ಅವರಿಗೆ ಟಿಕೆಟ್ ನೀಡಲು ಮುಂದಾಗಿದ್ದರೂ ಅವರು ಮತ್ತೊಮ್ಮೆ ಕಣಕ್ಕಿಳಿಯಲು ಒಲವು ತೋರಿಲ್ಲ. ಬದಲಿಗೆ ಅವರ ಪುತ್ರಿ ಹಾಗೂ ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾ ಘಟಕದ ಅಧ್ಯಕ್ಷೆ ಅಂಬಿಕಾ ಅವರಿಗೆ ಟಿಕೆಟ್ ನೀಡುವ ಸಾಧ್ಯತೆಗಳಿವೆ.

ಇದರ ನಡುವೆ ಡಿ.ವಿ. ಸದಾನಂದಗೌಡ ಬೆಂಬಲಿಗ ಚೇತನ್, ವಿಧಾನ ಪರಿಷತ್ ಸದಸ್ಯ ವೈ.ಎ.ನಾರಾಯಣಸ್ವಾಮಿ ಬೆಂಬಲಿಗ ಅನಿಲ್, ಎಂ.ಟಿ.ಬಿ.ನಾಗರಾಜ್ ಪುತ್ರನ ಹೆಸರನ್ನು ತೇಲಿ ಬಿಡಲಾಗಿದೆ. ಜಿಲ್ಲೆ ಪ್ರತಿನಿಧಿಸುವ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ವಿದೇಶ ಪ್ರವಾಸದಲ್ಲಿದ್ದು, ಮಂಗಳವಾರ ವಾಪಸಾದ ನಂತರ ಒಂದು ನಿರ್ಧಾರಕ್ಕೆ ಬರಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಸುರೇಶ್‌ಗೌಡ ಷರತ್ತು?



ಸುರೇಶ್ ಗೌಡ

ತುಮಕೂರು ಗ್ರಾಮಾಂತರ ಕ್ಷೇತ್ರದ ಮಾಜಿ ಶಾಸಕ ಬಿ.ಸುರೇಶ್‌ಗೌಡ ಅವರನ್ನು ಸ್ಪರ್ಧಿಸುವಂತೆ ವರಿಷ್ಠರು ಒತ್ತಡ ಹಾಕಿದ್ದಾರೆ. ಅವರು ಕೆಲವು 'ಷರತ್ತು' ಹಾಕಿದ್ದು, ಬೇಡಿಕೆ ಈಡೇರಿದರೆ ಸ್ಪರ್ಧೆಗೆ ಇಳಿಯಬಹುದು. ಪರಿಷತ್‌ಗೆ ಸ್ಪರ್ಧಿಸಿ ಆಯ್ಕೆಯಾದರೆ ಗ್ರಾಮಾಂತರ ಕ್ಷೇತ್ರ ಕೈತಪ್ಪಲಿದೆ ಎಂಬ ಆತಂಕದಲ್ಲಿ ಇದ್ದಾರೆ.

ಕಾಂಗ್ರೆಸ್‌ನಿಂದ ಟಿಕೆಟ್‌ಗೆ ಪ್ರಯತ್ನಿಸಿ, ಸಿಗುವುದಿಲ್ಲ ಎಂಬುದು ಖಚಿತವಾಗುತ್ತಿದ್ದಂತೆ ಯಲಚವಾಡಿ ನಾಗರಾಜ್ ಬಿಜೆಪಿಯಿಂದ ಟಿಕೆಟ್ ಬಯಸಿದ್ದರು. ಆದರೆ, ವರಿಷ್ಠರು ಒಲವು ತೋರಿಸಿಲ್ಲ. ಕಾಂಗ್ರೆಸ್ ಮುಖಂಡ ಎಸ್.ಪಿ.ಮುದ್ದಹನುಮೇಗೌಡ ಅವರನ್ನು ಕರೆತಂದು ನಿಲ್ಲಿಸುವ ಪ್ರಯತ್ನವೂ ಫಲಿಸಿಲ್ಲ.

ಕಾಂಗ್ರೆಸ್: ಹೊಸಬರ ಹುಡುಕಾಟ

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಧಾರವಾಡ ಜಿಲ್ಲೆಯಲ್ಲಿ ಕಳೆದ ಚುನಾವಣೆಯಲ್ಲಿ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದವರು ಈಗ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ. ಹಾಗಾಗಿ, ಪಕ್ಷ ಹೊಸಬರ ಹುಡುಕಾಟದಲ್ಲಿದೆ.

ಅವಿಭಜಿತ ಧಾರವಾಡ ಜಿಲ್ಲೆಯಿಂದ ಎರಡು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, ಕಳೆದ ಬಾರಿ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದ ಶ್ರೀನಿವಾಸ ಮಾನೆ ಅವರು, ಇತ್ತೀಚೆಗೆ ಹಾನಗಲ್ ಕ್ಷೇತ್ರದ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ. ಇದರಿಂದಾಗಿ ಕಾಂಗ್ರೆಸ್ ಹೊಸರೊಬ್ಬರಿಗೆ ಅವಕಾಶ ನೀಡಬೇಕಾದ ಅನಿವಾರ್ಯ ಎದುರಿಸುತ್ತಿದೆ.

ಧಾರವಾಡ ಜಿಲ್ಲೆಯಿಂದಲೇ 17 ಮಂದಿ ಆಕಾಂಕ್ಷಿಗಳಿದ್ದಾರೆ. ಹಾವೇರಿ, ಗದಗ ಜಿಲ್ಲೆಯಿಂದಲೂ ಆಕಾಂಕ್ಷಿಗಳಿದ್ದಾರೆ. ಆಕಾಂಕ್ಷಿಗಳ ದಂಡೇ ಇದ್ದರೂ, ಗೆಲ್ಲುವ ಅಭ್ಯರ್ಥಿಗೆ ಹುಡುಕಾಟ ನಡೆದಿದೆ. ಬೆಂಗಳೂರಿನಲ್ಲಿ ಭಾನುವಾರ ನಡೆದ ಪಕ್ಷದ ಮುಖಂಡರ ಸಭೆಯಲ್ಲೂ ಅಂತಿಮವಾಗಿಲ್ಲ.

> **ವಿಧಾನ ಪರಿಷತ್ ಚುನಾವಣೆಯಲ್ಲಿ ಅಲ್ಪಸಂಖ್ಯಾತರಿಗೇ ಅವಕಾಶ ನೀಡಬೇಕು. ನಾನೂ, ಸೇರಿದಂತೆ ಹಲವರು ಆಕಾಂಕ್ಷಿಗಳಾಗಿದ್ದೇವೆ**
> **ಅಲ್ತಾಫ್ ಹಳ್ಳೂರ,** ಅಧ್ಯಕ್ಷ, ಹುಬ್ಬಳ್ಳಿ ಧಾರವಾಡ ಮಹಾನಗರ ಜಿಲ್ಲಾ ಘಟಕ

> **ಬಿಜೆಪಿಯಿಂದ ಒಬ್ಬರೇ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚಿದೆ. ಆದರೆ, ಪಕ್ಷದ ಮುಖಂಡರ ತೀರ್ಮಾನವೇ ಅಂತಿಮವಾಗಿರುತ್ತದೆ**
> **ಲಿಂಗರಾಜ ಪಾಟೀಲ**
> ವಿಭಾಗ ಪ್ರಭಾರಿ, ಬಿಜೆಪಿ

ಅಲ್ಪಸಂಖ್ಯಾತರಿಗೆ ನೀಡಬೇಕೆಂಬ ಕೂಗು: ಈ ಬಾರಿ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕು ಎಂಬುದು ಇಲ್ಲಿನ ಮುಖಂಡರ ಒತ್ತಾಯವಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಕೂಡ ಸಲ್ಲಿಸಿದ್ದಾರೆ.

ಈ ಹಿಂದೆ ಇದೇ ಕ್ಷೇತ್ರದಿಂದ ಗೆಲುವು ಸಾಧಿಸಿದ್ದ ಎ.ಎಂ.ಹಿಂಡಸಗೇರಿ ಅವರು ಆಕಾಂಕ್ಷಿಯಾಗಿದ್ದಾರೆ. ಅವರೊಂದಿಗೆ ಮಾಜಿ ಸಂಸದ ಐ.ಜಿ. ಸನದಿ ಅವರ ಪುತ್ರ ಶಾಕೀರ್ ಸನದಿ, ಇಸ್ಮಾಯಿಲ್ ತಮಟಗಾರ, ಜಿಲ್ಲಾ ಘಟಕದ ಅಧ್ಯಕ್ಷ ಅಲ್ತಾಫ್ ಹಳ್ಳೂರು, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಸೇರಿದಂತೆ ಹಲವರು ಯತ್ನ ನಡೆಸುತ್ತಿದ್ದಾರೆ. ಇವರಲ್ಲದೆ ಇನ್ನೂ ಹಲವರು ಯತ್ನ ನಡೆಸುತ್ತಿದ್ದಾರೆ.

ಸುರಕ್ಷೆಯ ಮೊರೆ: ಎರಡು ಸ್ಥಾನಗಳಿರುವುದರಿಂದ ಪ್ರತಿ ಪಕ್ಷವೂ ಇಬ್ಬರು ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಅವಕಾಶವಿದೆ. ಆದರೆ, ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಹಾಗೂ ಬಿಜೆಪಿ ಹಿಂದಿನ ಚುನಾವಣೆಯಂತೆ ಒಬ್ಬರೇ ಅಭ್ಯರ್ಥಿ ಕಣಕ್ಕಿಳಿಸಲು ಮುಂದಾಗಿವೆ.

ಶಾಸಕ ಜಗದೀಶ ಶೆಟ್ಟರ್ ಸೇರಿ ಎರಡೂ ಪಕ್ಷಗಳ ನಾಯಕರು ಒಬ್ಬರನ್ನು ಕಣಕ್ಕಿಳಿಸುವ ಹೇಳಿಕೆ ನೀಡಿದ್ದಾರೆ. ಎರಡೂ ಪಕ್ಷಗಳಲ್ಲಿ ಎರಡನೇ ಅಭ್ಯರ್ಥಿಯಾಗುವ ಧೈರ್ಯವನ್ನು ತೋರಿಸುವವರೂ ಇಲ್ಲವಾಗಿದ್ದಾರೆ. ಹಾಗಾಗಿ, ಒಬ್ಬರೇ ಅಭ್ಯರ್ಥಿ ಕಣಕ್ಕಿಳಿಸುವ ಸಾಧ್ಯತೆಯೇ ಹೆಚ್ಚಿದೆ.

ಬೊಮ್ಮಾಯಿ ಆಪ್ತ ಎಲೆಬಾಕನಹಳ್ಳಿ ಬಸವರಾಜು, ಬಿಎಸ್‌ವೈ ಸಂಬಂಧಿ ಮಂಜು ಅವರಿಂದ ಲಾಬಿ

ಹಾಲಿ, ಮಾಜಿ ಸಿ.ಎಂ ಆಪ್ತರಲ್ಲಿ ಟಿಕೆಟ್ ಪೈಪೋಟಿ

• ಎಂ.ಎನ್.ಯೋಗೇಶ್

ಮಂಡ್ಯ: ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್‌ಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆಪ್ತರ ನಡುವೆ ಪೈಪೋಟಿ ತೀವ್ರಗೊಂಡಿದೆ.

ಕೆ.ಆರ್.ಪೇಟೆ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಗೆಲುವಿನ ನಂತರ ಆ ಪಕ್ಷದ ಮುಖಂಡರಲ್ಲಿ ಉತ್ಸಾಹ ಹೆಚ್ಚಾಗಿದೆ. ಪ್ರತಿ ಚುನಾವಣೆಯಲ್ಲಿ ಇತರ ಪಕ್ಷಗಳ ಜೊತೆ ಹೊಂದಾಣಿಕೆ ಮಾಡಿಕೊಳ್ಳುವ, ಅನ್ಯ ಪಕ್ಷಗಳಿಂದ ಮುಖಂಡರನ್ನು ಕರೆತಂದು ಅಭ್ಯರ್ಥಿಯನ್ನಾಗಿಸುವ ಪರಿಪಾಠವಿತ್ತು. ಆದರೆ ಈ ಬಾರಿ ನಾಲ್ಕಕ್ಕೂ ಹೆಚ್ಚು ಮಂದಿ ಟಿಕೆಟ್‌ಗಾಗಿ ಲಾಬಿ ನಡೆಸುತ್ತಿರುವುದು ಕುತೂಹಲ ಮೂಡಿಸಿದೆ.

ಅವರ ಪೈಕಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಪ್ತವಲಯದಲ್ಲಿ ಗುರುತಿಸಿಕೊಂಡಿರುವ ಎಲೆಚಾಕನಹಳ್ಳಿ ಬಸವರಾಜು ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಸಂಬಂಧಿ ಬೂಕಹಳ್ಳಿ ಮಂಜು ಸೇರಿದ್ದಾರೆ. ಇಬ್ಬರಲ್ಲಿ ಒಬ್ಬರಿಗೆ ಟಿಕೆಟ್ ದೊರೆಯುವುದು ನಿಶ್ಚಿತ ಎಂದೇ ಹೇಳಲಾಗುತ್ತಿದೆ.

> **ಮಂಡ್ಯ ಜಿಲ್ಲೆಯಲ್ಲಿ ಮತ್ತೆ ಕಮಲ ಅರಳಲಿದೆ. ಕೆ.ಆರ್.ಪೇಟೆ ಉಪ ಚುನಾವಣೆ ಮಾದರಿಯಲ್ಲಿ ಗೆಲುವಿಗಾಗಿ ಸಂಘಟಿತ ಹೋರಾಟ ನಡೆಸುವೆ**
> **ಎಲೆಚಾಕನಹಳ್ಳಿ ಬಸವರಾಜು**

> **ನನಗೆ ಟಿಕೆಟ್ ದೊರೆಯುವ ಭರವಸೆ ಇದೆ. ಮುಖಂಡರ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ. ಯಾರೇ ಅಭ್ಯರ್ಥಿಯಾದರೂ ಅವರ ಗೆಲುವಿಗಾಗಿ ಹೋರಾಟ ನಡೆಸುವೆ**
> **ಬೂಕಹಳ್ಳಿ ಮಂಜು**

60 ವರ್ಷದ ಬಸವರಾಜು ಎಸ್.ಆರ್.ಬೊಮ್ಮಾಯಿ ಶಿಷ್ಯ ವಲಯದಲ್ಲೂ ಗುರುತಿಸಿಕೊಂಡಿದ್ದವರು. ತಂದೆಯ ಮೂಲಕ ಮಗನಿಗೂ ಆಪ್ತರಾಗಿದ್ದಾರೆ. ಪತ್ನಿ, ಸಹೋದರ ತಾಲ್ಲೂಕು ಪಂಚಾಯಿತಿ ಸದಸ್ಯರಾಗಿದ್ದರು. ಸ್ಥಳೀಯ ಸಂಸ್ಥೆಗಳ ಮೇಲೆ ಅವರಿಗೆ ಹಿಡಿತವಿದೆ.

ಬಸವರಾಜ ಬೊಮ್ಮಾಯಿ ಅವರು ಜಲಸಂಪನ್ಮೂಲ ಸಚಿವರಾಗಿದ್ದಾಗ ಎಲೆಚಾಕನಹಳ್ಳಿ, ತೂಬಿನಕೆರೆ ಭಾಗಕ್ಕೆ ಕೆರೆ ತುಂಬಿಸುವ ಯೋಜನೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಆ ಪ್ರಭಾವ ಬಳಸಿಕೊಂಡು ಟಿಕೆಟ್‌ಗೆ ಯತ್ನ ನಡೆಸಿದ್ದಾರೆ.

ಅವರ ಜೊತೆಗೆ ಕೆ.ಸಿ. ನಾರಾಯಣಗೌಡರ ಜೊತೆ ಜೆಡಿಎಸ್‌ನಿಂದ ಬಿಜೆಪಿಗೆ ಬಂದ ಶೀಳನೆರೆ ಅಂಬರೀಷ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಿ.ಪಿ.ಉಮೇಶ್ ಅವರೂ ಟಿಕೆಟ್ ಯತ್ನ ನಡೆಸುತ್ತಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಅವರ ಸಂಬಂಧಿ ಮಂಜು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್.ಪೇಟೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಸೋಲು ಕಂಡಿದ್ದರು. ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷರೂ ಆಗಿದ್ದ ಅವರು ವಿದ್ಯುತ್ ಗುತ್ತಿಗೆದಾರರು. ಯುವ ನಾಯಕನಾಗಿ ಗುರುತಿಸಿಕೊಂಡಿರುವ ಅವರು ತಮ್ಮ ಪ್ರಭಾವ ಬಳಸುತ್ತಿದ್ದಾರೆ.

ಕ್ಷೇತ್ರ ಉಳಿಸಿಕೊಳ್ಳುವ ತವಕ: ಹಾಲಿ ಸದಸ್ಯ ಎನ್.ಅಪ್ಪಾಜಿಗೌಡ ಮತ್ತೆ 2ನೇ ಅವಧಿಗೆ ಸ್ಪರ್ಧಿಸುತ್ತಿದ್ದು ಜೆಡಿಎಸ್‌ನಲ್ಲಿ ಕ್ಷೇತ್ರ ಉಳಿಸಿಕೊಳ್ಳುವ ತವಕವಿದೆ. ಮಂಡ್ಯ ನಗರಸಭೆ ಸೇರಿ ಬಹುತೇಕ ಸ್ಥಳೀಯ ಸಂಸ್ಥೆಗಳಲ್ಲಿ ಜೆಡಿಎಸ್ ಅಧಿಕಾರವಿದೆ. ಗ್ರಾಮ ಪಂಚಾಯಿತಿಗಳಲ್ಲಿ ಜೆಡಿಎಸ್ ಬೆಂಬಲಿಗರು ಅಧಿಕಾರದಲ್ಲಿದ್ದಾರೆ. ಅದು ಗೆಲುವಿಗೆ ಸಹಕಾರಿಯಾಗಲಿದೆ ಎಂಬುದು ಜೆಡಿಎಸ್ ಲೆಕ್ಕಾಚಾರ.

ಕಾಂಗ್ರೆಸ್‌ನಲ್ಲಿ ಮಾಜಿ ಸದಸ್ಯ ಬಿ.ರಾಮಕೃಷ್ಣ ಹೆಸರು ಮುನ್ನೆಲೆಯಲ್ಲಿದೆ. ಅವರು ಜೆಡಿಎಸ್–ಕಾಂಗ್ರೆಸ್ ಒಮ್ಮತದ ಅಭ್ಯರ್ಥಿಯಾಗಿ ಒಮ್ಮೆ ಗೆಲವು ಸಾಧಿಸಿದ್ದರು. ಸ್ಥಳೀಯ ಕಾಂಗ್ರೆಸ್ ಮುಖಂಡರ ಬೆಂಬಲವೂ ಇರುವುದರಿಂದ ಅವರ ಹೆಸರು ಮುಖ್ಯವಾಗಿ ಕೇಳಿ ಬರುತ್ತಿದೆ. ಅವರ ಜೊತೆಗೆ ಎಂ.ಪುಟ್ಟೇಗೌಡ ಟಿಕೆಟ್‌ಗಾಗಿ ಯತ್ನಿಸುತ್ತಿದ್ದಾರೆ.

ಬಿಸಿ ಏರಿಸಿದ ಬಿಟ್ ಕಾಯಿನ್...

ಒಂದನೇ ಪುಟದಿಂದ...

'ಮುಂದಿನ ವಿಧಾನಸಭಾ ಚುನಾವಣೆಯನ್ನು ಗರಿಯಾಗಿಟ್ಟುಕೊಂಡು 'ಬಿಟ್ ಕಾಯಿನ್ ಹಗರಣ' ಎಂಬ ಹೊಸ ಸುಳ್ಳನ್ನು ಹೊಸೆದಿದೆ' ಎಂದು ಅಶೋಕ ಆರೋಪಿಸಿದರು.

'ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕೂಡ ಯಾವ ದಾಖಲೆಗಳೂ ಇಲ್ಲದೆ ಆರೋಪ ಮಾಡುತ್ತಿದ್ದಾರೆ. ಖಾಲಿ ಬುಟ್ಟಿ ತೋರಿಸುತ್ತಾ ಹಾವು ಇದೆ, ಹಾವು ಇದೆ ಎಂದು ಹೆದರಿಸಲು ಪ್ರಯತ್ನಿಸುತ್ತಿದ್ದಾರೆ. ಅವರ ಬಳಿ ನಿಜವಾಗಿ ದಾಖಲೆ ಇದ್ದರೆ ಬಹಿರಂಗಪಡಿಸಲಿ. ಬಿಜೆಪಿಯ ಯಾವ ನಾಯಕರು ಬಿಟ್ ಕಾಯಿನ್ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂಬುದನ್ನು ಹೇಳಲಿ' ಎಂದು ಸವಾಲು ಹಾಕಿದರು.

ಕಾಂಗ್ರೆಸ್ ಅಂತಃಕಲಹ ಕಾರಣ: 2016ರಲ್ಲೇ ಬಿಟ್ ಕಾಯಿನ್ ಹ್ಯಾಕಿಂಗ್ ನಡೆದಿದೆ. ಬಿಜೆಪಿ ಸರ್ಕಾರ ಅದರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ನಡೆಸಿದೆ. ನ್ಯಾಯಾಲಯಕ್ಕೆ ಆರೋಪಪಟ್ಟಿಯನ್ನೂ ಸಲ್ಲಿಸಲಾಗಿದೆ. ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಬೇಕಿರುವ ಮೊಹಮ್ಮದ್ ನಲಪಾಡ್ ಈ ಕೃತ್ಯದಲ್ಲಿ ಭಾಗಿಯಾಗಿರುವ ಆರೋಪವಿದೆ. ಯುವ ಕಾಂಗ್ರೆಸ್‌ನ ಹಾಲಿ ಅಧ್ಯಕ್ಷ ರಕ್ಷಾ ರಾಮಯ್ಯ ಮತ್ತು ನಲಪಾಡ್ ನಡುವಿನ ಅಂತಃಕಲಹವೇ ಈಗ ಪ್ರಕರಣ ಚರ್ಚೆಗೆ ಬರಲು ಕಾರಣ ಎಂದು ಅಶೋಕ ಹೇಳಿದರು.

'ಆರೋಪಗಳಿಗೆಲ್ಲ ಉತ್ತರಿಸಲಾಗದು'

'ಕಂದಾಯ ಸಚಿವ ಆರ್. ಅಶೋಕ ಅವರ ಬೇನಾಮಿ ವ್ಯಕ್ತಿಯಾಗಿರುವ ಲೋಕನಾಥ್ ಅಲಿಯಾಸ್ ಲೋಕಿ ಎಂಬುವವರು ಬಿಟ್ ಕಾಯಿನ್ ಹ್ಯಾಕಿಂಗ್ ಹಗರಣದಲ್ಲಿದ್ದಾರೆ' ಎಂದು ಸಚಿನ್ ಮಾಮನಿ ಎಂಬುವವರು ಪ್ರಧಾನಿ ನರೇಂದ್ರ ಮೋದಿಯವರಿಗೆ ಬರೆದ ಪತ್ರದಲ್ಲಿ ಮಾಡಿರುವ ಆರೋಪಕ್ಕೆ ಪ್ರತಿಕ್ರಿಯಿಸಲು ಅಶೋಕ ನಿರಾಕರಿಸದರು.

ಈ ಕುರಿತ ಪ್ರಶ್ನೆಗೆ, 'ಕಾಂಗ್ರೆಸ್‌ನವರು ಸೇರಿದಂತೆ ದಿನಕ್ಕೊಬ್ಬರು ಏನೇನೋ ಹೇಳುತ್ತಾರೆ. ಎಲ್ಲದಕ್ಕೂ ಉತ್ತರ ನೀಡುವುದಕ್ಕಾಗುತ್ತದೆಯೆ' ಎಂದು ಮರು ಪ್ರಶ್ನೆ ಹಾಕಿದರು.

> **ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮರ್ಥ ಆಡಳಿತ ನೀಡುತ್ತಿದ್ದಾರೆ. ಅದನ್ನು ಸಹಿಸದ ಕಾಂಗ್ರೆಸ್ ಕೃಪಾಪೋಷಿತ ನಾಟಕ ಮಂಡಳಿ ಬಿಟ್ ಕಾಯಿನ್ ಹಗರಣ ಎಂಬ ಕತೆ ಹೇಳುತ್ತಿದೆ.**
> **ವಿ. ಸೋಮಣ್ಣ,** ವಸತಿ ಸಚಿವ

> **ಬಿಟ್ ಕಾಯಿನ್ ಹಗರಣ ಕಾಂಗ್ರೆಸ್ ಸರ್ಕಾರದ ಅವಧಿಯ ಪಾಪದ ಕೂಸು. ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲು ಬಿಜೆಪಿ ಸರ್ಕಾರ ಸಿದ್ಧವಿದೆ.**
> **ಕೆ. ಗೋಪಾಲಯ್ಯ**
> ಅಬಕಾರಿ ಸಚಿವ

2016ರಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದ ಅವಧಿಯಲ್ಲೇ ಯು.ಬಿ. ಸಿಟಿಯಲ್ಲಿ ನಡೆದಿದ್ದ ಹಲ್ಲೆ ಪ್ರಕರಣದಲ್ಲಿ ಹ್ಯಾಕರ್ ಶ್ರೀಕೃಷ್ಣ ಆರೋಪಿಯಾಗಿದ್ದ. ಆಗ ಆತನನ್ನು ಬಂಧಿಸಿರಲಿಲ್ಲ. ಬಂಧನ ಆಗಿದ್ದರೆ ಆಗಲೇ ಹ್ಯಾಕಿಂಗ್ ಪ್ರಕರಣಗಳೂ ಬಯಲಿಗೆ ಬರುತ್ತಿದ್ದವು. ಮೂರು ತಿಂಗಳವರೆಗೂ ಆ ಪ್ರಕರಣದಲ್ಲಿ ಶ್ರೀಕಿಯನ್ನು ಏಕೆ ಬಂಧಿಸಿರಲಿಲ್ಲ? ಎಂಬ ಪ್ರಶ್ನೆಗಳಿಗೆ ಕಾಂಗ್ರೆಸ್ ಮೊದಲು ಉತ್ತರಿಸಲಿ ಎಂದರು.

ಹ್ಯಾಕಿಂಗ್‌ಗೆ ಸಂಬಂಧಿಸಿದ ಪ್ರಕರಣದ ತನಿಖೆಯಲ್ಲಿ ಪೊಲೀಸರಿಂದ ಯಾವ ಲೋಪವೂ ಆಗಿಲ್ಲ. ಪ್ರಕರಣ ಅಂತರರಾಷ್ಟ್ರೀಯ ಮಟ್ಟಕ್ಕೆ ವ್ಯಾಪಿಸಿರುವುದು ತಿಳಿಯುತ್ತಿದ್ದಂತೆಯೇ ಸಿಬಿಐನ ಇಂಟರ್‌ಪೋಲ್ ಘಟಕಕ್ಕೆ ಮಾಹಿತಿ ನೀಡಲಾಗಿತ್ತು. ಜಾರಿ ನಿರ್ದೇಶನಾಲಯಕ್ಕೂ ದಾಖಲೆ ಒದಗಿಸಲಾಗಿತ್ತು. ಕಾಂಗ್ರೆಸ್ ರಾಜಕೀಯ ಕಾರಣಕ್ಕಾಗಿ ಪೊಲೀಸರ ವಿರುದ್ಧ ಆರೋಪ ಮಾಡುತ್ತಿದೆ ಎಂದು ದೂರಿದರು.

ಸುಪ್ರೀಂಕೋರ್ಟ್ ಹಾಲಿ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸಬೇಕೆಂಬ ಕಾಂಗ್ರೆಸ್ ಆಗ್ರಹ ಕುರಿತು ಕೇಳಿದಾಗ, 'ತನಿಖೆ ಹೇಗೆ ನಡೆಯಬೇಕು? ಯಾರು ತನಿಖೆ ನಡೆಸಬೇಕು? ಎಂಬುದನ್ನು ಹೇಳಲು ಅವರು ಯಾರು' ಎಂದು ಅಶೋಕ ಉತ್ತರಿಸಿದರು.

> **ಬಿಟ್ ಕಾಯಿನ್ ವಿಚಾರದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷರಿಗೆ ಸಾಕಷ್ಟು ಮಾಹಿತಿ ಇರುತ್ತದೆ ಎಂಬ ಖಾತ್ರಿಯಿದೆ. ಅವರು ಮೌನ ಮುರಿಯದಿದ್ದರೆ 'ನಿಗೂಢ ಮೌನ'ದ ಬಗ್ಗೆ ಜನ ತಪ್ಪು ತಿಳಿಯಬಹುದು.**
> **ಪ್ರಿಯಾಂಕ್ ಖರ್ಗೆ, ಕಾಂಗ್ರೆಸ್ ಶಾಸಕ**

ಶ್ರೀಕಿಗೆ ರಕ್ಷಣೆ ಕೊಡಿ: ಸಿದ್ದರಾಮಯ್ಯ

ಒಂದನೇ ಪುಟದಿಂದ...

ಜಗತ್ತಿನ ಗಮನ ಸೆಳೆದಿರುವ ಈ ಹಗರಣದಲ್ಲಿ ಬಹಳಷ್ಟು ಪ್ರಭಾವಶಾಲಿಗಳು ಶಾಮೀಲಾಗಿರುವ ಅನುಮಾನವಿದೆ. ಈ ಹಗರಣ ಸ್ಫೋಟಗೊಂಡ ನಂತರ ಸಣ್ಣ ಪ್ರಮಾಣದ ಆರೋಪದ ಮೇಲೆ ನಾಟಕೀಯ ರೀತಿಯಲ್ಲಿ ಶ್ರೀಕೃಷ್ಣನ ಬಂಧನ ನಡೆದಿದೆ. ಅಷ್ಟೇ ನಾಟಕೀಯವಾಗಿ ಜಾಮೀನಿನ ಮೇಲೆ ಬಿಡುಗಡೆಯೂ ಆಗಿದೆ. ಇದು ಪೊಲೀಸರ ನಡವಳಿಕೆಗಳ ಬಗ್ಗೆ ಸಂಶಯಕ್ಕೆ ಕಾರಣವಾಗಿದೆ ಎಂದಿದ್ದಾರೆ. ಶ್ರೀಕಿ ಮಾದಕವಸ್ತು ಸೇವನೆ ಚಟ ಹೊಂದಿದ್ದ ಎಂದು ಪೊಲೀಸರು ಆರೋಪಪಟ್ಟಿಯಲ್ಲಿ ತಿಳಿಸಿದ್ದರು. ಈಗಲೂ ಆತ ಮಾದಕವಸ್ತು ವ್ಯಸನಿಯೆ? ಪೊಲೀಸರು ಈ ಬಾರಿ ಬಂಧಿಸಿದ್ದಾಗ ಮಾದಕವಸ್ತು ಪರೀಕ್ಷೆ ನಡೆಸಲಾಗಿದೆಯೆ? ಮಾದಕವಸ್ತು ಸೇವನೆಯ ವ್ಯಸನಿ ಎಂದು ದೃಢಪಟ್ಟ ಬಳಿಕ ಸೂಕ್ತ ಚಿಕಿತ್ಸೆ ನೀಡಲಾಗಿದೆಯೆ ಎಂಬುದನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.

'ನನಗೆ ನೋಟಿಸ್ ಕೊಟ್ಟರೆ ಏನಾಗುತ್ತದೆ?'

ಒಂದನೇ ಪುಟದಿಂದ...

'ಕುಮಾರಸ್ವಾಮಿ ಅವರಿಗೆ ಇ.ಡಿ ಅಧಿಕಾರಿಗಳು ನೋಟಿಸ್ ನೀಡಿ, ಮಾಹಿತಿ ಪಡೆಯಬೇಕು' ಎಂಬ ಸಂಸದ ಪ್ರತಾಪಸಿಂಹ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಎರಡು ಬಾರಿ ಸಂಸದರಾದವರು ಜವಾಬ್ದಾರಿಯಿಂದ ಮಾತನಾಡಬೇಕು. ನನಗೆ ನೋಟಿಸ್ ಕೊಟ್ಟು ಏನು ಮಾಡುತ್ತಾರೆ' ಎಂದರು.

ದೇಶದಲ್ಲಿ ನಡೆದಿರುವ ದೊಡ್ಡ ಹಗರಣಗಳು ಏನಾದವು? ಯಾವುದಾದರೂ ಹಗರಣದ ತನಿಖೆಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತಾರಾ? ಸಣ್ಣವರಿಗಷ್ಟೇ ಶಿಕ್ಷೆಯಾಗುತ್ತದೆ ಎಂದು ಹೇಳಿದರು.

ಅಭಾವ ಸೃಷ್ಟಿಸಿದ ಮರಳು ಮಾಫಿಯಾ

ಒಂದನೇ ಪುಟದಿಂದ...

ತುಮಕೂರು, ಚಿಕ್ಕಬಳ್ಳಾಪುರ ಭಾಗದಲ್ಲೂ ಎಂ– ಸ್ಯಾಂಡ್ ಬೇಡಿಕೆ ಹೆಚ್ಚುತ್ತಿದೆ. ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಉತ್ತರ ಕರ್ನಾಟಕ ಭಾಗದಲ್ಲಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ನದಿ ಪಾತ್ರ ಅಗಲವಾಗಿದ್ದು, ಅಲ್ಲಿ ಮರಳು ತೆಗೆಯುತ್ತಾರೆ. ಕರಾವಳಿಯ ಮೂರು ಜಿಲ್ಲೆಗಳ ಜನರು ನದಿ ಮರಳು ನಂಬಿದ್ದಾರೆ.

ಮರಳು ಆಮದಿನಿಂದ ಕೈಸುಟ್ಟುಕೊಂಡ ಕಂಪನಿಗಳು: ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್) ಮತ್ತು ಎಂಟು ಖಾಸಗಿ ಕಂಪನಿಗಳು ವಿದೇಶದಿಂದ ಮರಳು ಆಮದು ಪರವಾನಗಿ ಪಡೆದುಕೊಂಡಿವೆ. ಈ ಪೈಕಿ, ಎಂಎಸ್‌ಐಎಲ್, ಚೆನ್ನೈನ ಇಂಟೆಗ್ರೇಟೆಡ್ ಸರ್ವೀಸ್ ಪಾಯಿಂಟ್, ಟಿಎಂಟಿ ಮತ್ತು ಆಕಾರ್ ಎಂಟರ್‌ಪ್ರೈಸಸ್ ಕಂಪನಿಗಳು ಮಾತ್ರ ಆಮದು ಮಾಡಿವೆ. ಮಲೇಷ್ಯಾದಿಂದ ಎಂಎಸ್‌ಐಎಲ್ ಎರಡು ಬಾರಿ ಒಟ್ಟು 1.03 ಲಕ್ಷ ಟನ್ ಆಮದು ಮಾಡಿಕೊಂಡಿದೆ. ಅದರಲ್ಲಿ 14,750 ಟನ್ ಮಾರಾಟವಾಗಿದೆ. ಉಳಿದ 89 ಸಾವಿರ ಟನ್ ಕೃಷ್ಣಪಟ್ಟಣಂ ಬಂದರಿನಲ್ಲಿದೆ. ಮರಳು ಆಮದಿಗೆ ಎಂಎಸ್‌ಐಎಲ್ ₹28 ಕೋಟಿ ವ್ಯಯ ಮಾಡಿದೆ. ಅದರ ಮಾರಾಟದಿಂದ ನಿರ್ವಹಣಾ ಶುಲ್ಕ ಕೇವಲ ₹67.97 ಲಕ್ಷ ಸಂಗ್ರಹವಾಗಿದೆ!

'ಆಂಧ್ರಪ್ರದೇಶದ ಕೃಷ್ಣಪಟ್ಟಣಂ ಬಂದರಿಗೆ ಮರಳು ತರಲು ಪ್ರತಿ ಟನ್ ಮರಳಿಗೆ ₹2,300 ವೆಚ್ಚವಾಗಿದೆ. ಸಾಗಣೆ ವೆಚ್ಚ ₹1,100, ಜಿಎಸ್‌ಟಿ ಶೇ 5, ಇತರ ತೆರಿಗೆ ಸೇರಿ ಟನ್‌ಗೆ ₹1,000ರಿಂದ ₹1,500 ಲಾಭ ಇಟ್ಟುಕೊಂಡು ಬೆಂಗಳೂರಿನಲ್ಲಿ ಟನ್‌ಗೆ ₹4,000 ನಿಗದಿಪಡಿಸಲಾಗಿತ್ತು. ಬೇಡಿಕೆ ಕುಸಿದಾಗ ಟನ್‌ಗೆ ₹2,700ರ ದರದಲ್ಲಿ ಮಾರಾಟ ಮಾಡಲಾಗಿದೆ. ಕೋವಿಡ್‌ನಿಂದ ನಿರ್ಮಾಣ ಕಾಮಗಾರಿ ಸ್ಥಗಿತಗೊಂಡಿದ್ದರಿಂದ ಬೇಡಿಕೆ ಇಲ್ಲದೆ ಮರಳು ಉಳಿದಿದೆ' ಎಂದು ಎಂಎಸ್‌ಐಎಲ್ ಅಧಿಕಾರಿಯೊಬ್ಬರು ಹೇಳಿದರು.

ಕ್ರಿಪ್ಟೋಕರೆನ್ಸಿ ನಿಷೇಧ: ಸ್ಥಾಯಿ ಸಮಿತಿ ವಿರೋಧ

ನವದೆಹಲಿ (ಪಿಟಿಐ): ಕ್ರಿಪ್ಟೋಕರೆನ್ಸಿ ನಿಷೇಧಿಸುವ ಬದಲಾಗಿ, ಅದಕ್ಕೆ ನಿಯಂತ್ರಣ ಕ್ರಮಗಳನ್ನು ಜಾರಿಗೊಳಿಸಬೇಕು ಎಂದು ಹಣಕಾಸು ಕುರಿತ ಸಂಸದೀಯ ಸ್ಥಾಯಿ ಸಮಿತಿಯ ಹಲವು ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ. ಬಿಜೆಪಿ ಮುಖಂಡ ಜಯಂತ್ ಸಿನ್ಹಾ ನೇತೃತ್ವದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಕ್ರಿಪ್ಟೋಕರೆನ್ಸಿ ವಹಿವಾಟಿನ ಸಾಧಕ–ಬಾಧಕಗಳ ಕುರಿತು ಚರ್ಚೆ ನಡೆಯಿತು.

ಕ್ರಿಪ್ಟೋಕರೆನ್ಸಿ ಬಗ್ಗೆ ದೇಶದಲ್ಲಿ ದೊಡ್ಡ ಚರ್ಚೆಯಾಗುತ್ತಿರುವ ಸಮಯದಲ್ಲಿ ಈ ಸಭೆ ಮಹತ್ವ ಪಡೆದುಕೊಂಡಿದೆ. ದೇಶದಲ್ಲಿ ಕ್ರಿಪ್ಟೋಕರೆನ್ಸಿ ಬಳಕೆಗೆ ನಿರ್ದಿಷ್ಟ ನಿಯಂತ್ರಣ ಕ್ರಮಗಳು ಅಥವಾ ನಿಷೇಧ ಆದೇಶಗಳು ಜಾರಿಯಲ್ಲಿಲ್ಲ.

ಕ್ರಿಪ್ಟೋ ವಿನಿಮಯ ಕೇಂದ್ರಗಳು, ಬ್ಲಾಕ್‌ಚೈನ್ ಮತ್ತು ಕ್ರಿಪ್ಟೋ ಅಸೆಟ್ಸ್ ಕೌನ್ಸಿಲ್ (ಬಿಎಸಿಸಿ), ಉದ್ಯಮ ಸಂಸ್ಥೆಗಳು ಮತ್ತು ಶಿಕ್ಷಣ ತಜ್ಞರು ಮತ್ತು ಇದಕ್ಕೆ ಸಂಬಂಧಪಟ್ಟವರು ಸ್ಥಾಯಿಸಮಿತಿಯ ಮುಂದೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಸಚಿವಾಲಯಗಳ ಹಿರಿಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ ಬೆನ್ನಲ್ಲೇ ಈ ಸಭೆ ನಡೆದಿದೆ. ಸ್ಥಾಯಿ ಸಮಿತಿಯ ಸಭೆಯಲ್ಲಿ ಕ್ರಿಪ್ಟೋಕರೆನ್ಸಿಯ ಬಗ್ಗೆ ಚರ್ಚೆ ಆಗಿದ್ದು ಇದೇ ಮೊದಲು.

ಕ್ರಿಪ್ಟೋಕರೆನ್ಸಿ ನಿಷೇಧದಲ್ಲಿ ಹಲವು ಸವಾಲುಗಳಿವೆ ಎಂದು ಸಮಿತಿಯಲ್ಲಿದ್ದ ಕಾಂಗ್ರೆಸ್ ಮುಖಂಡರು ಅಭಿಪ್ರಾಯಪಟ್ಟಿದ್ದಾರೆ. ಕ್ರಿಪ್ಟೋವನ್ನು ಹೇಗೆ ನಿಯಂತ್ರಣಕ್ಕೆ ತರಲು ಸಾಧ್ಯ ಎಂದು ಸದಸ್ಯರೊಬ್ಬರು ಅಚ್ಚರಿ ವ್ಯಕ್ತಡಿಸಿದರು. ಇದು ಭಯೋತ್ಪಾದನಾ ಚಟುವಟಿಕೆಗಳಿಗೆ ಹಣಕಾಸು ನೆರವು ನೀಡಲು ಬಳಕೆಯಾಗುವ ಅಪಾಯವೂ ಇದೆ ಎಂದು ಕೆಲವು ಸದಸ್ಯರು ಆತಂಕ ವ್ಯಕ್ತಪಡಿಸಿದರು.

ಕ್ರಿಪ್ಟೋಕರೆನ್ಸಿ ಕುರಿತ ಮಸೂದೆಯು ಮುಂಬರುವ ಸಂಸತ್ ಅಧಿವೇಶನದಲ್ಲಿ ಮಂಡನೆಯಾಗುವ ಸಾಧ್ಯತೆಯಿದೆ.

ರೈಲುಗಳ ಸಂಚಾರ ಪುನರಾರಂಭ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ರೈಲ್ವೆ ಇಲಾಖೆಯು ಕೋವಿಡ್ ಸಂದರ್ಭದಲ್ಲಿ ದೇಶದಲ್ಲಿ ಸಂಚಾರ ಸ್ಥಗಿತಗೊಳಿಸಿದ್ದ ಎಲ್ಲ ರೈಲುಗಳ ಸಂಚಾರವನ್ನು ಪುನರಾರಂಭಿಸಿದೆ.

ಆಗ ನಿಗದಿಪಡಿಸಲಾಗಿದ್ದ ವಿಶೇಷ ದರ ರದ್ದುಪಡಿಸಲಾಗಿದ್ದು, ಹಿಂದಿನ ದರ ಹಾಗೂ ಹಿಂದೆ ಇದ್ದ ರೈಲುಗಳ ನಂಬರ್‌ನಲ್ಲಿಯೇ ಸಂಚಾರ ಆರಂಭಿಸಲಿವೆ ಎಂದು ನೈರುತ್ಯ ರೈಲ್ವೆ ವಲಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ ಹೆಗಡೆ ತಿಳಿಸಿದ್ದಾರೆ.

ಸೋಮವಾರ ಮಧ್ಯರಾತ್ರಿಯಿಂದ ನೈರುತ್ಯ, ಕೊಂಕಣ ರೈಲ್ವೆ ವಲಯದಲ್ಲಿ ಹಲವು ರೈಲುಗಳು ಸಂಚಾರ ಆರಂಭಿಸಲಿವೆ. ನ.18ರೊಳಗೆ ಎಲ್ಲ ರೈಲುಗಳು ಸಂಚಾರ ಆರಂಭಿಸಲಿವೆ. ಪ್ರಯಾಣಿಕರು ಕೋವಿಡ್ ನಿಯಮಗಳನ್ನು ಪಾಲಿಸಬೇಕು ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ಕನ್ನಡ ಕಡ್ಡಾಯ: ಕೇಂದ್ರದ ನಿಲುವು ಕೇಳಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪದವಿ ಕಾಲೇಜುಗಳಲ್ಲಿ ಕನ್ನಡ ಭಾಷೆ ಕಲಿಕೆ ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಹೊರಡಿಸಿರುವ ಅಧಿಸೂಚನೆಗೆ ಸಂಬಂಧಿಸಿದಂತೆ ಯಾವ ನಿಲುವು ತಳೆದಿದ್ದೀರಿ ಎಂಬುದನ್ನು ತಿಳಿಸಿ' ಎಂದು ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ.

ಪದವಿ ಕಾಲೇಜುಗಳಲ್ಲಿ ಕನ್ನಡ ಭಾಷೆ ಕಲಿಕೆ ಕಡ್ಡಾಯ ಮಾಡಿರುವ ರಾಜ್ಯ ಸರ್ಕಾರದ ಆದೇಶ ಪ್ರಶ್ನಿಸಿ, 'ಸಂಸ್ಕೃತ ಭಾರತಿ ಟ್ರಸ್ಟ್', 'ಹಯಗ್ರೀವ ಟ್ರಸ್ಟ್', 'ವ್ಯೋಮಾ ಲಿಂಗ್ವಿಸ್ಟಿಕ್ ಲ್ಯಾಬ್ ಫೌಂಡೇಷನ್' ಹಾಗೂ 'ಸಂಸ್ಕೃತ ಪ್ರಾಧ್ಯಾಪಕ ಸಂಘ'ಗಳು ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಿರಿಯ ವಕೀಲ ಎಸ್.ಎಸ್.ನಾಗಾನಂದ ಅವರು, 'ಕನ್ನಡ ಭಾಷೆ ಕಲಿಕೆಯನ್ನು ಕಡ್ಡಾಯ ಮಾಡಿರುವ ರಾಜ್ಯ ಸರ್ಕಾರದ ಕ್ರಮ ಸುಪ್ರೀಂ ಕೋರ್ಟ್‌ನ ಪೂರ್ವ ನಿದರ್ಶನಗಳಿಗೆ ಮತ್ತು ಸಂವಿಧಾನಕ್ಕೆ ವಿರುದ್ಧವಾಗಿದೆ' ಎಂದು ಪುನರುಚ್ಚರಿಸಿದರು.



'ಹೊರ ರಾಜ್ಯಗಳ ವಿದ್ಯಾರ್ಥಿಗಳಿಗೆ ಕನ್ನಡ ಕಡ್ಡಾಯ ಮಾಡಿರುವುದರಿಂದ ಸಾಕಷ್ಟು ತೊಂದರೆಯಾಗುತ್ತಿದೆ. ಯಾವ ಭಾಷೆ ಕಲಿಯಬೇಕು ಎಂಬುದು ವಿದ್ಯಾರ್ಥಿಯ ಇಚ್ಛೆಗೆ ಬಿಟ್ಟ ವಿಚಾರ. ಈ ಕುರಿತು ವಿದ್ಯಾರ್ಥಿಗಳು ಪ್ರಾಂಶುಪಾಲರಿಗೆ ಪತ್ರ ಬರೆದಿದ್ದಾರೆ' ಎಂದು ವಿವರಿಸಿದರು.

'ಭಾಷೆಯನ್ನು ಬಲವಂತವಾಗಿ ಕಲಿಸಬಾರದು. ನಾನು ಕನ್ನಡಿಗ, ಕನ್ನಡವನ್ನು ಪ್ರೀತಿಸುತ್ತೇನೆ. ಅಂದಮಾತ್ರಕ್ಕೆ ಹೊರಗಿನಿಂದ ಬಂದವರಿಗೂ ಕನ್ನಡ ಕಲಿಯುವಂತೆ ಒತ್ತಾಯಿಸುವುದು ಸರಿ ಎನಿಸುವುದಿಲ್ಲ. ಅಂತೆಯೇ, ಉನ್ನತ ಶಿಕ್ಷಣದಲ್ಲಿ ಕನ್ನಡ ಕಲಿಸುವುದು ಅಷ್ಟು ಸೂಕ್ತವೂ ಅಲ್ಲ. ಆದ್ದರಿಂದ, ಸರ್ಕಾರದ ಆದೇಶಕ್ಕೆ ತಡೆ ನೀಡಬೇಕು' ಎಂದು ಕೋರಿದರು.

ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, 'ಸರ್ಕಾರದ ಈ ಆದೇಶ ರಾಷ್ಟ್ರೀಯ ಶಿಕ್ಷಣ ನೀತಿಗೆ ವಿರುದ್ಧವಾಗಿಲ್ಲ. ವಿದ್ಯಾರ್ಥಿಗಳಿಗೆ ಕನ್ನಡವನ್ನು ಒಂದು ಭಾಷೆಯಾಗಿ ಆಯ್ಕೆ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ. ಕನ್ನಡ ಗೊತ್ತಿಲ್ಲದವರಿಗೆ ಸರಳವಾಗಿ ಕನ್ನಡ ಕಲಿಸಲು ಪ್ರತ್ಯೇಕ ಪಠ್ಯವನ್ನೂ ರೂಪಿಸಲಾಗಿದೆ. ಮಹಾರಾಷ್ಟ್ರದಲ್ಲಿ ಮರಾಠಿ ಭಾಷೆ ಕಲಿಸುವ ವಿಚಾರದಲ್ಲಿ ಸುಪ್ರೀಂಕೋರ್ಟ್ ಮಧ್ಯ ಪ್ರವೇಶಿಸಲು ನಿರಾಕರಿಸಿದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ಕನ್ನಡ ಕಲಿಕೆ ಪ್ರಶ್ನಿಸಿ ಯಾವುದೇ ವಿದ್ಯಾರ್ಥಿ ಈ ಅರ್ಜಿ ಸಲ್ಲಿಸಿಲ್ಲ. ಇದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲ. ಬದಲಿಗೆ, ವೈಯಕ್ತಿಕ ಹಿತಾಸಕ್ತಿ ಅರ್ಜಿ ಆದ್ದರಿಂದ ಇದನ್ನು ವಜಾಗೊಳಿಸಬೇಕು' ಎಂದು ಪ್ರತಿಪಾದಿಸಿದರು.

ಉಭಯ ಬಣಗಳ ವಾದ–ಪ್ರತಿವಾದ ಆಲಿಸಿದ ಪೀಠ, 'ಕನ್ನಡ ಕಲಿಕೆ ಪ್ರೋತ್ಸಾಹಿಸುವುದೇನೋ ಸರಿ. ಆದರೆ, ಕಡ್ಡಾಯ ಮಾಡುವುದು ಎಷ್ಟು ಸರಿ' ಎಂದು ಪ್ರಶ್ನಿಸಿತಲ್ಲದೆ, ಈ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರವು ತನ್ನ ನಿಲುವು ಸ್ಪಷ್ಟಪಡಿಸುವಂತೆ ಸೂಚಿಸಿ ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿತು.

ದಿನಕ್ಕೆ ₹85.24 ಲಕ್ಷ ದುಡಿಯುತ್ತಿದ್ದ ತಂಡ

ಶ್ರೀಕಿಯ 'ಬಿಟ್ ಕಾಯಿನ್' ಕಳವು!

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಪಿಯು ಕಲಿಯುವಾಗಲೇ 'ಬಿಟ್ ಕಾಯಿನ್ (ಬಿಟಿಸಿ)' ಕುರಿತು ತಿಳಿದುಕೊಂಡಿದ್ದ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ, ಬಿ.ಎಸ್ಸಿ ವ್ಯಾಸಂಗಕ್ಕಾಗಿ ನೆದರ್ಲೆಂಡ್ಸ್‌ಗೆ ಹೋಗಿದ್ದಾಗ 2014ರಲ್ಲಿ ₹22.31 ಕೋಟಿ ಮೌಲ್ಯದ ಬಿಟ್ ಕಾಯಿನ್‌ಗಳನ್ನು (ನ. 15ರ ಮಾರುಕಟ್ಟೆ ಮೌಲ್ಯ ₹95.75 ಕೋಟಿ) ಗಳಿಸಿದ್ದ. ಬಿಟಿಸಿ ವ್ಯವಹಾರದ ಅತ್ಯಗತ್ಯ ಮಾಹಿತಿಯುಳ್ಳ ಲ್ಯಾಪ್‌ಟಾಪ್ ಕಳವಾಗಿದ್ದರಿಂದ, ಎಲ್ಲ ಬಿಟ್ ಕಾಯಿನ್‌ಗಳನ್ನು ಆತ ಕಳೆದುಕೊಂಡಿದ್ದ.

ಈ ಸಂಗತಿಯನ್ನು ಬೆಂಗಳೂರು ಸಿಸಿಬಿ ಪೊಲೀಸರು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದಾರೆ. ಬಿಟಿಟಿ ಮಾಹಿತಿಯುಳ್ಳ ಲ್ಯಾಪ್‌ಟಾಪ್‌ನ್ನು ತನ್ನ ಕಾರು ಚಾಲಕ ಕಳವು ಮಾಡಿದ್ದ ಘಟನೆ ಬಗ್ಗೆ ಶ್ರೀಕೃಷ್ಣ ಹೇಳಿಕೆ ನೀಡಿದ್ದು, ಅದರ ವಿವರವನ್ನು ಆರೋಪ ಪಟ್ಟಿಯೊಂದಿಗೆ ಲಗತ್ತಿಸಲಾಗಿದೆ.

'ಐಷಾರಾಮಿ ಜೀವನ ಬಯಸುತ್ತಿದ್ದ ಶ್ರೀಕೃಷ್ಣ, ಅದಕ್ಕೆ ಹಣ ಹೊಂದಿಸಲು ಯತ್ನಿಸುತ್ತಿದ್ದ. ಹೀಗಾಗಿ, ಹಣ ವಿನಿಮಯ ಏಜೆನ್ಸಿ ಹಾಗೂ ಜಾಲತಾಣಗಳನ್ನು ಹ್ಯಾಕಿಂಗ್ ಮಾಡುತ್ತಿದ್ದ. ದತ್ತಾಂಶ ಅಳಿಸುವುದಾಗಿ ಬೆದರಿಸಿ ಬಿಟ್ ಕಾಯಿನ್ ರೂಪದಲ್ಲಿ ಹಣ ಸುಲಿಗೆ ಮಾಡುತ್ತಿದ್ದ.'

'ನೆದರ್ಲೆಂಡ್ಸ್‌ಗೆ ಹೋದಾಗ ಆತನಿಗೆ, ಟಿಮ್ ಕಮೇರ್ ಹಾಗೂ ಇಡು ಡ್ರೈಸ್ಸೆನ್ ಅವರ ಸ್ನೇಹ ಬೆಳೆದಿತ್ತು. ಮೂವರು ಸೇರಿಕೊಂಡು ಅರೆಕಾಲಿಕವಾಗಿ ಬಿಟ್ ಕಾಯಿನ್ ವಿನಿಮಯ ಕೆಲಸಕ್ಕೆ ಕೈ ಜೋಡಿಸಿದ್ದರು. ಸ್ಥಳೀಯ ಏಜೆನ್ಸಿಯೊಂದರ ಜೊತೆ ಸೇರಿ ನೆದರ್ಲೆಂಡ್ ಹಾಗೂ ಅಕ್ಕ–ಪಕ್ಕದ ದೇಶಗಳಿಗೆ ಸುತ್ತಾಡುತ್ತಿದ್ದ ಮೂವರು, ಬಿಟ್ ಕಾಯಿನ್ ಖರೀದಿ ಹಾಗೂ ಮಾರಾಟ ಮಾಡಿಸುತ್ತಿದ್ದರು. ಅದಕ್ಕೆ ಉತ್ತಮ ಕಮಿಷನ್ ಬರುತ್ತಿತ್ತು. ದಿನಕ್ಕೆ ₹ 85.24 ಲಕ್ಷ ದುಡಿಯುತ್ತಿದ್ದರು. ಅದೇ ಹಣವನ್ನು ಶ್ರೀಕೃಷ್ಣ, ಬಿಟ್ ಕಾಯಿನ್‌ಗೆ ಬದಲಾಯಿಸಿಟ್ಟುಕೊಂಡಿದ್ದ. ಅದರ ಪ್ರೈವೇಟ್ ಕೀ, ಸೆಕ್ಯುರಿಟಿ ಕೀ ಹಾಗೂ ಇತರೆ ಮಾಹಿತಿಯನ್ನು ಲ್ಯಾಪ್‌ಟಾಪ್‌ನಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದ' ಎಂಬ ಮಾಹಿತಿ ಪಟ್ಟಿಯಲ್ಲಿದೆ.

ಲ್ಯಾಪ್‌ಟಾಪ್ ಕದ್ದಿದ್ದ ಕಾರು ಚಾಲಕ: 'ಹಣ ವಿನಿಮಯ ಕೆಲಸಕ್ಕಾಗಿ ಸುತ್ತಾಡಲು ಶ್ರೀಕೃಷ್ಣ, ಸ್ನೇಹಿತರೊಬ್ಬರ ಕಾರು ಬಳಸುತ್ತಿದ್ದ. ಆತನಿಗೆ ಕಾರು ಚಾಲಕ ವಾಲಿದ್ ಅತ್ತಾದೌಲ್ ಪರಿಚಯವಾಗಿತ್ತು. ಇಬ್ಬರೂ ಹಲವು ನಗರ, ದೇಶಗಳಲ್ಲಿ ಸುತ್ತಾಡಿದ್ದರು. ಇಬ್ಬರ ನಡುವೆ ಆತ್ಮೀಯತೆ ಬೆಳೆದಿತ್ತು.'

'ಶ್ರೀಕೃಷ್ಣ ಒಂದು ದಿನ ಮನೆಯ ಕಾರಿನಲ್ಲಿ ಕೀ ಮರೆತು ಹೋಗಿದ್ದ. ಅದೇ ಕೀ ವಾಲಿದ್‌ಗೆ ಸಿಕ್ಕಿತ್ತು. ಕೀ ಬಳಸಿ ಶ್ರೀಕೃಷ್ಣನಿಗೆ ಗೊತ್ತಿಲ್ಲದಂತೆ ಮನೆಗೆ ನುಗ್ಗಿದ್ದ ವಾಲಿದ್, ಪಾಸ್‌ಪೋರ್ಟ್, 2 ಲ್ಯಾಪ್‌ಟಾಪ್, ನಗದು, ಹಾರ್ಡ್‌ಡಿಸ್ಕ್, 2 ಕ್ಯಾಮೆರಾ ಕದ್ದೊಯ್ದಿದ್ದ' ಎಂಬ ಅಂಶ ಪಟ್ಟಿಯಲ್ಲಿದೆ.

'ಕಳ್ಳತನ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದ ನೆದರ್ಲೆಂಡ್ಸ್ ಪೊಲೀಸರು, ವಾಲಿದ್‌ನನ್ನು ಬಂಧಿಸಿದ್ದರು. ಆದರೆ, ಆತನಿಂದ ಲ್ಯಾಪ್‌ಟಾಪ್ ವಾಪಸು ಸಿಕ್ಕಿರಲಿಲ್ಲ. ಆ ಲ್ಯಾಪ್‌ಟಾಪ್‌ನಲ್ಲಿ ₹22.31 ಕೋಟಿ ಮೌಲ್ಯದ ಹಣದ ಬಿಟಿಸಿ ದಾಖಲೆಗಳು ಇದ್ದವು. ಲ್ಯಾಪ್‌ಟಾಪ್ ಕಳವಾಗಿದ್ದರಿಂದ ಬಿಟ್ ಕಾಯಿನ್‌ಗಳು ಶ್ರೀಕೃಷ್ಣನಿಗೆ ವಾಪಸು ಸಿಗಲೇ ಇಲ್ಲ' ಎಂಬ ಮಾಹಿತಿಯೂ ಇದೆ.

'ಬಿಟ್ ಕಾಯಿನ್ ಯಾರಿಗೆಷ್ಟು ಪಾಲು'

'ಜಾಲತಾಣದಲ್ಲೇ ವ್ಯವಹಾರ ತರಬೇತಿ ನೀಡುತ್ತಿದ್ದ ಶ್ರೀಕಿ'

'ನೆದರ್‌ಲೆಂಡ್ಸ್ ಏಜೆನ್ಸಿಯೊಂದು ಬಿಟ್ ಕಾಯಿನ್ ಮಾರಾಟಗಾರರು, ಖರೀದಿದಾರರನ್ನು ಜಾಲತಾಣಗಳ ಮೂಲಕ ಸಂಪರ್ಕಿಸುತ್ತಿತ್ತು. ಗ್ರಾಹಕರ ಮಾಹಿತಿಯನ್ನು ಶ್ರೀಕೃಷ್ಣ ಹಾಗೂ ಸ್ನೇಹಿತರಿಗೆ ನೀಡುತ್ತಿತ್ತು. ಶ್ರೀಕೃಷ್ಣ, ಗ್ರಾಹಕರಿಗೆ ಬಿಟ್ ಕಾಯಿನ್ ವರ್ಗಾವಣೆ ಮಾಡಿಕೊಡುತ್ತಿದ್ದ. ನಿರ್ವಹಣೆಗೆ ಬೇಕಾದ ತರಬೇತಿ ನೀಡುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ದಲಿತರ ಮನೆಗೆ ಪೇಜಾವರ ಶ್ರೀಗಳ ಭೇಟಿ ಉಲ್ಲೇಖ – ಹಂಸಲೇಖ ಮಾತು ಹೊತ್ತಿಸಿದ ಕಿಡಿ

‘ದೊಡ್ಡ ಬೂಟಾಟಿಕೆ ನಡೀತಾ ಇದೆ...’

ದಲಿತರ ಮನೆಗೆ ಪೇಜಾವರ ಸ್ವಾಮೀಜಿಗಳ ಭೇಟಿಯನ್ನು ಉಲ್ಲೇಖಿಸಿ ಸಂಗೀತ ನಿರ್ದೇಶಕ ಹಂಸಲೇಖ ಅವರು ಕಾರ್ಯಕ್ರಮವೊಂದರಲ್ಲಿ ಆಡಿದ ಮಾತುಗಳು ಚರ್ಚೆಗೆ ಕಾರಣವಾಗಿದೆ. ಈ ಮಧ್ಯೆ ಹಂಸಲೇಖ ಅವರು ತಾವು ಆಡಿದ ಮಾತಿಗೆ ಕ್ಷಮೆ ಕೇಳಿದ್ದಾರೆ. ಇನ್ನೊಂದೆಡೆ, ಅವರು ಕ್ಷಮೆ ಕೇಳಿದ್ದು ಸರಿಯೇ ತಪ್ಪೇ ಎಂಬುದರ ಬಗ್ಗೆ ಜಾಲತಾಣಗಳಲ್ಲಿ ಪರ–ವಿರೋಧ ತೀವ್ರಗೊಂಡಿದೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಪೇಜಾವರ ಸ್ವಾಮಿಗಳು ದಲಿತರ ಮನೆಗೆ ವಾಸ ಮಾಡಕ್ ಹೋಗಿದಾರೆ ಅಂತ ಸ್ಟೇಟ್‌ಮೆಂಟ್ ಬಂದಿತ್ತು. ನಿಜಾನಾ?! ದಲಿತರ ಮನೆಗೆ ಹೋಗಿ ಕೂತಿದ್ದರಂತೆ. ಕುಳಿತುಕೊಳ್ಳೊದಕ್ ಆಗುತ್ತಷ್ಟೇ. ಅವರು ಕೋಳಿ ಕೊಟ್ಟರೆ ತಿನ್ನಕ್ ಆಗುತ್ತಾ? ಕೋಳಿ ಬೇಡ ಕುರಿ ರಕ್ತ ಫ್ರೈ ಮಾಡಿಕೊಟ್ಟರೆ ತಿಂತಾರಾ? ಲಿವರ್ ತಿಂತಾರಾ? ಆಗಲ್ಲ’ ಎಂದು ಸಂಗೀತ ನಿರ್ದೇಶಕ ಹಂಸಲೇಖ ಅವರು ಹೇಳಿದ್ದು ಚರ್ಚೆಗೆ ಕಾರಣವಾಗಿದೆ.

‘ನೆಲೆ ಹಿನ್ನೆಲೆ’ ಸಂಸ್ಥೆಯು ನಗರದಲ್ಲಿ ಶುಕ್ರವಾರ (ನ.12) ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ‘ಮುಳ್ಳೂರು ರಾಜು ಕಾವ್ಯ ಪ್ರಶಸ್ತಿ’ ಮತ್ತು ರಾಜಶೇಖರ ಕೋಟಿ ನುಡಿನಮನ ಕಾರ್ಯಕ್ರಮದಲ್ಲಿ ಹಂಸಲೇಖ ಮಾತನಾಡಿದ್ದರು.

ಅವರ ಮಾತುಗಳು: ‘ಅಂದರೆ ದಲಿತರ ಮನೆಗೆ ಬಲಿತರು ಹೋಗಿ ಬರುವುದೇನು ದೊಡ್ಡ ವಿಷ್ಯಾ ಅಂತ ನನಗನ್ನಿಸಿತು. ಈಗ ಇವರು ಶುರು ಮಾಡಿಕೊಂಡು ಬಿಟ್ಟಿದ್ದಾರೆ. ಕುಮಾರಸ್ವಾಮಿಯವರು ಗ್ರಾಮ ವಾಸ್ತವ್ಯ ಅಂತ ಶುರು ಮಾಡಿ ದೊಡ್ಡ ಗೀಳಾಯ್ತು. ಅಶ್ವತ್ಥನಾರಾಯಣ ಅವರೂ ಗ್ರಾಮ ವಾಸ್ತವ್ಯ. ಯಾರು ನೋಡಿದರೂ ಗ್ರಾಮ ವಾಸ್ತವ್ಯ! ಈಗ ಬಿಳಿಗಿರಿ ರಂಗಯ್ಯ ಸೋಲಿಗರ ಮನೆಗೆ ಹೋಗಿ ಆ ಹೆಣ್ಣಿನ ಜೊತೆ ರಮಿಸ್ತಾನೆ ಅಂದ್ರೆ ಅದರಲ್ಲೇನ್ ದೊಡ್ಡ ವಿಷ್ಯ ಇದೆ. ಅವನು ಆ ಸೋಲಿಗರ ಹೆಣ್ಣನ್ನ ತನ್ನ ಮನೆಗೆ ಕರೆದುಕೊಂಡು ಹೋಗಿ ತನ್ನ ದೇವರ ಗುಡಿಯಲ್ಲಿ ಕೂರಿಸಿ ಅಲ್ಲಿ ಅವಳನ್ನ ರಮಿಸಿದ್ರೆ ಅದು ಬಿಳಿಗಿರಿಗೊಂದು ಇದಾಗುತ್ತಿತ್ತು (ಕೈ ತೋರುತ್ತಾ). ಬೆಳಗಿನ ಜಾವಾದಲ್ಲಿ ಸೂರ್ಯ ಇನ್ನು ಹುಟ್ಟಿದನಂತೆ ಬಿಳಿಗಿರಿ ರಂಗ ಕೆಳಗಿಳಿದು ಬಂದು ಸೋಲಿಗರ ಮನೆಗೆ ಹೋಗಿ ಸಂಸಾರ ಮಾಡಿ ತಿರಗಾ ಹೋಗಿ ಕಲ್ಲಾಗಿಬಿಡುತ್ತಾನಂತೆ. ಅದೊಂದು ನಾಟಕ, ಬೂಟಾಟಿಕೆ’.

‘ಗಾಂಧಿ ಹೇಳಿದಂತೆ ದಲಿತರ ಮನೆಗೆ ಬಲಿತರು ಬರಬೇಕು. ತಮ್ಮ ಜೊತೆಗೆ ಅವರ ಮನೆಗೆ ಕರೆದುಕೊಂಡು ಹೋಗಬೇಕು. ನಿಮ್ಮನೇಲಲ್ಲ ಊಟ ನಮ್ಮನೇಲಿ ಊಟ, ನಮ್ಮನೆ ಲೋಟ ನೀನು ಮುಟ್ಟು. ನೀ ಕುಡಿದದನ್ನ ನಾವು ತೊಳೀತೀವಿ ಅಂತ ಅವರು ಹೇಳಬೇಕು. ಅದು ನಿಜವಾದ ಕ್ಷಣ.’

‘ಈಗ ಭಾರತದಲ್ಲಿ ದೊಡ್ಡ ಬೂಟಾಟಿಕೆ ನಡೀತಾ ಇದೆ. ಅಂಬೇಡ್ಕರ್ ಅವರನ್ನ ಎತ್ತರದ ಸ್ಥಾನದಲ್ಲಿ ಕೊಂಡಾಡೊದಕ್ಕೂ ಪರ್ಮಿಷನ್ ಕೊಟ್ಟಿದ್ದಾರೆ. ‘ಮಹಾನಾಯಕ’ ಎಂಬ ಸೀರಿಯಲ್ ಭಾರತದಾದ್ಯಂತ ಕೆಲಸ ಮಾಡುತ್ತಿದೆ. ಸೀರಿಯಲ್‌ನಿಂದ ಪರಿಣಾಮ ಏನಂದ್ರೆ, ನನ್ನ ಹೆಂಡತಿಯು ಎಷ್ಟೊಂದು ಚಾನಲ್‌ಗಳಿದ್ದಾವೆ. ಎಷ್ಟೊಂದು ಸೀರಿಯಲ್‌ಗಳಿದ್ದಾವೆ. ಯಾವ ಸೀರಿಯಲ್ ನೋಡದೆ ಒಂದು ಸರಿಗಮಪ, ಮಹಾನಾಯಕ ನೋಡುತ್ತಿದ್ದಾಳೆ. ಅವಳು ಅಂಬೇಡ್ಕರ್ ಅವರನ್ನು. ಅವರೊಂದು ಅವತಾರರೀ. ದೇವರ್‍ರೀ. ನೋಡಿಲ್ವಲ್‌ರೀ, ನಾವ್ ಅರ್ಥ ಮಾಡಿಕೊಳ್ಳಲಿಲ್ವಲ್ರೀ ಅಂತ ಮೂರ್ನಾಲ್ಕು ತಿಂಗಳಿಂದ ಅಳೋದು. ಇದೊಂತರ ಅಂಬೇಡ್ಕರ್ ಫೋಬಿಯಾ ರೀ ಅವಳದು’

ಹಂಸಲೇಖ ಅವರ ಮಾತುಗಳ ವೀಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಬಿಸಿ ಚರ್ಚೆಗಳನ್ನು ಹುಟ್ಟುಹಾಕಿದೆ. ಹಂಸಲೇಖ ಅವರು ಕ್ಷಮೆ ಕೇಳಿದ್ದು ಸರಿಯೋ ತಪ್ಪೋ ಎಂಬುದು ಈಗ ಚರ್ಚೆಗೆ ಹೊಸದಾಗಿ ಸೇರಿಕೊಂಡಿದೆ.

ಪೇಜಾವರಶ್ರೀ ಕುರಿತ ಹೇಳಿಕೆ: ಕ್ಷಮೆಯಾಚಿಸಿದ ಹಂಸಲೇಖ

ಬೆಂಗಳೂರು: ಕಾರ್ಯಕ್ರಮವೊಂದರಲ್ಲಿ ತಾವು ನೀಡಿದ್ದ ಹೇಳಿಕೆ ಕುರಿತು ಪರ–ವಿರೋಧ ಚರ್ಚೆಗಳು ಶುರುವಾದ ಬೆನ್ನಲ್ಲೇ ಹಂಸಲೇಖ ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ವಿಡಿಯೊ ಅಪ್‌ಲೋಡ್ ಮಾಡಿದ್ದು, ಕ್ಷಮೆಯಾಚಿಸಿದ್ದಾರೆ.

‘ಮೊದಲಿಗೆ ಕ್ಷಮೆ ಇರಲಿ. ಎಲ್ಲ ಮಾತುಗಳೂ ವೇದಿಕೆಗಲ್ಲ ಎನ್ನುವುದು ನನಗೆ ಗೊತ್ತಿದೆ. ಪ್ರಶಸ್ತಿ ಪುರಸ್ಕಾರ ಸಮಾರಂಭ ಅದಾಗಿತ್ತು. ನುಡಿದರೆ ಮುತ್ತಿನ ಹಾರದಂತೆ ನುಡಿಯಬೇಕಿತ್ತು. ನಾನು ಹಾಗೇ ಅಲಂಕರಿಸಬೇಕಾಗಿತ್ತು. ನನ್ನಿಂದ ತಪ್ಪಾಗಿದೆ. ಅಸ್ಪೃಶ್ಯತೆ ನಮ್ಮ ದೇಶಕ್ಕೆ ಅಂಟಿದ ಶಾಪ. ಇದು ನನ್ನ ಮಾತಲ್ಲ. ಇದು ಜಿಡ್ಡು ಕೃಷ್ಣಮೂರ್ತಿಗಳ ಮಾತು. ಅಸ್ಪೃಶ್ಯತೆಯ ಅನಿಷ್ಟವನ್ನು ತೊಡೆದು ಹಾಕಲು ಪೇಜಾವರರಂಥ ಅನೇಕ ಗುರು ಹಿರಿಯರು ಪ್ರಯತ್ನ ಮಾಡುತ್ತಿದ್ದಾರೆ. ಆ ಎಲ್ಲ ಪ್ರಯತ್ನ, ಸಂಧಾನಗಳ ಬಗ್ಗೆ ನನಗೆ ಅಪಾರ ಗೌರವವಿದೆ.

‘ದಶಕಗಳ ಹಿಂದೆ ನಮ್ಮ ಕಲಾರಂಗದಲ್ಲೂ ಈ ಅಸ್ಪೃಶ್ಯತೆ ದಟ್ಟವಾಗಿತ್ತು. ಸದ್ಯಕ್ಕೆ ಅದು ಕರಗಿ ಮಾಯವಾಗಿದೆ. ಭಾರತದಲ್ಲೂ ಅಸ್ಪೃಶ್ಯತೆ ಕರಗಿ ಮಾಯವಾಗುವ ದಿನವಿದೆ. ಈಗ ಭಾರತದಲ್ಲಿ ಇದು ಸಂಭವಿಸುತ್ತಿದೆ. ಅದು ಶೀಘ್ರವಾಗಿ ಆಗಲಿ ಎಂದು ನಾನು ಆಶಿಸುತ್ತೇನೆ. ನಾನು ಅಲ್ಲಿ ಆಡಿದ ಕೆಲ ಮಾತುಗಳು ನನ್ನ ಹೆಂಡತಿಗೇ ಹಿಡಿಸಿಲ್ಲ. ಆಕೆ ಪ್ರತಿಭಟಿಸಿದಳು. ಆಕೆಯ ಕ್ಷಮೆಯನ್ನೂ ಕೋರಿದ್ದೇನೆ. ನಾನು ಸಂಗೀತಗಾರ. ಯಾರ ಮನಸ್ಸನ್ನೂ ನೋಯಿಸಲು ನನಗೆ ಇಷ್ಟವಿಲ್ಲ. ನನ್ನ ಸಂಗೀತ ಹೇಗೆ ಎಲ್ಲರಿಗೂ ಸುಖ ಕೊಡುತ್ತದೆಯೋ, ನನ್ನ ಮಾತು ಎಲ್ಲರಿಗೂ ಸುಖ ಕೊಡಬೇಕು. ಇದು ನನ್ನ ಜೀವನದ ಗುರಿ. ಆದರೆ ಎಲ್ಲ ಅನಿಷ್ಟವನ್ನು ತೊಡೆದುಹಾಕುವ ದಿಸೆಯಲ್ಲಿ ನನ್ನ ಪಾತ್ರವೂ ಇದ್ದರೆ ಮಾಡಿಯೇ ಮಾಡುತ್ತೇನೆ. ಅರ್ಹತೆ ಗಳಿಸಿಕೊಳ್ಳುವುದೊಂದೇ ಅಸ್ಪೃಶ್ಯತೆಯನ್ನು ಕೊಲ್ಲುವ ಆಯುಧ’ ಎಂದು ಹೇಳಿದ್ದಾರೆ.

‘ಮುಸ್ಲಿಮರ ಕರೆದು ಹಂದಿ ಮಾಂಸದ ಊಟ ಬಡಿಸಿ’

ಮೈಸೂರು: ‘ಆಹಾರ ಪದ್ಧತಿ ಮೂಲಕ ಸಮಾನತೆ ತರಬಹುದು ಎನಿಸಿದರೆ ನೀವು, ನಿಮ್ಮ ಮನೆಗೆ ಮುಸ್ಲಿಂ ಸ್ನೇಹಿತರನ್ನು ಕರೆದು ಹಂದಿ ಮಾಂಸದ ಊಟ ಬಡಿಸಿ. ಆಗ ಏನು ಮಾಡುತ್ತಾರೆ ಎಂಬುದು ನಿಮಗೆ ಗೊತ್ತಾಗುತ್ತದೆ’ ಎಂದು ಸಂಸದ ಪ್ರತಾಪಸಿಂಹ, ಸಂಗೀತ ನಿರ್ದೇಶಕ ಹಂಸಲೇಖ ವಿರುದ್ಧ ವಾಗ್ದಾಳಿ ನಡೆಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಪೇಜಾವರ ಶ್ರೀಗಳು ದಲಿತರ ಮನೆಗೆ ಹೋಗಿದ್ದು, ಮನಸ್ಸಿನೊಳಗಿನ ತಾರತಮ್ಯ ತೊಡೆದುಹಾಕಲು. ಆಹಾರ ಪದ್ಧತಿ ವಿಚಾರಕ್ಕಾಗಿ ಅಲ್ಲ. ಮಾಂಸ ತಿಂದರೆ ಸಮಾನತೆ ತರಲು ಸಾಧ್ಯವೇ’ ಎಂದು ಪ್ರಶ್ನಿಸಿದರು.

‘ನೀವು ಬಡಿಸಿದ ಹಂದಿ ಮಾಂಸದ ಊಟವನ್ನು ಮುಸ್ಲಿಮರು ತಿನ್ನದಿದ್ದರೆ ಅದು ಅಸಮಾನತೆಯ ಪ್ರತೀಕವೇ? ಇಸ್ಲಾಂನಲ್ಲಿ ಹಂದಿ ಮಾಂಸ ಸೇವನೆ ನಿಷಿದ್ಧ. ಹಾಗೆಯೇ, ಸಾಧುಸಂತರೂ ಸಸ್ಯಾಹಾರಿಗಳು. ಆಹಾರ ಪದ್ಧತಿಯ ಬಗ್ಗೆ ಅಸಂಬದ್ಧವಾಗಿ ಮಾತನಾಡುವ ಗೀಳು ನಿಮಗೆ ಏಕೆ ಬಂತು ಗೊತ್ತಿಲ್ಲ. ಈಚೆಗೆ ನಿಮ್ಮ ಸಿನಿಮಾ ಸಂಗೀತ, ಸಾಹಿತ್ಯ ಎಲ್ಲವೂ ನಿಂತಿದೆ. ಪ್ರಗತಿಪರ ಎನಿಸಿಕೊಳ್ಳಲು, ಪುಕ್ಕಟೆ ಪ್ರಚಾರಕ್ಕೆ ಈ ರೀತಿ ಮಾತನಾಡುತ್ತಿದ್ದೀರಾ’ ಎಂದು ಕೇಳಿದರು.

‘ಹಂಸಲೇಖರ ಹೇಳಿಕೆಯಿಂದ ವೈಯಕ್ತಿಕವಾಗಿ ನೋವಾಗಿದೆ. ಪೇಜಾವರ ಶ್ರೀಗಳ ಕೋಟ್ಯಂತರ ಅಭಿಮಾನಿಗಳಿಗೆ ನೋವು ಹಾಗೂ ಸಿಟ್ಟು ತಂದಿದೆ. ಅವರ ಬಗ್ಗೆ ಮಾತನಾಡುವಾಗ ಹಂಸಲೇಖ ಯೋಚನೆ ಮಾಡಬೇಕಿತ್ತು, ಪರಿಜ್ಞಾನ ಇಟ್ಟುಕೊಳ್ಳಬೇಕಿತ್ತು. ಪೇಜಾವರರು ಬೇರೆ ಸ್ವಾಮಿಗಳಂತೆ ಅಲ್ಲ’ ಎಂದರು.

> **ಸಾಧಕರ ಬಗ್ಗೆ ಅಸಂಬದ್ಧವಾಗಿ ಮಾತನಾಡಿ ಜನಾಭಿಪ್ರಾಯ ವಿರುದ್ಧವಾದಾಗ ನಾಮ್ ಕಾ ವಾಸ್ತೆಗೆ ಕ್ಷಮೆ ಕೇಳುವುದು ಚಾಳಿಯಾಗಿದೆ. ಇಂಥ ಚಾಳಿಗೆ ಹಂಸಲೇಖ ಬಲಿಯಾಗಿದ್ದಾರೆ.**
> **ಪ್ರತಾಪ ಸಿಂಹ,** ಸಂಸದ

‘ಅವರು ನಾಲಗೆ ಹರಿಬಿಡಬಾರದಿತ್ತು’



ಉಡುಪಿ: ವಿಶ್ವೇಶತೀರ್ಥ ಶ್ರೀಗಳ ವಿರುದ್ಧ ಹಂಸಲೇಖ ಅಪಸ್ವರ ಎತ್ತಿರುವುದಕ್ಕೆ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ‘ಸಮಾಜದಲ್ಲಿ ಗಣ್ಯ ವ್ಯಕ್ತಿ ಎನಿಸಿಕೊಂಡವರಿಂದ ಇಂತಹ ಮಾತು ಬರಬಾರದಿತ್ತು. ಹಂಸಲೇಖ ಅವರ ಹೇಳಿಕೆಯಿಂದ ಸಮಾಜ ತುಂಬಾ ನೊಂದಿದೆ. ಅವರು ನಾಲಗೆ ಹರಿಬಿಡಬಾರದಾಗಿತ್ತು’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ವಿಶ್ವೇಶತೀರ್ಥ ಶ್ರೀಗಳು ಯಾರನ್ನೋ ಓಲೈಸಲು, ಯಾರೋ ತೆಗಳುತ್ತಾರೆ ಎಂಬ ಕಾರಣಕ್ಕೆ ದಲಿತರ ಮನೆಗಳಿಗೆ ಪ್ರವೇಶ ಮಾಡಿರಲಿಲ್ಲ. ಗುರುಗಳ ಗುರಿ ನೇರವಾಗಿತ್ತು. ಆಹಾರ ವಿಚಾರದಲ್ಲಿ ಎಲ್ಲರಿಗೂ ಸ್ವಾತಂತ್ರ್ಯವಿದೆ. ಯಾರ ಮೇಲೂ ಒತ್ತಡ ಸಲ್ಲದು. ಶ್ರೀಗಳ ವಿರುದ್ಧದ ಟೀಕೆಯು ಹಂಸಲೇಖರ ಸಣ್ಣತನವನ್ನು ತೋರಿಸಿದಂತಾಗಿದೆ. ಟೀಕೆಗಳು ಬಂದ ಮಾತ್ರಕ್ಕೆ ನಮ್ಮ ಕೆಲಸ ನಿಲ್ಲಿಸುವುದಿಲ್ಲ. ದಲಿತರು ನಮ್ಮಿಂದ ಹೊರತಾಗಿಲ್ಲ. ಈ ಐಕ್ಯ ಸಂದೇಶ ನೀಡುವ ಸಲುವಾಗಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ; ಪ್ರತಿಭಟನೆ ಮಾಡುವುದಿಲ್ಲ’ ಎಂದು ಅವರು ಹೇಳಿದರು.

ಗಾಯತ್ರಿ, ತುಕಾರಾಮ್‌ಗೆ ಪಿಆರ್‌ಟಿ ಪ್ರಶಸ್ತಿ

ಗಾಯತ್ರಿ ದೇಸಾಯಿ

ತುಕಾರಾಮ್ ಪೂಜಾರಿ ಪಿ

ಬೆಂಗಳೂರು: ಮೈಸೂರಿನ ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನದ ವತಿಯಿಂದ ನೀಡಲಾಗುವ ‘ಪಿಆರ್‌ಟಿ ಕಲಾ ಪ್ರಶಸ್ತಿ’ಗೆ ಧಾರವಾಡದ ಗಾಯತ್ರಿ ದೇಸಾಯಿ ಹಾಗೂ ‘ಪಿಆರ್‌ಟಿ ಜಾನಪದ ಪ್ರಶಸ್ತಿ’ಗೆ ಬಂಟ್ವಾಳದ ಪಿ.ತುಕಾರಾಮ್ ಪೂಜಾರಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಗಳು ತಲಾ ₹25 ಸಾವಿರ, ಫಲಕ ಒಳಗೊಂಡಿವೆ. ಡಿ.2ರಂದು ಚಿಕ್ಕಮಗಳೂರಿನಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿಕೆ ತಿಳಿಸಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಮುಖಾಮುಖಿ

ಸೆಲೆಬ್ರಿಟಿ LIVE

ಸಾಹಿತಿ, ವಾಗ್ಮಿ, ಸಿನಿಮಾ ನಿರ್ದೇಶಕ, ಶಿಕ್ಷಣ ತಜ್ಞ, ಹೋರಾಟಗಾರ ಬರಗೂರು ರಾಮಚಂದ್ರಪ್ಪ ಅವರ ಜೊತೆಗೆ

ಬೆಳಿಗ್ಗೆ 11ರಿಂದ 12

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ,** ಬೆಳಿಗ್ಗೆ 7.30 **ದಿನದ ಸೂಕ್ತಿ,** ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್,** ಬೆಳಿಗ್ಗೆ 9 **ಪ್ರಚಲಿತ,** ಬೆಳಿಗ್ಗೆ 9.30 **ಸಂಪಾದಕೀಯ**

ಚೊಚ್ಚಲ ಸ್ಪರ್ಧೆ: ‘ಡೊಳ್ಳು’ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಾದಲ್ಲಿ ಇದೇ ತಿಂಗಳ 20ರಿಂದ ಆರಂಭವಾಗಲಿರುವ 52ನೇ ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ‘ಚೊಚ್ಚಲ ಸ್ಪರ್ಧೆ’ ವಿಭಾಗಕ್ಕೆ ಸಾಗರ್ ಪುರಾಣಿಕ್ ನಿರ್ದೇಶನದ ಕನ್ನಡ ಚಿತ್ರ ‘ಡೊಳ್ಳು’ ಆಯ್ಕೆಯಾಗಿದೆ.

ಸಾಗರ್ ಪುರಾಣಿಕ್

ಈ ವಿಭಾಗಕ್ಕೆ ಭಾರತದಿಂದ ಕೇವಲ ಎರಡು ಚಿತ್ರಗಳಷ್ಟೇ ಆಯ್ಕೆಯಾಗಿದ್ದು, ಇನ್ನೊಂದು ಮರಾಠಿಯ ‘ಫ್ಯೂನರಲ್’ ಆಗಿದೆ. ನಗರದತ್ತ ವಲಸೆಯು ಹೇಗೆ ಡೊಳ್ಳು ಕುಣಿತದಂಥ ಜಾನಪದ ಕಲೆಗಳನ್ನು ಅವನತಿಯತ್ತ ಕೊಂಡೊಯ್ಯುತ್ತಿವೆ ಎನ್ನುವುದನ್ನು ಹೇಳುವ ಈ ಚಿತ್ರದಲ್ಲಿ ಕಾರ್ತಿಕ್ ಹಾಗೂ ನಿಧಿ ಹೆಗ್ಡೆ ಮುಖ್ಯಭೂಮಿಕೆಯಲ್ಲಿದ್ದಾರೆ.

ಚಿತ್ರೋತ್ಸವದ ಪನೋರಮ ವಿಭಾಗಕ್ಕೂ ‘ಡೊಳ್ಳು’ ಆಯ್ಕೆಯಾಗಿತ್ತು.

ಮೊದಲನೇ ವರ್ಷದ ಪುಣ್ಯ ಸ್ಮರಣೆ

16-11-2021

ದಿ॥ ಬಿ.ವಿ. ಸಂಪತ್‌ರವರು

ಮಾಜಿ ಅಧ್ಯಕ್ಷರು, ಬಿಳೇಕಹಳ್ಳಿ – ಕಾಂಗ್ರೆಸ್ ಮುಖಂಡರು

“ನಿಮ್ಮ ಜೀವನದ ಸರಳತೆ, ಪ್ರೀತಿ, ಔದಾರ್ಯ ಹಾಗೂ ಮೌಲ್ಯಗಳನ್ನು ಸದಾ ಸ್ಮರಿಸುತ್ತಾ ಮುನ್ನಡೆಯುತ್ತಿರುವ”

ಧರ್ಮಪತ್ನಿ, ಮಕ್ಕಳು, ಮೊಮ್ಮಕ್ಕಳು,

B V S ಸಹೋದರರು ಮತ್ತು B V S ಕುಟುಂಬದವರು

ದಿನಾಂಕ: 16.11.2021 ಮಂಗಳವಾರ ಮಧ್ಯಾಹ್ನ: 12.30ಕ್ಕೆ ಊಟ ಏರ್ಪಡಿಸಲಾಗಿದೆ,
ಸ್ಥಳ: ನಂ 1 & 2 ಬಿಳೇಕಹಳ್ಳಿ ಲೇಔಟ್, 2ನೇ ಕ್ರಾಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560076

Ph: 98450-26669/ 95352-15554/ 98861-29997/ 98860-60604/ 90600-00014

ಇಂದು ‘ಪುನೀತ ನಮನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಂಗಳವಾರ ‘ಪುನೀತ ನಮನ’ ಕಾರ್ಯಕ್ರಮ ಆಯೋಜಿಸುತ್ತಿದೆ.

ಅರಮನೆ ಮೈದಾನದ ಗಾಯತ್ರಿ ವಿಹಾರ್‌ನಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಡಾ.ರಾಜ್‌ಕುಮಾರ್ ಅವರ ಕುಟುಂಬದ ಸದಸ್ಯರು, ‘ಪ್ರಕಾಶ್ ರಾಜ್, ವಿಶಾಲ್, ನಾಗಾರ್ಜುನ, ಶರತ್ ಕುಮಾರ್, ಪ್ರಭುದೇವ ಸೇರಿದಂತೆ ದಕ್ಷಿಣ ಭಾರತದ ಚಿತ್ರರಂಗದ ಕೆಲ ಕಲಾವಿದರು ಹಾಗೂ ಕನ್ನಡ ಚಿತ್ರರಂಗದ 142 ಕಲಾವಿದರು ಭಾಗವಹಿಸಲಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮ್ಮುಖದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಹಲವು ಸಚಿವರು ಉಪಸ್ಥಿತರಿರಲಿದ್ದಾರೆ. ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರೂ ಭಾಗವಹಿಸಲಿದ್ದಾರೆ.

ಪುನೀತ್ ರಾಜ್‌ಕುಮಾರ್

‘ಸ್ಥಳಾವಕಾಶದ ಇತಿಮಿತಿ ಹಾಗೂ ನಿಯಮಾವಳಿಗಳ ಕಾರಣದಿಂದ ಪಾಸ್ ಇದ್ದವರಿಗಷ್ಟೇ ಪ್ರವೇಶಕ್ಕೆ ಅವಕಾಶವಿರಲಿದೆ. ಕೇವಲ 1600 ಪಾಸ್‌ಗಳನ್ನು ಮಾಡಲಾಗಿದೆ. ಎಲ್ಲ ಚಾನೆಲ್‌ನಲ್ಲಿ ಲೈವ್ ಇದ್ದು, ಅಭಿಮಾನಿಗಳು ಮನೆಯಲ್ಲೇ ಕೂತು ಈ ಕಾರ್ಯಕ್ರಮವನ್ನು ವೀಕ್ಷಿಸಬೇಕು. ಕಾರ್ಯಕ್ರಮ ಯಶಸ್ವಿಯಾಗಬೇಕು ಎನ್ನುವುದಷ್ಟೇ ನಮ್ಮ ಉದ್ದೇಶ. ಚಿತ್ರರಂಗದ ಅಂಗಸಂಸ್ಥೆಯ ಪದಾಧಿಕಾರಿಗಳಿಗಷ್ಟೇ ಪಾಸ್ ನೀಡಲಾಗಿದೆ’ ಎಂದು ಮಂಡಳಿ ಅಧ್ಯಕ್ಷ ಡಿ.ಆರ್. ಜೈರಾಜ್ ಹೇಳಿದರು.

ವೇದಿಕೆಯ ಮೇಲೆ ಪುನೀತ್ ಅವರ ಪುತ್ಥಳಿಯಷ್ಟೇ ಇರಲಿದೆ. ಪುನೀತ್ ಅವರ ಬದುಕಿನ ಕುರಿತು ವಿಡಿಯೊ ಪ್ರದರ್ಶನ, ಗೌರವ ಸಲ್ಲಿಸುವ ವಿಡಿಯೋ ಪ್ರದರ್ಶನ ನಡೆಯಲಿದ್ದು, ಇದಾದ ಬಳಿಕ ನಾಗೇಂದ್ರ ಪ್ರಸಾದ್ ಅವರ ಸಾಹಿತ್ಯದ ಗೀತನಮನ ಕಾರ್ಯಕ್ರಮವಿರಲಿದೆ. ಇದಾದ ಬಳಿಕ ಗುರುಕಿರಣ್, ವಿಜಯ್ ಪ್ರಕಾಶ್ ನೇತೃತ್ವದಲ್ಲಿ ಗೀತ ಗೌರವದ ಕಾರ್ಯಕ್ರಮವನ್ನು ಮಂಡಳಿ ರೂಪಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	10,441	10,216
ಹಾರಂಗಿ	2,859	2,857.66	1,690	950
ಕಬಿನಿ	2,284	2,283.99	2,400	2,000
ಹೇಮಾವತಿ	2,922	2,908.72	5,165	2,816
ಲಿಂಗನಮಕ್ಕಿ	1,819	1,813.50	4,610	-
ಸೂಪಾ (ಮೀ)	564	555.43	581	2,322
ಮಾಣಿ	594.36	586.66	547	-
ತುಂಗಭದ್ರಾ	1,633	1,632.23	5,967	8,911
ಮಲಪ್ರಭಾ	2,079.50	2,076.30	-	2,444
ಘಟಪ್ರಭಾ	2,175	2,167.40	-	2,593
ಭದ್ರಾ	186	185.40	2,686	2,686
ಆಲಮಟ್ಟಿ (ಮೀ)	519.60	518.54	-	15,916
ನಾರಾಯಣಪುರ (ಮೀ)	492.25	491.43	12,636	7,140

* ನೆಲಮಟ್ಟದಿಂದ

ವಿವಿಧೆಡೆ ಮುಂದುವರಿದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸೋಮವಾರವು ಮಳೆ ಮುಂದುವರಿದಿದೆ. ದಾವಣಗೆರೆ ಜಿಲ್ಲೆ ನ್ಯಾಮತಿ ತಾಲ್ಲೂಕಿನಲ್ಲಿ ಕೆರೆ ಕೋಡಿ ಬಿದ್ದಿದ್ದರೆ, ಹೊನ್ನಾಳಿ ತಾಲ್ಲೂಕಿನಲ್ಲಿ ನಾಲ್ಕು ಮನೆಗಳಿಗೆ ಹಾನಿಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಧಾರವಾಡ, ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿ ಸೋಮವಾರ ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆಗುಡುಗು ಸಹಿತ ಜೋರು ಮಳೆಯಾಯಿತು. ಭಟ್ಕಳ, ಹೊನ್ನಾವರ, ಶಿರಸಿಯಲ್ಲೂ ಮಳೆ ಬಂತು. ಬೆಳಗಾವಿ ಜಿಲ್ಲೆಯ ಖಾನಾಪುರ, ಧಾರವಾಡದಲ್ಲಿ ಸಾಧಾರಣ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೊಪ್ಪ, ಎನ್.ಆರ್. ಪುರ, ಕಡೂರು ಭಾಗದಲ್ಲಿ ಬಿರುಸಾಗಿ, ಚಿಕ್ಕಮಗಳೂರು, ಗಿರಿಶ್ರೇಣಿ, ಅಜ್ಜಂಪುರ, ಬಾಳೆಹೊನ್ನೂರು ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ದಾವಣಗೆರೆ ವರದಿ: ಜಿಲ್ಲೆಯಲ್ಲಿ ಭಾನುವಾರ ಸಾಧಾರಣ ಮಳೆಯಾಗಿದೆ. ಶಿವಮೊಗ್ಗ ಜಿಲ್ಲೆಯ ವಿವಿಧೆಡೆ ಸುರಿದ ಭಾರಿ ಮಳೆಗೆ ಜನರು ತತ್ತರಿಸಿ ಹೋಗಿದ್ದಾರೆ. ನೀರು ತಗ್ಗು ಪ್ರದೇಶಗಳಿಗೆ ನುಗ್ಗಿದೆ.

ಶಿವಮೊಗ್ಗದ ನ್ಯೂ ಮಂಡ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಒಂದು ಅಡಿಗೂ ಹೆಚ್ಚು ನೀರು ನಿಂತಿದೆ. ಸೋಮವಾರ ಮಕ್ಕಳಿಗೆ ಬಿಸಿಯೂಟ ನೀಡಿ ಮನೆಗೆ ವಾಪಸು ಕಳುಹಿಸಲಾಗಿದೆ. ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ತಂಡಗದಲ್ಲಿ 4 ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಹಾಸನ ಜಿಲ್ಲೆಯ ವಿವಿಧೆಡೆ ಸೋಮವಾರ ಸಂಜೆ ಧಾರಾಕಾರ ಮಳೆಯಾಗಿದೆ. ಅರಸೀಕೆರೆಯಲ್ಲಿ ನಾಲ್ಕು ಮತ್ತು ಅರಕಲಗೂಡು ತಾಲ್ಲೂಕಿನ ದುಮ್ಮಿ, ಗೊರವನಹಳ್ಳಿಯಲ್ಲಿ ಮನೆಯ ಗೋಡೆ ಕುಸಿದಿದೆ. ಜೋಳ, ರಾಗಿ ಬೆಳೆ ಕಟಾವಿಗೆ ಅಡ್ಡಿಯಾಗಿದೆ.

ಬೆಂಗಳೂರಿನಲ್ಲಿ ಸೋಮವಾರ ಸಂಜೆ ಧಾರಾಕಾರ ಮಳೆಯಾಗಿದ್ದು, ಸಂಪಿಗೆ ರಸ್ತೆಯಲ್ಲಿ ಕಂಡುಬಂದ ಚಿತ್ರಣ – ಪ್ರಜಾವಾಣಿ ಚಿತ್ರ

ನೆಲಕಚ್ಚಿದ ಬೆಳೆ ಕೃಷಿಕರಿಗೆ ಆತಂಕ

ಹೊಸದುರ್ಗ (ಚಿತ್ರದುರ್ಗ): ತಾಲ್ಲೂಕಿನಲ್ಲಿ ನಿರಂತರ ಮಳೆಯಿಂದಾಗಿ ಕಟಾವಿಗೆ ಬಂದಿದ್ದ ರಾಗಿ ನೆಲಕ್ಕಚ್ಚಿದ್ದು, ಒಣಗಿದ್ದ ರಾಗಿ ತೆನೆ ಮೊಳಕೆಯೊಡೆಯುತ್ತಿದೆ. ಇದರಿಂದ ಅನ್ನದಾತರು ಕಂಗಾಲಾಗಿದ್ದಾರೆ.

ಪಟ್ಟಣ ಸೇರಿ ತಾಲ್ಲೂಕಿನ ಹಲವೆಡೆ ಸಾಧಾರಣ ಮಳೆಯಾಗಿದೆ. ಬಾಗೂರು, ಎಂ.ಜಿ.ದಿಬ್ಬ, ಬೋಕಿಕೆರೆ, ಮಳಲಿ ಸುತ್ತಮುತ್ತಲು ಸೋಮವಾರ ಹದ ಮಳೆಯಾಗಿದೆ. 5 ದಿನದಿಂದ ಮಳೆಯಾಗುತ್ತಿದ್ದು, ಕಟಾವಿಗೆ ಬಂದಿದ್ದ ರಾಗಿ, ಮೆಕ್ಕೆಜೋಳ, ಹತ್ತಿ ಸೇರಿ ವಿವಿಧ ಬೆಳೆಗಳು ನೆಲಕಚ್ಚಿವೆ.

13 ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ನ.16ರಿಂದ 18ರವರೆಗೆ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಅಂಡಮಾನ್ ಭಾಗದಲ್ಲಿ ವಾಯುಭಾರ ಕುಸಿತ ಹಾಗೂ ಅರಬ್ಬಿ ಸಮುದ್ರದಲ್ಲಿ ಮೇಲ್ಮೈ ಸುಳಿಗಾಳಿ ಉಂಟಾಗಿರುವ ಪರಿಣಾಮ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮುಂದಿನ ಮೂರು ದಿನಗಳು ಭಾರಿ ಮಳೆಯಾಗುವ ಸಾಧ್ಯತೆಗಳಿವೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಶಿವಮೊಗ್ಗ, ತುಮಕೂರು, ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಹೆಚ್ಚು ಮಳೆಯಾಗುವ ಸೂಚನೆ ಇದ್ದು, ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಕರಾವಳಿಯಲ್ಲಿ ಗಂಟೆಗೆ 50ರಿಂದ 60 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದ್ದು, ಮೀನುಗಾರರು ಇದೇ 18ರವರೆಗೆ ಸಮುದ್ರಕ್ಕೆ ಇಳಿಯಬಾರದು ಎಂದು ಇಲಾಖೆ ಸೂಚಿಸಿದೆ.

ಮಳೆ–ಎಲ್ಲಿ, ಎಷ್ಟು?

ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯಲ್ಲಿ ಸೋಮವಾರ 19 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಅರಸಾಳು 14, ಮೂಡುಬಿದರೆ 13, ಕಾರ್ಕಳ 10, ಭದ್ರಾವತಿ 9, ಶಿವಮೊಗ್ಗ, ಕೊಪ್ಪ 8, ಶಿಕಾರಿಪುರ 7, ತರೀಕೆರೆ 6, ಮಂಗಳೂರು 5, ಪುತ್ತೂರು, ಸಾಗರ, ಹೊಸಕೋಟೆ 4, ಭಟ್ಕಳ, ಗುಬ್ಬಿ, ದೊಡ್ಡಬಳ್ಳಾಪುರ, ಚಿತ್ರದುರ್ಗ, ತೀರ್ಥಹಳ್ಳಿ 3, ಮಾಲೂರು, ನೆಲಮಂಗಲ, ಹಾಸನ 2, ಪಾವಗಡ, ತಿಪಟೂರು, ಚನ್ನರಾಯಪಟ್ಟಣ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಳ್ಳಕೆರೆ, ರಾಮನಗರ, ಮಡಿಕೇರಿಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ದಾವಣಗೆರೆಯಲ್ಲಿ ಸೋಮವಾರ 19 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ

GTTC

ರಾಜಾಜಿನಗರ ಕೈಗಾರಿಕಾ ವಸಹಾತು, ಬೆಂಗಳೂರು–560 010. ದೂರವಾಣಿ:080–23384303
ಫ್ಯಾಕ್ಸ್:080–23301683 ವೆಬ್‌ಸೈಟ್: https://karunadu.karnataka.gov.in/gttc

ಉಲ್ಲೇಖ:ಜಿಟಿಟಿಸಿ/ಆಡಳಿತ/ಗುತ್ತಿಗೆ/ಪ್ರಾಂಶುಪಾಲರು/2021–22/05 ದಿನಾಂಕ: 15–11–2021

ಗುತ್ತಿಗೆ ಆಧಾರದ ಮೇಲೆ ‘ಪ್ರಾಂಶುಪಾಲರು’ ಬೇಕಾಗಿದ್ದಾರೆ

ಜಿಟಿಟಿಸಿಯು ಒಂದು ಪ್ರಮುಖ ತಾಂತ್ರಿಕ ತರಬೇತಿ ಕೇಂದ್ರವಾಗಿದ್ದು, ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಿಟಿಟಿಸಿ ಸಂಸ್ಥೆಯು ಯುವಜನರಿಗೆ ದೀರ್ಘಾವಧಿ ಕೋರ್ಸ್‌ಗಳಾದ ‘ಟೂಲ್ ಮ್ಯಾನ್ಯುಫ್ಯಾಕ್ಚರಿಂಗ್’, ‘ಪ್ರಿಸಿಷನ್ ಮ್ಯಾನ್ಯುಫ್ಯಾಕ್ಚರಿಂಗ್’, ‘ಎಲೆಕ್ಟ್ರಾನಿಕ್ಸ್ ಮತ್ತು ಮೆಕಟ್ರಾನಿಕ್ಸ್ ಕ್ಷೇತ್ರದಲ್ಲಿ ಕೌಶಲ್ಯಾಧಾರಿತ ತರಬೇತಿ ನೀಡುವುದಲ್ಲದೇ ಅಲ್ಪಾವಧಿ ಕೌಶಲ್ಯ ತರಬೇತಿಗಳನ್ನು ಸಹ ನಡೆಸುತ್ತಿದೆ. ಜಿಟಿಟಿಸಿಯು ತನ್ನ ತರಬೇತಿ ಕೇಂದ್ರಗಳಲ್ಲಿ “ಪ್ರಾಂಶುಪಾಲರ” ಹುದ್ದೆಗಳಿಗೆ ಸಂವಹನ ಕಲೆ, ನಾಯಕತ್ವದ ಗುಣ, ಸಮಸ್ಯೆಗಳನ್ನು ಪರಿಹರಿಸುವ ಮನೋಸ್ಥಿತಿಯುಳ್ಳ ತಾಂತ್ರಿಕ ಪರಿಣಿತಿ ಹೊಂದಿರುವ ಹಾಗೂ ಟೂಲ್ ರೂಮ್ ಮತ್ತು ಟ್ರೈನಿಂಗ್ ಸೆಂಟರ್ ಚಟುವಟಿಕೆಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿರುವ ಆಕಾಂಕ್ಷಿತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ	ಸ್ಥಳ	ಕ್ರೋಢೀಕೃತ ಮಾಸಿಕ ಸಂಭಾವನೆ	ವಯೋಮಿತಿ	ವಿದ್ಯಾರ್ಹತೆ	ಅನುಭವ
01	ಪ್ರಾಂಶುಪಾಲರು	04	1. ಶಿವಮೊಗ್ಗ 2. ಕಡೂರು 3. ಗೌರಿಬಿದನೂರು 4. ಹುಮ್ನಾಬಾದ್	ರೂ. 50,000/–	ಕನಿಷ್ಠ–28 ವರ್ಷಗಳು ಗರಿಷ್ಠ–63 ವರ್ಷಗಳು	ಎಐಸಿಟಿಇ ಯಿಂದ ಅನುಮೋದಿತವಾದ ಮತ್ತು ಮಾನ್ಯತೆ ಹೊಂದಿರುವ ವಿಶ್ವವಿದ್ಯಾಲಯ/ಸಂಸ್ಥೆಯಿಂದ ಮೆಕ್ಯಾನಿಕಲ್ ಇಂಜಿನಿಯರಿಂಗ್/ಟೂಲ್ ಇಂಜಿನಿಯರಿಂಗ್ ವಿಷಯದಲ್ಲಿ ಪದವಿ ಮತ್ತು ಸ್ನಾತಕೋತರ ಪದವಿಯನ್ನು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು. **ಅಥವಾ** ಸಮಾನಾಂತರವಾದ ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿರಬೇಕು	ಎಐಸಿಟಿಇಯಿಂದ ಅನುಮೋದಿತವಾದ ಮತ್ತು ಮಾನ್ಯತೆ ಹೊಂದಿರುವ ಇಂಜಿನಿಯರಿಂಗ್ ಕಾಲೇಜು/ಕೇಂದ್ರಗಳಲ್ಲಿ 5 ವರ್ಷಗಳ ಬೋಧನಾ ಅನುಭವ, ಹೊಂದಿರಬೇಕು.

- **ಆಯ್ಕೆಯ ಪ್ರಕ್ರಿಯೆ:** (1) ನಿಗದಿತ ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಕೆಲಸದ ಅನುಭವದ ಅರ್ಹತಾ ಮಾನದಂಡವನ್ನು ಪೂರೈಸುವ ಅಭ್ಯರ್ಥಿಗಳನ್ನು 100 ಅಂಕಗಳುಳ್ಳ ಲಿಖಿತ ಪರೀಕ್ಷೆಗೆ (Objective type) ಗೆ ಅಹ್ವಾನಿಸಲಾಗುತ್ತದೆ. (2) ಲಿಖಿತ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳ ಆಧಾರದ ಮೇಲೆ, ತಾಂತ್ರಿಕ ಸಂದರ್ಶನಕ್ಕೆ ಅರ್ಹರಾಗುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ, ಅವರುಗಳನ್ನು ತಾಂತ್ರಿಕ ಸಂದರ್ಶನಕ್ಕೆ ಅಹ್ವಾನಿಸಲಾಗುವುದು.
- ಗುತ್ತಿಗೆ ಅವಧಿಯು ಒಂದು ವರ್ಷದ್ದಾಗಿರುತ್ತದೆ. ವ್ಯಕ್ತಿಯ ಕಾರ್ಯಕ್ಷಮತೆಯ ಮೌಲ್ಯಮಾಪನದ ಆಧಾರದ ಮೇಲೆ ಗರಿಷ್ಠ 3 ವರ್ಷಗಳವರೆಗೆ ವಿಸ್ತರಿಸಬಹುದಾಗಿದೆ.
- ಅರ್ಜಿಗಳನ್ನು ಸಂಸ್ಥೆಯ ಜಾಲತಾಣ **https://karunadu.karnataka.gov.in/gttc** ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
- ಅರ್ಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–560010 ವಿಳಾಸಕ್ಕೆ ಕಳುಹಿಸತಕ್ಕದ್ದು. ಲಕೋಟೆಯ ಮೇಲ್ಭಾಗದ ಎಡಬದಿಯಲ್ಲಿ ‘ಪ್ರಾಂಶುಪಾಲರು’ ಹುದ್ದೆಗೆ ಎಂದು ನಮೂದಿಸತಕ್ಕದು. ಸಂದರ್ಶನದ ವೇಳೆಯಲ್ಲಿ ಅಭ್ಯರ್ಥಿಗಳು ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸುವುದು.
- ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 30–11–2021 ಸಂಜೆ 5.30.ಗಂಟೆಯೊಳಗೆ.**
- ಲಿಖಿತ ಪರೀಕ್ಷೆಯ **ದಿನಾಂಕ 30–12–2021.**
- ಸಂದರ್ಶನ ದಿನಾಂಕವನ್ನು ತಿಳಿಸಲಾಗುವುದು.
- ಸಂದರ್ಶನಕ್ಕೆ ಅರ್ಹರಾದ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕ ಮತ್ತು ಸ್ಥಳವನ್ನು ಮುಂಚಿತವಾಗಿ ತಿಳಿಸಲಾಗುವುದು.
- ಆಯ್ಕೆಯಾದ ಅಭ್ಯರ್ಥಿಗಳನ್ನು ಮೇಲಿನ ಕೇಂದ್ರಗಳಲ್ಲದೇ ರಾಜ್ಯದಲ್ಲಿರುವ ಸಂಸ್ಥೆಯ ಇತರ ಕೇಂದ್ರಗಳಿಗೆ ನಿಯೋಜಿಸಬಹುದು.
- ಅಭ್ಯರ್ಥಿಗಳು ಕನ್ನಡ ಭಾಷೆಯಲ್ಲಿ ಬರೆಯುವ ಮತ್ತು ಮಾತನಾಡುವ ಜ್ಞಾನ ಹೊಂದಿರಬೇಕು.
- ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಜಾಲತಾಣ: **https://karunadu.karnataka.gov.in/gttc** ವನ್ನು ವೀಕ್ಷಿಸುವುದು.
- ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು–ಆಡಳಿತ, ದೂರವಾಣಿ ಸಂಖ್ಯೆ:080–23384303, ಉಪ ಪ್ರಧಾನ ವ್ಯವಸ್ಥಾಪಕರು–ಶೈಕ್ಷಣಿಕ ದೂರವಾಣಿ ಸಂಖ್ಯೆ: 080–23385386 ಇವರನ್ನು ಸಂಪರ್ಕಿಸುವುದು.

“ಆಯ್ಕೆ ಪ್ರಕ್ರಿಯೆಯನ್ನು ಮುಂದುವರೆಸುವ/ರದ್ದುಗೊಳಿಸುವ ಎಲ್ಲಾ ಹಕ್ಕುಗಳನ್ನು ಆಡಳಿತ ಮಂಡಳಿ ಕಾಯ್ದಿರಿಸಿದೆ.”

ಸಹಿ/- ವ್ಯವಸ್ಥಾಪಕ ನಿರ್ದೇಶಕರು

₹600 ಕೋಟಿ ಮೌಲ್ಯದ 120 ಕೆ.ಜಿ ಹೆರಾಯಿನ್ ವಶ, ಮೂವರ ಬಂಧನ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಮೋರ್ಬಿ ಜಿಲ್ಲೆಯಲ್ಲಿ ರಾಜ್ಯದ ಭಯೋತ್ಪಾದಕ ನಿಗ್ರಹ ದಳವು (ಎಟಿಎಸ್) ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ₹ 600 ಕೋಟಿ ಮೌಲ್ಯದ 120 ಕೆ.ಜಿ ಹೆರಾಯಿನ್ ವಶಪಡಿಸಿಕೊಂಡಿದ್ದು, ಮೂವರನ್ನು ಬಂಧಿಸಿದೆ.

ಕಛ್‌ನ ನವಲಾಖಿ ಬಂದರು ಸಮೀಪ ಝಿಂಝುಡಾ ಎಂಬಲ್ಲಿ ಸ್ಥಳೀಯ ಪೊಲೀಸರ ನೆರವಿನೊಂದಿಗೆ ಎಟಿಎಸ್ ಈ ಕಾರ್ಯಾಚರಣೆ ನಡೆಸಿತು ಎಂದು ಪೊಲೀಸ್ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಅರಬ್ಬಿ ಸಮುದ್ರದ ಭಾರತ–ಪಾಕಿಸ್ತಾನ ಜಲಗಡಿಯಲ್ಲಿ ಪಾಕಿಸ್ತಾನದ ಸಹಚರ ಜಹೀದ್ ಬಶೀರ್ ಬಲೂಚ್ ಎಂಬಾತ ಆರೋಪಿಗಳಾದ ಮುಖ್ತಾರ್ ಹುಸೇನ್ ಮತ್ತು ಸಂಶುದ್ದೀನ್ ಹುಸೇನ್‌ಮಿಯಾನ್ ಸೈಯದ್ ಅವರಿಗೆ ಈ ಹೆರಾಯಿನ್ ಹಸ್ತಾಂತರಿಸಿದ್ದ. ಪ್ರಕರಣದ ಇನ್ನೊಬ್ಬ ಆರೋಪಿಯನ್ನು ಗುಲಾಮ್ ಹುಸೇನ್ ಉಮರ್ ಬಗದ್ ಎಂದು ಗುರುತಿಸಲಾಗಿದೆ. ಆಫ್ರಿಕಾಗೆ ಸಾಗಿಸುವ ಯೋಜನೆ ರೂಪಿಸಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

'ಗುಜರಾತ್‌ನ ದೇವಭೂಮಿ ದ್ವಾರಕಾ ಜಿಲ್ಲೆಯ ಸಲಯ ಎಂಬಲ್ಲಿ ಈ ಹೆರಾಯಿನ್ ಅನ್ನು ಮೊದಲಿಗೆ ಬಚ್ಚಿಡಲಾಗಿತ್ತು. ಬಳಿಕ ಅದನ್ನು ಝಿಂಝುಡಾಗೆ ಸಾಗಿಸಲಾಗಿತ್ತು. ಅಲ್ಲಿ ಅದನ್ನು ವಶಕ್ಕೆ ಪಡೆಯಲಾಯಿತು' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಆಶಿಶ್ ಭಾಟಿಯಾ ಮಾಹಿತಿ ನೀಡಿದ್ದಾರೆ.

'ಗುಜರಾತ್ ಕರಾವಳಿ ಭಾಗದಲ್ಲಿ ಓಡಾಡುವ ಸಾವಿರಾರು ಮೀನುಗಾರಿಕಾ ದೋಣಿಗಳ ನಡುವೆ ಇಂತಹ ಡ್ರಗ್ಸ್ ಕಳ್ಳಸಾಗಣೆಯನ್ನು ಪತ್ತೆಹಚ್ಚಲಾಗದು ಎಂದು ಭಾವಿಸಿ ಇಂತಹ ದಂಧೆಯಲ್ಲಿ ಕಳ್ಳಸಾಗಣೆದಾರರು ಭಾಗಿಯಾಗಿದ್ದರು. ಆದರೆ ಗುಜರಾತ್ ಪೊಲೀಸರು ಈ ಜಾಲವನ್ನು ಭೇದಿಸುವಲ್ಲಿ ಸಫಲರಾದರು' ಎಂದು ಅವರು ತಿಳಿಸಿದರು.

ಕಳೆದ ವಾರ ದೇವಭೂಮಿ ದ್ವಾರಕಾ ಜಿಲ್ಲೆಯಲ್ಲಿ ₹ 313 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡು ಮೂವರನ್ನು ಬಂಧಿಸಲಾಗಿತ್ತು. ಸೆಪ್ಟೆಂಬರ್‌ನಲ್ಲಿ ₹ 21 ಸಾವಿರ ಕೋಟಿ ಮೌಲ್ಯದ ಡ್ರಗ್ಸ್ ಅನ್ನು ಮುಂದ್ರಾ ಬಂದರಿನಲ್ಲಿ ವಶಪಡಿಸಿಕೊಳ್ಳಲಾಗಿತ್ತು.

ರಾತ್ರಿಹೊತ್ತು ಮರಣೋತ್ತರ ಪರೀಕ್ಷೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಮರಣೋತ್ತರ ಪರೀಕ್ಷೆ ನಡೆಸುವ ಸೌಲಭ್ಯವಿರುವ ಆಸ್ಪತ್ರೆಗಳಲ್ಲಿ, ಸೂರ್ಯ ಮುಳುಗಿದ ಬಳಿಕವೂ ಮರಣೋತ್ತರ ಪರೀಕ್ಷೆ ನಡೆಸಬಹುದು ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಅಧಿಸೂಚನೆ ಹೊರಡಿಸಿದೆ. ಈ ನಿರ್ಧಾರದಿಂದ ಅಂಗಾಂಗ ಕಸಿ ಪ್ರಕ್ರಿಯೆ ಹಾಗೂ ಶವ ಹಸ್ತಾಂತರಕ್ಕೆ ಕಾಯುವ ಸಂಬಂಧಿಕರ ಸಮಸ್ಯೆಗೆ ಪರಿಹಾರ ದೊರೆಯಲಿದೆ.

ಪರಿಷ್ಕೃತ ನಿಯಮಾವಳಿ ಸೋಮವಾರದಿಂದ ಜಾರಿಗೆ ಬಂದಿದೆ ಎಂದು ಸಚಿವಾಲಯ ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಆದರೆ, ಹತ್ಯೆ, ಆತ್ಮಹತ್ಯೆ, ಅತ್ಯಾಚಾರ, ಕೊಳೆತ ದೇಹಗಳು ಮತ್ತು ಶಂಕಿತ ಸಾವು ಪ್ರಕರಣಗಳಲ್ಲಿ ಮರಣೋತ್ತರ ಪರೀಕ್ಷೆಯನ್ನು ರಾತ್ರಿಯ ವೇಳೆ ನಡೆಸಬಾರದು ಎಂದು ಅದು ಸ್ಪಷ್ಟಪಡಿಸಿದೆ.

ಮರಣೋತ್ತರ ಪರೀಕ್ಷೆ ನಡೆಸಲು ಬೇಕಾದ ಬೆಳಕಿನ ಸೌಲಭ್ಯ ಸೇರಿದಂತೆ ಈ ಕುರಿತ ತಂತ್ರಜ್ಞಾನದಲ್ಲಿ ಸಾಕಷ್ಟು ಸುಧಾರಣೆಗಳು ಆಗಿವೆ. ಆರೋಗ್ಯ ಸೇವೆಗಳ ನಿರ್ದೇಶನಾಲಯದ ತಜ್ಞರ ಸಮಿತಿ ಮಾಡಿದ ಶಿಫಾರಸು ಆಧರಿಸಿ ಕೇಂದ್ರ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ.

ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01, 3ನೇ ಮಹಡಿ, ಟಿ.ಟಿ.ಎಂ.ಸಿ, ಬಿ.ಎಂ.ಟಿ.ಸಿ ಕಟ್ಟಡ, ಯಶವಂತಪುರ, ಬೆಂಗಳೂರು–560022 ದೂರವಾಣಿ: 080–23570382
e-Mail: jcctdgsto1.bng@ka.gov.in website: https://ctax.kar.nic.in

ಸಂ: ವಾತೆಜಂಆ(ಆ)/ವಿಸ&ಸೇತೆಕ–(1)/ಡಿ/ಸಿಆರ್–09(1)/2021–22 ದಿ: 12.11.2021

ಟೆಂಡರ್ ಅಧಿಸೂಚನೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, ಯಶವಂತಪುರ, ಬೆಂಗಳೂರು ಇವರ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು 38 (ಮೂವತ್ತೆಂಟು ಮಾತ್ರ) ದತ್ತಾಂಶ ನಮೂದಕರ ಸೇವೆಯನ್ನು ಒದಗಿಸಲು 1999ರ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಪ್ರತಿಷ್ಠಿತ ಮಾನವ ಸಂಪನ್ಮೂಲ ಸಂಸ್ಥೆಯಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **29 ನವೆಂಬರ್, 2021.** ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು ಸಂಪರ್ಕಿಸಿ **http:// www.eproc.karnataka.gov.in, http://www.ctax.kar.nic.in**

ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, ಬೆಂಗಳೂರು–560 022.

ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–4, ವಾಣಿಜ್ಯ ತೆರಿಗೆ ಕಾರ್ಯಾಲಯ–2, 4ನೇ ಮಹಡಿ, ಎ–ಬ್ಲಾಕ್, ಕೊಠಡಿ ಸಂಖ್ಯೆ:401, ಕೋರಮಂಗಲ, ಬೆಂಗಳೂರು–560047. ದೂರವಾಣಿ: 080–25704833, ಫ್ಯಾಕ್ಸ್: 080–25703822

ಸಂಖ್ಯೆ: ವಾತೆಜಂಆ(ಆ)/ವಿಸಸೇತಕ–4/779/2021–22 ದಿನಾಂಕ : 15.11.2021

ಟೆಂಡರ್ ಅಧಿಸೂಚನೆ

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–4, ಬೆಂಗಳೂರು ರವರ ಕಛೇರಿಯ ಕಾರ್ಯವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲು 40(ನಲವತ್ತು) ದತ್ತಾಂಶ ನಮೂದಕರುಗಳ ಸೇವೆಯನ್ನು ಒದಗಿಸುವ ಸಲುವಾಗಿ ದ್ವಿ–ಲಕೋಟೆ/ದ್ವಿ–ಭಾಗಗಳ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರಿನ ನಿಬಂಧನೆಗಳು, ಷರತ್ತುಗಳು, ನಮೂನೆ ಮತ್ತು ಇತರೆ ವಿವರಗಳನ್ನು ಜಾಲತಾಣ **http://eproc.karnataka.gov.in & http://ctax.kar.nic.in** ಮೂಲಕ ಪಡೆಯಬಹುದಾಗಿದೆ. ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 03.12.2021,** ಹೆಚ್ಚಿನ ವಿವರಗಳಿಗಾಗಿ ಸಹಾಯಪೀಠದ **ದೂರವಾಣಿ ಸಂಖ್ಯೆ: 080–25704833** ರಲ್ಲಿ ಸಂಪರ್ಕಿಸಬಹುದು.

ಸಹಿ/–
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–4,
ವಾಸಾಸಂಇ/ಬೆಂ.ನ/ಶಿರಡಿ ಸಾಯಿ/2164/2021–22 ಕೋರಮಂಗಲ, ಬೆಂಗಳೂರು.

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

INCOME TAX DEPARTMENT

ಸಾರ್ವಜನಿಕರ ಗಮನಕ್ಕೆ

ಆದಾಯ ತೆರಿಗೆ ಇಲಾಖೆಯು 2021ರ ಕರ್ನಾಟಕ ವಿಧಾನ ಪರಿಷತ್ತಿಗೆ ದ್ವೈವಾರ್ಷಿಕ ಚುನಾವಣೆ ನಡೆಯುತ್ತಿರುವ ಉದ್ದೇಶಕ್ಕಾಗಿ ದಿನಾಂಕ: 16.12.2021ರವರೆಗೆ ನಿಯಂತ್ರಣ ಕೊಠಡಿಯನ್ನು ತೆರೆಯಲಾಗಿದ್ದು ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತದೆ. ಯಾವುದೇ ವ್ಯಕ್ತಿ ಅಥವಾ ಪಕ್ಷಗಳು ನಗದು ಹಣ ವಿತರಣೆ ಅಥವಾ ಯಾವುದೇ ರೀತಿಯ ವಸ್ತುಗಳನ್ನು ಉಡುಗೊರೆ ರೂಪದಲ್ಲಿ ಹಂಚುತ್ತಿದ್ದರೆ, ಇತರೆ ಯಾವುದೇ ಆಮಿಷಗಳನ್ನು ತೋರಿಸುತ್ತಿರುವ ಬಗ್ಗೆ ದೂರುಗಳಿದ್ದರೆ ಈ ಕೆಳಗೆ ತಿಳಿಸಿರುವ ಫೋನ್ ನಂ. ಅಥವಾ ಇ–ಮೇಲ್ ಮೂಲಕ ಇಲಾಖೆಯೊಂದಿಗೆ ಹಂಚಿಕೊಳ್ಳಬಹುದು. ಮಾಹಿತಿಯನ್ನು ಹಂಚಿಕೊಳ್ಳುವ ವ್ಯಕ್ತಿಗಳ ಹೆಸರು ಮತ್ತು ವಿವರಗಳನ್ನು ಗೌಪ್ಯವಾಗಿಡಲಾಗುತ್ತದೆ. ಸಮಸ್ತ ನಾಗರಿಕರು ಈ ಸೌಲಭ್ಯವನ್ನು ಬಳಸಿಕೊಂಡು, ನೈಜವಾದ ಮಾಹಿತಿಯನ್ನು ಹಂಚಿಕೊಳ್ಳಬೇಕೆಂದು ಇಲಾಖೆಯು ವಿನಂತಿಸುತ್ತದೆ.

ಶುಲ್ಕ ರಹಿತ ಸಂಖ್ಯೆ	:	1800-425-2115
ದೂರವಾಣಿ ಸಂಖ್ಯೆ	:	080-22861126
		080-22862324
ಫ್ಯಾಕ್ಸ್ ಸಂಖ್ಯೆ	:	080-22866916
ಮೊಬೈಲ್ ಸಂಖ್ಯೆಗಳು	:	82774 22825
	:	82774 13614

ಇ–ಮೇಲ್: cleankarnatakaelection@incometax.gov.in

ಹೆಚ್ಚುವರಿ ನಿರ್ದೇಶಕರು ಆದಾಯ ತೆರಿಗೆ (ತನಿಖೆ), ಘಟಕ–2, 3ನೇ ಮಹಡಿ, ಸಿ.ಆರ್ ಬಿಲ್ಡಿಂಗ್ ಅನೆಕ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು – 560001.

ಲಖಿಂಪುರ–ಖೇರಿ ಪ್ರಕರಣ: ಸುಪ್ರೀಂ ಕೋರ್ಟ್ ಸಲಹೆಯನ್ನು ಒಪ್ಪಿದ ಉತ್ತರ ಪ್ರದೇಶ ಸರ್ಕಾರ

ತನಿಖೆಗೆ ನಿವೃತ್ತ ನ್ಯಾಯಮೂರ್ತಿ ನಿಗಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಲಖಿಂಪುರ–ಖೇರಿ ಹಿಂಸಾಚಾರ ಪ್ರಕರಣದ ತನಿಖೆಯ ಉಸ್ತುವಾರಿಗೆ ನಿವೃತ್ತ ನ್ಯಾಯಮೂರ್ತಿಯನ್ನು ನೇಮಿಸುವಂತೆ ಸುಪ್ರೀಂ ಕೋರ್ಟ್ ನೀಡಿದ್ದ ಸಲಹೆಗೆ ಉತ್ತರ ಪ್ರದೇಶ ಸರ್ಕಾರ ಸೋಮವಾರ ಸಮ್ಮತಿ ಸೂಚಿಸಿದೆ. ನಾಲ್ವರು ರೈತರು ಮತ್ತು ಒಬ್ಬ ಪತ್ರಕರ್ತನ ಮೇಲೆ ಎಸ್‌ಯುವಿ ಹರಿಸಿ ಹತ್ಯೆ ಹಾಗೂ ನಂತರದ ಹಿಂಸಾಚಾರದಲ್ಲಿ ಮೂವರ ಹತ್ಯೆಯು ಅಕ್ಟೋಬರ್ 3ರಂದು ಲಖಿಂಪುರ–ಖೇರಿಯಲ್ಲಿ ನಡೆದಿತ್ತು.

ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರನ್ನು ತನಿಖೆಯ ದಿನ ನಿತ್ಯದ ಪ್ರಗತಿಯ ಉಸ್ತುವಾರಿಗೆ ನೇಮಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ಪೀಠವು ಹೇಳಿದೆ.

ವಿಶೇಷ ತನಿಖಾ ತಂಡದ (ಎಸ್‌ಐಟಿ) ತನಿಖೆಯ ಮೇಲೆ ನಿಗಾ ಇರಿಸಲು ನಿವೃತ್ತ ನ್ಯಾಯಮೂರ್ತಿಯನ್ನು ಸುಪ್ರೀಂ ಕೋರ್ಟ್ ನೇಮಿಸಬಹುದು ಎಂದು ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಹರೀಶ್ ಸಾಳ್ವೆ ಹೇಳಿದರು. ರಾಜ್ಯದ ಹೊರಗಿನವರಾಗಿರಲಿ ರಾಜ್ಯದವರಾಗಿರಲಿ ನ್ಯಾಯಮೂರ್ತಿ ಎಂದರೆ ನ್ಯಾಯಮೂರ್ತಿಯೇ. ಹಾಗಾಗಿ, ರಾಜ್ಯದ ಹೊರಗಿನವರನ್ನೇ ನೇಮಿಸಬೇಕೆಂದಿಲ್ಲ ಎಂದೂ ಅವರು ಹೇಳಿದರು. ಈ ಹೊಣೆಯನ್ನು ವಹಿಸಿಕೊಳ್ಳಲು ಸಿದ್ಧವಿರುವ ನ್ಯಾಯಮೂರ್ತಿಯನ್ನು ಗುರುತಿಸಲಾಗುವುದು ಎಂದು ಪೀಠವು ಹೇಳಿತು.

'ಈಗ, ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇಮಕ ನಿರ್ಧಾರ ಕೈಗೊಳ್ಳಲು ಬೇಕಾದ ಸ್ವಾತಂತ್ರ್ಯ ಇದೆ. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಾಕೇಶ್ ಕುಮಾರ್ ಜೈನ್ ಅವರನ್ನು ನೇಮಿಸುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಅವರ ಜತೆಗೆ ಈ ಬಗ್ಗೆ ಸಮಾಲೋಚನೆ ನಡೆಸಬೇಕಿದೆ' ಎಂದು ಪೀಠವು ತಿಳಿಸಿತು.

ಪರಿಹಾರ ಪಡೆದುಕೊಂಡಿಲ್ಲದ, ಸಂತ್ರಸ್ತ ಕುಟುಂಬಗಳ ದೂರುಗಳೇನು ಎಂಬ ಬಗ್ಗೆಯೂ ಗಮನ ಹರಿಸಬೇಕು ಎಂದು ಉತ್ತರ ಪ್ರದೇಶ ಸರ್ಕಾರಕ್ಕೆ ಸೂಚಿಸಿತು.

ತನಿಖೆ ಸರಿಯಾಗಿ ನಡೆಯುತ್ತಿಲ್ಲ ಎಂದು ಉತ್ತರ ಪ್ರದೇಶ ಸರ್ಕಾರವನ್ನು ಸುಪ್ರೀಂ ಕೋರ್ಟ್ ಇದೇ 8ರಂದು ತರಾಟೆಗೆ ತೆಗೆದುಕೊಂಡಿತ್ತು. ಪಂಜಾಬ್–ಹರಿಯಾಣ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯನ್ನು ತನಿಖೆಯ ಪ್ರಗತಿಯ ಮೇಲೆ ನಿಗಾ ಇರಿಸಲು ನೇಮಿಸುವ ಪ್ರಸ್ತಾವವನ್ನೂ ಮುಂದಿಟ್ಟಿತ್ತು. ಪ್ರಕರಣದ ಪ್ರಮುಖ ಆರೋಪಿಯೊಬ್ಬರನ್ನು ರಕ್ಷಿಸುವುದಕ್ಕಾಗಿಯೇ ಸಾಕ್ಷ್ಯ ಸಂಗ್ರಹ ಮಾಡಿದಂತಿದೆ ಎಂದು ಅತೃಪ್ತಿ ವ್ಯಕ್ತಪಡಿಸಿತ್ತು. ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ, ಪ್ರಮುಖ ಆರೋಪಿ ಆಶಿಶ್ ಮಿಶ್ರಾ ಅವರನ್ನು ಪರೋಕ್ಷವಾಗಿ ಉಲ್ಲೇಖಿಸಿ ಹೀಗೆ ಹೇಳಲಾಗಿತ್ತು.

'ಎಸ್‌ಐಟಿ ಮೇಲ್ದರ್ಜೆಗೆ ಏರಿಸಿ'

ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ಮೇಲ್ದರ್ಜೆಗೆ ಏರಿಸುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ನ್ಯಾಯಾಲಯವು ಸೂಚಿಸಿದೆ. ಉನ್ನತ ಶ್ರೇಣಿಯ ಅಧಿಕಾರಿಗಳನ್ನು ನೇಮಿಸಲು ಹೇಳಿದೆ. ಉತ್ತರ ಪ್ರದೇಶ ಕೇಡರ್‌ನ ಐಪಿಎಸ್ ಅಧಿಕಾರಿಗಳನ್ನು ನೇಮಿಸಬೇಕು. ಆದರೆ, ಅವರು ಮೂಲತಃ ಬೇರೆ ರಾಜ್ಯದವರಾಗಿರಬೇಕು ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಶ್ರೀನಗರ: ಶೂನ್ಯ ತಲುಪಿದ ತಾಪಮಾನ

ಶ್ರೀನಗರ: ಜಮ್ಮು–ಕಾಶ್ಮೀರದ ಬೇಸಿಗೆಯ ರಾಜಧಾನಿ ಶ್ರೀನಗರದಲ್ಲಿ ದಿನದಿಂದ ದಿನಕ್ಕೆ ತಾಪಮಾನ ಕುಸಿಯುತ್ತಿದ್ದು, ಭಾನುವಾರ ರಾತ್ರಿ ಸೊನ್ನೆ ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಶ್ರೀನಗರದಲ್ಲಿ ಶನಿವಾರ –0.9 ಡಿಗ್ರಿ ಸೆಲ್ಸಿಯಸ್ ಇದ್ದ ತಾಪಮಾನ ಭಾನುವಾರ ಶೂನ್ಯ ತಲುಪಿರುವುದರಿಂದ ಕಾಶ್ಮೀರದ ಹಲವು ಪ್ರದೇಶಗಳು ಮಂಜಿನಿಂದ ಆವರಿಸಿದ್ದು, ತೀವ್ರ ಚಳಿ ಕಂಡುಬಂದಿದೆ.

ಅರುಣಾಚಲ ಪ್ರದೇಶ: ಮೂವರು ಉಗ್ರರ ಹತ್ಯೆ

ಇಟಾನಗರ (ಪಿಟಿಐ): ನ್ಯಾಷನಲ್ ಸೋಷಿಯಲಿಸ್ಟ್ ಕೌನ್ಸಿಲ್ ಆಫ್ ನಾಗಾಲ್ಯಾಂಡ್‌ನ (ಖಪ್ಲಾಂಗ್) ಪ್ರತ್ಯೇಕತಾವಾದಿ ಸಂಘಟನೆಯ ಮೂವರು ಉಗ್ರರನ್ನು ಅಸ್ಸಾಂ ರೈಫಲ್ಸ್ ಯೋಧರು ಸೋಮವಾರ ಗುಂಡಿಕ್ಕಿ ಕೊಂದಿದ್ದಾರೆ.

ಮಣಿಪುರದಲ್ಲಿ ಶನಿವಾರ ಉಗ್ರರು ನಡೆಸಿದ ದಾಳಿಯಲ್ಲಿ ಕರ್ನಲ್ ಶ್ರೇಣಿಯ ಅಧಿಕಾರಿ ಸೇರಿದಂತೆ ಐವರು ಅಸ್ಸಾಂ ರೈಫಲ್ಸ್ ಸಿಬ್ಬಂದಿ ಮೃತಪಟ್ಟಿದ್ದರು. ಉಗ್ರರ ಪತ್ತೆಗೆ ಕಾರ್ಯಾಚರಣೆ ಚುರುಕುಗೊಳಿಸಿದ್ದ ಯೋಧರು ಅರುಣಾಚಲ ಪ್ರದೇಶದ ಲಾಂಗ್ಡಿಂಗ್ ಜಿಲ್ಲೆಯಲ್ಲಿ ಮೂವರು ಉಗ್ರರನ್ನು ಹತ್ಯೆ ಮಾಡಿದ್ದಾರೆ.

ಅನಿಲ್ ದೇಶಮುಖ್ ನ್ಯಾಯಾಂಗ ಬಂಧನಕ್ಕೆ

ಮುಂಬೈ (ಪಿಟಿಐ): ಬಹುಕೋಟಿ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರ ಕಸ್ಟಡಿ ಅವಧಿಯನ್ನು ವಿಸ್ತರಿಸಲು ಬಯಸದ ಕಾರಣ, ಇಲ್ಲಿನ ವಿಶೇಷ ನ್ಯಾಯಾಲಯ ಅವರಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿತು.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್‌ಎ) ನಿಬಂಧನೆಗಳ ಅಡಿಯಲ್ಲಿ ವಿಚಾರಣೆ ನಡೆಸಿದ ಇ.ಡಿ ಇದೇ 1 ರಂದು ದೇಶಮುಖ್ ಅವರನ್ನು ಬಂಧಿಸಿತ್ತು. ಕಸ್ಟಡಿ ಅವಧಿ ಸೋಮವಾರ ಅಂತ್ಯಗೊಂಡಿತ್ತು. ಹೀಗಾಗಿ ಅವರನ್ನು ಪಿಎಂಎಲ್‌ಎ ವಿಶೇಷ ನ್ಯಾಯಾಧೀಶ ಎಚ್.ಎಸ್. ಸತ್‌ಭಾಯ್ ಎದುರು ಹಾಜರುಪಡಿಸಲಾಗಿತ್ತು.

ಭೋಪಾಲ್‌ನಲ್ಲಿ 'ಬುಡಕಟ್ಟು ಗೌರವ ದಿನ' ಕಾರ್ಯಕ್ರಮ; ಬಿರ್ಸಾ ಮುಂಡಾ ಸ್ಮರಣೆ

'ಬುಡಕಟ್ಟು ಜನರ ದುಃಸ್ಥಿತಿಗೆ ಕಾಂಗ್ರೆಸ್ ಕಾರಣ'

ಭೋಪಾಲ್ (ಪಿಟಿಐ): ಬುಡಕಟ್ಟು ಜನರ ದುಃಸ್ಥಿತಿಗೆ ಕಾಂಗ್ರೆಸ್ ಸರ್ಕಾರವನ್ನು ದೂರಿರುವ ಪ್ರಧಾನಿ ನರೇಂದ್ರ ಮೋದಿ, 'ಹಿಂದೆ ಆಡಳಿತ ನಡೆಸಿದ ಸರ್ಕಾರಗಳು ಈ ಸಮುದಾಯದ ಕಲ್ಯಾಣದ ಕಡೆಗೆ ಗಮನ ನೀಡಲಿಲ್ಲ' ಎಂದು ಆರೋಪಿಸಿದ್ದಾರೆ.

'ಬುಡಕಟ್ಟು ಜನರ ಗೌರವ' ದಿನ ಕಾರ್ಯಕ್ರಮದಲ್ಲಿ ಸೋಮವಾರ ಮಾತನಾಡಿದ ಅವರು, 'ಬುಡಕಟ್ಟು ಸಮುದಾಯದ ಪ್ರಮುಖರನ್ನು ಮತ್ತು ಅವರ ಕೊಡುಗೆಗಳನ್ನು ಕಡೆಗಣಿಸುವ ಮೂಲಕ, ಕಾಂಗ್ರೆಸ್ ನೇತೃತ್ವದ ಹಿಂದಿನ ಸರ್ಕಾರಗಳು ಅಪರಾಧ ಎಸಗಿವೆ. ಬುಡಕಟ್ಟು ಸಮುದಾಯದ ಕಾಣ್ಕೆ ಬಗ್ಗೆ ದೇಶಕ್ಕೆ ಹೇಳಿಲ್ಲ; ಹೇಳಿದ್ದರೂ ಅತೀ ಸ್ವಲ್ಪ ಮಾಹಿತಿ ನೀಡಿವೆ' ಎಂದು ದೂರಿದರು.

ಆ ಸರ್ಕಾರಗಳು ತಮ್ಮ ಅವಧಿಯಲ್ಲಿ ಬುಡಕಟ್ಟು ಸಮುದಾಯದ ಜನರಿಗೆ ಕೊಡಬೇಕಾದದ್ದನ್ನು ಕೊಡಲಿಲ್ಲ ಮತ್ತು ಕನಿಷ್ಠ ಸೌಕರ್ಯವನ್ನೂ ಕಲ್ಪಿಸಲಿಲ್ಲ. ಆಗ ಕಡೆಗಣಿಸಲಾದ ಇಂಥ ಸಮುದಾಯ ಹಾಗೂ ಅವರ ಪ್ರದೇಶಗಳ ಅಭಿವೃದ್ಧಿಗೆ ತಮ್ಮ ಸರ್ಕಾರ ಪ್ರಯತ್ನಿಸುತ್ತಿದೆ. ಸೌಲಭ್ಯ ವಂಚಿತ 100 ಜಿಲ್ಲೆಗಳಲ್ಲಿ ಈಗ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಮತ್ತು ಮಧ್ಯ ಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಭೋಪಾಲ್‌ನಲ್ಲಿ ನಡೆದ ಬುಡಕಟ್ಟು ಗೌರವ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಪಿಟಿಐ ಚಿತ್ರ

ಬುಡಕಟ್ಟು ಸಮುದಾಯದ ನಾಯಕ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಬಿರ್ಸಾ ಮುಂಡಾ ಅವರ ಜನ್ಮದಿನವನ್ನು (ನ.15) ಬುಡಕಟ್ಟು ಗೌರವ ದಿನವನ್ನಾಗಿ ಕೇಂದ್ರ ಸರ್ಕಾರ ಘೋಷಿಸಿದೆ.

ಅಂಬೇಡ್ಕರ್ ಜಯಂತಿ, ಗಾಂಧಿ ಜಯಂತಿ ಹಾಗೂ ಇತರ ಜಯಂತಿಗಳಂತೆಯೇ ಪ್ರತಿವರ್ಷ ನ.15ರಂದು ಭಗವಾನ್ ಬಿರ್ಸಾ ಮುಂಡಾ ಅವರ ಜಯಂತಿಯನ್ನೂ ಆಚರಿಸಲಾಗುವುದು ಎಂದು ಮೋದಿ ಹೇಳಿದರು.

ಮಧ್ಯಪ್ರದೇಶದಲ್ಲಿನ ಬುಡಕಟ್ಟು ಸಮುದಾಯದವರು ತಾವಿರುವ ಗ್ರಾಮದಲ್ಲಿಯೇ ಪಡಿತರವನ್ನು ಪಡೆಯಬಹುದಾದ 'ರೇಷನ್ ಆಪ್‌ಕೇ ಗ್ರಾಮ್' ಯೋಜನೆಯನ್ನು ಇದೇ ಸಂದರ್ಭದಲ್ಲಿ ಉದ್ಘಾಟಿಸಿದರು.

ಮಧ್ಯಪ್ರದೇಶದ ಸಿಕಲ್ ಸೆಲ್ ಯೋಜನೆಯಡಿ ಹಿಮೊಗ್ಲೋಬಿನ್ ವ್ಯತ್ಯಾಸದಿಂದ ಉಂಟಾಗುವ ಕಾಯಿಲೆಯಿಂದ ಬಳಲುತ್ತಿರುವವರಿಗೆ ಜಾಗೃತಿ ಹಾಗೂ ಚಿಕಿತ್ಸೆ ನೀಡುವ ಜೆನೆಟಿಕ್ ಕೌನ್ಸೆಲಿಂಗ್ ಕಾರ್ಡ್‌ಗಳನ್ನು ಫಲಾನುಭವಿಗಳಿಗೆ ವಿತರಿಸಿದರು.

ಆಂಧ್ರಪ್ರದೇಶ, ಛತ್ತೀಸಗಡ, ಮಧ್ಯಪ್ರದೇಶ, ಜಾರ್ಖಂಡ್, ಮಹಾರಾಷ್ಟ್ರ, ಒಡಿಶಾ, ತ್ರಿಪುರಾ, ದಾದ್ರಾ ಮತ್ತು ನಗರ್ ಹವೇಲಿ ಹಾಗೂ ದಮನ್ ಮತ್ತು ದಿಯು ಸೇರಿದಂತೆ ವಿವಿಧ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸ್ಥಾಪನೆಯಾಗಲಿರುವ 50 ಏಕಲವ್ಯ ಮಾದರಿ ವಸತಿ ಶಾಲೆಗಳ ನಿರ್ಮಾಣಕ್ಕೆ ಚಾಲನೆ ಕೊಟ್ಟರು.

ಆದಿ ಮಹೋತ್ಸವ: ಉದ್ಘಾಟನೆಗೆ ಬಿರ್ಸಾ ಮುಂಡಾ ಮೊಮ್ಮಗ

ನವದೆಹಲಿ(ಪಿಟಿಐ): ಬುಡಕಟ್ಟು ಸಮುದಾಯ ಕಲೆ, ಸಂಸ್ಕೃತಿ ಹಾಗೂ ಆಹಾರ ಪದ್ಧತಿಯನ್ನು ಬಿಂಬಿಸುವ 'ಆದಿ ಮಹೋತ್ಸವ'ವನ್ನು ಬಿರ್ಸಾ ಮುಂಡಾ ಅವರ ಮೊಮ್ಮಗ ಸುಖರಾಂ ಮುಂಡಾ ಮಂಗಳವಾರ ಉದ್ಘಾಟಿಸಲಿದ್ದಾರೆ.

ಈ ಉತ್ಸವವನ್ನು ದೆಹಲಿಯಲ್ಲಿ ಆಯೋಜಿಸಲಾಗಿದ್ದು, ಸುಖರಾಂ ಮುಂಡಾ ಹಾಗೂ ಕೇಂದ್ರದ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾ ಉದ್ಘಾಟಿಸಲಿದ್ದಾರೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಆದಿವಾಸಿ ಸಮುದಾಯಗಳ ಶ್ರೀಮಂತ ಹಾಗೂ ವೈವಿಧ್ಯಮಯ ಕಲೆ ಹಾಗೂ ಸಂಸ್ಕೃತಿಯನ್ನು ದೇಶಕ್ಕೆ ಪರಿಚಯಿಸುವ ಪ್ರಯತ್ನವಾಗಿ, 2017ರಲ್ಲಿ ಆದಿ ಮಹೋತ್ಸವವನ್ನು ಆರಂಭಿಸಲಾಗಿದೆ.

'ವಿಐಪಿ ಸಂಸ್ಕೃತಿ ಇನ್ನಿಲ್ಲ'

ಭೋಪಾಲ್ (ಪಿಟಿಐ): ಇಲ್ಲಿನ ನವೀಕೃತ ರಾಣಿ ಕಮಲಾಪತಿ ರೈಲು ನಿಲ್ದಾಣವನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಉದ್ಘಾಟಿಸಿದರು.

ಈ ಮೊದಲು ಹಬೀಬ್‌ಗಂಜ್ ಎಂದು ಕರೆಯಲಾಗುತ್ತಿದ್ದ ಈ ನಿಲ್ದಾಣಕ್ಕೆ, ಭೋಪಾಲದ ಗೊಂಡ ಸಾಮ್ರಾಜ್ಯದ ರಾಣಿಯ ಹೆಸರನ್ನು ಈಚೆಗಷ್ಟೇ ಮರುನಾಮಕರಣ ಮಾಡಲಾಗಿದೆ.

ಜನರು ಇಂತಹ ಸೌಕರ್ಯಗಳ ನಿರೀಕ್ಷೆಯಲ್ಲಿದ್ದರು ಎಂದ ಪ್ರಧಾನಿ, ವಿಐಪಿ ಸಂಸ್ಕೃತಿಯನ್ನು ತೊಡೆದುಹಾಕಿ ಇಪಿಐ (ಪ್ರತಿಯೊಬ್ಬ ವ್ಯಕ್ತಿಯೂ ಪ್ರಮುಖ) ಸಂಸ್ಕೃತಿಯನ್ನು ಆರಂಭಿಸುವ ನಿಟ್ಟಿನಲ್ಲಿ ಆರಂಭಿಕ ಹೆಜ್ಜೆ ಎಂದು ಬಣ್ಣಿಸಿದರು.

'ನೀರು ಹಂಚಿಕೆ ಬಳಿಕ ನದಿ ಜೋಡಣೆಗೆ ಡಿಪಿಆರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷ್ಣಾ, ಕಾವೇರಿ, ಗೋದಾವರಿ ಮತ್ತು ಪಾಲಾರ್ ನದಿ ಜೋಡಣೆಯ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧ ಪಡಿಸುವ ಮೊದಲು ನದಿಪಾತ್ರದ ರಾಜ್ಯಗಳ ನೀರಿನ ಪಾಲು ಹಂಚಿಕೆ ಆಗಬೇಕು ಎಂದು ಕರ್ನಾಟಕ ಸಲ್ಲಿಸಿರುವ ಅಹವಾಲನ್ನು ಪರಿಗಣಿಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕೇಂದ್ರ ಜಲಶಕ್ತಿ ಮಂತ್ರಾಲಯಕ್ಕೆ ಸೂಚಿಸಿದ್ದಾರೆ.

ಭಾನುವಾರ (ನ. 14) ತಿರುಪತಿಯಲ್ಲಿ ನಡೆದ ದಕ್ಷಿಣ ವಲಯ ಪರಿಷತ್ ಸಭೆಯಲ್ಲಿ ಭಾಗವಹಿಸಿ, ಬೆಂಗಳೂರಿಗೆ ವಾಪಸ್ ಆಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಸುದ್ದಿಗಾರರಿಗೆ ಸೋಮವಾರ ಈ ವಿಷಯ ತಿಳಿಸಿದರು.

ಪರಿಷತ್‌ನ ಅಧ್ಯಕ್ಷರೂ ಆಗಿರುವ ಅಮಿತ್ ಶಾ ಅವರು, ಅಂತರರಾಜ್ಯ ನದಿ ವ್ಯಾಜ್ಯಗಳನ್ನು ಪರಿಹರಿಸುವ ವಿಷಯದಲ್ಲಿ ಜಲಶಕ್ತಿ ಮಂತ್ರಾಲಯದ ಅಧಿಕಾರಿಗಳಿಗೆ ಹಲವು ಸೂಚನೆ ನೀಡಿದರು. ದಕ್ಷಿಣದ ರಾಜ್ಯಗಳಿಗೆ ಸಂಬಂಧಿಸಿದ ಹಲವು ವಿಚಾರಗಳು ಇತ್ಯರ್ಥವಾದವು ಎಂದು ಹೇಳಿದರು.

ಕೃಷ್ಣಾ ಜಲ ವಿವಾದ ನ್ಯಾಯಮಂಡಳಿ-2ರ ತೀರ್ಪಿನ ಗೆಜೆಟ್ ಅಧಿಸೂಚನೆ ಹೊರಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದೇನೆ. ರಾಜ್ಯದ ನೀರಾವರಿ ಯೋಜನೆಗಳ ಕುರಿತು ಸಭೆಯಲ್ಲಿ ಪ್ರಬಲವಾಗಿ ನಮ್ಮ ವಾದಗಳನ್ನು ಮಂಡಿದ್ದೇನೆ ಎಂದು ಬೊಮ್ಮಾಯಿ ವಿವರಿಸಿದರು.

ಮೇಕೆದಾಟು ಯೋಜನೆಯ ವಿಷಯವನ್ನು ಪ್ರಸ್ತಾಪಿಸಿದೆ. ತಮಿಳುನಾಡಿನ ಮುಖ್ಯಮಂತ್ರಿ ಪಾಲ್ಗೊಳ್ಳದಿರುವುದರಿಂದ ಚರ್ಚೆ ಸಾಧ್ಯವಾಗಲಿಲ್ಲ. ಮೇಕೆದಾಟು ಯೋಜನೆ ಜಾರಿಗೆ ಎದುರಾಗಿರುವ ತೊಡಕು ನಿವಾರಿಸಲು ಕೇಂದ್ರ ಜಲಶಕ್ತಿ ಸಚಿವರು, ಸಚಿವಾಲಯಕ್ಕೆ ಮನವಿ ಮಾಡಲಾಗುವುದು ಎಂದು ಹೇಳಿದರು.

ಮೀನುಗಾರಿಕೆಯಲ್ಲಿ ಆಂಟಿ ಬಯೋಟಿಕ್ ಗಳ ಬಳಕೆಯಿಂದ ಮೀನು ರಫ್ತಿಗೆ ಅಡಚಣೆಯಾಗುತ್ತಿದೆ ಎಂಬ ವಿಷಯ ಸಭೆಯಲ್ಲಿ ಚರ್ಚೆಗೆ ಬಂದಿತು. ಪೊಕ್ಸೊ ಪ್ರಕರಣಗಳನ್ನು ಶೀಘ್ರವೇ ಇತ್ಯರ್ಥಪಡಿಸಲು, ನಿಗದಿತ ಅವಧಿಯೊಳಗೆ ದೋಷಾರೋಪ ಪಟ್ಟಿ ಸಲ್ಲಿಸಲು ಗೃಹಸಚಿವರು ಸಭೆಯಲ್ಲಿ ಸೂಚನೆ ನೀಡಿದರು ಎಂದು ಬೊಮ್ಮಾಯಿ ಹೇಳಿದರು.

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (GTTC)

ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–560010.

ಸಂಖ್ಯೆ : ಜಿಟಿಟಿಸಿ/ಅಡ್ಮಿನ್/ಎಫ್.ಎಲ್/ಹೆಚ್.ಕೆ/2021–22 ದಿನಾಂಕ: 15.11.2021

ಪ್ರಕಟಣೆ – ಲಿಖಿತ ಪರೀಕ್ಷೆ/ಸಂದರ್ಶನ

ಕಲ್ಯಾಣ – ಕರ್ನಾಟಕ (ಹೈದ್ರಬಾದ್–ಕರ್ನಾಟಕ) ಪ್ರದೇಶದ 371 ಜೆ ಸ್ಥಳೀಯ ವೃಂದಗಳ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ದಿನಾಂಕ: 16.02.2019ರಂದು ಹೊರಡಿಸಲಾದ ಪ್ರಕಟಣೆಗೆ ಸಂಬಂಧಿಸಿದಂತೆ ಲಿಖಿತ ಪರೀಕ್ಷೆಗೆ ಹಾಜರಾಗಲು ಅರ್ಹ ಅಭ್ಯರ್ಥಿಗಳ ಪಟ್ಟಿ, ಪರೀಕ್ಷಾ ಪಠ್ಯಕ್ರಮ, ಪರೀಕ್ಷಾ ದಿನಾಂಕ ಮತ್ತು ಸ್ಥಳದ ವಿವರಗಳನ್ನು ಜಿಟಿಟಿಸಿ ಜಾಲತಾಣ **https://karunadu.karnataka.gov.in/gttc**ದಿಂದ ಪಡೆದುಕೊಳ್ಳುವುದು.

ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು **ದಿನಾಂಕ 27.12.2021 ಮತ್ತು ದಿನಾಂಕ 28.12.2021ರಂದು ಜಿಟಿಟಿಸಿ ಕಲ್ಬುರ್ಗಿ ಕೇಂದ್ರದಲ್ಲಿ** ನಡೆಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080–23384303 ಅಥವಾ ಇ–ಮೇಲ್ ವಿಳಾಸ **gttcadmn2019@gmail.com** ವನ್ನು ಸಂಪರ್ಕಿಸಬಹುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು.

ಕರ್ನಾಟಕ ಸರ್ಕಾರ GOVERNMENT OF KARNATAKA

ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ

VIJAYANAGAR INSTITUTE OF MEDICAL SCIENCES, BALLARI

e-mail : directorvimsBallari@gmail.com
website: www.vimsBallari.org.in

No. VIMS/SUP/TEND/66/2021-22, DATE: 15.11.2021

ಇ–ಟೆಂಡರ್ ಅಧಿಸೂಚನೆ

ವಿಮ್ಸ್ ಸಂಸ್ಥೆಯ ಹೊಸ ಓ.ಟಿ ಕಾಂಪ್ಲೆಕ್ಸ್ ವಿಭಾಗಕ್ಕೆ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ ಕೆ.ಟಿ.ಪಿ.ಪಿ ಅಧಿನಿಯಮ–1999 ಮತ್ತು ನಿಯಮ–2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮೂಲಕ ಈ ಕೆಳಗಿನಂತೆ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ ಹಾಗು ಹೆಚ್ಚಿನ ಮಾಹಿತಿಯನ್ನು ಕಾರ್ಯಾಲಯದ ಕಛೇರಿ ಅವಧಿಯಲ್ಲಿ ಪಡೆಯಲು ಮತ್ತು ವೆಬ್‌ಸೈಟ್: **https://eproc.karnataka.gov.in** ಮೂಲಕ ಪಡೆಯಲು ಕೋರಿದೆ.
01. ಟೆಂಡರ್ ಫಾರಂ ಅನ್ನು ವೆಬ್‌ಸೈಟ್ – http//eproc.karnataka.gov.in ರಲ್ಲಿ ಡೌನ್ ಲೋಡ್ ಮಾಡಿಕೊಳ್ಳು ಪ್ರಾರಂಭದ ದಿನಾಂಕ: **15.11.2021.**
02. ಟೆಂಡರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **20.11.2021 Up to 5.00 PM.**
03. ಪ್ರಿ ಬಿಡ್ ಮಿಟಿಂಗ್ ದಿನಾಂಕ ಮತ್ತು ಸಮಯ: **23.11.2021 @ 11.30 AM in the chamber of Director, VIMS, Ballari.**
04. ಟೆಂಡರನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್‌ಮಾಡಲು ಕೊನೆಯ ದಿನಾಂಕ ಮತ್ತು ಸಮಯ: **29.11.2021 up to 5.00 PM.** 05. ಟೆಂಡರಿನ ಟೆಕ್ನೋ–ಕಮರ್ಷಿಯಲ್ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ (ಮೊದಲನೇ ಬಿಡ್): **30.11.2021 @ 5:15 PM.** 06. ಸದರಿ ಟೆಂಡರಿನ ಅಂದಾಜು ಮೊತ್ತ: **199.90 Lakhs**

ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/507/ಎಂಸಿಎ/2021–22

ನವೋದಯ ವಿದ್ಯಾಲಯ ಸಮಿತಿ

ಶಿಕ್ಷಣ ಸಚಿವಾಲಯದಡಿಯಲ್ಲಿನ ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತ ವಿಭಾಗ,
ಭಾರತ ಸರ್ಕಾರ.

Azadi Ka Amrit Mahotsav

ಪ್ರವೇಶ ಅಧಿಸೂಚನೆ

ಈ ಮೂಲಕ ಸಂಬಂಧಪಟ್ಟವರ ಗಮನಕ್ಕೆ ತರಬಯಸುವುದೇನೆಂದರೆ, ಜವಾಹರ ನವೋದಯ ವಿದ್ಯಾಲಯಗಳಲ್ಲಿ 2022–23ನೇ ಅವಧಿಗೆ, ಲ್ಯಾಟರಲ್ ಎಂಟ್ರಿಗೆ ಆಯ್ಕೆ ಪರೀಕ್ಷೆಯ ಮೂಲಕ 9ನೇ ತರಗತಿಗೆ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು ಆಡಳಿತಾತ್ಮಕ ಕಾರಣಗಳಿಂದಾಗಿ 2021 ನವಂಬರ್ 30 ರವರೆಗೆ ವಿಸ್ತರಿಸಲಾಗಿದೆ. ಅಭ್ಯರ್ಥಿಗಳು ವೆಬ್‌ಸೈಟ್ **www.navodaya.gov.in** ಅಥವಾ **nvsadmissionclassnine.in** ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಹುದು.

ಪ್ರಕಟಣೆ ನವೋದಯ ವಿದ್ಯಾಲಯ ಸಮಿತಿ

ರಾಮನಗರ ಜಿಲ್ಲಾ ಪಂಚಾಯತ್

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ರಾಮನಗರ ವಿಭಾಗ, ರಾಮನಗರ.

ಸಂಖ್ಯೆ: 20/ಕಾಅ/ಗ್ರಾ.ಕು.ನೀ.&ನೈ.ವಿ/ರಾ/ಟೆಂಡರ್/ಸ.ಇಂ–4/JJM/1365-1375/2021-22 ದಿನಾಂಕ: 11.11.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ **JJM ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು** ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ನಿರ್ವಹಿಸಲು ವಿವರಗಳು ಈ ಕೆಳಕಂಡಂತಿವೆ.
ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ: **ರೂ. 169.99 ಲಕ್ಷಗಳು.** ಇ.ಎಂ.ಡಿ: **ರೂ. 2.55 ಲಕ್ಷಗಳು.** ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ: **ರೂ. 61.63 ಲಕ್ಷಗಳು.** ಇ.ಎಂ.ಡಿ: **ರೂ. 1.23 ಲಕ್ಷಗಳು.** ಕಾಲಾವಧಿ: **06 ತಿಂಗಳು.**
ಬಿಡ್ ಪೂರ್ವಬಾವಿ ಸಭೆ **ದಿನಾಂಕ: 19.11.2021ರ ಬೆಳಗ್ಗೆ 11:00 ಗಂಟೆಗೆ.** ಸ್ಥಳ: **ಕಾರ್ಯಪಾಲಕ ಅಭಿಯಂತರರ ಕಛೇರಿ, 3ನೇ ಮಹಡಿ, ಪಂಚಾಯತ್ ಭವನ ರಾಮನಗರ.**
ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 26.11.2021ರ ಸಂಜೆ 5.30 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 29.11.2021ರ ಬೆಳಗ್ಗೆ 11:00 ಗಂಟೆಯ ನಂತರ.** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 01.12.2021ರ ಬೆಳಗ್ಗೆ 11:00 ಗಂಟೆಯ ನಂತರ.**
ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ / ವೆಬ್‌ಸೈಟ್ **www.eproc.karnataka.gov.in** ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ವಾಸಾಸಂಇ/ರಾನ/ಬ್ರಾಂಚ್/293/2021–22 ಗ್ರಾ.ಕು.ನೀ&ನೈ ಇಲಾಖೆ, ರಾಮನಗರ ವಿಭಾಗ, ರಾಮನಗರ

ತಮಿಳುನಾಡು, ಕೇಂದ್ರಕ್ಕೆ 'ಸುಪ್ರೀಂ' ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ನದಿಯನ್ನು ವೆಲ್ಲಾರು, ವೈಗೈ ಮತ್ತು ಗುಂಡಾರು ನದಿಗಳಿಗೆ ಜೋಡಿಸುವ ಯೋಜನೆಗೆ ಸಂಬಂಧಿಸಿದಂತೆ ಆರು ವಾರಗಳಲ್ಲಿ ಪ್ರತಿಕ್ರಿಯೆ ನೀಡಲು ಸೂಚಿಸಿ ತಮಿಳುನಾಡು, ಪುದುಚೇರಿ ಮತ್ತು ಕೇಂದ್ರ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ಜಾರಿ ಮಾಡಿದೆ.

ಯೋಜನೆ ವಿರೋಧಿಸಿ ಕರ್ನಾಟಕ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಿ.ಟಿ. ರವಿಕುಮಾರ್, ಈ ಸರ್ಕಾರಗಳು ಪ್ರತಿಕ್ರಿಯೆ ಸಲ್ಲಿಸಿದ ನಂತರ ತನ್ನ ಲಿಖಿತ ಹೇಳಿಕೆ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಮೂರು ವಾರಗಳ ಕಾಲಾವಕಾಶ ನೀಡಿದೆ.

ಕೇಂದ್ರ ಸರ್ಕಾರದ ಹಣಕಾಸಿನ ನೆರವಿನ ನದಿ ಜೋಡಣೆ ಯೋಜನೆಯ ಮೊದಲ ಹಂತದ ಕಾಮಗಾರಿಗೆ ತಮಿಳುನಾಡು ಸರ್ಕಾರ 2021ರ ಫೆಬ್ರುವರಿಯಲ್ಲಿ ಚಾಲನೆ ನೀಡಿದೆ. ಕಾವೇರಿಯ ಹೆಚ್ಚುವರಿ 45 ಟಿಎಂಸಿ ಅಡಿ ನೀರನ್ನು ಬಳಸಿಕೊಳ್ಳುವ ಉದ್ದೇಶದೊಂದಿಗೆ ಈ ಯೋಜನೆ ಕೈಗೆತ್ತಿಕೊಳ್ಳಲಾಗಿದೆ.

ತಮಿಳುನಾಡಿನ ವಿವಿಧೆಡೆ ಹರಿದಿರುವ ಈ ಮೂರು ನದಿಗಳಿಗೆ ಕಾವೇರಿಯನ್ನು ಜೋಡಣೆ ಮಾಡುವುದಲ್ಲದೆ, ಹಲವು ಜಿಲ್ಲೆಗಳಲ್ಲಿನ ಸಾವಿರಾರು ಕೆರೆಗಳಿಗೆ ನೀರು ತುಂಬಿಸಲು ಒಟ್ಟು ಮೂರು ಹಂತದಲ್ಲಿ 262 ಕಿಲೋ ಮೀಟರ್ ಅಂತರದ ಕಾಲುವೆ ನಿರ್ಮಾಣ ಕಾಮಗಾರಿಯ ಗುರಿಯನ್ನು ತಮಿಳುನಾಡು ಹೊಂದಿದೆ.

ಕಾವೇರಿ ಕಣಿವೆ ವ್ಯಾಪ್ತಿಯ ತಮಿಳುನಾಡು ಮತ್ತು ಪುದುಚೇರಿ ಸರ್ಕಾರಗಳ ಪರ ವಕೀಲರು ವಿಚಾರಣೆ ಮುಂದೂಡುವಂತೆ ಕೋರಿದ್ದರಿಂದ, ತಮ್ಮ ಕೊಠಡಿಯಲ್ಲಿಯೇ ವಿಚಾರಣೆ ನಡೆಸಿ ಕರ್ನಾಟಕ ಸರ್ಕಾರದ ಪರ ವಕೀಲರ ವಾದ ಆಲಿಸಿದ ನ್ಯಾಯಮೂರ್ತಿ ರವಿಕುಮಾರ್, 9 ವಾರಗಳ ನಂತರ ಪ್ರಕರಣದ ವಿಚಾರಣೆ ನಡೆಸಲಾಗುವುದು ಎಂದು ಹೇಳಿದರು.

ಕಾವೇರಿಯ ಹೆಚ್ಚುವರಿ ನೀರನ್ನು ಬೆಂಗಳೂರು, ರಾಮನಗರ, ಚನ್ನಪಟ್ಟಣ ಮತ್ತು ಕನಕಪುರದ ಜನತೆಗೆ ಕುಡಿಯಲು ಪೂರೈಸುವ ಸಲುವಾಗಿ ಕರ್ನಾಟಕದ ಉದ್ದೇಶಿತ ಮೇಕೆದಾಟು ಯೋಜನೆಗೆ ತೀವ್ರ ವಿರೋಧ ವ್ಯಕ್ತಪಡಿಸಿರುವ ತಮಿಳುನಾಡು, ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

ಕೇರಳದಲ್ಲಿ ಮುಂದುವರಿದ ಮಳೆ ಅಬ್ಬರ: ಮೂವರ ಸಾವು

ಕೊಚ್ಚಿ: ಕೇರಳದಲ್ಲಿ ಸೋಮವಾರವೂ ಮಳೆಯ ಅಬ್ಬರ ಮುಂದುವರಿದಿದ್ದು, ಮೂವರು ಮೃತಪಟ್ಟಿದ್ದಾರೆ. ಹಲವೆಡೆ ಆಸ್ತಿಪಾಸ್ತಿಗಳಿಗೆ ಹಾನಿ ಸಂಭವಿಸಿವೆ.

ಮಳೆಯಿಂದಾಗಿ ಕಳೆದ 24 ಗಂಟೆಗಳಲ್ಲಿ ಇಬ್ಬರು ಮಕ್ಕಳು ಸೇರಿದಂತೆ ಮೂವರು ಮೃತಪಟ್ಟಿದ್ದಾರೆ. ಒಂದು ಮನೆ ಸಂಪೂರ್ಣ ಕುಸಿದಿದ್ದು, 28 ಮನೆಗಳು ಭಾಗಶಃ ಧ್ವಂಸವಾಗಿವೆ.

ಎರ್ನಾಕುಲಂ, ಇಡುಕ್ಕಿ, ತ್ರಿಶ್ಶೂರ್, ಕೋಯಿಕ್ಕೋಡ್, ಕಣ್ಣೂರು, ಕಾಸರಗೋಡು ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆ ಇದ್ದು ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) 'ಆರೆಂಜ್ ಅಲರ್ಟ್' ಘೋಷಿಸಿದೆ.

ಈ ಮಧ್ಯೆ ಶಬರಿಮಲೆಯಲ್ಲಿ ನಡೆಯುವ 2 ತಿಂಗಳ ವಾರ್ಷಿಕ ಯಾತ್ರೆಗಾಗಿ ಅಯ್ಯಪ್ಪ ದೇವಸ್ಥಾನ ಸೋಮವಾರ ಸಂಜೆಯಿಂದ ಭಕ್ತರ ಪ್ರವೇಶಕ್ಕೆ ಮುಕ್ತವಾಗಿದೆ.

ಇತಿಹಾಸಕಾರ ಬಾಬಾಸಾಹೇಬ್ ಪುರಂದರೆ ನಿಧನ

ಪುಣೆ (ಪಿಟಿಐ): ಇತಿಹಾಸಕಾರ–ಲೇಖಕ, ಬಾಬಾಸಾಹೇಬ್ ಪುರಂದರೆ (ಬಲ್ವಂತ್ ಮೊರೇಶ್ವರ್ ಪುರಂದರೆ) ಅವರು ಸೋಮವಾರ ಮುಂಜಾನೆ ನಿಧನರಾದರು.

ವಾರದ ಹಿಂದೆ ನ್ಯುಮೋನಿಯಾಗೆ ಒಳಗಾಗಿದ್ದ ಬಾಬಾಸಾಹೇಬ್ ಪುರಂದರೆ (99) ಅವರು ಪುಣೆಯ ದೀನಾನಾಥ್ ಮಂಗೇಶ್ಕರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಅವರಿಗೆ ಕೃತಕ ಉಸಿರಾಟ ವ್ಯವಸ್ಥೆ ಮಾಡಲಾಗಿತ್ತು. ಭಾನುವಾರ ಅವರ ಆರೋಗ್ಯ ತೀವ್ರ ಗಂಭೀರ ಸ್ಥಿತಿಗೆ ತಲುಪಿತ್ತು ಎಂದು ವೈದ್ಯರು ಹೇಳಿದ್ದಾರೆ.

ಛತ್ರಪತಿ ಶಿವಾಜಿ ಮಹಾರಾಜ್ ಅವರ ಕುರಿತು ನಿಖರವಾಗಿ ಹೇಳಬಹುದಾದ ವ್ಯಕ್ತಿ, 'ಶಿವ್ ಶಾಹಿರ್'

ಎಂದೇ ಪುರಂದರೆ ಖ್ಯಾತರಾಗಿದ್ದರು. ಮರಾಠಿಯಲ್ಲಿ ಶಿವಾಜಿ ಮಹಾರಾಜ್ ಕುರಿತು ಪುರಂದರೆ ಅವರು ಎರಡು ಭಾಗಗಳಲ್ಲಿ ರಚಿಸಿರುವ 900 ಪುಟಗಳ ಕೃತಿ 'ರಾಜಾ ಶಿವಛತ್ರಪತಿ' ಜನಪ್ರಿಯತೆ ಪಡೆದಿದೆ. ಮೊದಲ ಬಾರಿಗೆ 1950ರಲ್ಲಿ ಪ್ರಕಟಗೊಂಡ ಕೃತಿಯು ಈವರೆಗೂ ಹಲವು ಬಾರಿ ಮರುಮುದ್ರಣ ಕಂಡಿದೆ.

1980ರ ದಶಕದಲ್ಲಿ ಶಿವಾಜಿ ಮಹಾರಾಜ್ ಅವರ ಜೀವನವನ್ನು ಆಧರಿಸಿ 'ಜಾಣತಾ ರಾಜ' ನಾಟಕವನ್ನು ರಚಿಸಿ, ನಿರ್ದೇಶಿಸಿದ್ದರು.

2019ರಲ್ಲಿ ಅವರಿಗೆ ಪದ್ಮ ವಿಭೂಷಣ ನೀಡಿ ಗೌರವಿಸಲಾಗಿತ್ತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ನಾವು ವಿವೇಕವನ್ನಲ್ಲದೆ ಅಧಿಕಾರವನ್ನಷ್ಟೇ ಒಟ್ಟುಗೂಡಿಸುತ್ತಾ ನಡೆದರೆ, ಖಂಡಿತವಾಗಿಯೂ ನಮ್ಮನ್ನು ನಾವು ನಾಶಪಡಿಸಿಕೊಂಡಂತೆ. -ಕಾರ್ಲ್ ಸೆಗನ್

ನೋಟು ರದ್ದತಿಯ ನೆನಪು ಏಕಪಕ್ಷೀಯ ತೀರ್ಮಾನದ ಮಿತಿ

ದೇಶದಲ್ಲಿ ₹1,000 ಹಾಗೂ ₹500 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆದ ತೀರ್ಮಾನಕ್ಕೆ ಐದು ವರ್ಷಗಳು ಸಂದಿವೆ. 2016ರ ನವೆಂಬರ್ 8ರಂದು ಪ್ರಧಾನಿ ನರೇಂದ್ರ ಮೋದಿ ಅವರು ಈ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ ನಿರ್ಧಾರವನ್ನು ರಾತ್ರಿ ಎಂಟು ಗಂಟೆಯ ಸುಮಾರಿಗೆ ಪ್ರಕಟಿಸಿದ್ದರು. ಆದರೆ, ಮೋದಿ ಅವರ ಮಹತ್ವಾಕಾಂಕ್ಷೆಯ ಈ ತೀರ್ಮಾನವು ದೇಶದ ಅರ್ಥ ವ್ಯವಸ್ಥೆಗೆ ಯಾವುದೇ ರೀತಿಯಲ್ಲಿ ಒಳಿತು ಮಾಡಿದೆ ಎನ್ನಲು ಇದುವರೆಗೂ ಆಧಾರಗಳು ಸಿಕ್ಕಿಲ್ಲ. ಅದರ ಬದಲು, ಈ ಮಹತ್ವದ ನಿರ್ಧಾರವು ಅರ್ಥ ವ್ಯವಸ್ಥೆಗೆ ಕೆಡುಕು ಉಂಟುಮಾಡಿದೆ ಎಂದು ಹೇಳಲು ಬಹಳಷ್ಟು ಆಧಾರಗಳು ಇವೆ. ಅರ್ಥ ವ್ಯವಸ್ಥೆಯನ್ನು ಕಾಡುತ್ತಿದ್ದ ಹಲವು ಸಮಸ್ಯೆಗಳಿಗೆ ರಾಮಬಾಣ ನೋಟು ರದ್ದತಿ ಎಂದು ಆ ಸಂದರ್ಭದಲ್ಲಿ ಆಳುವ ವರ್ಗವು ಪ್ರತಿಪಾದಿಸಿತ್ತು. ಆದರೆ, ವಾಸ್ತವದಲ್ಲಿ ಅದು ವಿಷದ ಬಾಣವಾಗಿ ಪರಿಣಮಿಸಿದೆ. ಐದು ವರ್ಷಗಳ ಹಿಂದಿನ ತೀರ್ಮಾನದ ಕೆಟ್ಟ ಪರಿಣಾಮಗಳನ್ನು ಇಂದಿಗೂ ಅನುಭವಿಸುವಂತಾಗಿದೆ. ನೋಟು ರದ್ದತಿಯ ತೀರ್ಮಾನ ಕೈಗೊಂಡ ಹಿಂದಿನ ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇಕಡ 8ರಷ್ಟು ಇತ್ತು. ಅದು ಈ ತೀರ್ಮಾನದ ನಂತರದಲ್ಲಿ ಕುಸಿತ ಕಂಡಿತು. ನಂತರದಲ್ಲಿ, ಆ ಮಟ್ಟಕ್ಕೆ ತಲುಪಿಲ್ಲ. ಈಗ ಒಂದೆರಡು ವರ್ಷಗಳಲ್ಲಿ ಅರ್ಥ ವ್ಯವಸ್ಥೆಯ ಕುಸಿತಕ್ಕೆ ಕೋವಿಡ್ ಕೂಡ ಕಾರಣವಾಗಿದೆ ಎಂಬುದು ನಿಜ. ಆದರೆ, ಅರ್ಥ ವ್ಯವಸ್ಥೆಯ ಕುಸಿತಕ್ಕೆ ನೋಟು ರದ್ದತಿ ಕೂಡ ಕಾರಣವಾಗಿದ್ದನ್ನು ಅಲ್ಲಗಳೆಯಲಾಗದು. ನೋಟು ರದ್ದತಿ ತೀರ್ಮಾನವು ಅರ್ಥ ವ್ಯವಸ್ಥೆಯಲ್ಲಿ ಬಹುದೊಡ್ಡ ಪಾಲು ಹೊಂದಿದ್ದ ಅಸಂಘಟಿತ ವಲಯ ಬಹುಪಾಲು ಕುಸಿದುಬೀಳಲು ಕಾರಣವಾಯಿತು. ನಗದು ಕೊರತೆಯ ಕಾರಣದಿಂದಾಗಿ, ಸಣ್ಣ ಪ್ರಮಾಣದ ಸಹಸ್ರಾರು ಉದ್ಯಮಗಳು ಕಣ್ಣು ಮುಚ್ಚಿದವು. ನಗದು ಕೊರತೆಯ ಪರಿಣಾಮವನ್ನು ಬಹುಕಾಲ ತಡೆದುಕೊಳ್ಳುವ ಶಕ್ತಿ ಅವುಗಳಿಗೆ ಇರಲಿಲ್ಲ. ನಗದು ಲಭ್ಯತೆಯ ಕೊರತೆ ಹಾಗೂ ಮಾರುಕಟ್ಟೆಯಲ್ಲಿ ಬೇಡಿಕೆ ಕುಸಿದ ಪರಿಣಾಮವಾಗಿ ಸಂಘಟಿತ ವಲಯ ಕೂಡ ಪೆಟ್ಟು ತಿನ್ನಬೇಕಾಯಿತು.

ಈ ನಿರ್ಧಾರವು ಅರ್ಥ ವ್ಯವಸ್ಥೆಗೆ ಕೆಡುಕು ಉಂಟುಮಾಡಿದೆ ಎಂದು ಹೇಳಲು ಬಹಳಷ್ಟು ಆಧಾರಗಳು ಇವೆ

ನೋಟು ರದ್ದತಿಯು ಕಪ್ಪುಹಣವನ್ನು ವ್ಯವಸ್ಥೆಯಿಂದ ಹೊರಹಾಕುತ್ತದೆ ಎಂದು ಪ್ರಧಾನಿಯವರು ಹೇಳಿದ್ದರು. ನೋಟು ರದ್ದತಿಯಿಂದ ಆದ ನೋವನ್ನು ಜನ ಐವತ್ತು ದಿನಗಳವರೆಗೆ ಸಹಿಸಿಕೊಳ್ಳಬೇಕು, ಆಗ 'ನಿಮ್ಮ ಕನಸಿನ ಭಾರತ'ವನ್ನು ನಿರ್ಮಿಸಲು ಸಾಧ್ಯವಾಗುತ್ತದೆ ಎಂದೂ ಅವರು ಭಾವುಕರಾಗಿ ಹೇಳಿದ್ದರು. ಆದರೆ, ಅಂಥದ್ದೊಂದು ಭಾರತ ನಿರ್ಮಾಣ ಆಯಿತೇ? ಅಥವಾ ಅದು ಇದುವರೆಗೂ ಕನಸಾಗಿಯೇ ಉಳಿದಿದೆಯೇ? ಉತ್ತರ ಬಹುತೇಕರಿಗೆ ಗೊತ್ತಿದೆ. ಕಪ್ಪುಹಣ ಇಟ್ಟುಕೊಂಡಿದ್ದವರಿಗೆ ಅದನ್ನು ಸಕ್ರಮಗೊಳಿಸಿಕೊಳ್ಳಲು ಒಂದು ಮಾರ್ಗ ಸಿಕ್ಕಿತು ಎನ್ನುವ ಆರೋಪವೂ ನೋಟು ರದ್ದತಿ ತೀರ್ಮಾನದ ಬಗ್ಗೆ ಇದೆ. ಚಲಾವಣೆಯಲ್ಲಿ ಇರುವ ನಗದು ಪ್ರಮಾಣವು ಜಿಡಿಪಿಗೆ ಹೋಲಿಸಿದರೆ 2016-17ರಲ್ಲಿ ಶೇಕಡ 8.70ರಷ್ಟು ಇತ್ತು. ಇದು 2020-21ರಲ್ಲಿ ಶೇ 15ರ ಸುಮಾರಿಗೆ ಹೆಚ್ಚಳವಾಗಿದೆ. ಅಂದರೆ, ನಗದು ಬಳಕೆ ಜಾಸ್ತಿ ಆಗಿದೆ. ನೋಟು ರದ್ದತಿಯ ಕಾರಣದಿಂದಾಗಿ ತೆರಿಗೆ ಸಂಗ್ರಹವೇನೂ ಹೆಚ್ಚಾಗಿಲ್ಲ. ತೆರಿಗೆ ಪಾವತಿಯ ಪ್ರಮಾಣದಲ್ಲಿಯೂ ಏರಿಕೆ ಆಗಿಲ್ಲ. ಕಪ್ಪುಹಣದ ಪ್ರಮಾಣ ಕಡಿಮೆ ಆಗಿರುವ ಬಗ್ಗೆ ಸ್ಪಷ್ಟ ಆಧಾರಗಳು ಇಲ್ಲ. ನೋಟು ರದ್ದತಿ ತೀರ್ಮಾನ ಕೈಗೊಂಡ ತುಸು ಕಾಲದ ನಂತರದಲ್ಲಿ ಸರ್ಕಾರವು ಈ ತೀರ್ಮಾನದ ಉದ್ದೇಶ ಡಿಜಿಟಲ್ ಪಾವತಿಗಳನ್ನು, ನಗದು ರಹಿತ ವಹಿವಾಟುಗಳನ್ನು ಹೆಚ್ಚು ಮಾಡುವುದಾಗಿತ್ತು ಎಂದು ಹೇಳಿತು. 2016ರ ನಂತರದಲ್ಲಿ ದೇಶದಲ್ಲಿ ಡಿಜಿಟಲ್ ವಹಿವಾಟಿನ ಪ್ರಮಾಣವು ಹೆಚ್ಚಳ ಆಗಿರುವುದು ನಿಜ. ಆದರೆ, ಅದಕ್ಕೆ ಕಾರಣ ಕೋವಿಡ್–19 ಸಾಂಕ್ರಾಮಿಕ ಸೃಷ್ಟಿಸಿದ ಸಮಸ್ಯೆಗಳು, ದೇಶದಲ್ಲಿ ಮೊಬೈಲ್ ಬ್ರಾಡ್‌ಬ್ಯಾಂಡ್ ಸೇವೆಗಳು ವ್ಯಾಪಕವಾಗಿ ಲಭ್ಯವಾಗಿದ್ದು ಮತ್ತು ಯುಪಿಐನಂತಹ ಗ್ರಾಹಕಸ್ನೇಹಿ ವ್ಯವಸ್ಥೆಗಳು ಬಂದಿದ್ದು. ಡಿಜಿಟಲ್ ಪಾವತಿಗಳನ್ನು ಉತ್ತೇಜಿಸಲು ನೋಟು ರದ್ದತಿಯಂತಹ ತೀರ್ಮಾನವನ್ನು ಹಠಾತ್ ಆಗಿ ಕೈಗೊಳ್ಳಬೇಕಿತ್ತೇ?

ನೋಟು ರದ್ದತಿಯ ತೀರ್ಮಾನವು ಹಲವು ಕಾರಣಗಳಿಂದಾಗಿ ಜನಮಾನಸದಲ್ಲಿ ಅಚ್ಚಳಿಯದೆ ಉಳಿಯಲಿದೆ. ಅದನ್ನು ಜಾರಿಗೆ ತಂದ ತಪ್ಪು ಬಗೆಯು ಕೂಡ ಆ ಕಾರಣಗಳಲ್ಲಿ ಒಂದು. ಅಲ್ಪಾವಧಿಯ ಹಾಗೂ ದೀರ್ಘಾವಧಿಯ ಪರಿಣಾಮಗಳ ವಿಸ್ತೃತ ಅಧ್ಯಯನವೇ ಇಲ್ಲದೆ ಈ ತೀರ್ಮಾನವನ್ನು ಕೈಗೊಳ್ಳಲಾಯಿತು ಎಂಬ ಮಾತು ಇದೆ. ನೋಟು ರದ್ದತಿಯ ನಿರ್ಧಾರ ಕೈಗೊಳ್ಳುವ ಮೊದಲು ಭಾರತೀಯ ರಿಸರ್ವ್ ಬ್ಯಾಂಕ್ ಜೊತೆ ಚರ್ಚೆ ನಡೆದಿದ್ದರೂ, ಸರ್ಕಾರದ ತೀರ್ಮಾನವನ್ನು ಬೆಂಬಲಿಸುವಂತೆ ಆರ್‌ಬಿಐಗೆ ಹೇಳಲಾಯಿತು. ಅದನ್ನು ಪಾಲಿಸಿದ ಆರ್‌ಬಿಐ ತನ್ನ ಸ್ವಾಯತ್ತತೆಗೆ ಧಕ್ಕೆ ತಂದುಕೊಂಡಿತು. ನೋಟು ರದ್ದತಿಯ ತೀರ್ಮಾನವನ್ನು ಸರ್ಕಾರದಲ್ಲಿ ಎಲ್ಲರೂ ಒಟ್ಟಾಗಿ ತೆಗೆದುಕೊಂಡಿದ್ದರು ಎಂದು ಹೇಳಲು ಸಾಧ್ಯವಿಲ್ಲ. ಇಡೀ ತೀರ್ಮಾನವನ್ನು ಒಬ್ಬ ವ್ಯಕ್ತಿ ಅಥವಾ ಇಬ್ಬರು ಕೈಗೊಂಡರು. ಆ ತೀರ್ಮಾನ ಕೈಗೊಂಡ ವ್ಯಕ್ತಿಗಳಿಗೆ ಇಂತಹ ತೀರ್ಮಾನವನ್ನು ಜಾರಿಗೊಳಿಸುವುದಕ್ಕೆ ಅಗತ್ಯವಿರುವ ಅನುಭವ ಅಥವಾ ಪರಿಣತಿ ಇರಲಿಲ್ಲ. ಇಡೀ ತೀರ್ಮಾನವು ಏಕಪಕ್ಷೀಯವಾಗಿತ್ತು. ಈ ತೀರ್ಮಾನದ ಪರಿಣಾಮವಾಗಿ ಬಡವರು ನೋವು ಅನುಭವಿಸಬೇಕಾಯಿತು. ಕಲ್ಪನೆಗಳಲ್ಲಿ ಮಾತ್ರ ಸುಂದರವಾಗಿ ಕಾಣಿಸುವ ಆಲೋಚನೆಯೊಂದಕ್ಕೆ ಅವರು ಬೆಲೆ ತೆರಬೇಕಾಯಿತು. ಅದರ ಸಂಕಟವನ್ನು ಅರ್ಥ ವ್ಯವಸ್ಥೆಯು ಇಂದಿಗೂ ಅನುಭವಿಸುತ್ತಿದೆ.

ದಿನದ ಟ್ವೀಟ್

ಮಾದಕವಸ್ತು ಭಯೋತ್ಪಾದನೆ

ಕಳೆದ 24 ಗಂಟೆಗಳಲ್ಲಿ: 1. ಮಹಾರಾಷ್ಟ್ರ : ನಾಂದೇಡ್‌ನಲ್ಲಿ 1,127 ಕೆ.ಜಿ. ಗಾಂಜಾವನ್ನು ಎನ್‌ಸಿಬಿ ವಶಪಡಿಸಿಕೊಂಡಿದೆ. ಅದನ್ನು ಆಂಧ್ರಪ್ರದೇಶದಿಂದ ಮಹಾರಾಷ್ಟ್ರಕ್ಕೆ ತರಲಾಗುತ್ತಿತ್ತು. 2. ಗುಜರಾತ್: ₹ 600 ಕೋಟಿ ಮೌಲ್ಯದ 120 ಕೆ.ಜಿ. ಹೆರಾಯಿನ್ ಅನ್ನು ಮೊರ್ಬಿಯಲ್ಲಿ ಎಟಿಎಸ್ ವಶಕ್ಕೆ ಪಡೆದಿದೆ. ಭಾರತವು ಮಾದಕವಸ್ತು ಭಯೋತ್ಪಾದನೆಯ ಅಪಾಯವನ್ನು ಎದುರಿಸುತ್ತಿದೆ.

ಅನ್ಷುಲ್ ಸಕ್ಸೇನಾ, ಸುದ್ದಿ ವಿಶ್ಲೇಷಕ

ಕಿಡಿನುಡಿ

ಕೇಂದ್ರ ಸರ್ಕಾರದ ತಪ್ಪು ನೀತಿಗಳೇ ಹಣದುಬ್ಬರದ ಪ್ರಮಾಣ ಹೆಚ್ಚಾಗುತ್ತಿರುವುದಕ್ಕೆ ಕಾರಣ. ಇಂಧನದ ಮೇಲೆ ಕೇಂದ್ರ ಸರ್ಕಾರ ವಿಧಿಸುತ್ತಿರುವ ಎಕ್ಸೈಸ್ ಸುಂಕವನ್ನು ಇನ್ನಷ್ಟು ತಗ್ಗಿಸಬೇಕು. ಆಗ ಹಣದುಬ್ಬರದ ಪ್ರಮಾಣ ನಿಯಂತ್ರಿಸಬಹುದು.

ಅಶೋಕ್ ಗೆಹಲೋತ್, ರಾಜಸ್ಥಾನ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 16-11-1996

• ಸೋನಿಯಾಗೆ ಆಹ್ವಾನ: ಕೆಪಿಸಿಸಿ ಸ್ವಾಗತ

ಬೆಂಗಳೂರು, ನ. 15– ಕಾಂಗ್ರೆಸ್ ಪಕ್ಷದ ಮುಖ್ಯ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಸೋನಿಯಾ ಗಾಂಧಿ ಅವರನ್ನು ಕೋರಿರುವ ಪಕ್ಷದ ಹೈಕಮಾಂಡ್ ನಿಲುವನ್ನು ಸ್ವಾಗತಿಸುವ ನಿರ್ಣಯವನ್ನು ನೂತನ ಅಧ್ಯಕ್ಷ ಧರ್ಮಸಿಂಗ್ ನೇತೃತ್ವದ ಪ್ರದೇಶ ಕಾಂಗ್ರೆಸ್ ಸಮಿತಿ ಅಂಗೀಕರಿಸಿದೆ.

ಸೋನಿಯಾ ಈ ಹೊಣೆ ವಹಿಸಿಕೊಳ್ಳುವುದರಿಂದ ದೇಶದಾದ್ಯಂತ ಕಾರ್ಯಕರ್ತರಲ್ಲಿ ನವ ಚೈತನ್ಯ ತುಂಬಲಿದೆ, ಪಕ್ಷಕ್ಕೆ ಹಳೆಯ ವರ್ಚಸ್ಸು ಮರಳಲಿದೆ ಎಂದು ಅದು ಹೇಳಿದೆ.

• ವಿಶ್ವಸುಂದರಿ ಸ್ಪರ್ಧೆಗೆ ವ್ಯಾಪಕ ಜನಬೆಂಬಲ

ಬೆಂಗಳೂರು, ನ. 15– ವಿಶ್ವಸುಂದರಿ ಸ್ಪರ್ಧೆ ನಗರದಲ್ಲಿ ನಡೆಯುತ್ತಿರುವುದು ಬೆಂಗಳೂರಿನ ಶೇ 75.7ರಷ್ಟು ಜನರಿಗೆ ಹೆಮ್ಮೆಯ ವಿಷಯವಾಗಿದೆ.

ಸೌಂದರ್ಯ ಸ್ಪರ್ಧೆಯನ್ನು ವಿರೋಧಿಸುತ್ತಿರುವ ಗುಂಪುಗಳು ಕರೆ ನೀಡಿರುವಂತೆ ಬಲವಂತವಾಗಿ ಸ್ಪರ್ಧೆಯನ್ನು ತಡೆಗಟ್ಟುವುದಕ್ಕೆ ಶೇ 78.8ರಷ್ಟು ಜನರು ತಮ್ಮ ತೀವ್ರ ವಿರೋಧ ದಾಖಲು ಮಾಡಿದ್ದರೆ, ಸ್ಪರ್ಧಿಗಳು ಈಜುಡುಗೆಯಲ್ಲಿ ಸ್ಪರ್ಧೆಯಲ್ಲಿ ಭಾಗವಹಿಸುವುದರಿಂದ ಮಹಿಳೆಯರ ಘನತೆಗೆ ಕುಂದುಂಟಾಗುವುದಿಲ್ಲ ಎಂಬ ಅಭಿಪ್ರಾಯವನ್ನು ಶೇ 56.7ರಷ್ಟು ಜನರು ವ್ಯಕ್ತಪಡಿಸಿದ್ದಾರೆ.

ಚೆನ್ನೈನ 'ಆ್ಯಪ್ಟ್ ಸಂಶೋಧನಾ ಸಮೂಹ'ವು 'ಪ್ರಜಾವಾಣಿ'ಗಾಗಿ ನಡೆಸಿದ ಸಮೀಕ್ಷೆಯಿಂದ ವ್ಯಕ್ತವಾಗಿರುವ ಪ್ರಮುಖ ಅಂಶಗಳು ಇವು.

50 ವರ್ಷಗಳ ಹಿಂದೆ

ಮಂಗಳವಾರ, 16-11-1971

• ಭದ್ರಾವತಿ ಉಕ್ಕು ಕಾರ್ಖಾನೆ ಹಗರಣ ಮತ್ತಷ್ಟು ತನಿಖೆಗೆ ಶಿಫಾರಸು?

ಬೆಂಗಳೂರು, ನ. 15– ಬೆಳಕಿಗೆ ಬಂದಿರುವ ಭದ್ರಾವತಿ ಕಬ್ಬಿಣ ಹಾಗೂ ಉಕ್ಕು ಕಾರ್ಖಾನೆಯ ಕೆಲವು ವ್ಯವಹಾರಗಳ ಬಗ್ಗೆ ಮುಂದಿನ ತನಿಖೆ ಅಗತ್ಯವೆಂದು ರಾಜ್ಯದ ಆರ್ಥಿಕ ಸಲಹೆಗಾರರಾದ ಶ್ರೀ ಶಿರಾಳಿ ಅವರು ರಾಜ್ಯಪಾಲರಿಗೆ ಒಪ್ಪಿಸಿರುವ ವರದಿಯಲ್ಲಿ ಶಿಫಾರಸು ಮಾಡಿದ್ದಾರೆಂದು ತಿಳಿದು ಬಂದಿದೆ.

ಕಾರ್ಖಾನೆಯ ಅಕ್ರಮವೆನ್ನಲಾದ ಕೆಲವು ವ್ಯವಹಾರಗಳನ್ನು 'ಪ್ರಜಾವಾಣಿ' ಬೆಳಕಿಗೆ ತಂದ ಮೇಲೆ ಅವುಗಳನ್ನು ಪರಿಶೀಲಿಸಿ, ತಮಗೆ ವರದಿ ಸಲ್ಲಿಸಲು ಶ್ರೀ ಶಿರಾಳಿ ಅವರನ್ನು ರಾಜ್ಯಪಾಲರು ನೇಮಿಸಿದ್ದರು.

• ಗಡಿ ಉಲ್ಲಂಘಿಸುವ ಪಾಕ್ ಕೃತ್ಯಗಳ ವಿರುದ್ಧ ಸೈನ್ಯಕ್ರಮಕ್ಕೆ ಆದೇಶ

ನವದೆಹಲಿ, ನ. 15– ಪಾಕಿಸ್ತಾನದ ಕಡೆಯಿಂದ ಅತಿಕ್ರಮಿಸಿ ಬರುವ ವಿಮಾನಗಳನ್ನು ಹೊಡೆದು ಕೆಡವಲು ಮತ್ತು ಭಾರತದ ಗಡಿ ದಾಟಿ ಬರುವ ಸೈನಿಕರನ್ನು ಹಿಂದಕ್ಕೆ ದಬ್ಬುವಂತೆ ರಕ್ಷಣಾ ಪಡೆಗಳಿಗೆ ಸ್ಪಷ್ಟ ಸೂಚನೆಗಳನ್ನು ನೀಡಲಾಗಿದೆ ಎಂದು ರಕ್ಷಣಾ ಸಚಿವ ಜಗಜೀವನ ರಾಂ ಸಂಸತ್ತಿಗೆ ಭರವಸೆ ನೀಡಿದರು.

'ಆಡಿಸುವಾತ'ನ ಕೈಚಳಕದಲಿ ಎಲ್ಲ ಅಡಗಿದೆ...!

ಬಿಟ್‌ಕಾಯಿನ್ ವಿಶ್ವರೂಪ: ಯಾರಿಗೆ ತಾಪ?

ಗತಿಬಿಂಬ

ವೈ.ಗ.ಜಗದೀಶ್

ಸ್ವಯಂ ಪ್ರಮಾದವೋ ನಾಯಕರಲ್ಲಿ ತುಂಬಿಕೊಂಡಿರುವ ಅಧಿಕಾರದ ಹಪಹಪಿಯೋ ಕರ್ನಾಟಕದಲ್ಲಿ ಕಮಲಪಡೆ ಆಡಳಿತ ಚುಕ್ಕಾಣಿ ಹಿಡಿದಾಗಲೆಲ್ಲ, ತೂತುಬಿದ್ದ ದೋಣಿಯು ಕಡಲೊಳಗೆ ಸಿಕ್ಕಿ ಪತರಗುಟ್ಟುವಂತೆ ಪರಿತಪಿಸುವುದು ಮಾಮೂಲಾಗಿದೆ. ಪೂರ್ಣ ಜನಾದೇಶ ಪಡೆಯದೇ ಅಡ್ಡದಾರಿಯಿಂದ ಗದ್ದುಗೇರಿದ ಎರಡೂ ಅವಧಿಯಲ್ಲಿ ಸದಾ 'ಪದ ಕುಸಿಯುವ' ಭೀತಿಯೊಳಗೆ ಆಡಳಿತದ ಬಂಡಿಯನ್ನು ಹಗ್ಗದ ಮೇಲಿನ ನಡಿಗೆಯಂತೆ ಮುನ್ನಡೆಸುವ ಸ್ಥಿತಿ ಸರ್ಕಾರವನ್ನು ಮುನ್ನಡೆಸುವವರ ಹೆಗಲೇರುತ್ತದೆ

ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಕುರ್ಚಿಯಿಂದ ಇಳಿಸಿದ ತರುವಾಯ, ಎಲ್ಲ ಲೆಕ್ಕಾಚಾರಗಳನ್ನು ಮೀರಿ ಬಸವರಾಜ ಬೊಮ್ಮಾಯಿ ಅವರನ್ನು ಖುದ್ದು ಆಸ್ಥೆ ವಹಿಸಿ ಆ ಗಾದಿಗೆ ತಂದವರು ಪ್ರಧಾನಿ ನರೇಂದ್ರ ಮೋದಿ. ಅದಾನಿಯಂತಹ ಉದ್ಯಮಿಗಳ ವಕಾಲತ್ತು, ವ್ಯವಹಾರದ ನಂಟಸ್ತನ ಎಲ್ಲವನ್ನೂ ಬದಿಗೆ ಸರಿಸಿದ ಮೋದಿ, ಬೊಮ್ಮಾಯಿ ಅವರಿಗೆ ಘನ ಹುದ್ದೆ ಕೊಟ್ಟರು.

ಸರ್ಕಾರವು ನೂರು ದಿನ ಪೂರೈಸಿದ ಸಡಗರದಲ್ಲಿ ತಮ್ಮ ಸಾಧನೆ ಬಿಂಬಿಸಿಕೊಳ್ಳುವ ತವಕದಲ್ಲಿ ಬೊಮ್ಮಾಯಿ ಇದ್ದರು. ಪ್ರಶಾಂತ ಕೊಳಕ್ಕೆ ಬಿದ್ದ 'ಬಿಟ್‌ಕಾಯಿನ್' ವಿಚ್ಛಿದ್ರ ತರಂಗ ಎಬ್ಬಿಸಿದೆ. ಏನೂ ಆಗೇ ಇಲ್ಲ ಎಂದು ಸಚಿವರು ಪುಂಖಾನುಪುಂಖವಾಗಿ ಹೇಳಿಕೆ ನೀಡುತ್ತಿದ್ದಾರೆ. ಏನೂ ಇಲ್ಲವೆಂದ ಮೇಲೆ ಯುದ್ಧಕಾಲದಲ್ಲಿ ತೋರುವ ಗಡಿಬಿಡಿಗೆ ಬಿಜೆಪಿ ಸಚಿವರು, ಶಾಸಕರು ಬಿದ್ದಿರುವುದೇಕೆ?

'ಬಿಟ್‌ಕಾಯಿನ್' ಸದ್ದು ಮಾಡುತ್ತಿದ್ದಂತೆ ಎದ್ದು ಕುಳಿತ ಕಾಂಗ್ರೆಸ್‌ನವರು ಸಮರ ಸೇನಾನಿಗಳಂತೆ ಅಖಾಡಕ್ಕೆ ಇಳಿದಿದ್ದಾರೆ. ಎರಡೂ ಪಕ್ಷಗಳವರಲ್ಲಿ ಪರಸ್ಪರರನ್ನು ಹಣಿಯುವ ಯುದ್ಧೋನ್ಮಾದ ಇದೆ ವಿನಾ ಜನರಿಗೆ ಸತ್ಯ ತಿಳಿಸಬೇಕೆಂಬ ನೈಜ ನಾಯಕತ್ವದ ಗುಣ ಮಾತ್ರ ತೋರುತ್ತಿಲ್ಲ. ಬೊಮ್ಮಾಯಿ ಆದಿಯಾಗಿ ಬಿಜೆಪಿಯವರೆಲ್ಲರೂ 'ಈ ಹಗರಣ ಕಾಂಗ್ರೆಸ್‌ನವರ ಅವಧಿಯಲ್ಲಿ ನಡೆದಿದೆ; ನಮ್ಮವರು ಯಾರೂ ಇಲ್ಲ, ಅವರಿಗೆ ತಿರುಗುಬಾಣವಾಗಲಿದೆ' ಎಂದು ಬೊಬ್ಬಿರಿಯುತ್ತಿದ್ದಾರೆ. ಕೇಂದ್ರ, ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರಗಳೇ ಇವೆ. ಸಿಬಿಐ, ಇ.ಡಿ, 'ರಾ', ಆದಾಯ ತೆರಿಗೆ ಇಲಾಖೆ ಹೀಗೆ ಸಕಲ ಸಂಸ್ಥೆಗಳೂ ಅವರ ಬಳಿ ಇವೆ. ಕಾಂಗ್ರೆಸ್‌ನವರೇ ಇದರಲ್ಲಿ ಶಾಮೀಲಾಗಿರುವುದು ನಿಜವಾದರೆ, ಅವರನ್ನು ಬಗ್ಗುಬಡಿದು, ನೇರದಾರಿಯಲ್ಲಿ ತಮ್ಮ ಏಕಸ್ವಾಮ್ಯ ಸಾಧಿಸಲು ಇದಕ್ಕಿಂತ ಸುವರ್ಣಾವಕಾಶ ಮತ್ತೊಮ್ಮೆ ಸಿಗಲಿದೆಯೇ? ಹೀಗೆ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಸರ್ಕಾರ ನಡೆಸುತ್ತಿರುವವರು ಸಿಕ್ಕಿಕೊಂಡಿದ್ದರೆ, ಅಬ್ಬರಿಸಿ ಕಾಂಗ್ರೆಸ್‌ನವರನ್ನು ಹೆದರಿಸುವ ಜಾಣ್ಮೆ ಜಾಸ್ತಿ ದಿನ ಬಿಜೆಪಿಯವರ ನೆರವಿಗೆ ಬರಲಾರದು. ಜನರೂ ನಂಬಲಾರರು.

ತನಿಖಾ ಹಂತದಲ್ಲಿ ಆಗಿರುವ ಗೊಂದಲಗಳನ್ನು ಹಾಗೆಯೇ ಉಳಿಸಿ ಸಂಶಯಗಳಿಗೆ ದಾರಿ ಮಾಡಿಕೊಡುವ ಬದಲು, ತನಿಖೆಯ ಪಾರದರ್ಶಕತೆಯನ್ನು ಜನರ ಮುಂದಿಡುವ ಧೈರ್ಯವನ್ನು ಮುಖ್ಯಮಂತ್ರಿ ತೋರಬೇಕು.

ಬಿಟ್‌ಕಾಯಿನ್ ಹಗರಣದ ತನಿಖೆಯಲ್ಲೇ ಕೆಲವು ಗೊಂದಲಗಳು, ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಬಂಧನ–ಬಿಡುಗಡೆಯ ನಾಟಕದ ಬಗ್ಗೆಯೂ ಅನುಮಾನಗಳು ಹುತ್ತಗಟ್ಟುತ್ತಲೇ ಇವೆ. ಈ ಬಗ್ಗೆ ತನಿಖೆ ನಡೆಸಿದ ಸಿಸಿಬಿ, ನ್ಯಾಯಾಲಯಕ್ಕೆ ಸಲ್ಲಿಸಿರುವ 757 ಪುಟಗಳ ದೋಷಾರೋಪ ಪಟ್ಟಿಯು ಕೇವಲ 'ಹೇಳಿಕೆ'ಗಳನ್ನು ಆಧರಿಸಿದ ಕಾಗದವಷ್ಟೆ. ಭಾರತದ ಕಾನೂನುಗಳ ಅನುಸಾರ ನ್ಯಾಯಯುತವಾಗಿ ತನಿಖೆ ನಡೆಸಿದ ಕುರುಹುಗಳು ದೋಷಾರೋಪ ಪಟ್ಟಿಯಲ್ಲಿ ಕಾಣುವುದೇ ಇಲ್ಲ. ಏನನ್ನೋ ಮುಚ್ಚಿಟ್ಟು ಮತ್ತೇನನ್ನೋ ಬಚ್ಚಿಟ್ಟು ತೇಪೆ ಸಾರಿಸುವ ಕೆಟ್ಟ ಮಾದರಿಯೊಂದನ್ನು ಸಿಸಿಬಿ ತೋರಿಸಿದೆ. ಇದು ರಾಜ್ಯದ ಪೊಲೀಸ್ ವ್ಯವಸ್ಥೆಯ ಮೇಲಿರುವ ನಂಬಿಕೆಯನ್ನೇ ಬುಡಮೇಲು ಮಾಡುವಂತಿದೆ.

ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣಾ ವ್ಯವಸ್ಥೆಯನ್ನು (ವಿವಿಧ ಇಲಾಖೆಗಳ ಟೆಂಡರ್ ನಿರ್ವಹಿಸುವ) ಹ್ಯಾಕ್ ಮಾಡಿದ್ದ ಶ್ರೀಕೃಷ್ಣ ಅಲ್ಲಿ ಗುತ್ತಿಗೆದಾರರು ಇಟ್ಟಿದ್ದ ಟೆಂಡರ್ ಇಎಂಡಿಯ ಬಹುಕೋಟಿ ಲಪಟಾಯಿಸಿದ್ದ. ಇದರ ಬಗ್ಗೆ ಸಿಐಡಿ ತನಿಖೆ ಕೈಗೊಂಡಿದ್ದರೂ ಅದಕ್ಕೆ ತಾರ್ಕಿಕ ಅಂತ್ಯವನ್ನೇ ನೀಡಿಲ್ಲ. 'ಬಿಟ್‌ಕಾಯಿನ್ ಹ್ಯಾಕಿಂಗ್'ನ ಲಾಭ ಪಡೆದವರು ಇದರ ಹಿಂದೆ ಇದ್ದಾರೆಯೇ ಎಂಬ ಶಂಕೆಯನ್ನೂ ಈ ನಡೆ ಹುಟ್ಟುಹಾಕುತ್ತದೆ. ಇವೆಲ್ಲವನ್ನೂ ನಿವಾರಿಸಬೇಕಿರುವುದು ಸರ್ಕಾರ ನಡೆಸುವವರ ಜವಾಬ್ದಾರಿಯೇ ವಿನಾ ಅದಕ್ಕೆ ದಾಖಲೆ ಕೊಡುವುದು ಕಾಂಗ್ರೆಸ್‌ನ ಹೊಣೆಗಾರಿಕೆಯಲ್ಲ.

ತನಿಖಾ ಹಂತದಲ್ಲಿ ಸಿಸಿಬಿ, ಸಿಐಡಿ ಪೊಲೀಸರು ಎಡವಿದ್ದೇ ಇಷ್ಟೆಲ್ಲ ಪ್ರಮಾದಕ್ಕೆ ಕಾರಣ. 'ವಿದೇಶಿ ಹಣಕಾಸು ಸಂಸ್ಥೆಗಳು, ಸರ್ಕಾರಿ ಸಂಸ್ಥೆಗಳ ವೆಬ್‌ಸೈಟ್ ಹ್ಯಾಕ್ ಮಾಡಿ, ಅಲ್ಲಿಂದ ಹಣ ಎತ್ತಿದ್ದೆ' ಎಂಬ ಶ್ರೀಕಿ ಸ್ವಯಂ ಹೇಳಿಕೆಯನ್ನು ಸಿಸಿಬಿ ದಾಖಲಿಸಿಕೊಂಡಿದೆ. ಶ್ರೀಕಿ ಹೇಳಿಕೆಯನ್ನು ಆಧರಿಸಿ, ಅವನು ಹೇಳಿದ್ದ ಸಂಸ್ಥೆಗಳಿಂದ ಮಾಹಿತಿಯನ್ನು ನೇರವಾಗಿ ಪಡೆದು ತನಿಖೆಯನ್ನು ವಿಸ್ತಾರಗೊಳಿಸುವ, ವಂಚನೆಗೊಳಗಾದವರಿಗೆ ನ್ಯಾಯ ಕೊಡಿಸುವ ಕೆಲಸವನ್ನು ತನಿಖಾ ಸಂಸ್ಥೆಗಳು ಮಾಡಬೇಕಿತ್ತು. 'ವಿದೇಶಿ ಸಂಸ್ಥೆಗಳು ಯಾವುದೇ ಕೋರಿಕೆ ಸಲ್ಲಿಸಿಲ್ಲ' ಎಂದು ತನಿಖಾ ತಂಡದ ನೇತೃತ್ವ ವಹಿಸಿದ್ದ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಲಿಖಿತ ಹೇಳಿಕೆ ಕೊಟ್ಟಿದ್ದಾರೆ. ಶ್ರೀಕಿ ಎಂಬೊಬ್ಬ ಹ್ಯಾಕರ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ ಎಂಬ ಕನಸು ವಿದೇಶಿ ಸಂಸ್ಥೆಗಳಿಗೆ ಬೀಳುತ್ತದೆಯೇ ಎಂಬ ಸಾಮಾನ್ಯ ಜ್ಞಾನವೂ ಕಮಿಷನರ್‌ಗೆ ಹೊಳೆಯಲಿಲ್ಲವೇ? ಅಂತರರಾಷ್ಟ್ರೀಯ ಮಟ್ಟದ ಹ್ಯಾಕರ್ ಎಂಬುದು ತನಿಖಾ ಹಂತದಲ್ಲೇ ಅಂದರೆ 2020ರ ನವೆಂಬರ್‌ನಲ್ಲೇ ಗೊತ್ತಾದ ಮೇಲೆ, ಅದನ್ನು ಸಿಬಿಐನ ಇಂಟರ್‌ಪೋಲ್‌ಗೆ, ಕೇಂದ್ರ ಗೃಹ ಸಚಿವಾಲಯಕ್ಕೆ ತಿಳಿಸಬೇಕಾದ ಹೊಣೆಗಾರಿಕೆ ರಾಜ್ಯ ಸರ್ಕಾರಕ್ಕೆ ಇತ್ತಲ್ಲವೇ? ಅಂತರರಾಷ್ಟ್ರೀಯ ಹ್ಯಾಕರ್ ಎಂಬುದು ದೃಢಪಟ್ಟ ಆರು ತಿಂಗಳ ಮೇಲೆ ಇಂಟರ್‌ಪೋಲ್, ಜಾರಿ ನಿರ್ದೇಶನಾಲಯಕ್ಕೆ ಪತ್ರ ಬರೆಯಲಾಗಿದೆ. ಪತ್ರ ಬರೆದ ನಂತರ ಏನಾಗಿದೆ ಎಂಬುದನ್ನು ಸರ್ಕಾರ ಈವರೆಗೆ ಬಹಿರಂಗಪಡಿಸಲಿಲ್ಲ. ಯಾವಾಗ ಬಿಟ್‌ಕಾಯಿನ್ ಸದ್ದು ಜೋರಾಯಿತೋ ಆವಾಗ ಈ ದಾಖಲೆಗಳನ್ನು ಬಿಡುಗಡೆ ಮಾಡಿದ್ದು ಕೂಡ ಸರ್ಕಾರದ ನಡೆಯನ್ನೇ ಶಂಕೆಯ ಕಡಲಿಗೆ ದೂಡುತ್ತದೆ. ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ನಡೆದ ಐಎಂಎ ಹಗರಣದ ರೀತಿಯಲ್ಲೇ ಬಿಟ್‌ಕಾಯಿನ್ ಕೂಡ ಈಗ ದೊಡ್ಡದಾಗಿ ಅಬ್ಬರಿಸುತ್ತಿರುವುದಂತೂ ಸತ್ಯ.

ಬಿಟ್‌ಕಾಯಿನ್ ಹಗರಣದ ಬಗ್ಗೆ ಸಚಿನ್ ಮಾಮನಿ ಹೆಸರಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದ ಪತ್ರದಲ್ಲಿ ಅನೇಕರನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಲಾಗಿದೆ. ಈ ಪತ್ರವು ಪ್ರಧಾನಿ ಕಚೇರಿಗೆ ತಲುಪಿದೆಯೇ ಎಂಬುದು ಖಚಿತವಿಲ್ಲ. 'ಚೌಕಿದಾರ'–'ಪ್ರಧಾನ ಸೇವಕ' ಎಂದು ಸ್ವಯಂ ಘೋಷಿಸಿಕೊಂಡ ನರೇಂದ್ರ ಮೋದಿ ಅವರು ತಮ್ಮ ವಿಳಾಸಕ್ಕೆ ಬರೆದ ಪತ್ರದಲ್ಲಿ ಸತ್ಯವಿದೆಯೇ ಎಂಬುದನ್ನು ದೇಶದ ಜನರಿಗೆ ತಿಳಿಸುವ ಕೆಲಸ ಮಾಡಬೇಕು. ಇಲ್ಲದಿದ್ದರೆ ಸಂಶಯ ವಿಶ್ವರೂಪ ತಳೆದು, ಪತ್ರದಲ್ಲಿರುವ ನಾಯಕರು ಅಂಟಿಸಿಕೊಂಡಿರುವ ಮಸಿ, ಪ್ರಧಾನ ಸೇವಕರ ಕೈಯನ್ನು ಕಪ್ಪಾಗಿಸುವ ಸಾಧ್ಯತೆಯೂ ಇದೆ.

ಹಗರಣದ ವ್ಯಾಪ್ತಿಯು ಕರ್ನಾಟಕದಿಂದ ಶುರುವಾಗಿ ವಿಶ್ವದಾದ್ಯಂತ ಹರಡಿಕೊಂಡಿರುವ ಮಾಹಿತಿಗಳು ಹರಿದಾಡುತ್ತಿವೆ. ಸತ್ಯ ಈಚೆ ಬಂದರೆ ಕೆಳಹಂತದಿಂದ ಅತ್ಯುನ್ನತ ಹಂತದವರೆಗೆ ಹಲವರ ತಲೆದಂಡ ಆಗುವುದು ಖಚಿತ. ಆದರೆ, ಅದು ಆಗುತ್ತದೆಯೇ ಎಂಬುದು ಸಂದೇಹಾಸ್ಪದ. 'ಆಡಿಸುವಾತ'ನಿಗೆ ಎಲ್ಲವೂ ಗೊತ್ತಿದೆ. ಆತನ ಕೈಯಲ್ಲೇ ಎಲ್ಲವೂ ಅಡಗಿದೆ ಎಂಬುದಂತೂ ದಿಟ.

ಚುರುಮುರಿ

ಅವರ್‌ಬಿಟ್, ಇವರ್‌ಬಿಟ್...

• ಲಿಂಗರಾಜು ಡಿ.ಎಸ್.

'ಹ್ಯಾಕಿಂಗ್ ಪಂಟ್ರುಗಳು ಒಂದು ಲ್ಯಾಪ್‌ಟಾಪ್ ಮಡಿಕಂಡು ಬಿಟ್‌ಕಾಯಿನ್ ಚೀಟಿಂಗ್ ಮಾಡ್ಬುಟ್ಟವರಂತೆ! ಇದು ಬೇತಾಳನ ಪ್ರಶ್ನೆ ಥರಾ ಆಗೋಯ್ತಲ್ಲಾ ಸಾ?' ಅಂತಂದೆ.

'ನನಗೇನೂ ಗೊತ್ತಿಲ್ಲ, ನಾನವನಲ್ಲ, ನಾನವನಲ್ಲ, ನನ್ನ ಬುಟ್ಬುಡಿ' ಅಂತ ಕಿಷ್ಣ ಜನ್ಮಸ್ಥಾನದಿಂದ ಹೊಂಟೇ ಹೋದ್ನಂತಪ್ಪ. ಜಾಮೀನು ಕೊಟ್ಟೋರು ಯಾರು ಅಂತ್ಲೂ ಗೊತ್ತಿಲ್ಲವಂತೆ! ಈ ಇಚಾರದೇಲಿ ದಿಂಡುಕುಳಗಳು 'ನಾನೇ ಸತುವಂತ' ಅಂತ ಹೇಳ್ತಿರಾ ಕತೆ ಕೇಳಿಸ್ಕಲಾ' ಅಂದ್ರು ತುರೇಮಣೆ.

'ಯಾವನಾದ್ರೂ ಕಾಂಗ್ರೆಸಿನೋನು ಬಿಟ್‌ಕಾಯಿನ್ ತಗಂಡಿದ್ರೆ ಹಾಕ್ರೀ ವಳಕ್ಕ. ನಿಮ್ಮದೇ ಸರ್ಕಾರ ಅದ ತನಿಖೆ ಮಾಡಿ!'- ಸಿದ್ದಣ್ಣ.

'ಬಿಟ್‌ಕಾಯಿನ್ ದಂಧೆ ಮಾಡ್ದವರುನ್ನ ಧಮ್ ಇದ್ರೆ ಬಂಧಿಸಿ. ನಾವೂ ಮಾಹಿತಿ ತಗತಾ ಇದೀವಿ'- ಡಿಕೆಶಿ.

'ಬಿಟ್‌ಕಾಯಿನ್ ಭೋಜನದಲ್ಲಿ ಕಾಂಗ್ರೆಸ್ಸಿನೋರು ಉಂಡಿದ್ರೆ ಯಾರು ಅಂತ ಹೆಸರೇಳ್ರಿ'- ಪರಮಿ.

'ತಾಕತ್ತಿದ್ರೆ ಸಿದ್ದಣ್ಣ ಸಿಎಂ ಆಗಿದ್ದಾಗ ಕ್ರಮ ತಕ್ಕಬೇಕಾಗಿತ್ತು. ಯಾರ್‍ಯಾರಿಗೆ ಎಷ್ಟು ಹೋಗ್ಯದೆ ಕಾಂಗ್ರೇಸಿನೋರು ದಾಖಲೆ ಕೊಡಬೇಕ್ರಿ'- ಕುಮ್ಮಿ.

'ಬಿಟ್‌ಕಾಯಿನ್ ತನಿಖೆ ಸರಿಯಾಗಿ ನಡೆದ್ರೆ ಸಿಎಂ ತಲೆದಂಡ ಆಯ್ತದೆ. ಕಾಂಗ್ರೆಸಿನವರ ತವು ಬಿಟ್‌ಕಾಯಿನ್ ಇದ್ರೆ ತೋರಿಸ್ಲಿ'- ಪ್ರಿಯಾಂಕ್.

'ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ಸತ್ಯ ಜನರ ಮುಂದಿಡ್ತೀವಿ'- ಸುಧಾಕರ್.

'ಮೋದಿ ಮಾರಾಜರು ಬಿಟ್‌ಕಾಯಿನ್ ವಿಚಾರಕೆ ತಲೆ ಕೆಡಿಸ್ಕ್ಯಾಬ್ಯಾಡಿ ಆ ಇಬ್ಬರುನ ನೋಡಿಕ್ಯತಿವಿ ಅಂದವ್ರೆ. ಯಾರನ್ನೂ ಬುಡಲ್ಲ, ಬಲಿ ಹಾಕ್ತೀವಿ'- ಬಸಣ್ಣ.

'ಅದ್ಯಾರೋ ಮೋದಿ ಚಿಗಪ್ಪಾರಿಗೆ ದೂರು ಬರೆದು ಪಟ್ಟಿ ಕೊಟ್ಟವ್ರಂತೆ! ಯಾರ್‍ಯಾರಿಗೆ ಅಗುತ್ತದೋ ನಾನ್ಕಾಣೆ' ಅಂತಂದೆ.

'ಇವುರ ಮಾತು ಕೇಳಿ ಇದೇನೂ ಆಯ್ತದೆ ಅಂದ್ಕಬ್ಯಾಡ. ದಿಮ್ಮಗಿರೋರು ಬೋದಾಡಿಕ್ಯಂಡು ಪುಕಾರಬ್ಬಿ 'ಅವರ್‌ಬಿಟ್, ಇವರ್‌ಬಿಟ್, ಅವರ್‍ಯಾರು' ಅಂತ ಕಣ್ಣಾಮುಚ್ಚಾಲೆ ಆಡೊವೊತ್ಗೆ ಡ್ರಗ್ ಕೇಸು ಥರಾ ಬಿಟ್‌ಕಾಯಿನ್ ಕೇಸೂ ಜನಕ್ಕೆ ಮರತೋಯ್ತದೆ!' ಅಂದ್ರು.

ಸಂಗತ

ವಾಸ್ತು, ವಾಸ್ತವ, ವೈರುಧ್ಯ

ಒಬ್ಬೊಬ್ಬ ವಾಸ್ತುತಜ್ಞರ ಸಲಹೆ ಒಂದೊಂದು ರೀತಿ ಇರುವುದೇಕೆ?

• ನಳಿನಿ ಟಿ. ಭೀಮಪ್ಪ

ಮೊನ್ನೆ ಸಂಬಂಧಿಕರೊಬ್ಬರ ಮನೆಗೆ ಪೂಜೆಗೆ ಹೋಗಿದ್ದೆವು. ಮುಖ ತೊಳೆದು ರೆಡಿಯಾಗೋಣ ಎಂದು ನೋಡಿದರೆ, ಇಡೀ ಮನೆಯಲ್ಲಿ ಎಲ್ಲಿಯೂ ಕನ್ನಡಿಯೇ ಕಾಣಲಿಲ್ಲ. ವಿಚಾರಿಸಿದರೆ, ವಾಸ್ತು ಪ್ರಕಾರ ಮನೆಯಲ್ಲಿ ಕನ್ನಡಿ ಹೆಚ್ಚು ಇರಬಾರದಂತೆ, ಅದಕ್ಕೇ ಎಲ್ಲವನ್ನೂ ತೆಗೆಸಿಬಿಟ್ಟಿದ್ದೇವೆ ಅಂದರು. ಬಚ್ಚಲು ಮನೆಯ ಮುಂದೆ ಶೇವಿಂಗ್‌ಗಾಗಿ ಒಂದು ಸಣ್ಣ, ಮಸುಕಾದ ಕನ್ನಡಿ ತೂಗು ಹಾಕಿದ್ದರು. ಹಾಗೇ ರೆಡಿಯಾಗಿ, ಕೊನೆಗೆ ಕಾಂಪ್ಯಾಕ್ಟ್ ಪೌಡರ್ ಡಬ್ಬಿ ಒಳಗೆ ಇದ್ದ ಪುಟ್ಟ ಕನ್ನಡಿಯನ್ನು ಮಗಳಿಗೆ ಸರಿಯಾಗಿ ಹಿಡಿದುಕೊಳ್ಳಲು ಹೇಳಿ ಹೇಗೋ ಮೇಕಪ್ ಮಾಡಿಕೊಂಡಿದ್ದಾಯ್ತು. ಇನ್ನು ಮುಂದೆ ಮೇಕಪ್ ಕಿಟ್ ಜೊತೆ ಒಂದು ಕನ್ನಡಿ ಇಟ್ಟುಕೊಳ್ಳಲೇಬೇಕು ಎನ್ನುವ ಬುದ್ಧಿ ಬಂತು!

ನಮ್ಮ ಪಕ್ಕದ ಮನೆಯಲ್ಲಂತೂ ಹೊರಬಾಗಿಲು ತೆಗೆಯುತ್ತಿದ್ದಂತೆ ಆಳೆತ್ತರದ ಕನ್ನಡಿ. ಇಡೀ ಮನೆಯಲ್ಲಿ ಎಲ್ಲ ರೂಮಿನಲ್ಲೂ ದೊಡ್ಡ ದೊಡ್ಡ ಕನ್ನಡಿಗಳದೇ ಕಾರುಬಾರು. ಕನ್ನಡಿಯಿಂದ ನಕಾರಾತ್ಮಕ ಶಕ್ತಿಗಳು ದೂರವಾಗುತ್ತವೆ ಅಂತ ವಾಸ್ತುವಿನವರು ಹೇಳಿದ್ದಾರಂತೆ. ಯಾರ ಮಾತು ನಂಬಬೇಕೋ ಯಾರ ಮಾತು ಬಿಡಬೇಕೋ ಗೊತ್ತೇ ಆಗದ ಪರಿಸ್ಥಿತಿ.

ಇನ್ನು ಕನ್ನಡಿ ಕಾಣದ ನೆಂಟರ ಮನೆಯಲ್ಲಿ ಎಲ್ಲಿ ಹುಡುಕಿದರೂ ಗೋಡೆ ಗಡಿಯಾರವೂ ಇರಲಿಲ್ಲ. ಟೈಮ್ ನೋಡಬೇಕೆಂದರೆ ಮೊಬೈಲ್‌ಗೇ ಮೊರೆ ಹೋಗಬೇಕಾಯ್ತು. ಗಡಿಯಾರಗಳು ಮನೆಯಲ್ಲಿ ಇರಬಾರದು ಅಂತ ವಾಸ್ತುವಿನವರು ಹೇಳಿದ್ದಕ್ಕೆ ಎಲ್ಲ ತೆಗೆದು ಶೆಲ್ಫ್ ಮೇಲೆ ಒಂದರ ಮೇಲೊಂದು ಮಲಗಿಸಿ ಇಟ್ಟಿದ್ದರು.

ಅಷ್ಟೇ ಅಲ್ಲ... ಈಶಾನ್ಯಕ್ಕೆ ಇಟ್ಟಿದ್ದ ಬಾಗಿಲು ಸರಿ ಇದೆ, ಆದರೆ ಪೂರ್ವಕ್ಕೆ ಇಟ್ಟಿದ್ದ ಬಾಗಿಲು ಮನೆಯ ಮಧ್ಯದಲ್ಲಿದೆ, ಹಾಗಾಗಿ ಅಲ್ಲಿಂದ ಓಡಾಡಬಾರದು ಎಂದು ಹೇಳಿದ್ದಕ್ಕೆ ಡೈನಿಂಗ್ ಹಾಲ್‌ನಲ್ಲಿ, ಧಾರಾಳವಾಗಿ ಗಾಳಿ, ಬೆಳಕು ಆಡುತ್ತಿದ್ದ ಬಾಗಿಲನ್ನು ಮುಚ್ಚಿಸಿಬಿಟ್ಟಿದ್ದರು. ಈಗ ಕೆಲಸದವಳಿಗೆ ಪಾತ್ರೆ ಕೊಡಬೇಕೆಂದರೂ ಮುಂದಿನ ಬಾಗಿಲಿನಿಂದಲೇ, ಬಟ್ಟೆ ಒಗೆಯಬೇಕೆಂದರೂ ಅಲ್ಲಿಂದಲೇ ತೆಗೆದುಕೊಂಡು ಹೋಗಬೇಕು. ಇದೇನಪ್ಪ ಕರ್ಮ, ಇದ್ದೂ ಇಲ್ಲದಂತಹ ಪರಿಸ್ಥಿತಿ ಅಂತ ನೋಡಿದವರಿಗೆ ಅನಿಸದಿರದು.

ಇದು ಯಾವುದೇ ಗಮಾರರು, ಅವಿದ್ಯಾವಂತರ ಮನೆಯ ಕಥೆಯಲ್ಲ, ಕ್ಲಾಸ್ ಒನ್ ಹುದ್ದೆಯಲ್ಲಿರುವ ಹಾಗೂ ಮನೆಮಂದಿಯೆಲ್ಲ ಸುಶಿಕ್ಷಿತರಿರುವ ಕುಟುಂಬ. ಅದರಲ್ಲೂ ಐದು ವರ್ಷದ ಕೆಳಗೆ ಪ್ರಸಿದ್ಧ ವಾಸ್ತುತಜ್ಞರನ್ನು ಹಿಡಿದು ನೂರು ಪ್ರತಿಶತ ವಾಸ್ತುಪ್ರಕಾರ ಕಟ್ಟಿಸಿದ ಮನೆಯದು. ಈಗ ಮತ್ತ್ಯಾರೋ ಹೊಸ ವಾಸ್ತುತಜ್ಞರನ್ನು ಕರೆಸಿದ್ದಕ್ಕೆ ಇಷ್ಟೆಲ್ಲ ರಂಪಾಟ.

ವಾಸ್ತು ಬಗೆಗಿನ ನಂಬಿಕೆಯು ನಂಬುವವರಿಗೆ ಬಿಟ್ಟಿದ್ದು. ಅದೇನಾದರೂ ಇರಲಿ, ವಾಸ್ತು ಎಂದ ಮೇಲೆ ಯಾರು ಹೇಳಿದರೂ ಒಂದೇ ರೀತಿ ಇರಬೇಕಲ್ಲವೇ? ಹೀಗೆ ಒಬ್ಬೊಬ್ಬ ವಾಸ್ತುತಜ್ಞ ಒಂದೊಂದು ರೀತಿ ಹೇಳಿದರೆ, ನಂಬುವವರ ಪಾಡೇನು? ಹಾಗೆಯೇ, ಕಟ್ಟಿಸುವವರೂ ಒಬ್ಬ ವಾಸ್ತುತಜ್ಞರನ್ನು ನಂಬಿ ಕಟ್ಟಿಸಿದ ಮೇಲೆ ಮತ್ತೆ ಯಾರೋ ಬಂದು ಹೇಳಿದರು ಅಂತ ಮನೆ ವಿನ್ಯಾಸ ಬದಲಿಸುತ್ತಲೇ ಹೋದರೆ ಅದಕ್ಕೆ ಅರ್ಥವುಂಟೇ?



ಮಕ್ಕಳಾಗದಿದ್ದಕ್ಕೂ ಹಣಕಾಸು, ಆರೋಗ್ಯ, ನಿರುದ್ಯೋಗ, ಸಾಂಸಾರಿಕ ಕಲಹ ಎಲ್ಲದಕ್ಕೂ ವಾಸ್ತುವಿನ ಜೊತೆಗೆ ತಳುಕು ಹಾಕುವುದು ಚಾಲ್ತಿಗೆ ಬಂದುಬಿಟ್ಟಿದೆ. ನಿವೇಶನ ಖರೀದಿಸಲೂ ವಾಸ್ತುವಿನ ಮೊರೆ ಹೋಗುತ್ತಾರೆ. ಅದರಲ್ಲೂ ಪಶ್ಚಿಮ ಹಾಗೂ ದಕ್ಷಿಣಕ್ಕೆ ಮುಖ ಮಾಡಿರುವ ಸೈಟುಗಳನ್ನು ಅಪಶಕುನವೆಂದು ಕಡಿಮೆ ಬೆಲೆ, ಉತ್ತರ ಹಾಗೂ ಪೂರ್ವಕ್ಕೆ ಮುಖ ಮಾಡಿರುವ ಸೈಟುಗಳಿಗೆ ಅತಿ ಹೆಚ್ಚು ಬೆಲೆ ತೆರಬೇಕಾಗುತ್ತದೆ. ಯಾವುದಾದರೇನು ನಾವು ನಂಬುವುದಿಲ್ಲ ಅಂತಲೋ ಅಥವಾ ಹೇಗಿದ್ದರೂ ವಾಸ್ತು ಪ್ರಕಾರ ಕಟ್ಟಿಸಬಹುದು ಎಂಬ ಧೈರ್ಯದಿಂದ ಕಟ್ಟಿಸಿಕೊಂಡವರಿಗೂ ಸ್ನೇಹಿತರು, ಬಂಧು ಮಿತ್ರರೇ 'ಅಯ್ಯೋ, ಯಾಕೆ ಈ ದಿಕ್ಕಿನ ಸೈಟು ತಗಂಡು ಮನೆ ಕಟ್ಟಿಸಿದ್ರಿ, ಇಷ್ಟೇ ಖರ್ಚು ಮಾಡಿದಿರಿ, ಇನ್ನೊಂದೈದಾರು ಲಕ್ಷಕ್ಕೆ ಯಾಕೆ ಮುಖ ನೋಡಿದ್ದು' ಎಂದು ಅನುಕಂಪ ತೋರಿಸುತ್ತಿರುತ್ತಾರೆ. ಕಟ್ಟಡ ನಿರ್ಮಿಸುವ ಎಂಜಿನಿಯರುಗಳೂ ಈಗಿನ ಜನರ ವಾಸ್ತು ಹುಚ್ಚು ನೋಡಿ, ವಾಸ್ತುಪ್ರಕಾರವೇ ಮನೆ ಕಟ್ಟಿಸಿಕೊಡುತ್ತೇವೆ ಅಂತ ಜಾಹೀರಾತು ಕೊಟ್ಟಿರುತ್ತಾರೆ. ಹೊಲಗಳನ್ನೂ ದಿಕ್ಕು ನೋಡಿ ಕೊಳ್ಳುತ್ತಿದ್ದಾರೆಂದರೆ ವಾಸ್ತು ಗುಂಗಿನ ತೀವ್ರತೆ ಅರಿವಿಗೆ ಬಂದೀತು.

ಜೊತೆಗೆ ವಾಸ್ತು ಗಿಡ, ವಾಸ್ತು ಆಮೆ, ವಾಸ್ತು ಕುದುರೆ, ವಾಸ್ತು ಉಂಗುರ, ವಾಸ್ತು ಡಬ್ಬಿ ಎಂದೆಲ್ಲಾ ಪ್ರತಿದಿನ ಟಿ.ವಿಯಲ್ಲಿ ಗಂಟೆಗಟ್ಟಲೆ ಕಾರ್ಯಕ್ರಮಗಳು ಬಿತ್ತರಗೊಳ್ಳುತ್ತಲೇ ಇರುತ್ತವೆ. ಮನುಷ್ಯನ ಮಾನಸಿಕ ದೌರ್ಬಲ್ಯವನ್ನು ಹಣವನ್ನಾಗಿ ಪರಿವರ್ತಿಸುವ ಸುಲಭ ವಿಧಾನವಾಗಿ ಪರಿಣಮಿಸಿದೆ ಈ ವಾಸ್ತು.

ಕುಟುಂಬದಲ್ಲಿ ಎಲ್ಲರ ಉತ್ತಮ ಆರೋಗ್ಯಕ್ಕಾಗಿ, ಗಾಳಿ, ಬೆಳಕು ಸರಿಯಾಗಿ ಹರಿದಾಡುವಂತಿದ್ದರೆ ಅದೇ ಉತ್ತಮ ವಾಸ್ತು. ಅರ್ಧಂಬರ್ಧ ಕಲಿತವರ ಸಲಹೆಗೆ ಕಿವಿಗೊಡದಿರುವುದೇ ಉತ್ತಮ. ಇಲ್ಲವಾದಲ್ಲಿ ಮಾನಸಿಕ ಶಾಂತಿಯ ಜೊತೆ ಹಣವೂ ಹಾಳು.

ವಾಚಕರ ವಾಣಿ

ಕೋರ್ಟ್‌ಗೆ ಅಲೆಯುವುದು ತಪ್ಪಲಿ

ನಮ್ಮ ನ್ಯಾಯಾಂಗ ವ್ಯವಸ್ಥೆ ಕುರಿತು 'ಗೆದ್ದೋನು ಸೋತ ಸೋತೋನು ಸತ್ತ' ಎನ್ನುವ ಮಾತೊಂದಿದೆ. ಇತ್ತೀಚೆಗೆ ನಿಷ್ಠಾವಂತ ಕಾರ್ಯಕರ್ತರನ್ನ ಸಂಘವೊಂದು ಪ್ರಾಥಮಿಕ ಸದಸ್ಯತ್ವದಿಂದಲೇ ಹೊರಹಾಕಿದಾಗ,'ಕೋರ್ಟಿಗೆ ಹೋಗ್ರಿ, ಖಂಡಿತ ಕೇಸ್ ನಿಮ್ಮ ಪರವಾಗಿ ಆಗುತ್ತೆ' ಎನ್ನುವ ಮಾತು ಸಹಜವಾಗಿ ಬಂತು. ಹೌದು, ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟವರು, ನಿಷ್ಠಾವಂತರಿಗೆ ನ್ಯಾಯ ಸಿಗುವ ಕುರಿತು ವಿಶ್ವಾಸ, ನಂಬಿಕೆ ಹೊಂದಿರುವ ಯಾರೂ ಹೇಳುವ ಮಾತೇ ಅದು. ಹಾಗೆಯೇ ಇನ್ನೊಂದು ವಾದ ಹೀಗಿದೆ, 'ಯಾಕ್ರೀ ಕೋರ್ಟಿಗೆ ಹೋಗಿ ಸಾಯ್ತೀರಿ, ನೀವು ಗೆಲ್ಲತೀರಿ ಅನ್ನೋದರಲ್ಲಿ ಅನುಮಾನಾನೇ ಇಲ್ಲ. ಆದರೆ ನಿಮ್ಮ ನೆಮ್ಮದಿ ಹಾಳು, ದುಡ್ಡು ಹಾಳು, ಕ್ರಿಯಾಶೀಲತೆ ಸತ್ತುಹೋಗುತ್ತೆ, ಎಲ್ಲದಕ್ಕೂ ಹೆಚ್ಚಾಗಿ ಅಮೂಲ್ಯ ಸಮಯವನ್ನ ಕಳಕೊಳ್ತೀರಿ!' ಇತ್ಯಾದಿ. ಈ ಸಮಯ ಕಳೆದು-ಕೊಳ್ಳುವುದು ಎನ್ನುವುದು ಪ್ರಜ್ಞಾವಂತರನ್ನು ಧೃತಿಗೆಡಿಸುವ ಅಂಶ. ದಕ್ಕುವ ನ್ಯಾಯದ ಬಗೆಗೆ ನಂಬಿಕೆಯಿದ್ದರೂ ನ್ಯಾಯಾಂಗದ ಕಟ್ಟೆಯೇರಲು ಹಿಂದೇಟು ಹಾಕುತ್ತಾರೆ ಈ ಅಮೂಲ್ಯ ಸಮಯದ ಮಹತ್ವ ಅರಿತವರು.

'... ಮರುಪರೀಕ್ಷೆ ಅಸಾಧ್ಯ' ಎಂಬ ಸುಪ್ರೀಂ ಕೋರ್ಟ್ ತೀರ್ಪಿನ ವರದಿಯನ್ನು (ಪ್ರ.ವಾ., ನ. 13) ಓದಿದಾಗ, ಈ ತೀರ್ಪು ಬಹಳ ತ್ವರಿತವಾಗಿ ಬಂದಿದೆಯಾದರೂ ಯಾರದ್ದೋ ತಪ್ಪಿಗೆ ಇಬ್ಬರು ವಿದ್ಯಾರ್ಥಿಗಳ ಭವಿಷ್ಯ ಮಂಕಾದದ್ದು ನೋವು ತರಿಸಿತು. ಒಂದು ಪರೀಕ್ಷೆಯ ಸಲುವಾಗಿ ಎಷ್ಟು ಸಮಯವನ್ನು ವಿದ್ಯಾರ್ಥಿಗಳು ವ್ಯಯಿಸಿರುತ್ತಾರೆ, ಅವರ ಶ್ರಮ ಎಂತಹದು ಎಂಬುದನ್ನು ನ್ಯಾಯಾಲಯದ ಗಮನಕ್ಕೆ ತಂದು ನ್ಯಾಯ ಕೊಡಿಸುವ ಕೆಲಸವಾಗಬೇಕು. ಸಮಯ ಅಮೂಲ್ಯವಾದದ್ದೇ, ಅದು ಯಾರನ್ನೂ ಕಾಯುವುದಿಲ್ಲ, ಅಲ್ಲವೇ?

ಕಾಂತೇಶ ಕದರಮಂಡಲಗಿ, ಶಿವಮೊಗ್ಗ

ನಾಯಕನ ನೆನಪಲ್ಲಿ ಹೀಗೊಂದು ಕಾರ್ಯ...

ನಟ ಪುನೀತ್ ರಾಜ್‌ಕುಮಾರ್ ಅವರ ಅಕಾಲಿಕ ನಿಧನದಿಂದ ರಾಜ್ಯದ ಜನ ಅಪಾರ ದುಃಖತಪ್ತರಾಗಿದ್ದು, ಅಗಲಿದ ನಾಯಕನ ಭಾವಚಿತ್ರದ ಫ್ಲೆಕ್ಸ್‌ಗಳನ್ನು ರಾಜ್ಯದಾದ್ಯಂತ ಹಾಕಿ ಅಭಿಮಾನ ಮೆರೆದಿದ್ದಾರೆ. ಅವು ಸ್ವಲ್ಪ ದಿನಗಳ ನಂತರ ಹರಿದು ಚಿಂದಿಯಾಗಿ ಪರಿಸರ ಸೇರುತ್ತವೆ. ಅದರ ಬದಲು ಅವುಗಳನ್ನು 21ನೇ ದಿನದಂದು ಕಳಚಿ ಮಡಚಿ ಮನೆಗೆ ಒಯ್ಯಬೇಕು. ಅವುಗಳನ್ನು ಮಕ್ಕಳಿಗೆ ಸ್ಕೂಲ್ ಬ್ಯಾಗ್, ಜೋಳದ ಮೂಟೆ, ಹೂ ಕುಂಡ, ಅಂಗಡಿಗೆ ಹೋಗಿ ಬರಲು ಕ್ಯಾರಿ ಬ್ಯಾಗ್ ಮುಂತಾಗಿ ಬಳಸಬಹುದು. ಆಗ ಆ ನಾಯಕನ ನೆನಪು ಇನ್ನೂ ನೂರು ದಿನ ಇರುವುದರೊಂದಿಗೆ ಫ್ಲೆಕ್ಸ್‌ಗಳು ಹರಿದು ಚಿಂದಿಯಾಗಿ, ವಿಕಾರವಾಗಿ ತಿಪ್ಪೆ ಸೇರುವುದು ತಪ್ಪುತ್ತದೆ.

ಸುವರ್ಣ ಸಿ.ಡಿ., ತರೀಕೆರೆ

ಅಸಹ್ಯಕರ ಪೋಸ್ಟ್ ಸಲ್ಲ

ಟಿ20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ವಿರುದ್ಧ ಸೋತ ನಂತರ ಭಾರತ ಕ್ರಿಕೆಟ್ ತಂಡದ ಆಟಗಾರರ ವಿರುದ್ಧ ಆಕ್ರೋಶವು ಮಾಧ್ಯಮಗಳಲ್ಲಿ ಮತ್ತು ಮುಖ್ಯವಾಗಿ ಸಾಮಾಜಿಕ ಜಾಲತಾಣದಲ್ಲಿ ಇನ್ನೂ ಮುಂದುವರಿದಿದೆ. ಕೆಲವು ಪೋಸ್ಟ್‌ಗಳು ತೀರಾ ಅಸಹ್ಯಕರವಾಗಿದ್ದು, ಅಸಹನೀಯವಾಗಿ ಕಾಣುತ್ತಿವೆ. ಕ್ರಿಕೆಟ್ ಅಭಿಮಾನಿಗಳ ದುಃಖ ಮತ್ತು ನಿರಾಸೆ ಅರ್ಥವಾಗುವಂಥದ್ದಾದರೂ ಅದನ್ನು ವ್ಯಕ್ತ ಮಾಡುವ ರೀತಿಯಲ್ಲಿ ಸಂಯಮ ಅವಶ್ಯ. ನಮ್ಮ ಜನಪ್ರತಿನಿಧಿಗಳೂ ಚುನಾವಣೆಯ ಪೂರ್ವದಲ್ಲಿ ನಾನಾ ರೀತಿಯ ಭರವಸೆಗಳನ್ನು ನೀಡಿ ಆಯ್ಕೆ-ಯಾಗುತ್ತಾರೆ. ಅವರೆಂದೂ ಅದನ್ನು ನೆರವೇರಿಸುವುದಿಲ್ಲ ಎನ್ನುವುದು ಎಲ್ಲರಿಗೂ ತಿಳಿದ ವಿಷಯ. ಆದರೂ ಅವರ ವಿರುದ್ಧ ಎಂದೂ ಈ ಬಗೆಯಲ್ಲಿ ಆಕ್ರೋಶ ವ್ಯಕ್ತವಾಗುವುದಿಲ್ಲ. ಭರವಸೆಯ ವಿಷಯದಲ್ಲಿ ಈ ದ್ವಂದ್ವ ನೀತಿ ಯಾಕೆ?

ರಮಾನಂದ ಶರ್ಮಾ, ಬೆಂಗಳೂರು

ಎರಡನೇ ಡೋಸ್ ಲಸಿಕೆಗೆ ಉದಾಸೀನವೇಕೆ?

ಕೋವಿಡ್ ಎರಡನೇ ಡೋಸ್ ಲಸಿಕೆಗೆ ಜನ ಮತ್ತು ಸರ್ಕಾರ ಉದಾಸೀನ ತೋರುತ್ತಿರುವುದು ಅಪಾಯಕಾರಿ ಸಂಕೇತ. ಎರಡು ಡೋಸ್ ಲಸಿಕೆಗಳನ್ನು ಪಡೆದಿದ್ದೂ ಕೋವಿಡ್‌ಗೆ ತುತ್ತಾಗಿ ಮರಣವನ್ನಪ್ಪಿರುವ ನಿದರ್ಶನಗಳುಂಟು. ನೂರಕ್ಕೆ ನೂರು ಜನ ಲಸಿಕೆ ಪಡೆದರೂ ಕೊರೊನಾ ಅಂತ್ಯವಾಗಬಹುದೆಂದು ನಿರೀಕ್ಷೆ ಇಟ್ಟುಕೊಳ್ಳುವುದು ಕಷ್ಟವಾಗಿದೆ. ಏಕೆಂದರೆ ಪರದೇಶದಿಂದ ಬರುವ ಜನರಿಂದ ಸೋಂಕು ಹರಡುವ ಸಂಭವವಿದ್ದೇ ಇರುತ್ತದೆ. ಜಗತ್ತಿನಾದ್ಯಂತ ಎಲ್ಲರಿಗೂ ಸಂಪೂರ್ಣ ಲಸಿಕೆಯಾದರೆ ಮಾತ್ರ ಕೋವಿಡ್ ಮಹಾಮಾರಿ ತೊಲಗುವ ನಿರೀಕ್ಷೆ ಇಟ್ಟುಕೊಳ್ಳಬಹುದು. ಅಲ್ಲದೆ, ಎರಡು ಡೋಸ್ ಲಸಿಕೆಗೆ ತೃಪ್ತಿಗೊಳ್ಳದೆ ಈಗಾಗಲೇ ಕೆಲವರು ಬೂಸ್ಟರ್ ಡೋಸ್ ತೆಗೆದು-ಕೊಂಡಿದ್ದಾರೆ ಎಂದು ವರದಿಯಾಗಿದೆ. ಹೀಗಿರುವಾಗ ಎರಡನೇ ಡೋಸ್ ಲಸಿಕೆ ತೆಗೆದುಕೊಳ್ಳುವುದಕ್ಕೆ ಹಿಂದೇಟು ಹಾಕುವುದು ಎಷ್ಟು ಸರಿ?

ಕೆ.ವಿ.ಸೀತಾರಾಮಯ್ಯ, ಬೆಂಗಳೂರು

ಪ್ರಜಾಪ್ರಭುತ್ವಕ್ಕೆ ಬಗೆಯುವ ದ್ರೋಹ

ಜಗದೀಶ ಶೆಟ್ಟರ್ ಅವರು ತಮ್ಮ ಸಹೋದರ, ವಿಧಾನಪರಿಷತ್ ಸದಸ್ಯ ಪ್ರದೀಪ್ ಶೆಟ್ಟರ್ ಅವರಿಗೆ ವಿಧಾನ ಪರಿಷತ್ ಚುನಾವಣೆಯಲ್ಲಿ ಟಿಕೆಟ್ ಖಾತರಿಪಡಿಸಲು ದೆಹಲಿಗೆ ದಿಢೀರ್ ಭೇಟಿ ನೀಡಿದ ಸುದ್ದಿ (ಪ್ರ.ವಾ., ನ. 13) ಪ್ರಕಟ ವಾಗಿದೆ. ಇದರಲ್ಲಿ, ಕೊಡಗಿನ ಶಾಸಕ ಅಪ್ಪಚ್ಚು ರಂಜನ್ ಅವರ ಸಹೋದರ ಸುನೀಲ್ ಸುಬ್ರಮಣಿ ಮತ್ತು ಮಾಜಿ ಸಭಾಪತಿ ಶಿವಮೊಗ್ಗದ ಡಿ.ಎಚ್.ಶಂಕರಮೂರ್ತಿ ಅವರ ಮಗ ಡಿ.ಎಸ್.ಅರುಣ್ ಅವರೂ ಟಿಕೆಟ್ ಆಕಾಂಕ್ಷಿ-ಗಳಾಗಿರುವ ವಿಷಯ ಉಲ್ಲೇಖವಾಗಿದೆ.

ಸಾರ್ವಜನಿಕ ಬದುಕಿಗೆ ಅಥವಾ ರಾಜಕೀಯ ಕ್ಷೇತ್ರಕ್ಕೆ ಈ ಟಿಕೆಟ್ ಆಕಾಂಕ್ಷಿಗಳ ಮಹತ್ವದ ಕೊಡುಗೆಗಳೇನೂ ಇಲ್ಲವೆಂದು ಆ ಕ್ಷೇತ್ರಗಳ ಜನ ಹೇಳುತ್ತಾರೆ. ಹಾಗಿರುವಾಗ ಬಲಿಷ್ಠ ರಾಜಕಾರಣಿಗಳ ಕುಟುಂಬದಲ್ಲಿ ಜನಿಸಿರುವುದೇ ಅವರ ಅರ್ಹತೆಯೇ? ಆದರೆ ಡಿಎನ್‌ಎ ಆಧಾರದಲ್ಲಿ ಟಿಕೆಟ್ ನೀಡಲಾಗುವುದಿಲ್ಲ ಎಂದು ಈ ಹಿಂದೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಹೇಳಿದ್ದುದನ್ನು ಜನ ಮರೆತಿಲ್ಲ. ದೊಡ್ಡ ವ್ಯಕ್ತಿಗಳ ಕುಟುಂಬಗಳಿಗೆ ಸೇರಿದವರು ಎಂಬ ಏಕೈಕ ಕಾರಣಕ್ಕಾಗಿ ಅವರಿಗೆ ಟಿಕೆಟ್ ನೀಡುವುದರಿಂದ ಅವರದೇ ಪಕ್ಷದ ಇತರ ಅರ್ಹ ವ್ಯಕ್ತಿಗಳಿಗೆ ವಂಚನೆ ಮಾಡಿದ ಹಾಗಾಗುವುದಿಲ್ಲವೇ? ಶೆಟ್ಟರ್, ಅಪ್ಪಚ್ಚು ರಂಜನ್ ಮತ್ತು ಶಂಕರಮೂರ್ತಿ ಅವರು ದಶಕಗಳ ಕಾಲ ರಾಜಕೀಯದಲ್ಲಿ ಆಳ್ವಿಕೆ ನಡೆಸಿದವರು. ಶಾಸನಸಭೆಗಳಲ್ಲೂ ಅಧಿಕಾರ ಅನುಭವಿಸಿದವರು. ಉಳಿದ ಮಿತ ಅವಕಾಶಗಳೂ ಅವರ ಕುಟುಂಬಗಳವರಿಗೇ ಸೇರಬೇಕು ಅಂತಾದರೆ ಅದು ಪ್ರಜಾಪ್ರಭುತ್ವಕ್ಕೆ ಎಸಗುವ ದ್ರೋಹವಲ್ಲವೇ?

ಸಚ್ಚಿದಾನಂದ ಹೆಗಡೆ, ಭತ್ತಗುತ್ತಿಗೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಷ್ಟ್ರ ರಾಜಧಾನಿ ಮಾಲಿನ್ಯದ ಕೂಪ

ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶದ (ಎನ್‌ಸಿಆರ್) ವ್ಯಾಪ್ತಿಯಲ್ಲಿ ಬರುವ ನಗರಗಳಲ್ಲಿ ಸತತ ಎರಡನೇ ದಿನವೂ ವಾಯು ಗುಣಮಟ್ಟ ಸೂಚ್ಯಂಕವು (ಎಕ್ಯುಐ) 'ಅತ್ಯಂತ ಕಳಪೆ' ಮಟ್ಟದಲ್ಲಿದೆ. ಪ್ರತೀ ವರ್ಷ ಚಳಿಗಾಲದಲ್ಲಿ ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶದ ವಾಯು ಗುಣಮಟ್ಟ ಹದಗೆಡುತ್ತದೆ. ಹಲವು ಬಾರಿ ಇದು ಅಪಾಯಕಾರಿ ಮಟ್ಟಕ್ಕೂ ಕುಸಿದಿತ್ತು. ಪ್ರತಿ ವರ್ಷ ಚಳಿಗಾಲ ಆರಂಭವಾಗಿ ಕೆಲವು ವಾರಗಳ ನಂತರ ಈ ಪರಿಸ್ಥಿತಿ ಎದುರಾಗುತ್ತಿತ್ತು. ಆದರೆ ಈ ಬಾರಿ ಚಳಿಗಾಲದ ಆರಂಭದಲ್ಲಿಯೇ ಗಾಳಿಯ ಗುಣಮಟ್ಟ ಕುಸಿಯಲು ಆರಂಭಿಸಿದೆ.

ದೆಹಲಿ ಮತ್ತು ದೆಹಲಿ ಸುತ್ತಲಿನ ಗಾಜಿಯಾಬಾದ್, ಗ್ರೇಟರ್ ನೋಯ್ಡಾ, ನೋಯ್ಡಾ ಮತ್ತು ಗುರುಗ್ರಾಮದಲ್ಲಿ ಈಗ ಗಾಳಿ ಗುಣಮಟ್ಟ ಅತ್ಯಂತ ಕಳಪೆಯಾಗಿದೆ. ಸೋಮವಾರ ಬೆಳಿಗ್ಗೆ 9.05ರ ವೇಳೆಯಲ್ಲಿ, ಈ ಎಲ್ಲಾ ನಗರಗಳಲ್ಲಿ 2.5 ಮೈಕ್ರಾನ್‌ನ ಮಾಲಿನ್ಯಕಾರಕ ಕಣಗಳ ಸಂಖ್ಯೆ (ಪಿಎಂ 2.5) 300–400ರಷ್ಟು ದಾಖಲಾಗಿದೆ. ಪ್ರತಿ ಘನ ಮೀಟರ್ ಗಾಳಿಯಲ್ಲಿ ಪಿಎಂ 2.5 ಕಣಗಳ ಸಂಖ್ಯೆ 50ಕ್ಕಿಂತ ಕಡಿಮೆ ಇದ್ದರಷ್ಟೇ ಅದು ಉಸಿರಾಡಲು ಯೋಗ್ಯ. ಈ ಸಂಖ್ಯೆ ಹೆಚ್ಚಾದಷ್ಟೂ ಗಾಳಿಯ ಗುಣಮಟ್ಟ ಕುಸಿಯುತ್ತದೆ.

ಪಿಎಂ 2.5 ಕಣಗಳು ಅತ್ಯಂತ ಸೂಕ್ಷ್ಮವಾಗಿರುವ ಕಾರಣ ಅವು ಗಾಳಿಯಲ್ಲೇ ತೇಲುತ್ತಿರುತ್ತವೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಅವು ನೆಲಮಟ್ಟದಿಂದ ಹೆಚ್ಚು ಮೇಲಕ್ಕೆ ಹೋಗಿರುತ್ತವೆ. ಮಳೆಗಾಲದಲ್ಲಿ, ಮಳೆಹನಿಗಳ ಜತೆಗೆ ನೆಲ ಸೇರುತ್ತವೆ. ಆದರೆ ಚಳಿಗಾಲದಲ್ಲಿ ನೆಲದಿಂದ 5–100 ಅಡಿ ಎತ್ತರದಲ್ಲಿಯೇ ಉಳಿಯುತ್ತವೆ. ಚಳಿಗಾಲದ ಆರಂಭದಲ್ಲಿ ಈ ಪ್ರದೇಶದ ಉಷ್ಣಾಂಶವು 10 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಕಡಿಮೆಯಾಗುತ್ತದೆ. ಉಷ್ಣಾಂಶ ಕಡಿಮೆಯಾಗುವ ಕಾರಣ, ಈ ಪ್ರದೇಶಗಳಲ್ಲಿ ಮಂಜಿನ ವಾತಾವರಣ ಉಂಟಾಗುತ್ತದೆ. ಮಂಜಿನ ಕಣಗಳ ಜತೆಗೆ ಪಿಎಂ 2.5 ಕಣಗಳು ಸೇರಿಕೊಂಡು, ಅವು ನೆಲದಿಂದ ಕೆಲವೇ ಅಡಿ ಎತ್ತರದಲ್ಲಿ ಉಳಿಯುತ್ತದೆ. ಇದರಿಂದ ಹೊಂಜು (ಸ್ಮಾಗ್) ಉಂಟಾಗುತ್ತದೆ.

ಇವು ಅತ್ಯಂತ ಸೂಕ್ಷ್ಮ ಕಣಗಳಾಗಿರುವ ಕಾರಣ ಉಸಿರಾಟದ ವೇಳೆ ಸುಲಭವಾಗಿ ಮನುಷ್ಯನ ಶ್ವಾಸಕೋಶವನ್ನು ಸೇರುತ್ತವೆ. ಆ ಮೂಲಕ ಉಸಿರಾಟದ ಗಂಭೀರ ಸಮಸ್ಯೆಯನ್ನು ಉಂಟು ಮಾಡುತ್ತವೆ. ಹೀಗಾಗಿಯೇ ಈ ಪರಿಸ್ಥಿತಿಯನ್ನು ಅತ್ಯಂತ ಕಳಪೆ ಗುಣಮಟ್ಟದ ಗಾಳಿ ಎಂದು ವರ್ಗೀಕರಿಸಲಾಗಿದೆ. 'ಪ್ರತಿ ಘನಮೀಟರ್ ಗಾಳಿಯಲ್ಲಿ ಪಿಎಂ 2.5 ಕಣಗಳ ಸಂಖ್ಯೆ 300–400ರಷ್ಟು ಇದ್ದರೆ, ಒಬ್ಬ ಮನುಷ್ಯ ಒಂದು ದಿನದಲ್ಲಿ 20 ಸಿಗರೇಟುಗಳನ್ನು ಸೇದಿದಾಗ ಸೇವಿಸುವಷ್ಟೇ ವಿಷಗಾಳಿ ಆತನ ಶ್ವಾಸಕೋಶ ಸೇರುತ್ತದೆ' ಎಂದು ದೆಹಲಿ ಸರ್ಕಾರ, ಸುಪ್ರೀಂ ಕೋರ್ಟ್‌ನಲ್ಲಿ ಹೇಳಿಕೆ ನೀಡಿತ್ತು.

ನಗರಗಳಲ್ಲಿ ಹದಗೆಟ್ಟ ಗಾಳಿ

ದೆಹಲಿ ಮತ್ತು ಸುತ್ತಮುತ್ತಲಿನ ನಗರಗಳ ಗಾಳಿಯಲ್ಲಿ ಸೋಮವಾರ ಬೆಳಿಗ್ಗೆ **9.05**ರಲ್ಲಿ ಇದ್ದ ಪಿಎಂ **2.5** ಗಾತ್ರದ ಕಣಗಳ ಸಂಖ್ಯೆ

- ***342*** ದೆಹಲಿಯಲ್ಲಿ ಎಕ್ಯುಐ ಸಂಖ್ಯೆ
- ***340*** ಗ್ರೇಟರ್ ನೋಯ್ಡಾದಲ್ಲಿ ಎಕ್ಯುಐ ಸಂಖ್ಯೆ
- ***328*** ನೋಯ್ಡಾದಲ್ಲಿ ಎಕ್ಯುಐ ಸಂಖ್ಯೆ
- ***328*** ಗಾಜಿಯಾಬಾದ್‌ನಲ್ಲಿ ಎಕ್ಯುಐ ಸಂಖ್ಯೆ
- ***326*** ಗುರುಗ್ರಾಮದಲ್ಲಿ ಎಕ್ಯುಐ ಸಂಖ್ಯೆ

ನೋಯ್ಡಾದಲ್ಲಿ ಆವರಿಸಿರುವ ದಟ್ಟ ಹೊಂಜು

ನಿಯಂತ್ರಣ ಕ್ರಮಗಳು

- ದೆಹಲಿಯಲ್ಲಿ ಭೌತಿಕ ಸ್ವರೂಪದ ಶಾಲಾ ತರಗತಿಗಳನ್ನು ಸ್ಥಗಿತಗೊಳಿಸಿದ ಸರ್ಕಾರ. ಈ ಅವಧಿಯಲ್ಲಿ ಆನ್‌ಲೈನ್ ತರಗತಿ ನಡೆಸಲು ಸೂಚನೆ
- ನವೆಂಬರ್ 14ರಿಂದ 17ರವರೆಗೆ ದೆಹಲಿಯಲ್ಲಿ ಎಲ್ಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ನಿಷೇಧ
- ದೆಹಲಿಯ ಎಲ್ಲ ಸರ್ಕಾರಿ ಕಚೇರಿಗಳನ್ನು ವಾರದ ಮಟ್ಟಿಗೆ ಬಂದ್ ಮಾಡಲಾಗಿದೆ. ಸಿಬ್ಬಂದಿಗೆ ಮನೆಯಿಂದಲೇ ಕೆಲಸ ಮಾಡುವಂತೆ ಸರ್ಕಾರ ಸೂಚಿಸಿದೆ. ಇದನ್ನೇ ಅನುಸರಿಸುವಂತೆ ಖಾಸಗಿ ಕಚೇರಿಗಳಿಗೂ ಸೂಚನೆ ನೀಡಲಾಗಿದೆ
- ಜನರು ಹೊರಗಡೆ ಸುತ್ತಾಡುವುದನ್ನು ಕಡಿಮೆ ಮಾಡಬೇಕು ಎಂದು ಸೂಚಿಸಿದೆ
- ವಾಹನಗಳ ಬಳಕೆಯನ್ನು ಶೇ 30ರಷ್ಟು ಕಡಿತಗೊಳಿಸುವಂತೆ ಸರ್ಕಾರಿ ಮತ್ತು ಖಾಸಗಿ ಕಚೇರಿಗಳಿಗೆ ಸೂಚನೆ
- ವಾಹನ ಸವಾರರು 'ಮಾಲಿನ್ಯ ಪ್ರಮಾಣ ನಿಯಂತ್ರಣದಲ್ಲಿದೆ' ಎಂಬುದನ್ನು ದೃಢೀಕರಿಸುವ ಪ್ರಮಾಣಪತ್ರಗಳನ್ನು ಹೊಂದಿದ್ದಾರೆಯೇ ಎಂಬುದನ್ನು ಪರಿಶೀಲಿಸಲು ದೆಹಲಿಯ 170 ಸ್ಥಳಗಳಲ್ಲಿ ಸಂಚಾರ ಪೊಲೀಸರ ತಂಡಗಳನ್ನು ನಿಯೋಜಿಸಲಾಗಿದೆ
- ದೂಳು ಏಳದಂತೆ ನಿಯಂತ್ರಿಸಲು ರಸ್ತೆಯ ಮೇಲೆ ನೀರು ಚುಮುಕಿಸಲು 114 ವಾಹನಗಳನ್ನು ದೆಹಲಿ ಸರ್ಕಾರ ನಿಯೋಜಿಸಿದೆ
- ಅಗತ್ಯಬಿದ್ದರೆ, ನಗರದಲ್ಲಿ ವಾಯುಮಾಲಿನ್ಯ ನಿಯಂತ್ರಣಕ್ಕೆ ಲಾಕ್‌ಡೌನ್ ಜಾರಿಗೊಳಿಸಲು ಸಿದ್ಧ ಎಂದು ದೆಹಲಿ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಹೇಳಿದೆ
- ದೆಹಲಿ ಸರ್ಕಾರದ ಕ್ರಮಗಳನ್ನೇ ಹರಿಯಾಣ, ಪಂಜಾಬ್ ಸರ್ಕಾರಗಳು ತೆಗೆದುಕೊಂಡಿವೆ

'ಕೃಷಿತ್ಯಾಜ್ಯ ದಹನವೇ ಕಾರಣವಲ್ಲ'

ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನದಲ್ಲಿ ಕೃಷಿತ್ಯಾಜ್ಯವನ್ನು ಸುಡುವುದರಿಂದಲೇ ದೆಹಲಿಯಲ್ಲಿ ಪ್ರತೀ ಚಳಿಗಾಲದಲ್ಲೂ ಗಾಳಿಯ ಗುಣಮಟ್ಟ ಕುಸಿಯುತ್ತದೆ ಎಂದು ಎಎಪಿ ಸರ್ಕಾರವು ಹಲವು ವರ್ಷಗಳಿಂದ ಆರೋಪಿಸುತ್ತಲೇ ಇದೆ.

ಆದರೆ ಈಗ ದೆಹಲಿಯಲ್ಲಿ ಗಾಳಿಯ ಗುಣಮಟ್ಟ ಕುಸಿಯಲು ನೆರೆಯ ರಾಜ್ಯಗಳಲ್ಲಿ ಕೃಷಿ ತ್ಯಾಜ್ಯ ಸುಡುವುದು ಪ್ರಮುಖ ಕಾರಣವೇ ಅಲ್ಲ ಎಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರವು ಪ್ರಮಾಣಪತ್ರ ಸಲ್ಲಿಸಿದೆ. 'ದೆಹಲಿಯಲ್ಲಿನ ವಾಯುಮಾಲಿನ್ಯಕ್ಕೆ ಕೃಷಿ ತ್ಯಾಜ್ಯ ಸುಡುವುದರಿಂದ ಆಗುವ ಹೊಗೆಯ ಕೊಡುಗೆ ಶೇ 4ರಷ್ಟು ಮಾತ್ರ' ಎಂದು ಕೇಂದ್ರ ಸರ್ಕಾರವು ಹೇಳಿದೆ.

ವಿವಿಧ ನಗರಗಳಲ್ಲಿ ವಿನೂತನ ಕ್ರಮಗಳು

ಗಾಳಿಯ ಗುಣಮಟ್ಟ ಕುಸಿಯುವುದು ಜಗತ್ತಿನ ಎಲ್ಲ ನಗರಗಳ ಸಮಸ್ಯೆಯೂ ಹೌದು. ಹಲವು ಪ್ರಮುಖ ನಗರಗಳು ವಿನೂತನ ಕ್ರಮಗಳ ಮೂಲಕ ವಾಯುಮಾಲಿನ್ಯವನ್ನು ನಿಯಂತ್ರಣದಲ್ಲಿ ಇರಿಸಲು ಯತ್ನಿಸಿವೆ.

ಫ್ರಾನ್ಸ್ ರಾಜಧಾನಿ ಪ್ಯಾರಿಸ್ ನಗರದೊಳಗೆ ಹೆಚ್ಚು ಮಾಲಿನ್ಯಕ್ಕೆ ಕಾರಣವಾಗುವಂಥ ವಾಹನಗಳು ಪ್ರವೇಶಿಸಲು ಅವಕಾಶ ಇಲ್ಲ. ಸಿನ್ ನದಿಯ ತೀರದ ಮಾರ್ಗದಲ್ಲಿ ಕಾರುಗಳ ಓಡಾಟ ನಿಷೇಧಿಸಲಾಗಿದೆ. ರಸ್ತೆ ಬದಿಯಲ್ಲಿ ಮರಗಳನ್ನು ಬೆಳೆಸಲಾಗಿದೆ ಮತ್ತು ಪಾದಚಾರಿಗಳಿಗೆ ಮಾತ್ರ ಓಡಾಡಲು ಅವಕಾಶ ನೀಡಲಾಗಿದೆ. ನಗರದಲ್ಲಿ ಸೈಕಲ್ ಮಾರ್ಗಗಳ ಜಾಲವನ್ನು ವಿಸ್ತರಿಸಲು ಒತ್ತು ನೀಡಲಾಗಿದೆ. ಇಡೀ ಪ್ಯಾರಿಸ್ ನಗರವನ್ನು ಪಾದಚಾರಿ ಸ್ನೇಹಿ ನಗರವಾಗಿ ರೂಪಿಸುವ ಗುರಿಯನ್ನು ಇಲ್ಲಿಯ ಮೇಯರ್ ಹೊಂದಿದ್ದಾರೆ.

ದಕ್ಷಿಣ ಕೊರಿಯಾದ ಸೋಲ್ ನಗರದ ಕೈಗಾರಿಕೆಗಳ ಆವರಣಗಳಲ್ಲಿ ವಾಯು ಗುಣಮಟ್ಟ ಪರೀಕ್ಷಿಸಲು ರೊಬೋಟ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ. ಜನರಿಗೆ ಪ್ರತಿ ಕ್ಷಣದ ವಾಯು ಗುಣಮಟ್ಟದ ಮಾಹಿತಿ ನೀಡಲು ಉಪಗ್ರಹ ಆಧಾರಿತ ವ್ಯವಸ್ಥೆಯನ್ನೂ ರೂಪಿಸಲಾಗಿದೆ.

ನ್ಯೂಯಾರ್ಕ್ ನಗರದ ಮ್ಯಾನ್‌ಹಟನ್ ಪ್ರದೇಶದಲ್ಲಿ ಚಾಲಕರಿಗೆ ವಾಹನ ದಟ್ಟಣೆ ಶುಲ್ಕ ವಿಧಿಸಲಾಗುತ್ತಿದೆ. ಕಾರುಗಳ ಬಳಕೆ ಕಡಿಮೆ ಮಾಡುವ ಸಲುವಾಗಿ ನಗರದ ಮಧ್ಯಭಾಗದ ಚೆಕ್‌ಪಾಯಿಂಟ್‌ಗಳನ್ನು ಪ್ರವೇಶಿಸುವ ಕಾರುಗಳಿಗೆ 10ರಿಂದ 15 ಡಾಲರ್ ಶುಲ್ಕ ವಿಧಿಸಲಾಗುತ್ತದೆ. ನವೀಕರಿಸಬಹುದಾದ ಮೂಲಗಳಿಂದ ಇಂಧನ ಉತ್ಪಾದನೆಗೆ ₹10,420 ಕೋಟಿಯನ್ನು ನ್ಯೂಯಾರ್ಕ್ ಗವರ್ನರ್ ಮಂಜೂರು ಮಾಡಿದ್ದಾರೆ. 2022ರ ವೇಳೆಗೆ ಈ ಎಲ್ಲಾ ಯೋಜನೆಗಳು ಜಾರಿಗೆ ಬರಲಿವೆ. ಇದರಿಂದ 16 ಲಕ್ಷ ಮೆಟ್ರಿಕ್ ಟನ್ ಇಂಗಾಲ ಹೊರಸೂಸುವಿಕೆ ತಗ್ಗುತ್ತದೆ ಎಂದು ಅಂದಾಜಿಸಲಾಗಿದೆ.

ಕೊಲಂಬಿಯಾದ ಬೊಗೋಟ ನಗರ ತನ್ನ 80 ಲಕ್ಷ ನಾಗರಿಕರಿಗಾಗಿ ವಿದ್ಯುತ್ ಚಾಲಿತ ಮೆಟ್ರೊ ರೈಲು ಸಂಪರ್ಕ ಒದಗಿಸಲಿದೆ. 550 ಕಿ.ಮೀ. ಸೈಕಲ್ ಮಾರ್ಗಕ್ಕೆ ಇನ್ನೂ 60 ಕಿ.ಮೀ. ಸೈಕಲ್ ಮಾರ್ಗ ಜೋಡಿಸುವ ಯೋಜನೆ ಹಾಕಿಕೊಂಡಿದೆ.

ಆಧಾರ: ಪಿಟಿಐ, ವರದಿ: ಜಯಸಿಂಹ ಆರ್, ಅಮೃತ ಕಿರಣ್ ಬಿ.ಎಂ., ಚೇತನಾ ಜೆ.ಕೆ.

ಗಾಳಿಯ ಗುಣಮಟ್ಟ ಸೂಚ್ಯಂಕ ಪಟ್ಟಿ

ಪ್ರತಿ ಘನ ಮೀಟರ್‌ನಲ್ಲಿ ಇರುವ ಪಿಎಂ 2.5 ಕಣಗಳ ಸಂಖ್ಯೆಯ ಆಧಾರದ ಮೇಲೆ ಗಾಳಿಯ ಗುಣಮಟ್ಟವನ್ನು ನಿರ್ಧರಿಸಲಾಗುತ್ತದೆ

- **0-50** ಕಣಗಳು ಆರೋಗ್ಯಕರ ಗಾಳಿ
- **51-100** ಕಣಗಳು ಉತ್ತಮ ಗುಣಮಟ್ಟದ ಗಾಳಿ
- **101-200** ಕಣಗಳು ಸಾಧಾರಣ ಗುಣಮಟ್ಟದ ಗಾಳಿ
- **201-300** ಕಣಗಳು ಕಳಪೆ ಗುಣಮಟ್ಟದ ಗಾಳಿ
- **301-400** ಕಣಗಳು ಅತ್ಯಂತ ಕಳಪೆ ಗುಣಮಟ್ಟದ ಗಾಳಿ
- **401-500** ಕಣಗಳು ಅಪಾಯಕಾರಿ ಗಾಳಿ

ಆರೋಗ್ಯದ ಮೇಲೆ ಪರಿಣಾಮ

ಮಾಲಿನ್ಯಕಾರಕ ಕಣಗಳಿರುವ ಗಾಳಿಯನ್ನು ಉಸಿರಾಡುವುದರಿಂದ ಕ್ಯಾನ್ಸರ್, ಪಾರ್ಶ್ವವಾಯು ರೀತಿಯ ಕಾಯಿಲೆಗಳು ಹರಡುತ್ತವೆ



ಅಧಿಕ ವಾಯುಮಾಲಿನ್ಯ ನಗರಗಳು

(ಸೋಮವಾರ ಸಂಜೆ 5.30ರ ಸಮಯದಲ್ಲಿ ದಾಖಲಾದ ವಾಯುಗುಣಮಟ್ಟ ಸೂಚ್ಯಂಕ)

ನಗರಗಳು	ಎಕ್ಯುಐ ಮಟ್ಟ
ದೆಹಲಿ	212
ಚಂಗ್ಡು, ಚೀನಾ	200
ಲಾಹೋರ್, ಪಾಕಿಸ್ತಾನ	196
ಢಾಕಾ, ಬಾಂಗ್ಲಾದೇಶ	194
ಬೆಲ್ಗ್ರೇಡ್, ಸರ್ಬಿಯಾ	168
ಚಾಂಗ್‌ಕ್ವಿಂಗ್, ಚೀನಾ	167
ಸ್ಕೋಪ್‌ಜೆ, ಉತ್ತರ ಮೆಸಿಡೋನಿಯಾ	166
ಮುಂಬೈ	161
ಶೆನ್‌ಯಾಂಗ್, ಚೀನಾ	160
ಹನೋಯ್, ವಿಯೆಟ್ನಾಂ	160

ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 7

ದೇವ ದಾನವರ ಯುದ್ಧಾರಂಭ

ಬ್ರಹ್ಮ-ವಿಷ್ಣು ಮೊದಲಾದ ದೇವತೆಗಳೆಲ್ಲರಿಗೂ ಶಿವಕುಮಾರನ ಗುಣಗಳು ಇಷ್ಟವಾದವು. ನಂಬಿ ಬಂದವರನ್ನು ರಕ್ಷಿಸುವ, ದುಷ್ಟರನ್ನು ಶಿಕ್ಷಿಸುವ ವೀರೋಚಿತ ಕುಮಾರನ ಸ್ವಭಾವ ದೇವಗಣಗಳನ್ನು ಸಂತೋಷಪಡಿಸಿತು. ಇವನೇ ತಾರಕನನ್ನು ಸಂಹರಿಸುವ ಶಕ್ತಿವಂತ ಎಂಬ ಆತ್ಮವಿಶ್ವಾಸ ಮೂಡಿಸಿತು. ಇನ್ನೂ ತಡಮಾಡಬಾರದು ಅಂತ ದೇವಸಮೂಹ ಕಾರ್ತಿಕೇಯನ ನಾಯಕತ್ವದಲ್ಲಿ ತಾರಕನನ್ನು ಕೊಲ್ಲಲು ಜಯಘೋಷ ಮಾಡುತ್ತಾ ಹೊರಟಿತು.

ಮಹಾಬಲಶಾಲಿಯಾದ ತಾರಕಾಸುರನಿಗೆ ಷಣ್ಮುಖನ ನೇತೃತ್ವದಲ್ಲಿ ದೇವತೆಗಳು ತನ್ನ ಮೇಲೆ ಯುದ್ಧಮಾಡಲು ಬರುತ್ತಿರುವ ವಿಷಯ ತಿಳಿಯಿತು. ಅವನು ಸಹ ದೊಡ್ಡ ದಾನವಸೈನ್ಯದೊಂದಿಗೆ ದೇವತೆಗಳ ಮೇಲೆ ಯುದ್ಧ ಮಾಡಲು ಸಿದ್ಧವಾದನು. ಸಾವಿರಾರು ದೈತ್ಯಸೈನ್ಯದೊಡನೆ ತಾರಕನು ಅಬ್ಬರಿಸುತ್ತಾ ಬರುತ್ತಿರುವುದನ್ನು ನೋಡಿ ದೇವಸಮೂಹದಲ್ಲಿ ಭಯ ಆವರಿಸಿತು. ಅಷ್ಟರಲ್ಲಿ ಈಶ್ವರಪ್ರೇರಿತವಾದ ಆಕಾಶವಾಣಿ 'ಎಲೈ ದೇವತೆಗಳಿರಾ, ನೀವೆಲ್ಲರೂ ಕುಮಾರನ ನೇತೃತ್ವದಲ್ಲಿ ದೈತ್ಯರೊಡನೆ ಯುದ್ಧಮಾಡಿ ಗೆಲ್ಲುವಿರಿ' ಎಂದಿತು.

ಆಕಾಶದಿಂದ ಕೇಳಿಬಂದ ಅಶರೀರವಾಣಿಯಿಂದ ದೇವತೆಗಳಲ್ಲಿದ್ದ ಭಯ ಕಣ್ಮರೆಯಾಗಿ ಯುದ್ಧೋತ್ಸಾಹ ಹೊಮ್ಮಿತು. ಅವರೆಲ್ಲಾ ಸಂಭ್ರಮೋಲ್ಲಾಸದಿಂದ ವೀರಾಲಾಪ ಮಾಡುತ್ತಾ, ಕುಮಾರನ ನೇತೃತ್ವದಲ್ಲಿ ಸಮುದ್ರತೀರಕ್ಕೆ ಬಂದರು. ತಾರಕಾಸುರನು ಸಹ ತನ್ನ ದೈತ್ಯದಂಡಿನೊಂದಿಗೆ ಅಲ್ಲಿಗೆ ಬಂದು ದೇವತೆಗಳ ಮೇಲೆ ಆಕ್ರಮಣ ನಡೆಸಿದ. ದೇವ-ದಾನವರು ಪರಸ್ಪರ ಭಯಂಕರವಾಗಿ ಕಾದಾಡತೊಡಗಿದರು. ತಾರಕಾಸುರನ ದಾನವಸೈನಿಕರು ಪ್ರಳಯಕಾಲದ ಮೇಘದ ಧ್ವನಿಯಂತೆ ರಣಭೇರಿಗಳನ್ನು ಬಾರಿಸುತ್ತಾ, ಕರ್ಕಶವಾದ್ಯಗಳನ್ನು ಭಯಂಕರವಾಗಿ ಮೊಳಗಿಸುತ್ತಿದ್ದರು. ಇದು ಎದುರಾಳಿಗಳ ಎದೆಯಲ್ಲಿ ನಡುಗಿಸುವ ಕುತಂತ್ರವಾಗಿತ್ತು. ಇದ್ಯಾವುದಕ್ಕೂ ಹೆದರದ ದೇವಸೈನ್ಯ ದಾನವಸೈನ್ಯದ ಮೇಲೆ ಮುಗಿ ಬಿದ್ದು ವೀರಾವೇಶದಿಂದ ಹೋರಾಡಿತು. ಉಭಯ ಪಡೆಗಳ ಸಾವಿರಾರು ಸೈನಿಕರು ಹತರಾಗಿ, ರಕ್ತದಕೋಡಿ ಎಲ್ಲೆಡೆ ಹರಿಯತೊಡಗಿತು. ತಾರಕಾಸುರ ಮತ್ತವನ ದೈತ್ಯಪಡೆಗಳು ಗರ್ಜಿಸುತ್ತಾ ಹೆಜ್ಜೆ ಇಡುತ್ತಿದ್ದರೆ ಭೂಮಿಯು ಕಂಪಿಸಿ, ಅಲುಗಾಡುತ್ತಿತ್ತು. ದೇವಸೈನ್ಯ ದೈತ್ಯರ ಭಯಂಕರ ಶಬ್ದಗಳಿಗೆ ಹೆದರದೆ ತಾರಕನೊಡನೆ ಯುದ್ಧಮಾಡಲು ಉತ್ಸುಕವಾಗಿತ್ತು.

ದೇವಸೇನಾಪತಿ ಸುಬ್ರಹ್ಮಣ್ಯನ ಆಣತಿಯಂತೆ ದೇವೇಂದ್ರನು ಅಷ್ಟದಿಕ್ಪಾಲರೊಡನೆ ತನ್ನ ಐರಾವತ ಆನೆಯಲ್ಲಿ ಕುಳಿತುಕೊಂಡು ದಾನವರ ಮೇಲೆ ಯುದ್ಧ ಮಾಡತೊಡಗಿದ. ಆ ಸಮಯದಲ್ಲಿ ದೇವದುಂದುಭಿಗಳು ಮೊಳಗಿದವು. ವೀಣೆ, ಕೊಳಲು, ಮೃದಂಗ ಮುಂತಾದ ಮಂಗಳಕರವಾದ ವಾದ್ಯಗಳನ್ನು ಗಂಧರ್ವರು ನುಡಿಸಿ ದೇವಸೈನ್ಯವನ್ನು ಹುರಿದುಂಬಿಸಿದರು. ಅತ್ತ ದಾನವರ ಕಡೆಯವರು ರಣಭೇರಿ ಬಾರಿಸಿ, ಕಹಳೆಗಳನ್ನು ಕರ್ಕಶವಾಗಿ ಊದುತ್ತಾ ದೈತ್ಯಸೇನೆಯನ್ನು ಉತ್ತೇಜಿಸುತ್ತಿದ್ದರು. ಷಣ್ಮುಖನು ಪರಮಾದ್ಭುತವಾದ ರತ್ನಖಚಿತ ವಿಮಾನವನ್ನೇರಿ ರಣಾಂಗಣಕ್ಕಿಳಿದಾಗ, ಅವನ ಅಕ್ಕಪಕ್ಕಗಳಲ್ಲಿ ದೇವತೆಗಳು ಕಾಂತಿಯುಕ್ತವಾದ ಚಾಮರಗಳಿಂದ ಬೀಸುತ್ತಿದ್ದರು. ವರುಣ ರತ್ನಖಚಿತ ಶ್ವೇತಛತ್ರಿಯನ್ನು ಹಿಡಿದಿದ್ದ. ಅದು ಅನಂತಚಂದ್ರರ ಕಿರಣದಂತೆ ಬಿಳುಪಾಗಿ ಪ್ರಕಾಶಿಸುತ್ತಿತ್ತು.

ಸುರ-ದೈತ್ಯರ ಯುದ್ಧ ಕ್ಷಣಾರ್ಧದಲ್ಲಿ ಭಯಂಕರ ರೂಪತಾಳಿತು. ಎರಡೂ ಕಡೆಯ ಸೈನಿಕರ ರುಂಡ-ಮುಂಡಗಳು ಚೆಲ್ಲಾಡಿ ಹೋದವು. ಯುದ್ಧದಲ್ಲಿ ದೇವಸೇನೆಯ ಕೈ ಮೇಲಾಗುತ್ತಿರುವುದನ್ನು ಕಂಡು ತಾರಕಾಸುರನು ಇಂದ್ರನ ಮೇಲೆ ಎರಗಿದ. ಅತ್ತ ದೈತ್ಯಸೇನಾನಿಗಳಾದ ಸಂಹ್ರಾದನು ಅಗ್ನಿಯೊಡನೆ, ಜಂಭಾಸುರನು ಯಮನ ಮೇಲೆ, ಮಹಾಪ್ರಭುವೆಂಬುವವನು ನಿರರುತಿಯೊಡನೆ, ಬಲ ಎಂಬಾತನು ವರುಣನ ಮೇಲೆ, ಸುವೀರನು ವಾಯುವಿನ ಮೇಲೆ, ಪವಮಾನ ಎಂಬ ದೈತ್ಯನು ಕುಬೇರನ ಮೇಲೆ, ಶಿವನು ಈಶಾನನೊಡನೆ, ಶಂಭಾಸುರನು ಆದಿಶೇಷನೊಡನೆ, ಕುಂಭನು ಚಂದ್ರನೊಡನೆ, ಕುಂಜರ ಸೂರ್ಯನೊಡನೆ ದ್ವಂದ್ವಯುದ್ಧ ಮಾಡಿದರು. ದೇವ-ದಾನವರ ರಣರಂಗದಲ್ಲಿ ವೀರರಿಗೆ ಉತ್ಸಾಹವನ್ನು ಹೆಚ್ಚಿಸುತ್ತಿದ್ದರೆ, ರಣಹೇಡಿಗಳಿಗೆ ಭಯವನ್ನುಂಟು ಮಾಡುತ್ತಿತ್ತು. ಯುದ್ಧದಲ್ಲಿ ಎರಡೂ ಕಡೆ ಭಾರಿ ಸಾವು-ನೋವುಗಳು ಸಂಭವಿಸುತ್ತಿತ್ತು. ಅದರಿಂದ ಯುದ್ಧರಂಗವು ಭಯಂಕರವಾಗಿ ಕಾಣಿಸುತ್ತಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ತಮಿಳುನಾಡು ಹಾಗೂ ಪುದುಚೇರಿ ಗಡಿಯಲ್ಲಿ ಇತ್ತೀಚೆಗೆ ಸ್ಕೂಟರ್‌ವೊಂದು ಸ್ಫೋಟಗೊಂಡು, ಅದರಲ್ಲಿದ್ದ ತಂದೆ ಮಗ ಮೃತಪಟ್ಟಿದ್ದರು. ಈ ಅಪಘಾತದ ಸಿಸಿಟಿವಿ ಕ್ಯಾಮರಾ ದೃಶ್ಯಾವಳಿ ವೈರಲ್ ಆಗಿದೆ. ಸ್ಕೂಟರ್ ಇದ್ದಕ್ಕಿದ್ದಂತೆ ಸ್ಫೋಟಗೊಳ್ಳುವ ದೃಶ್ಯ ಇದರಲ್ಲಿದೆ. 'ಇದು ಬ್ಯಾಟರಿಚಾಲಿತ ಬೈಕ್ ಆಗಿರುವ ಕಾರಣ ಸ್ಫೋಟ ಆಗಿದೆ' ಎಂದು ಹಲವು ಫೇಸ್‌ಬುಕ್ ಬಳಕೆದಾರರು ಉಲ್ಲೇಖಿಸಿದ್ದಾರೆ.

ಬ್ಯಾಟರಿಚಾಲಿತ ಎಂಬ ಕಾರಣಕ್ಕೆ ಸ್ಫೋಟ ಆಗಿದೆ ಎಂಬುದನ್ನು ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ತಂಡ ಅಲ್ಲಗಳೆದಿದೆ. 'ಸ್ಕೂಟರ್‌ನಲ್ಲಿ ಪಟಾಕಿಯನ್ನು ಸಾಗಿಸಲಾಗುತ್ತಿತ್ತು. ಪಟಾಕಿಯನ್ನು ಲಗೇಜ್ ಇರಿಸುವ ಜಾಗದಲ್ಲಿಟ್ಟು, ಅದರ ಮೇಲೆ ಮಗುವನ್ನು ಕೂರಿಸಲಾಗಿತ್ತು. ತೀವ್ರ ಒತ್ತಡ ಉಂಟಾಗಿ, ಪಟಾಕಿ ಸ್ಫೋಟಗೊಂಡಿದೆ' ಎಂದು ತನಿಖಾಧಿಕಾರಿ ನೀಡಿದ ಮಾಹಿತಿ ಉಲ್ಲೇಖಿಸಿ ವೆಬ್‌ಸೈಟ್ ವರದಿ ಮಾಡಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಉಕ್ಕುವ ಆತ್ಮತೃಪ್ತಿ

ಸಂಗೀತ ತಲೆದೂಗಿಪುದು, ಹೊಟ್ಟೆ ತುಂಬೀತೇ?|
ತಂಗದಿರನೆಸಕ ಕಣ್ಣಮೃತ, ಕಣಜಕದೇಂ?||
ಅಂಗಡಿಯ ಮಾಡದಿರು ಸುಕೃತಪ್ರಸಕ್ತಿಯಲಿ|
ಪೊಂಗುವಾತ್ಮವೆ ಲಾಭ – ಮಂಕುತಿಮ್ಮ ||498||

ಪದ-ಅರ್ಥ: ತಂಗದಿರನೆಸಕ = ತಂಗದಿರನ (ಚಂದ್ರನ) + ಎಸಕ (ಬೆಳದಿಂಗಳು), ಕಣಜಕದೇಂ = ಕಣಜಕೆ (ಧಾನ್ಯ ತುಂಬುವ ಕಣಜಕ್ಕೆ) + ಅದೇಂ (ಏನು ಪ್ರಯೋಜನ), ಪೊಂಗುವಾತ್ಮವೆ = ಪೊಂಗುವ (ಹೊಂದುವ, ಪಡೆಯುವ) + ಆತ್ಮವೆ.

ವಾಚ್ಯಾರ್ಥ: ಸಂಗೀತ ಮನಸ್ಸನ್ನು ಒಲಿಸಬಹುದು ಆದರೆ ಅದರಿಂದ ಹೊಟ್ಟೆ ತುಂಬೀತೇ? ಚಂದ್ರನ ಬೆಳದಿಂಗಳು ಕಣ್ಣಿಗೆ ಸೊಗಸು ನೀಡೀತು, ಆದರೆ ಅದರಿಂದ ಧಾನ್ಯಗಳ ಕಣಜ ತುಂಬೀತೇ? ಹಾಗೆಂದು ಒಳ್ಳೆಯ ಕೆಲಸಗಳ ವಿಷಯವನ್ನು ಅಂಗಡಿಯ ವ್ಯಾಪಾರವನ್ನಾಗಿ ಮಾಡಬೇಡ. ಇವುಗಳಿಂದ ದೊರೆಯುವ ಲಾಭವೆಂದರೆ ಉಕ್ಕುವ ಆತ್ಮಸುಖ.

ವಿವರಣೆ: ಮಿಯಾ ತಾನಸೇನ್ ಅಕ್ಬರನ ಆಸ್ಥಾನದ ಶ್ರೇಷ್ಠ ಮಣಿ. ಆತ ಅಕ್ಬರ ಮಹಾರಾಜನಿಗೆ ಅತ್ಯಂತ ಆಪ್ತ. ಜನ ಮನಸ್ಸಿನ ಕಳವಳಗಳನ್ನು, ಆತಂಕಗಳನ್ನು ತನ್ನ ಗಾಯನದ ಮೂಲಕ ಮರೆಯುವಂತೆ ಮಾಡುವ ಅಸಾಮಾನ್ಯ ಸಂಗೀತಗಾರ. ಒಂದು ಬಾರಿ ರಾಜ-ರಾಣಿಯರ ಮುಂದೆ ಅತ್ಯದ್ಭುತವಾಗಿ ಹಾಡಿದ ತಾನಸೇನ್‌ನನ್ನು ಇಬ್ಬರೂ ಬಹುವಾಗಿ ಹೊಗಳಿದರು. ಆಗ ತಾನಸೇನ್ ವಿನಯದಿಂದ, 'ಪ್ರಭೂ, ನಾನು ಹಾಡಿದ್ದು ಏನೂ ಅಲ್ಲ. ನನ್ನ ಗುರು ಹರಿದಾಸರ ಹಾಡು ಇದಕ್ಕಿಂತ ಅನೇಕ ಪಾಲು ಮಿಗಿಲಾದದ್ದು' ಎಂದು ಹೇಳಿದ. ಹರಿದಾಸರು ವಾಸವಾಗಿದ್ದುದು ಊರ ಹೊರಗಿನ ಯಮುನಾ ನದೀತೀರದ ಗುಡಿಸಲಿನಲ್ಲಿ. ಅಕ್ಬರ ಒತ್ತಾಯದಿಂದ ತಾನಸೇನ್‌ನನ್ನು ಕರೆದುಕೊಂಡು ಅಲ್ಲಿಗೆ ಹೋದ. ಹರಿದಾಸರು ಯಾರಿಗೋಸ್ಕರವೂ ಹಾಡುವವರಲ್ಲ, ಮನತುಂಬಿದಾಗ ಮಾತ್ರ ಹಾಡುವವರು. ಇವರು ಮರೆಯಲ್ಲಿ ಕಾದು ಕುಳಿತರು. ಸಂಜೆಯ ಸುಳಿಗಾಳಿ ಬೀಸತೊಡಗಿದಾಗ ಹರಿದಾಸರ ಕಂಠದ ಸಿರಿ ತೇಲಿಬಂತು. ರಾಜ ಮತ್ತು ತಾನಸೇನ್ ಮೈಮರೆತರು. ಮುಂದೆ ಒಂದು ವಾರ ರಾಜನ ತಲೆಯಲ್ಲಿ ಹರಿದಾಸರ ಹಾಡಿನ ಗುಂಗೇ ತುಂಬಿತ್ತು. ಅಕ್ಬರ್ ತಾನಸೇನ್‌ನನ್ನು ಕೇಳಿದ, 'ತಾನಸೇನ್, ನಿನ್ನ ಹಾಡು ಅದ್ಭುತವೇ. ಆದರೆ ನಿನ್ನ ಗುರು ಹರಿದಾಸರು ಹಾಡುವಾಗ ಅವರ ಜೇನಿನಂಥ ಧ್ವನಿಯಲ್ಲಿ ಇಡೀ ಸೃಷ್ಟಿಯೇ ಪರವಶವಾಗಿ, ಅವರ ರಾಗಮಾಲೆಗೆ ತಕ್ಕಂತೆ ಮೈ ಮರೆತು ಕುಣಿಯುತ್ತಿರುವಂತೆ, ಭಾವಸಮಾಧಿಗೇರಿದಂತೆ ಭಾಸವಾಯಿತು. ಯಾಕೆ ಈ ವ್ಯತ್ಯಾಸ?' ತಾನಸೇನ್ ವಿನಯದಿಂದ ಹೇಳಿದ, 'ಪ್ರಭೂ, ಅದರ ಕಾರಣವಿಷ್ಟೆ. ನಾನು ಹೊಟ್ಟೆಪಾಡಿಗಾಗಿ ನಿಮ್ಮ ಮುಂದೆ ಹಾಡುವವನು. ಆದರೆ ನನ್ನ ಗುರುಗಳು ಕೇವಲ ಆತ್ಮತೃಪ್ತಿಗಾಗಿ, ಭಗವಂತನಿಗಾಗಿ ಮಾತ್ರ ಹಾಡುವವರು. ಅವರ ಗಾಯನ ದೈವಿಕ'.

ಇದು ಹೊಟ್ಟೆಪಾಡಿಗೆ ಹಾಡುವ ಮತ್ತು ಆತ್ಮತೃಪ್ತಿಗೆ ಹಾಡುವ ಕಲಾವಿದರ ನಡುವಿನ ವ್ಯತ್ಯಾಸ. ಹಾಗಾದರೆ ಬರೀ ಸಂಗೀತಸಾಧನೆ ಮಾಡಿದರೆ ಹೊಟ್ಟೆ ತುಂಬುತ್ತದೆಯೇ? ಎಂದು ಕೇಳುವವರು ಅನೇಕರಿದ್ದಾರೆ. ಹೌದು. ನಮಗೆ ಎರಡು ತರಹದ ಕಾರ್ಯಗಳಿವೆ. ಒಂದು ಹೊಟ್ಟೆತುಂಬಿಸಿಕೊಳ್ಳಲು ಹಾಗೂ ಇನ್ನೊಂದು ಹೃದಯವನ್ನು ತುಂಬಿಸಿಕೊಳ್ಳಲು. ಹೊಟ್ಟೆತುಂಬಿಸಿಕೊಳ್ಳುವುದು ಬೇಡ ಎನ್ನುವುದು. ಅವ್ಯಾವಹಾರಿಕವಾಗುತ್ತದೆ. ಸಂಗೀತದಿಂದ ಹೊಟ್ಟೆ ತುಂಬಿಸಿಕೊಂಡರೆ ಸಂತೋಷ. ಆದರೆ ಅದು ಕೇವಲ ಹೊಟ್ಟೆ ತುಂಬಿಸುವುದಕ್ಕೆ ಮಾತ್ರವಾದರೆ ವ್ಯಾಪಾರವಾಗುತ್ತದೆ. ಸಂಗೀತ ಸಾಧನೆಯಲ್ಲಿ ಕೆಲಭಾಗ ಆತ್ಮತೃಪ್ತಿಗೆ, ಭಗವಂತನ ಪ್ರೀತಿಗೆ ಎಂದು ಯೋಜಿಸಿದರೆ ಸಾರ್ಥಕತೆ. ಅಂತೆಯೇ ಬೆಳದಿಂಗಳನ್ನು ಅಸ್ವಾದಿಸುತ್ತ ಕುಳಿತರೆ ಧಾನ್ಯದ ಕಣಜ, ಬೊಕ್ಕಸ ತುಂಬುತ್ತದೆಯೇ ಎಂದು ಕೇಳುತ್ತಾರೆ. ಕಣಜ ತುಂಬಿಸುವ ಕೆಲಸವೂ ನಡೆಯಲಿ ಆದರೆ ಅದರೊಂದಿಗೆ ಸೃಷ್ಟಿಯ ಅಸದೃಶ ಸುಂದರತೆಗೆ ಕಣ್ಣು ಮುಚ್ಚುವುದು ಮೂರ್ಖತನ. ಹೃದಯ ಶ್ರೀಮಂತಿಕೆಯನ್ನು ಹೆಚ್ಚಿಸುವ ಒಳ್ಳೆಯ ಕಾರ್ಯಗಳನ್ನು ಮಾಡುವಾಗ ವ್ಯಾಪಾರೀ ಬುದ್ಧಿ ಬೇಡ. ಯಾಕೆಂದರೆ ಆ ಕಾರ್ಯಗಳನ್ನು ಮಾಡುವಾಗ ಉಕ್ಕುವ ಆತ್ಮತೃಪ್ತಿಯೇ ಪರಮ ಲಾಭ. ಅದೇ ಜೀವೋತ್ಕರ್ಷ. ❖

ದಿನ ಭವಿಷ್ಯ

ಮಂಗಳವಾರ ನವೆಂಬರ್ 16, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ದ್ವಾದಶೀ ಗಂ. 5-37 (ಬೆ. 8-40) ಮಂಗಳವಾರ ನಿತ್ಯ ನಕ್ಷತ್ರ ರೇವತಿ ಗಂ. 37-24 (ರಾ. 9-22) ಸಿದ್ಧಿ ನಾಮ ಯೋಗ ಗಂ. 52-41 ಬಾಲವ ಕರಣ ಗಂ. 5-37 ವಿಷ ಗಂ. 6-21 ಅಮೃತ ಗಂ 31-48 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-22 ಸೂರ್ಯಾಸ್ತ: 5-46 ಅದೃಷ್ಟ ಸಂಖ್ಯೆ 1 9

ಮೇಷ: ಒಳ್ಳೆಯ ಕೆಲಸದ ನಿರೀಕ್ಷೆಯಲ್ಲಿರುವಿರಿ. ಗ್ರಹಬಲಗಳು ನಿಮಗೆ ಕೂಡಿಬರಲಿವೆ. ಹಿರಿಯರಿಗೆ ತೀರ್ಥಕ್ಷೇತ್ರ ದರ್ಶನ ಭಾಗ್ಯ. ಉನ್ನತ ಹುದ್ದೆಯೊಂದನ್ನು ಅಲಂಕರಿಸುವ ಸಾಧ್ಯತೆ.

ವೃಷಭ: ಮನೆಯಲ್ಲಿ ದೇವತಾ ಕಾರ್ಯಗಳು ನಿರ್ಧಾರವಾಗಲಿದೆ. ಸತ್ಪುರುಷರ ದರ್ಶನ ಮಾಡಲಿದ್ದೀರಿ. ವ್ಯವಹಾರದಲ್ಲೂ ಉನ್ನತಿಯಾಗಿ ಮನ್ನಣೆ ಪಡೆಯುವಿರಿ. ದಾಂಪತ್ಯದಲ್ಲಿ ಸರಸ.

ಮಿಥುನ: ಸರ್ಕಾರಿ ನೌಕರರಿಗೆ ಮೇಲಾಧಿಕಾರಿಗಳಿಂದ ಕಿರಿಕಿರಿ. ಅನಿರೀಕ್ಷಿತವಾದ ತಲೆನೋವಿನ ಸಂಗತಿ ಎದುರಾಗಲಿದೆ. ನಿಗದಿತ ಕಾರ್ಯಗಳಲ್ಲಿ ಯಶಸ್ಸು. ಧನಾಗಮನದ ಸಾಧ್ಯತೆ.

ಕರ್ಕಾಟಕ: ನೀವು ಮಾಡುವ ಯಾವುದೇ ಕಾರ್ಯದಲ್ಲೂ ಬದಲಾವಣೆಯಾದರೂ ಸಕಾರಾತ್ಮಕವಾಗಲಿದೆ. ಯಶಸ್ಸು ನಿಮ್ಮ ಪಾಲಿಗೆ ಬರಲಿದ್ದು ಸಂತೋಷ ತರಲಿದೆ. ವನಪಾಲಕರಿಗೆ ನೆಮ್ಮದಿ.

ಸಿಂಹ: ದೂರಪ್ರಯಾಣದಿಂದುಂಟಾದ ಆಯಾಸದಿಂದಾಗಿ ಚೇತರಿಸಿಕೊಳ್ಳಲಿದ್ದೀರಿ. ವಿವಾಹಾಪೇಕ್ಷಿಗಳಿಗೆ ಕಂಕಣಭಾಗ್ಯ ಕೂಡಿಬರಲಿದೆ. ದೇವತಾ ದರ್ಶನದಿಂದ ನೆಮ್ಮದಿ. ಉದ್ಯೋಗದಲ್ಲಿ ಆಸಕ್ತಿ.

ಕನ್ಯಾ: ಕಠಿಣ ಪರಿಶ್ರಮದಿಂದಾಗಿ ಕಾರ್ಯದಲ್ಲಿ ಯಶಸ್ಸು. ಎದುರಾಳಿಗಳ ದಾಳಿಯಿಂದಾಗಿ ತತ್ತರಿಸುವ ಸಾಧ್ಯತೆ. ಚಿಂತೆಗೆ ಅವಕಾಶವಿಲ್ಲ. ತೈಲ ವ್ಯಾಪಾರದಲ್ಲಿ ಅಭಿವೃದ್ಧಿ.

ತುಲಾ: ನಿಮ್ಮ ಮೇಲಿನ ಹೆಚ್ಚಿನ ಜಬಾಬ್ದಾರಿ ನಿಭಾಯಿಸಿಕೊಳ್ಳುವಲ್ಲಿ ಯಶಸ್ಸನ್ನು ಕಾಣುವಿರಿ. ಆತ್ಮೀಯರಲ್ಲಿ ಸಂತೋಷ ಹಂಚಿಕೊಳ್ಳಲಿದ್ದೀರಿ. ರಾಜಕೀಯ ಬದುಕು ಮುಸುಕಾಗುವ ಸಾಧ್ಯತೆ ಕಂಡುಬರುವುದು.

ವೃಶ್ಚಿಕ: ವಿದೇಶಗಳಿಂದ ಬಂಧುಗಳ ಆಗಮನದ ಸಾಧ್ಯತೆ. ನಿಮ್ಮನ್ನು ಅತಿಯಾಗಿ ಪ್ರೀತಿಸುವವರಿಂದ ಸಾಂತ್ವನದ ಮಾತುಗಳನ್ನು ಕೇಳಲಿದ್ದೀರಿ. ಅತಿಯಾದ ಉಲ್ಲಾಸದಿಂದ ಮೈ ಮರೆಯುವ ಸಾಧ್ಯತೆ.

ಧನು: ವೈದ್ಯವೃತ್ತಿಯವರಿಗೆ ಅಧಿಕ ಶ್ರಮವಾಗಿ ವಿಪರೀತ ಆಯಾಸ ಕಂಡುಬರುವುದು. ಸ್ತ್ರೀಯರಿಗೆ ಅನುಕೂಲರ ರಾಜಕೀಯ ಪರಿಸ್ಥಿತಿ ನಿರ್ಮಾಣವಾಗಿ ದಾಳವನ್ನಾಡಿಸುವ ಸಾಧ್ಯತೆ ಕಂಡುಬರುವುದು.

ಮಕರ: ಬಂಧುಮಿತ್ರರ ಆಗಮನದಿಂದ ಮನಸ್ಸಿಗೆ ನೆಮ್ಮದಿ. ಆರೋಗ್ಯದಲ್ಲಿ ಸುಧಾರಣೆ. ಯೋಗಾಭ್ಯಾಸದ ಮೊರೆ ಹೋಗಬೇಕಾದೀತು. ದೀನರಿಗೆ ಸಹಾಯ ನೀಡಿ.

ಕುಂಭ: ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಕಂಡುಬಂದರೂ ದುಡುಕುತನದಿಂದ ನಷ್ಟವಾಗಬಹುದು. ಯಾವುದೇ ವಿಚಾರಕ್ಕೂ ಮತ್ತೊಮ್ಮೆ ಯೋಚಿಸಿ ನಿರ್ಧಾರ ಕೈಗೊಳ್ಳುವುದು ಉತ್ತಮ.

ಮೀನ: ಸಂತೋಷ ನೀಡುವ ವಿಚಾರದಲ್ಲಿ ಕುಟುಂಬದಿಂದ ಸಹಕಾರ. ಅನಿರೀಕ್ಷಿತ ಬೆಳವಣಿಗೆಯಿಂದ ಸಾಮಾಜಿಕ ಗೌರವ ಹೊಂದುವಿರಿ. ವಿರೋಧಿಗಳಿಂದಲೂ ಸೈ ಎನ್ನಿಸಿಕೊಳ್ಳುವ ಹಿತಕರ ವಾತಾವರಣ.

ನಿಮ್ಮ ಜನ್ಮದಿನ 16-ನವೆಂಬರ್ ಈ ದಿನ ಅತ್ಯಂತ ಶುಭ ದಿನವಾಗಿದೆ. ನಿಮ್ಮ ಜೀವನಕ್ಕೆ ಪೂರಕವಾದ ಬೆಳವಣಿಗೆ ಕಂಡುಕೊಳ್ಳಲಿದ್ದೀರಿ. ಸರ್ಕಾರದ ಯೋಜನೆಗಳ ಫಲಗಳು ನಿಮ್ಮಪಾಲಿಗೆ ಒದಗಿ ಬರಲಿವೆ. ಚರ್ಚಾರ್ಹವಾದ ವಿಚಾರಗಳಿಂದ ಮುಕ್ತಿಗೊಂಡು ಸಮಾಜದ ಮನ್ನಣೆ ಗಳಿಸುವಿರಿ. ಉದ್ಯೋಗ ವ್ಯವಹಾರಗಳಲ್ಲಿ ಅಭಿವೃದ್ಧಿ ಕಾಣಲಿದ್ದೀರಿ.

ಪದಬಂಧ 4779

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೀಡಿರುವ ವಚನ (3)
3.ದೈವದಲ್ಲಿ ನಂಬಿಕೆಯುಳ್ಳವನು (3)
5.ಬೆಂಗಳೂರಿನಲ್ಲಿರುವ ಭವ್ಯ ಸರ್ಕಾರಿ ಕಟ್ಟಡ (5)
7.ಓದುಗ ಇಲ್ಲಿದ್ದಾನೆ (3)
8.ನಿಗದಿತ ಬೆಲೆಗಿಂತ ಹೆಚ್ಚು ಹಣ ಬಯಸುವವನು (5)
11.ಅತಿಗಣ್ಯರೆಲ್ಲಾ ಸೇರಿರುವ ಕಾಡು! (3)
12.ಈತ ಅಡುಗೆಯಲ್ಲಿ ನುರಿತವ (5)
14.ಧೈರ್ಯ ಹೀಗೆ ಬಂದಿದೆ (3)
15.ಈ ರೀತಿ ಕೋಪಗೊಳ್ಳು (3)

ಮೇಲಿಂದ ಕೆಳಕ್ಕೆ

1.ನಿಜವಾಗಿಯೂ ಇರುವಂಥದ್ದು (4)
2.ನಯವಾಗಿ ಹೊಳೆಯುತ್ತಿರುವ ಅಕ್ಕಿ (3)
4.ಪ್ರಾಣಿಗಳನ್ನು ಕಡಿಯುವವನು (3)
6.ಸೌರಮಂಡಳಕ್ಕೂ ಹಬ್ಬಿದ ಸುವಾಸನೆ! (3)
7.ಸಾಗಿಸುವ ಸಾಧನ (3)
8.ರೂಪದೊಂದಿಗೆ ಸೊಬಗು ಸೇರಿದೆಯಲ್ಲಾ? (3)
9.ಕಚ್ಚಾಪ್ರತಿಯು ಉಲ್ಟಾ ಪಲ್ಟಾ ಆಗಿಬಿಟ್ಟದೆ (3)
10.ಪಾದ ಮತ್ತು ಮಂಡಿಯ ಚಿಪ್ಪುಗಳ ನಡುವಣ ಭಾಗ (4)
11.ಅಡ್ಡಿಯಿರದೇ ಖರೀದಿಸಿರುವ ಕೊರಳ ಆಭರಣ (3)
13.ಪ್ರತಿಬಿಂಬ ಇಲ್ಲಿದೆ (3)



4778ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಸ್ಥಾವರ 4.ದಮನ 5.ಗುತ್ತಿಗಾರ 6.ಬಡಗಣ 8.ತೆರ 10.ತಮ 13.ದಾಮೋದರ 14.ಹರಿದಾರಿ 15.ದಾಷ್ಟೀಕ 16.ಅವನಿ

ಮೇಲಿಂದ ಕೆಳಕ್ಕೆ: 1.ಉದರಂಭರಣ 2.ಸ್ಥಾನಬದ್ಧತೆ 3.ಅಗಾಧ 5.ಗುಣವಂತ 7.ಸಿಂಹಾವಲೋಕನ 9.ರಹದಾರಿ 11.ಮತ್ಸರದಾನಿ 12.ಬೈರಿಗೆ

ಸುಡೊಕು 5165

		5	8				1	
2							7	
		4			2	8		6
3		6				5		9
	7			2			8	
8		1				3		7
4			6		1		9	
	3			9	5	7		8
6		8	2				5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5164 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

‘ಸಾಲಪತ್ರಗಳಲ್ಲಿ ಹೂಡಿಕೆಯಿಂದ ಠೇವಣಿ ಪ್ರಮಾಣ ಇಳಿಕೆಯಾಗದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಣ್ಣ ಹೂಡಿಕೆದಾರರಿಗೆ ಸರ್ಕಾರದ ಸಾಲಪತ್ರಗಳಲ್ಲಿ ನೇರವಾಗಿ ಹೂಡಿಕೆ ಮಾಡಲು ಆರ್‌ಬಿಐ ಅವಕಾಶ ಕಲ್ಪಿಸಿರುವುದರ ಪರಿಣಾಮವಾಗಿ ಜನ ಬ್ಯಾಂಕ್‌ಗಳಲ್ಲಿ ನಿಶ್ಚಿತ ಠೇವಣಿ ಇರಿಸುವ ಪ್ರಮಾಣದ ಮೇಲೆ ಹೆಚ್ಚಿನ ಪರಿಣಾಮ ಆಗಲಿಕ್ಕಿಲ್ಲ ಎಂದು ಕರ್ಣಾಟಕ ಬ್ಯಾಂಕ್ ಅಧ್ಯಕ್ಷ ಪಿ. ಪ್ರದೀಪ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಬ್ಯಾಂಕ್‌ನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಸುದ್ದಿಗೋಷ್ಠಿ ನಡೆಸಿದ ಅವರು, ‘ಬ್ಯಾಂಕ್‌ಗಳಲ್ಲಿ ಠೇವಣಿ ರೂಪದಲ್ಲಿ ಇರಬಹುದಾಗಿದ್ದ ಒಂದು ಭಾಗವು ಸಾಲಪತ್ರಗಳಲ್ಲಿ ಹೂಡಿಕೆ ಆಗುವುದನ್ನು ಅಲ್ಲಗಳೆಯಲಾಗದು. ಆದರೆ, ಅದು ಬ್ಯಾಂಕ್‌ಗಳ ಮೇಲೆ ದೊಡ್ಡ ಪರಿಣಾಮ ಬೀರಲಿಕ್ಕಿಲ್ಲ’ ಎಂದು ಹೇಳಿದರು.



ಪಿ. ಪ್ರದೀಪ್ ಕುಮಾರ್

ಸಾಲಪತ್ರಗಳಲ್ಲಿ ನೇರ ಹೂಡಿಕೆಗೆ ಅವಕಾಶ ಕಲ್ಪಿಸಿರುವುದರ ಪರಿಣಾಮವಾಗಿ, ಸಣ್ಣ ಹೂಡಿಕೆದಾರರ ಉಳಿತಾಯದ ಹಣದಲ್ಲಿನ ಒಂದು ಪಾಲು ಬ್ಯಾಂಕ್‌ಗಳಿಂದ ಆರ್‌ಬಿಐ ಕಡೆ ಹರಿಯಬಹುದು ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಪ್ರಸಕ್ತ ಹಣಕಾಸು ವರ್ಷದ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ ಅಭಿಯಾನವನ್ನು ಬ್ಯಾಂಕ್ ಆರಂಭಿಸಿದೆ. ಈ ಅಭಿಯಾನದ ಅಡಿಯಲ್ಲಿ ಹೊಸದಾಗಿ 4.15 ಲಕ್ಷ ಖಾತೆಗಳನ್ನು ಆರಂಭಿಸುವ ಗುರಿ ಹೊಂದಲಾಗಿದೆ ಎಂದು ಬ್ಯಾಂಕ್‌ನ ಸಿಇಒ ಮಹಾಬಲೇಶ್ವರ ಎಂ.ಎಸ್. ತಿಳಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು
ಅಮ್ಮ ನೀಡಿದ ಜನ್ಮ-ಅಪ್ಪ ನೀಡಿದ ಪ್ರೀತಿ
ಅಮ್ಮ ನೀಡಿದ ವಿದ್ಯೆ-ಅಪ್ಪ ನೀಡಿದ ಬದುಕು
ಇವೆಲ್ಲವೂ ಬೆಲೆ ಕಟ್ಟಲಾಗದ್ದು.
ಜಿ.ರಾಮಯ್ಯ
ಮರಣ: 16-11-1996
ಮಾಜಿ ಮಹಾನಗರ ಪಾಲಿಕೆ ಸದಸ್ಯರು, ಮತ್ತಿಕೆರೆ
ವೆಂಕಟಮ್ಮ
ಮರಣ: 05-02-2014
ಸದಾ ನಿಮ್ಮ ಸ್ಮರಣೆಯಲ್ಲಿರುವ
ಶ್ರೀಮತಿ ರಾಧಮ್ಮ, ಶ್ರೀ ಶ್ರೀನಿವಾಸಯ್ಯ, (ಮಾಜಿ ಬಿಬಿಎಂಪಿ ಸದಸ್ಯರು)
ಶ್ರೀಮತಿ ಶೈಲಾಜಾ, ಶ್ರೀ ಜಯರಾಮ್, ಶ್ರೀಮತಿ ಸರಸ್ವತಿ, ಶ್ರೀ ವೈ.ಜಿ.ಕೇಶವ್
ಶ್ರೀಮತಿ ನಾಗರತ್ನ, ಶ್ರೀ ನಾಗರಾಜ ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ವಿಷ್ಣು ತುಳಸಿ ಮದುವೆಯ ದಿನ

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಉತ್ಥಾನ ದ್ವಾದಶಿ



ಆಡುಮಾತಿನಲ್ಲಿ ‘ಕಿರುದೀಪಾವಳಿ’ ಮತ್ತು ‘ತುಳಸೀವಿವಾಹ’ ಎಂದು ಪ್ರಸಿದ್ಧವಾಗಿರುವ ಹಬ್ಬವೇ ಉತ್ಥಾನದ್ವಾದಶೀ.

ಮಹಾವಿಷ್ಣುವು ನಿದ್ರಾಮುದ್ರೆಯಿಂದ ಏಳುವ ದಿನವಾದ್ದರಿಂದ ಈ ದಿನವನ್ನು ಉತ್ಥಾನದ್ವಾದಶೀ ಎಂದೂ ಕರೆಯಲಾಗಿದೆ. ಮಹಾವಿಷ್ಣುವು ನಾಲ್ಕು ತಿಂಗಳು ಕ್ಷೀರಸಾಗರದಲ್ಲಿ ನಿದ್ರಾಮುದ್ರೆಯಲ್ಲಿರುತ್ತಾನೆ. ಹೀಗೆ ಮಲಗಿರುವ ಅವನನ್ನು ನಾವು ಎಚ್ಚರಿಸಬೇಕು; ಸೃಷ್ಟಿ ಸ್ಥಿತಿ ಲಯಗಳಲ್ಲಿ ಅವನನ್ನು ತೊಡಗಿಸಬೇಕು ಎಂಬುದು ಈ ದಿನದ ಆಶಯ. ಇಲ್ಲೊಂದು ಪ್ರಶ್ನೆ ಎದುರಾಗುತ್ತದೆ. ಇಡಿಯ ಸೃಷ್ಟಿಯನ್ನು ಸೃಷ್ಟಿಸಿ, ಪೋಷಿಸಿ, ಕಾಪಾಡುತ್ತಿರುವ ದೇವರೇ ನಿದ್ರೆಗೆ ಶರಣಾದರೆ ಆಗ ಒಟ್ಟು ಸೃಷ್ಟಿಯ ಪಾಡೇನು?

ನಾವು ರೂಪಿಸಿಕೊಳ್ಳುವ ಸಿದ್ಧಾಂತಗಳೂ ತತ್ತ್ವಗಳೂ ಕಥನಗಳೂ ನಮ್ಮ ಬುದ್ಧಿಸಾಮರ್ಥ್ಯಕ್ಕೆ ಅನುಗುಣವಾಗಿಯೇ ಇರುತ್ತವೆಯಷ್ಟೆ. ಹೀಗಾಗಿ ನಮ್ಮ ‘ಕಲ್ಪನೆ’ಯ ದೇವರನ್ನು ನಾವು ನಮ್ಮತನದ ವ್ಯಾಪ್ತಿಯಲ್ಲಿಯೇ ಕಂಡರಿಸಿಕೊಳ್ಳುತ್ತೇವೆ. ನಮ್ಮ ಅಸ್ತಿತ್ವವು ಕೇವಲ ಎಚ್ಚರದ ಸ್ಥಿತಿಯನ್ನು ಮಾತ್ರವೇ ಅವಲಂಬಿಸಿಲ್ಲ, ನಿದ್ರೆಯನ್ನೂ ಅವಲಂಬಿಸಿದೆ; ಅಲ್ಲಿಯ ಕನಸನ್ನೂ ಆಶ್ರಯಿಸಿದೆ. ಈ ಕಾರಣದಿಂದ ನಾವು ನಮ್ಮ ದೇವರಿಗೂ ನಿದ್ರೆಯ ಅಲಂಕಾರವನ್ನು ಒದಗಿಸಿದ್ದೇವೆ. ಆದರೆ ಇಲ್ಲಿರುವ ವಿಶೇಷತೆಯನ್ನೂ ಗಮನಿಸಬೇಕು. ನಮ್ಮ ಮಿತಿಯ ಒಳಗೆ ನಾವು ನಮ್ಮ ದೇವರನ್ನು ನಿರ್ಮಿಸಿಕೊಂಡಿದ್ದೇವೆ, ದಿಟ; ಆದರೆ ಈ ಮಿತಿಯನ್ನು ಮೀರುವ ಹಂಬಲವೂ ನಮ್ಮಲ್ಲಿದೆ. ಮಹಾವಿಷ್ಣುವಿನ ನಿದ್ರೆಯನ್ನು ನಮ್ಮ ನಿದ್ರೆಯೊಂದಿಗೆ ಹೋಲಿಸಿಕೊಂಡಿದ್ದೇವೆ; ಹೌದು. ಆದರೆ ಅವನ ನಿದ್ರೆಯನ್ನು ನಾವು ಒಂದು ‘ಮುದ್ರೆ’ಯನ್ನಾಗಿಯೇ ಸ್ವೀಕರಿಸಿದ್ದೇವೆ. ಎಂದರೆ ದೇವರ ನಿದ್ರೆ ನಮ್ಮ ನಿದ್ರೆಯಂತೆ ಮೈ ಮರೆಯುವ ನಿದ್ರೆಯಲ್ಲ, ಅದು ಸದಾ ಎಚ್ಚರವಾಗಿರುವ ನಿದ್ರೆಯ ಮುದ್ರೆ. ಉದಾಹರಣೆಗೆ ಹೇಳುವುದಾದರೆ, ನರ್ತನದಲ್ಲಿ ನಿದ್ರೆಯನ್ನು ಅಭಿನಯಿಸಿ ತೋರಿಸಬೇಕಾದರೆ ನರ್ತಕನು ವೇದಿಕೆಯ ಮೇಲೆ ನಿಜವಾಗಿಯೂ ನಿದ್ರೆಯನ್ನೇ ಮಾಡುವುದಿಲ್ಲವಷ್ಟೆ; ನಿದ್ರೆಯನ್ನು ಆಂಗಿಕದ ಮೂಲಕ, ಮುದ್ರೆಯ ಮೂಲಕ ತೋರಿಸುತ್ತಾನೆ; ಹೀಗೆ ತೋರಿಸುವಾಗ ಅವನು ತುಂಬ ಎಚ್ಚರವಾಗಿರುತ್ತಾನೆ; ಪ್ರೇಕ್ಷಕರಿಗೆ ಅದು ನಿದ್ರೆಯೇ ಹೌದು ಎಂಬ ರಸಾನುಭವವನ್ನು ದಾಟಿಸಲು ಮೈಯೆಲ್ಲ ಕಣ್ಣಾಗಿಸಿಕೊಂಡು ನಟಿಸುತ್ತಾನೆ. ಇದೇ ಕ್ರೀಡೆ, ಲೀಲೆ. ಇದರ ತಾತ್ಪರ್ಯ: ಸೃಷ್ಟಿ ಎಂಬುದು ದೇವರ ಪಾಲಿಗೆ ಒಂದು ಲೀಲೆ.

ಹೀಗೆ ನಮ್ಮ ಹಬ್ಬ-ವ್ರತ-ಪರ್ವಗಳ ಸಾಂಕೇತಿಕತೆ ತುಂಬು ಧ್ವನಿಪೂರ್ಣವಾಗಿರುವಂಥದ್ದು ಮಾತ್ರವಲ್ಲ, ಇದಕ್ಕೆ ಹಲವು ಆಯಾಮಗಳ ಅರ್ಥಪರಂಪರೆಯೇ ಇರುವುದುಂಟು.

ಉತ್ಥಾನದ್ವಾದಶಿಯ ಇನ್ನೊಂದು ಆಯಾಮವನ್ನೂ ಇಲ್ಲಿ ನೋಡಬಹುದು. ಮಹಾವಿಷ್ಣು ‘ಎಚ್ಚರ’ಗೊಂಡ ಕೂಡಲೇ ಅವನಿಗೆ ತುಳಸಿಯೊಂದಿಗೆ ವಿವಾಹ ನಡೆಯುತ್ತದೆ. ವಿವಾಹ ಎನ್ನುವುದು ಕೂಡ ಇಲ್ಲೊಂದು ಸಂಕೇತ; ಸೃಷ್ಟಿಯ ನಿರಂತರತೆಗೂ ಜೀವನದ ಸುಖ-ಸಮೃದ್ಧಿಗೂ ಶಿವ-ಶಕ್ತಿಯರ ಅಖಂಡತೆಗೂ ಇದು ಸಂಕೇತ. ಆದರೆ ನಾವು ಈ ಸಂಕೇತಗಳನ್ನು, ಪುರಾಣದ ಪ್ರತಿಮೆಗಳನ್ನು ನಮ್ಮ ಜೀವನದ ನಿತ್ಯದ ಆಗುಹೋಗುಗಳಿಗೂ ‘ವಾಸ್ತವ’ದ ತಥ್ಯಗಳಿಗೂ ಸಮೀಕರಣ ಮಾಡಿಕೊಂಡರೆ ಇವು ಅರ್ಥವನ್ನು ಕಳೆದುಕೊಳ್ಳುತ್ತವೆ; ಜೊತೆಗೆ ನಮ್ಮ ಬಾಲಿಶ ಬುದ್ಧಿಯ ಮಿತಿಯೂ ಅನಾವರಣಗೊಳ್ಳುತ್ತದೆ, ಅಷ್ಟೆ. ಕೀರ್ತಿನಾಥ ಕುರ್ತಕೋಟಿ ಅವರ ಮಾತುಗಳು ಇಲ್ಲಿ ಮನನೀಯ:

‘ಲೋಕದ ಬಾಳಿಗೆ ಅರ್ಥ ಬರುವುದು ಪುರಾಣಪ್ರಜ್ಞೆಯಿಂದ. ಪುರಾಣವೆಂದರೆ ಕೇವಲ ಹಳೆಯದಲ್ಲ; ಅದು ನಿತ್ಯವೂ ನಡೆಯುತ್ತಿರುವ ಘಟನೆ. ಪ್ರತಿ ವರ್ಷ ನಾವು ಆಚರಿಸುವ ತುಳಸಿಯ ಮದುವೆ ಲೌಕಿಕ ಜಗತ್ತಿನಲ್ಲಿ ನಡೆಯುತ್ತಿರುವ ಎಲ್ಲ ಮದುವೆಗಳ ಹಿಂದಿನ ಕಾರಣಪ್ರತಿಮೆಯಾಗಿದೆ. ಈ ದೈವಿಕವಾದ ಮದುವೆ ತನ್ನಷ್ಟಕ್ಕೆ ತಾನು ಪೂರ್ಣವಾದದ್ದು. ಅದು ಒಂದು ಸ್ಥಿತಿಯೇ ಹೊರತು ಅದಕ್ಕೆ ಬೆಳವಣಿಗೆ ಮತ್ತು ಗತಿ ಇರುವುದಿಲ್ಲ. ನಮ್ಮ ಲೌಕಿಕ ಜೀವನದ ಗುರಿ ಇರುವುದು ಇಲ್ಲಿ. ಆದರೆ ಇಹ ಮತ್ತು ಪರಗಳು ಒಂದಕ್ಕೊಂದು ವಿರುದ್ಧವಾದವುಗಳಲ್ಲ; ಅವುಗಳಿಗೆ ಗಾಢವಾದ ಸಂಬಂಧವಿದೆ. ಆದ್ದರಿಂದಲೇ ಇತಿಹಾಸ ಪುರಾಣವಾಗಲು ಹಾತೊರೆಯುತ್ತಿರುತ್ತದೆ.’

ಲೌಕಿಕ ಜೀವನದಲ್ಲಿರುವ ಅಲೌಕಿಕ ಆನಂದವನ್ನು ದಕ್ಕಿಸಿಕೊಳ್ಳಲು ನಮ್ಮ ಪುರಾಣ ಪ್ರತಿಮೆಗಳು ಕಾರಣಪ್ರತಿಮೆಗಳಾಗಿವೆ. ❖

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18102
ಇಂದಿನ ಅಂತ್ಯ	18109
▲	7
ದಿನದ ಗರಿಷ್ಠ	18,210

ವಿನಿಮಯ ದರ

$ ಡಾಲರ್	74.46
£ ಪೌಂಡ್	99.93
€ ಯುರೊ	85.28
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1370 (1370)
ಸೋಯಾ (ರಿಫೈನ್ಡ್)	₹1235 (1242)
ಸೂರ್ಯಕಾಂತಿ (ರಿಫೈನ್ಡ್)	₹1280 (1280)
ಪಾಮೋಲಿನ್	₹1175 (1180)

ಅಕ್ಟೋಬರ್‌ನಲ್ಲಿ ತಯಾರಿಕಾ ಉತ್ಪನ್ನ, ಕಚ್ಚಾ ಪೆಟ್ರೋಲಿಯಂ ಬೆಲೆ ಏರಿಕೆ ಪರಿಣಾಮ

5 ತಿಂಗಳ ಗರಿಷ್ಠ ಮಟ್ಟಕ್ಕೆ ಸಗಟು ಹಣದುಬ್ಬರ

ನವದೆಹಲಿ (ಪಿಟಿಐ): ಸಗಟು ದರ ಸೂಚ್ಯಂಕ ಆಧರಿಸಿದ (ಡಬ್ಲ್ಯುಪಿಐ) ಹಣದುಬ್ಬರ ಪ್ರಮಾಣವು ಅಕ್ಟೋಬರ್‌ನಲ್ಲಿ ಶೇಕಡ 12.54ಕ್ಕೆ ಏರಿಕೆ ಕಂಡಿದೆ. ಇದು ಐದು ತಿಂಗಳ ಗರಿಷ್ಠ ಮಟ್ಟ. 2021ರ ಮೇನಲ್ಲಿ ಸಗಟು ಹಣದುಬ್ಬರವು ಶೇ 13.11ರಷ್ಟು ಇತ್ತು.

ಸಗಟು ಹಣದುಬ್ಬರವು ಏಪ್ರಿಲ್‌ನಿಂದ ಈವರೆಗೆ ಸತತ ಏಳನೇ ತಿಂಗಳಿನಲ್ಲಿಯೂ ಎರಡಂಕಿ ಮಟ್ಟದಲ್ಲಿಯೇ ಇದೆ. ಈ ವರ್ಷದ ಸೆಪ್ಟೆಂಬರ್‌ನಲ್ಲಿ ಶೇ 10.66ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಶೇ 1.88ರಷ್ಟು ಹೆಚ್ಚಾಗಿದೆ. 2020ರ ಅಕ್ಟೋಬರ್‌ನಲ್ಲಿ ಇದ್ದ ಶೇ 1.31ಕ್ಕೆ ಹೋಲಿಸಿದರೆ ಶೇ 11.23ರಷ್ಟು ಏರಿಕೆ ಆಗಿದೆ.

ತಯಾರಿಕಾ ಉತ್ಪನ್ನಗಳು ಮತ್ತು ಕಚ್ಚಾ ಪೆಟ್ರೋಲಿಯಂ ಬೆಲೆಯಲ್ಲಿ ಏರಿಕೆ ಆಗಿರುವುದೇ ಅಕ್ಟೋಬರ್‌ನಲ್ಲಿ ಸಗಟು ಹಣದುಬ್ಬರವು ಈ ಪ್ರಮಾಣದಲ್ಲಿ ಏರಿಕೆ ಆಗಲು ಕಾರಣ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

2020ರ ಅಕ್ಟೋಬರ್‌ಗೆ ಹೋಲಿಸಿದರೆ 2021ರ ಅಕ್ಟೋಬರ್‌ನಲ್ಲಿ ಖನಿಜ ತೈಲ, ಲೋಹಗಳು, ಆಹಾರ ಉತ್ಪನ್ನಗಳು, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ರಾಸಾಯನಿಕ ಮತ್ತು ಅದರ ಉತ್ಪನ್ನಗಳು ಇತ್ಯಾದಿಗಳ ಬೆಲೆ ಹೆಚ್ಚಾಗಿದೆ ಎಂದು ಹೇಳಿದೆ.

ತಯಾರಿಕಾ ವಸ್ತುಗಳ ಹಣದುಬ್ಬರ ಪ್ರಮಾಣವು ಸೆಪ್ಟೆಂಬರ್‌ನಲ್ಲಿ ಶೇ 11.41ರಷ್ಟು ಇತ್ತು. ಅಕ್ಟೋಬರ್‌ನಲ್ಲಿ ಶೇ 12.04ಕ್ಕೆ ಏರಿಕೆ ಆಗಿದೆ. ಇಂಧನ ಮತ್ತು ವಿದ್ಯುತ್ ವಲಯದ ಹಣದುಬ್ಬರವು ಶೇ 24.81ರಿಂದ ಶೇ 37.18ಕ್ಕೆ ಏರಿಕೆ ಆಗಿದೆ. ಅದೇ ರೀತಿ, ಕಚ್ಚಾ ಪೆಟ್ರೋಲಿಯಂ ಹಣದುಬ್ಬರವು ಶೇ 71.86ರಿಂದ ಶೇ 80.57ಕ್ಕೆ ಏರಿಕೆ ಕಂಡಿದೆ. ಆಹಾರ ವಸ್ತುಗಳ ಹಣದುಬ್ಬರ ಸಹ ಶೇ (–) 4.69ರಿಂದ ಶೇ (–) 1.69ಕ್ಕೆ ಏರಿಕೆ ಆಗಿದೆ.

ಸಗಟು ಹಣದುಬ್ಬರದ ಏರಿಳಿತ



ಕಳೆದ ವಾರ ಸರ್ಕಾರವು ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಗ್ರಾಹಕ ದರ ಸೂಚ್ಯಂಕ ಆಧರಿಸಿದ (ಸಿಪಿಐ) ಚಿಲ್ಲರೆ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ 4.48ರಷ್ಟಾಗಿದೆ. ಸೆಪ್ಟೆಂಬರ್‌ನಲ್ಲಿ ಇದು ಶೇ 4.35ರಷ್ಟು ಇತ್ತು. ತಯಾರಿಕಾ ವೆಚ್ಚ, ಇಂಧನ ಮತ್ತು ಸರಕುಗಳ ಬೆಲೆ ಏರಿಕೆಯಿಂದಾಗಿ ಆಹಾರ ವಸ್ತುಗಳ ಬೆಲೆ ಹೆಚ್ಚಾಗಿದೆ. ಇದರಿಂದಾಗಿ ಚಿಲ್ಲರೆ ಹಣದುಬ್ಬರವೂ ಹೆಚ್ಚಾಗಿದೆ.

ಬೇಡಿಕೆಯು ಸುಧಾರಿಸುತ್ತಿದೆ. ಇಂಧನಗಳ ಮೇಲಿನ ತೆರಿಗೆ ಕಡಿತವು ತುಸು ಸಮಾಧಾನ ನೀಡಿದ್ದರೂ, ಕಂಪನಿಗಳು ತಮ್ಮ ತಯಾರಿಕೆ ಮತ್ತು ಸಾಗಣೆ ವೆಚ್ಚಗಳನ್ನು ವರ್ಗಾಯಿಸಲು ಆರಂಭಿಸಿವೆ. ಮುಂಬರುವ ತಿಂಗಳುಗಳಲ್ಲಿ ಸಗಟು ಹಣದುಬ್ಬರವು ತಗ್ಗುವ ನಿರೀಕ್ಷೆ ಇದೆ. 2021ರ ಮಾರ್ಚ್ ವೇಳೆಗೆ ಶೇ 7.5ರಿಂದ ಶೇ 8.5ರ ಮಟ್ಟದಲ್ಲಿ ಇರುವ ಅಂದಾಜು ಮಾಡಲಾಗಿದೆ ಎಂದು ಐಸಿಆರ್‌ಎ ಮುಖ್ಯ ಆರ್ಥಿಕ ತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000 -15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

TOYOTA, ಟಾಟಾಮೋಟರ್ಸ್, ಬಿಗ್ ಬಜಾರ್ಸ್ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ SSLC, PUC, Degree,ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

ಕರ್ನಾಟಕದಾದ್ಯಂತ ಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ ಯುವತಿಯರು ಬೇಕಾಗಿದ್ದಾರೆ. Any education. ವಸತಿಯೂಟದೊಂದಿಗೆ Salary+OT. 17,800-48,000/-. 9538811211, 9538811200.

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ನಮ್ಮ ಕಾರುಗಳಲ್ಲಿ ತೆರಳಿ ಪ್ರಮೋಟ್ ಮಾಡಿ.ಉಚಿತ ವಸತಿಯೊಂದಿಗೆ ದಿನಕ್ಕೆ 800-1200 ಸಂಪಾದಿಸಲು ಸಂಪರ್ಕಿಸಿ: 8904379634 / 9513670249

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ puc degree ಸಂಬಳ 15000 to 28000 ಸಂಪರ್ಕಿಸಿ:8904879948/ 8904879491

Office Boys/ Peon

ಬೇಕಾಗಿದ್ದಾರೆ
ಆಫೀಸ್ ಬಾಯ್ಸ್
ಫರ್ನಿಚರ್ ಶೋರೂಮ್ ಕ್ಲೀನಿಂಗ್‌ಗಾಗಿ. ಫುಲ್-ಟೈಮ್ ಕೆಲಸ.
ಸಂದರ್ಶನಕ್ಕೆ ಆಧಾರ್ ಕಾರ್ಡ್ ಮತ್ತು ಫೋಟೋ ಸಮೇತ ಬನ್ನಿ:
ಪ್ಯಾನ್ ಆಫೀಸ್ ಸಿಸ್ಟಮ್ಸ್ ಪ್ರೈ.ಲಿ.
ನಂ. 3/4, ಲ್ಯಾಂಗ್‌ಫೋರ್ಡ್ ರಸ್ತೆ, ಬೆಂಗಳೂರು – 560025.

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ವ್ಯಾಪಾರ

Business Offers

Distributors

PARTNER TO manage the teamat Rajajinagar with zero investment. Call 7019246661

EDUCATION SPECIAL
We are coming out with special offer for Admission Notice, Education Success Congratulation Ads
DH DECCAN HERALD Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

Business to Business

Business

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.8792252077, ಶಿವಮೊಗ್ಗ.9008013895

ಪ್ರವಾಸ

Travel

10.12.2021 11 ದಿನಗಳು ರಾಜಸ್ಥಾನ್.,20.01.2022 11ದಿನಗಳು ಉಜ್ಜೈನಿ, ಗುಜರಾತ್.,22.02.2022 13ದಿನಗಳು ಕಾಶಿಪ್ರವಾಸ., 03.01.2022 9ದಿನಗಳು ಆಂಧ್ರ ಭದ್ರಾಚಲಂಪ್ರವಾಸ. ಆರ್.ಗಾಂಧಿ ಟೂರ್ಸ್(ರಿ).9945445809/ 9902433500

ಭವಿಷ್ಯ

Astrology

★॥ಶ್ರೀಕಬ್ಬಾಳಮ್ಮ ದೇವಿ॥★ ಜ್ಯೋತಿಷ್ಯಾಲಯ ಪ್ರೀತಿಪ್ರೇಮ,ದಾಂಪತ್ಯಕಿರಿಕಿರಿ, ಸಾಲದಬಾದೆ,ವ್ಯಾಪಾರ, ಶತ್ರುಕಾಟ,ಇನ್ಯಾವುದೇ ಕಠಿಣ ಸಮಸ್ಯೆಗಳಿಗೆ ಕೇವಲ 30 ನಿಮಿಷದಲ್ಲಿ ಶಾಶ್ವತಪರಿಹಾರ. "ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ವಿಶೇಷ ಪರಿಹಾರ" ನಂ.1.ವಶೀಕರಣ ಸ್ಪೆಷಲಿಸ್ಟ್ ಸಹದೇವ್‌ಭಟ್. 9900222591

★ವಶೀಕರಣ ಮೋಡಿಮಾಂತ್ರಿಕರು★ 500ವರ್ಷಗಳ ಇತಿಹಾಸ 35000ಜನರಿಗೆ ಸಮಾಧಾನ ಸ್ತ್ರೀ ವಶೀಕರಣ, ಪ್ರೇಮವಿಚಾರ, ಗಂಡ ಹೆಂಡತಿ ಕಲಹ,ಇನ್ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲೇ ಪರಿಹಾರ. 7829724990

★॥ಶ್ರೀಶಿರಿಡಿಸಾಯಿಬಾಬಾ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ,ಕಂಕಣಬಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ 11ಗಂಟೆಗಳಲ್ಲಿ ಪರಿಹಾರ. ಪಂಡಿತ್.ವಿಕ್ರಮ್‌ಭಟ್ 9972654095

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಪರಿಹಾರ. 9900511008

ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ.ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

FREE SERVICE by expert agori spcl in business, love, marriage, court, enemy's, vasikaran, easy to solve within 1hr, 8123012125

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಹೆಚ್ಚುತ್ತಲೇ ಇದೆ ನಗದು ಚಲಾವಣೆ

ಮುಂಬೈ (ಪಿಟಿಐ): ಕೇಂದ್ರ ಸರ್ಕಾರವು ನೋಟು ರದ್ದತಿ ನಿರ್ಧಾರ ಕೈಗೊಂಡ ಐದು ವರ್ಷಗಳ ನಂತರವೂ ದೇಶದಲ್ಲಿ ನಗದು ಚಲಾವಣೆಯು ಹೆಚ್ಚುತ್ತಲೇ ಇದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

2016ರಲ್ಲಿ ನೋಟು ರದ್ದತಿ ಜಾರಿಗೊಳಿಸಿದಾಗ ನಗದು ಚಲಾವಣೆಯು ಶೇ 8.7ಕ್ಕೆ ಇಳಿಕೆ ಆಗಿತ್ತು. ಆ ಬಳಿಕ ಚಲಾವಣೆಯಲ್ಲಿ ಇರುವ ನೋಟುಗಳ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಇಲ್ಲಿಯವರೆಗೆ ಚಲಾವಣೆಯಲ್ಲಿ ಇರುವ ನೋಟುಗಳ ಪ್ರಮಾಣವು ಶೇ 13.1ರಷ್ಟು ಆಗಿದೆ. 2019–20ನೇ ಹಣಕಾಸು ವರ್ಷದಲ್ಲಿ ಶೇ 14.5ರಷ್ಟಿತ್ತು. ಇದಕ್ಕೆ ಹೋಲಿಸಿದರೆ ಅಲ್ಪ ಇಳಿಕೆ ಕಂಡುಬಂದಿದೆ.

ಮುಂಬೈ ಧಾರಣೆ

ಶೇಂಗಾ

15-11-2021

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10150-10200
ದಪ್ಪ ಮಧ್ಯಪ್ರದೇಶ(ಹೊಸ)	9000-100
ದಪ್ಪ ಗುಜರಾತ್(ಹೊಸ)	8200-8300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1380 (1380)
ಒಂದು ವಾರದ ಡೆಲಿವರಿ	1375 (1375)
ಸೋಯಾ ಕಚ್ಚಾ	1175 (1182)
ಪಾಮ್ ವಾರದ ಡೆಲಿವರಿ	1173 (1178)
ಸೂರ್ಯಕಾಂತಿ ಎಣ್ಣೆ ಕಚ್ಚಾ	1190 (1190)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,200 (48,850)
ಬೆಳ್ಳಿ ಕೆ.ಜಿ 66,950 (66,250)

ಆವರಣದಲ್ಲಿ ಶುಕ್ರವಾರದ ಧಾರಣೆ

ಐಪಿಒ ಹೂಡಿಕೆ: ಅರಿತರೆ ಲಾಭ, ಆತುರಪಟ್ಟರೆ ನಷ್ಟ

2021ರಲ್ಲಿ ಸಾಲು ಸಾಲು ಐಪಿಒಗಳು ನಡೆದಿವೆ. 2022ರಲ್ಲಿಯೂ ಹಲವು ಕಂಪನಿಗಳು ಐಪಿಒ ನಡೆಸಲು ಸಜ್ಜಾಗಿವೆ. ಅರಿತು ಒಳ್ಳೆಯ ಕಂಪನಿಗಳ ಐಪಿಒದಲ್ಲಿ ಹೂಡಿಕೆ ಮಾಡುವವರಿಗೆ ಉತ್ತಮ ಲಾಭ ಸಿಗುವ ಸಾಧ್ಯತೆ ಹೆಚ್ಚು. ಆದರೆ ಕಂಪನಿಗಳ ಪೂರ್ವಾಪರ ಅರಿಯದೆ ಒಂದಿಷ್ಟು ಲಾಭವಾಗಬಹುದು ಎಂಬ ಅಂದಾಜಿನೊಂದಿಗೆ ಸಿಕ್ಕ ಸಿಕ್ಕ ಕಂಪನಿಗಳ ಐಪಿಒಗಳಲ್ಲಿ ಹೂಡಿಕೆ ಮಾಡಿದರೆ ನಿಮ್ಮ ಸಂಪತ್ತು ಕರಗುತ್ತದೆ.

ಅವಸರವೇ ಅಪಾಯ: 2017ರ ಮಾರ್ಚ್ 8ರಂದು ಅವೆನ್ಯೂ ಸೂಪರ್ ಮಾರ್ಕೆಟ್ಸ್ ಅರ್ಥಾತ್ ಡಿ-ಮಾರ್ಟ್ ಕಂಪನಿಯ ಐಪಿಒ (ಆರಂಭಿಕ ಸಾರ್ವಜನಿಕ ಹೂಡಿಕೆ) ಆರಂಭವಾದಾಗ ಪ್ರತಿ ಷೇರಿನ ಬೆಲೆ ₹ 299 ಇತ್ತು. ಈಗ ಅದೇ ಷೇರಿನ ಬೆಲೆ ₹ 5,078! 2021ರ ಜನವರಿಯಲ್ಲಿ ಇಂಡಿಗೊ ಪೇಂಟ್ಸ್ ಐಪಿಒ ನಡೆದಾಗ ಪ್ರತಿ ಷೇರಿನ ಬೆಲೆ ₹ 1,490 ಇತ್ತು. ಈಗ ಅದೇ ಷೇರಿನ ಬೆಲೆ ₹ 2,298 ಆಗಿದೆ. 2021ರ ಮಾರ್ಚ್‌ನಲ್ಲಿ ಷೇರು ಮಾರುಕಟ್ಟೆಗೆ ಸೇರ್ಪಡೆಯಾದ ಎಂಟಾರ್ ಟೆಕ್ನಾಲಜೀಸ್ ಐಪಿಒ ಷೇರಿನ ಬೆಲೆ ₹ 575. ಈಗ ಅದೇ ಷೇರಿನ ಬೆಲೆ ₹ 1,901ಕ್ಕೆ ಜಿಗಿದಿದೆ. ಹೌದು, ಉತ್ತಮ ಕಂಪನಿಗಳ ಐಪಿಒಗಳಲ್ಲಿ ಹೂಡಿಕೆ ಮಾಡಿದಾಗ ಈ ರೀತಿ ದುಡ್ಡನ್ನು ಬಿತ್ತಿ ದುಡ್ಡು ಬೆಳೆಸಲು ಸಾಧ್ಯವಾಗುತ್ತದೆ.

ಅಂದಮಾತ್ರಕ್ಕೆ, ಎಲ್ಲ ಕಂಪನಿಗಳ ಐಪಿಒಗಳು ಲಾಭ ತಂದುಕೊಡುವುದಿಲ್ಲ. ಹೂಡಿಕೆ ಮಾಡಿದವರ ದುಡ್ಡನ್ನು ಕರಗಿಸಿರುವ ಕಂಪನಿಗಳು ಕೂಡ ಸಾಕಷ್ಟಿವೆ! 2017ರ ನವೆಂಬರ್‌ನಲ್ಲಿ ಐಪಿಒ ನಡೆಸಿದ ಒಂದು ಕಂಪನಿಯು, ಪ್ರತಿ ಷೇರಿಗೆ ₹ 400 ನಿಗದಿ ಮಾಡಿತ್ತು. ಈಗ ಅದೇ ಕಂಪನಿಯ ಷೇರಿನ ಬೆಲೆ 159ಕ್ಕೆ ಇಳಿದಿದೆ.

ಐಪಿಒ ಅಂದರೆ?: ಇನಿಷಿಯಲ್ ಪಬ್ಲಿಕ್ ಆಫರಿಂಗ್ ‘ಐಪಿಒ’ದ ವಿಸ್ತೃತ ರೂಪ. ಕನ್ನಡದಲ್ಲಿ ಇದನ್ನು ಆರಂಭಿಕ ಸಾರ್ವಜನಿಕ ಹೂಡಿಕೆ ಎನ್ನಬಹುದು. ಖಾಸಗಿ ಕಂಪನಿಯೊಂದು ಮೊದಲ ಬಾರಿಗೆ ತನ್ನ ಷೇರುಗಳನ್ನು ಸಾರ್ವಜನಿಕರಿಗೆ ನೀಡಿ ಬಂಡವಾಳ ಸಂಗ್ರಹ ಮಾಡುವ ಪ್ರಕ್ರಿಯೆ ‘ಐಪಿಒ’. ಸರಳವಾಗಿ ಹೇಳುವುದಾದರೆ ಕಂಪನಿಯೊಂದು ತನ್ನ ಮಾಲೀಕತ್ವದ ಒಂದಷ್ಟು ಪಾಲನ್ನು ನಮ್ಮನಿಮ್ಮಂತಹ ಜನಸಾಮಾನ್ಯರಿಗೆ ನೀಡುವ ಪ್ರಕ್ರಿಯೆಯೇ ಆರಂಭಿಕ ಸಾರ್ವಜನಿಕ ಹೂಡಿಕೆ. ‘ಐಪಿಒ’ ಪ್ರಕ್ರಿಯೆ ಬಳಿಕ ಆ ನಿರ್ದಿಷ್ಟ ಕಂಪನಿಯ ಷೇರು ಮಾರುಕಟ್ಟೆಯಲ್ಲಿ ಸ್ಥಾನ (ಲಿಸ್ಟಿಂಗ್) ಪಡೆದುಕೊಳ್ಳುತ್ತದೆ.

ನಮಗೇನು ಲಾಭ?: ಕಂಪನಿಯ ಪ್ರವರ್ತಕರು ಹೆಚ್ಚು ಬಂಡವಾಳ ಸಂಗ್ರಹಿಸಲು, ಉದ್ಯಮ ವಿಸ್ತರಿಸಲು, ದೈನಂದಿನ ನಿರ್ವಹಣಾ ವೆಚ್ಚ ನಿಭಾಯಿಸಲು, ಹಿಂದೆ ಮಾಡಿದ ಸಾಲದ ಮರುಪಾವತಿಗೆ ಸೇರಿದಂತೆ ಹಲವು ಪ್ರಮುಖ ಕಾರಣಗಳಿಗೆ ಐಪಿಒಗೆ ಮುಂದಾಗುತ್ತಾರೆ. ಸಾರ್ವಜನಿಕರಿಂದ, ಬ್ಯಾಂಕ್‌ಗಳಿಂದ ಹಣ ಸಂಗ್ರಹಿಸುತ್ತಾರೆ. ನೀವು ನಿಮ್ಮ ಹಣ ತೊಡಗಿಸಿ ‘ಐಪಿಒ’ ಮೂಲಕ ಷೇರು ಖರೀದಿಸುವ ಕಂಪನಿಯು ಭವಿಷ್ಯದಲ್ಲಿ ಉತ್ತಮ ಬೆಳವಣಿಗೆ ಸಾಧಿಸಿದರೆ ಆ ಕಂಪನಿಯ ಏಳ್ಗೆಗೆ ಅನುಗುಣವಾಗಿ ನೀವು ಹಣ ಗಳಿಸುತ್ತೀರಿ. ಕಂಪನಿ ನಷ್ಟ ಅನುಭವಿಸಿದರೆ ಅದರ ಹೊರೆಯೂ ನಿಮ್ಮ ಮೇಲಿರುತ್ತದೆ. •

ಭಾರತ್ ಬಾಂಡ್ ಇಟಿಎಫ್: ಡಿ. 3ರಿಂದ ಮೂರನೇ ಕಂತು

ನವದೆಹಲಿ (ಪಿಟಿಐ): ಭಾರತ್ ಬಾಂಡ್ ಇಟಿಎಫ್‌ನ ಮೂರನೇ ಕಂತು ಡಿಸೆಂಬರ್ 3ರಂದು ಆರಂಭ ಆಗಲಿದ್ದು, ಕೇಂದ್ರ ಸರ್ಕಾರವು ₹ 10 ಸಾವಿರ ಕೋಟಿ ಸಂಗ್ರಹಿಸುವ ನಿರೀಕ್ಷೆ ಇಟ್ಟುಕೊಂಡಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಡಿ. 3ರಿಂದ 9ರವರೆಗೆ ಖರೀದಿಗೆ ಅವಕಾಶ ಇರಲಿದೆ ಎಂದು ತಿಳಿಸಿದ್ದಾರೆ. ಎಡೆಲ್ವಿಸ್ ಅಸೆಟ್ ಮ್ಯಾನೇಜ್‌ಮೆಂಟ್ ಈ ಯೋಜನೆಯ ನಿಧಿ ನಿರ್ವಾಹಕ ಆಗಿದೆ. ಇಲ್ಲಿ ಸಂಗ್ರಹ ಆಗುವ ಬಂಡವಾಳವು ಸರ್ಕಾರದ ಬಂಡವಾಳ ವೆಚ್ಚದ ಅಗತ್ಯ ಪೂರೈಸಿಕೊಳ್ಳಲು ನೆರವಾಗಲಿದೆ.

ಭಾರತ್ ಬಾಂಡ್ ಇಟಿಎಫ್‌ನ ಎರಡನೇ ಕಂತಿನಲ್ಲಿ ₹ 11 ಸಾವಿರ ಕೋಟಿ ಸಂಗ್ರಹ ಆಗುವ ಅಂದಾಜು ಮಾಡಲಾಗಿತ್ತು. ಆದರೆ ₹ 12,400 ಕೋಟಿ ಮೊತ್ತ ಸಂಗ್ರಹ ಆಗಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-51500
ಕುಮಟ	
ಚಿಪ್ಪು	24509-40019
ಕೋಕ	20109-33999
ಫ್ಯಾಕ್ಟರಿ	10169-18711
ಹಳೆಚಾಲಿ	43019-46809
ಹೊಸಚಾಲಿ	34111-39269
ಕಾರ್ಕಳ	
ಹೊಸತು	35000-42500
ಹಳತು	46000-51500
ಸಿದ್ದಾಪುರ	
ಬಿಳಿಗೋಟು	31899-40299
ಚಾಲಿ	42799-47639
ಕೋಕ	21099-37499
ಹೊಸಚಾಲಿ	28899-35689
ಕೆಂಪುಗೋಟು	24999-24999
ರಾಶಿ	42699-46699
ತಟ್ಟಿಬೆಟ್ಟೆ	34000-34000
ಶಿರಸಿ	
ಬೆಟ್ಟೆ	26018-43701
ಬಿಳಿಗೋಟು	24099-42476
ಚಾಲಿ	43669-47809
ರಾಶಿ	32899-48901
ಶಿವಮೊಗ್ಗ	
ಬೆಟ್ಟೆ	51100-53169
ಗೊರಬಲು	17115-38229
ರಾಶಿ	416089-46519
ಸರಕು	50599-72696
ಸಾಗರ	
ಬಿಳಿಗೋಟು	25389-38326
ಚಾಲಿ	32786-45100
ಕೋಕ	22899-38199
ಕೆಂಪುಗೋಟು	34199-37439
ರಾಶಿ	40899-46999
ಸಿಪ್ಪೆಗೋಟು	6529-25569
ರಾಮನಗರ ರೇಷ್ಮೆ	
ಮಿಶ್ರತಳಿ	138-55
ದ್ವಿತಳಿ	285-725
ಮುದ್ರೆಮನೆ ಕಾಫಿ (50ಕೆ.ಜಿಗೆ)	
ಎಪಿ	13725
ಎಸಿ	6000
ಆರ್‌ಪಿ	6150
ಆರ್‌ಸಿ	3640

ಆರು ವರ್ಷಗಳಲ್ಲಿ ಮೂರನೇ ಬಾರಿ ವಿಶ್ವಕಪ್ ಫೈನಲ್‌ನಲ್ಲಿ ಮುಗ್ಗರಿಸಿದ ನ್ಯೂಜಿಲೆಂಡ್ ತಂಡ

ಸೋಲಿಗೆ ವಿಷಾದವಿಲ್ಲ; ಛಲ ಕೈಬಿಡಲ್ಲ

ದುಬೈ: ಆರು ವರ್ಷಗಳಲ್ಲಿ ಮೂರನೇ ಬಾರಿ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ಸೋಲು ಕಂಡಿದೆ. ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಅನುಭವಿಸಿದ ಸೋಲಿಗೆ ವಿಷಾದವಿಲ್ಲ ಎಂದು ಅಭಿಪ್ರಾಯಪಟ್ಟಿರುವ ಕೋಚ್ ಗ್ಯಾರಿ ಸ್ಟೆಡ್, ಭವಿಷ್ಯದಲ್ಲಿ ಛಲ ಬಿಡದೆ ತಂಡ ಕಾದಾಡಲಿದೆ ಎಂದು ಹೇಳಿದ್ದಾರೆ.

ಭಾನುವಾರ ರಾತ್ರಿ ನಡೆದ ಟ್ವೆಂಟಿ–20 ವಿಶ್ವಕಪ್ ಟೂರ್ನಿಯ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ನ್ಯೂಜಿಲೆಂಡ್ ಎಂಟು ವಿಕೆಟ್‌ಗಳಿಂದ ಆಸ್ಟ್ರೇಲಿಯಾಗೆ ಮಣಿದಿದೆ. ನಾಯಕ ಕೇನ್ ವಿಲಿಯಮ್ಸನ್ (85; 48 ಎಸೆತ, 10 ಬೌಂಡರಿ, 3 ಸಿಕ್ಸರ್) ಅವರ ಏಕಾಂಗಿ ಹೋರಾಟದ ಫಲವಾಗಿ ನ್ಯೂಜಿಲೆಂಡ್ ನಾಲ್ಕು ವಿಕೆಟ್‌ಗಳಿಗೆ 172 ರನ್ ಗಳಿಸಿತ್ತು.

ಗುರಿ ಬೆನ್ನತ್ತಿದ ಆ್ಯರನ್ ಫಿಂಚ್ ಬಳಗ ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ (53; 38 ಎ, 4 ಬೌಂ, 3 ಸಿ) ಮತ್ತು ಮೂರನೇ ಕ್ರಮಾಂಕದ ಮಿಚೆಲ್

ಗ್ಯಾರಿ ಸ್ಟೆಡ್

ಮಾರ್ಷ್ (77; 50 ಎ, 6 ಬೌಂ, 4 ಸಿ) ಅವರ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಏಳು ಎಸೆತಗಳು ಉಳಿದಿರುವಾಗ ದಡ ಸೇರಿತು.

2015ರ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾಗೆ ಏಳು ವಿಕೆಟ್‌ಗಳಿಂದ ಮಣಿದಿದ್ದ ನ್ಯೂಜಿಲೆಂಡ್ 2019ರ ವಿಶ್ವಕಪ್‌ನ ಟೈ ಆದ ಪಂದ್ಯದಲ್ಲಿ ಸೂಪರ್ ಓವರ್ ನಂತರ ಬೌಂಡರಿ ಕೌಂಟ್ ಆಧಾರದಲ್ಲಿ ಇಂಗ್ಲೆಂಡ್‌ಗೆ ಮಣಿದಿತ್ತು.

ಭಾನುವಾರದ ಫೈನಲ್ ನಂತರ ಮಾತನಾಡಿದ ಕೋಚ್ 'ತಂಡವೊಂದು ಫೈನಲ್ ಪ್ರವೇಶಿಸುವುದು ದೊಡ್ಡ ಸಾಧನೆ. ಹೀಗಾಗಿ ತಂಡದ ಸಾಧನೆ ಬಗ್ಗೆ ಹೆಮ್ಮೆ ಇದೆ. ಈ ಬಾರಿ ವಿಶ್ವಕಪ್‌ನಲ್ಲಿ ಇಂಗ್ಲೆಂಡ್ ಅಥವಾ ಭಾರತ ಫೈನಲ್ ಪ್ರವೇಶಿಸಲಿದೆ ಎಂದು ಅನೇಕ ಮಂದಿ ಹೇಳಿದ್ದರು. ಆದರೆ ಕೊನೆಗೆ ಆದದ್ದೇ ಬೇರೆ. ಆಸ್ಟ್ರೇಲಿಯಾ ತಂಡದ ಸಾಧನೆಯೂ ಶ್ಲಾಘನೀಯ' ಎಂದರು.

ವೈಯಕ್ತಿಕ ಗರಿಷ್ಠ ಮೊತ್ತ	
ಬಾಬರ್ ಆಜಂ (ಪಾಕಿಸ್ತಾನ)	303
ಪಂದ್ಯದಲ್ಲಿ ಹೆಚ್ಚು ರನ್	
ಜೋಸ್ ಬಟ್ಲರ್ (ಇಂಗ್ಲೆಂಡ್)	101*
ಗರಿಷ್ಠ ವಿಕೆಟ್	
ವಾಣಿಂದು ಹಸರಂಗ (ಶ್ರೀಲಂಕಾ)	16
ಶ್ರೇಷ್ಠ ಬೌಲಿಂಗ್	
ಆ್ಯಡಂ ಜಂಪಾ (ಆಸ್ಟ್ರೇಲಿಯಾ)	19ಕ್ಕೆ5

ಟೂರ್ನಿಯಲ್ಲಿ ಗರಿಷ್ಠ ಮೊತ್ತ

ತಂಡ	ರನ್	ಎದುರಾಳಿ
ಭಾರತ	2ಕ್ಕೆ210	ಅಫ್ಗಾನಿಸ್ತಾನ
ಅಫ್ಗಾನಿಸ್ತಾನ	4ಕ್ಕೆ190	ಸ್ಕಾಟ್ಲೆಂಡ್
ಪಾಕಿಸ್ತಾನ	2ಕ್ಕೆ189	ನಮೀಬಿಯಾ

ಮಾಹಿತಿ: ಎಚ್.ಆರ್.ಗೋಪಾಲಕೃಷ್ಣ

ಐಪಿಎಲ್‌ನಿಂದ ವಿಶ್ವಕಪ್: ವಾರ್ನರ್ ಯಶೋಗಾಥೆ

ನವದೆಹಲಿ: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ನೀರಸ ಆಟವಾಡಿ ಟೀಕೆಗೆ ಒಳಗಾಗಿದ್ದ ಆಸ್ಟ್ರೇಲಿಯಾದ ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಅಮೋಘ ಆಟವಾಡಿ ತಂಡಕ್ಕೆ ಪ್ರಶಸ್ತಿ ಗೆದ್ದುಕೊಟ್ಟಿದ್ದಾರೆ.

ಯುಎಇಯಲ್ಲಿ ನಡೆದ ಐಪಿಎಲ್ ಟೂರ್ನಿಯಲ್ಲಿ ವಾರ್ನರ್ ರನ್‌ಗಳ 'ಬರ' ಅನುಭವಿಸಿದ್ದರು. ಆದರೆ ಅದೇ ನೆಲದಲ್ಲಿ ದೇಶಕ್ಕಾಗಿ ಅತ್ಯುತ್ತಮ ಆಟವಾಡಿ ಸರಣಿ ಶ್ರೇಷ್ಠ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದಾರೆ. ಹೀಗಾಗಿ ಫೈನಲ್ ಪಂದ್ಯ ಗೆದ್ದ ನಂತರ ಅವರ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ಪಂದ್ಯದ ನಂತರ ತಂಡದ ನಾಯಕ ಆ್ಯರನ್ ಫಿಂಚ್ ಕೂಡ ವಾರ್ನರ್ ಬಗ್ಗೆ ಮಾತನಾಡುವಾಗ ಭಾವುಕರಾಗಿದ್ದರು.

ವಾರ್ನರ್ ಫೈನಲ್‌ನಲ್ಲಿ ಗಳಿಸಿದ ಅರ್ಧಶತಕ ಸೇರಿದಂತೆ ಒಟ್ಟು 289 ರನ್ ಕಲೆ ಹಾಕಿದ್ದಾರೆ. ಈ ಮೂಲಕ ಐಪಿಎಲ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದಲ್ಲೇ ಅನುಭವಿಸಿದ ಕಸಿವಿಸಿಗೆ ಉತ್ತರ ನೀಡಿದ್ದಾರೆ.

ಕೃತಜ್ಞತೆ ಸಲ್ಲಿಸಿದ ಮಾರ್ಷ್:ಅಮೋಘ ಅರು ವಾರಗಳ ಕೊಡುಗೆ ನೀಡಿದ ಆಯ್ಕೆ ಸಮಿತಿಗೆ ಕೃತಜ್ಞತೆಗಳು ಸಲ್ಲಬೇಕು ಎಂದು ಸ್ಫೋಟಕ ಶೈಲಿಯ ಬ್ಯಾಟರ್ ಹಾಗೂ ಆಲ್‌ರೌಂಡರ್ ಆಸ್ಟ್ರೇಲಿಯಾದ ಮಿಚೆಲ್ ಮಾರ್ಷ್

ಡೇವಿಡ್ ವಾರ್ನರ್ –ಎಎಫ್‌ಪಿ ಚಿತ್ರ

ಹೇಳಿದ್ದಾರೆ. ಅಗ್ರ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲು ಅವಕಾಶ ನೀಡಿದ್ದು ವೃತ್ತಿಜೀವನದಲ್ಲಿ ಸಾಧನೆಗೆ ಸಹಕಾರಿಯಾಗಿದೆ ಎಂಬುದು ಅವರ ಅಭಿಪ್ರಾಯ.

ಪಂದ್ಯಶ್ರೇಷ್ಠ ಪ್ರಶಸ್ತಿ ಗಳಿಸಿರುವ ಮಾರ್ಷ್ ಆರು ಪಂದ್ಯಗಳಲ್ಲಿ ಒಟ್ಟು 185 ರನ್ ಕಲೆ ಹಾಕಿದ್ದಾರೆ.

ಅದೃಷ್ಟವಾಗಿ ಒಲಿದ ಟಾಸ್: ಫಿಂಚ್

ಫೈನಲ್ ಪಂದ್ಯದಲ್ಲಿ ಟಾಸ್ ಗೆಲುವಿನ ಅದೃಷ್ಟ ಒಲಿದದ್ದು ಪ್ರಶಸ್ತಿ ಗೆಲ್ಲಲು ಉತ್ತಮ ಅವಕಾಶ ಒದಗಿಸಿತು ಎಂದು ಆಸ್ಟ್ರೇಲಿಯಾ ತಂಡದ ನಾಯಕ ಆ್ಯರನ್ ಫಿಂಚ್ ಅಭಿಪ್ರಾಯಪಟ್ಟರು.

ಸೂಪರ್ 12 ಹಂತವೂ ಸೇರಿದಂತೆ ಟೂರ್ನಿಯ ಒಟ್ಟು ಏಳು ಪಂದ್ಯಗಳ ಪೈಕಿ ಆರರಲ್ಲಿ ಫಿಂಚ್ ಟಾಸ್ ಗೆದ್ದಿದ್ದರು. ತಂಡ ಟ್ವೆಂಟಿ–20 ವಿಶ್ವಕಪ್‌ನಲ್ಲಿ ಚೊಚ್ಚಲ ಪ್ರಶಸ್ತಿ ಗೆಲ್ಲಲು ಇದು ನೆರವಾಯಿತು ಎಂದು ಅವರು ಹೇಳಿದರು. ಯುಎಇಯಲ್ಲಿ ನಡೆದ ವಿಶ್ವಕಪ್‌ನ ಬಹುತೇಕ ಪಂದ್ಯಗಳಲ್ಲಿ ಟಾಸ್ ಪ್ರಮುಖ ಪಾತ್ರ ವಹಿಸಿತ್ತು. ರಾತ್ರಿ ಮಂಜು ಬೀಳುವುದರಿಂದ ಬೌಲಿಂಗ್ ಕಷ್ಟ. ಹೀಗಾಗಿ ಟಾಸ್ ಗೆದ್ದ ತಂಡಗಳು ಬೌಲಿಂಗ್ ಆರಿಸಿಕೊಂಡಿದ್ದವು.

ಆ್ಯರನ್ ಫಿಂಚ್

ಪ್ರಮುಖ 10 ಅಂಶಗಳು

- ಐರ್ಲೆಂಡ್‌ನ ಕರ್ಟಿಸ್ ಕ್ಯಾಂಫರ್ ಅವರು ನೆದರ್ಲೆಂಡ್ಸ್ ಎದುರಿನ ಪಂದ್ಯದಲ್ಲಿ ಸತತ ನಾಲ್ಕು ಎಸೆತಗಳಲ್ಲಿ ನಾಲ್ಕು ವಿಕೆಟ್ ಉರುಳಿಸಿ ತಂಡಕ್ಕೆ ಏಳು ವಿಕೆಟ್‌ಗಳ ಜಯ ತಂದುಕೊಟ್ಟಿದ್ದರು.
- ಆರಂಭಿಕ ಜೋಡಿ ಮೊಹಮ್ಮದ್ ರಿಜ್ವಾನ್ ಮತ್ತು ಬಾಬರ್ ಆಜಂ ಅವರ ಅಮೋಘ ಅರ್ಧಶತಕಗಳ ಬಲದಿಂದ ಭಾರತದ ವಿರುದ್ಧ ಪಾಕಿಸ್ತಾನ 10 ವಿಕೆಟ್‌ಗಳ ಜಯ ಸಾಧಿಸಿತ್ತು. ಇದು, ವಿಶ್ವಕಪ್ ಟೂರ್ನಿಯಲ್ಲಿ ಭಾರತದ ವಿರುದ್ಧ ಪಾಕಿಸ್ತಾನದ ಮೊದಲ ಜಯವಾಗಿತ್ತು.
- ವೆಸ್ಟ್ ಇಂಡೀಸ್ ಎದುರಿನ ಪಂದ್ಯದ ಆರಂಭದಲ್ಲಿ ವರ್ಣಭೇದ ನೀತಿಗೆ ಪ್ರತಿಭಟನೆ ವ್ಯಕ್ತಪಡಿಸಲು ನಿರಾಕರಿಸಿದ ದಕ್ಷಿಣ ಆಫ್ರಿಕಾದ ವಿಕೆಟ್ ಕೀಪರ್ ಬ್ಯಾಟರ್ ಕ್ವಿಂಟನ್ ಡಿ ಕಾಕ್ ಎರಡು ದಿನಗಳ ನಂತರ ಕ್ಷಮೆ ಕೋರಿದ್ದರು.
- ಪಾಕಿಸ್ತಾನ ಎದುರಿನ ಭಾರತದ ಸೋಲಿಗೆ ಮೊಹಮ್ಮದ್ ಶಮಿ ಕಾರಣ ಎಂದು ದೂರಿದ ನೆಟ್ಟಿಗರ ಮೇಲೆ ನಾಯಕ ವಿರಾಟ್ ಕೊಹ್ಲಿ ಸಿಟ್ಟಿಗೆದ್ದು ಧರ್ಮದ ಆಧಾರದಲ್ಲಿ ವ್ಯಕ್ತಿಯನ್ನು ನಿಂದಿಸುವುದು ಅತ್ಯಂತ ಕೆಟ್ಟ ವರ್ತನೆ ಎಂದು ಹೇಳಿದ್ದರು.
- ಸೂಪರ್ 12ರ ಮೊದಲ ನಾಲ್ಕು ಪಂದ್ಯಗಳಲ್ಲಿ ಇಂಗ್ಲೆಂಡ್ ಸತತ ಜಯ ಸಾಧಿಸಿತ್ತು. ಶ್ರೀಲಂಕಾ ಎದುರಿನ ಪಂದ್ಯದಲ್ಲಿ ಜೋಸ್ ಬಟ್ಲರ್ ಶತಕ ಸಿಡಿಸಿ ಮಿಂಚಿದ್ದರು.
- ಒಟ್ಟಾರೆ ಕಳಪೆ ಆಟವಾಡಿದ್ದರೂ ಶ್ರೀಲಂಕಾ ತಂಡದ ಯುವ ಆಟಗಾರರು ಟೂರ್ನಿಯಲ್ಲಿ ಮಿಂಚಿದ್ದರು. ವಾಣಿಂದು ಹಸರಂಗ 16 ವಿಕೆಟ್‌ಗಳನ್ನು ಉರುಳಿಸಿ ಗಮನ ಸೆಳೆದಿದ್ದಾರೆ.
- ವೆಸ್ಟ್ ಇಂಡೀಸ್‌ನ ಡ್ವೇನ್ ಬ್ರಾವೊ ಅವರಿಗೆ ಇದು ವೃತ್ತಿಜೀವನದ ಕೊನೆಯ ಟೂರ್ನಿಯಾಗಿತ್ತು. ಕ್ರಿಸ್ ಗೇಲ್ ಕೂಡ ಇನ್ನು ಮುಂದೆ ವಿಶ್ವಕಪ್ ಟೂರ್ನಿಯಲ್ಲಿ ಆಡುವುದು ಸಂದೇಹ.
- ಶ್ವಾಸಕೋಶದಲ್ಲಿ ಸೋಂಕು ಕಾಣಿಸಿಕೊಂಡು ಎರಡು ದಿನ ಐಸಿಯುನಲ್ಲಿ ಚಿಕಿತ್ಸೆ ಪಡೆದಿದ್ದರೂ ಪಾಕಿಸ್ತಾನದ ಮೊಹಮ್ಮದ್ ರಿಜ್ವಾನ್ ಸೆಮಿಫೈನಲ್ ಪಂದ್ಯದಲ್ಲಿ 67 ರನ್ ಗಳಿಸಿ ಕ್ರಿಕೆಟ್ ಜಗತ್ತಿನ ಮೆಚ್ಚುಗೆಗೆ ಪಾತ್ರರಾಗಿದ್ದರು.

'ವಿಶ್ವಕಪ್' ತಂಡದಲ್ಲಿ ಭಾರತದ ಆಟಗಾರರಿಲ್ಲ

ದುಬೈ: ಟ್ವೆಂಟಿ–20 ವಿಶ್ವಕಪ್‌ಗೆ ಸಂಬಂಧಿಸಿ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಘೋಷಿಸಿರುವ 'ಟೂರ್ನಿಯ ತಂಡ'ದಲ್ಲಿ ಭಾರತದ ಯಾವ ಆಟಗಾರರೂ ಸ್ಥಾನ ಗಳಿಸಲಿಲ್ಲ.

ಪಾಕಿಸ್ತಾನದ ನಾಯಕ ಬಾಬರ್ ಆಜಂ ನಾಯಕನಾಗಿರುವ ತಂಡದಲ್ಲಿ ಶ್ರೀಲಂಕಾ, ದಕ್ಷಿಣ ಆಫ್ರಿಕಾ ಸೇರಿದಂತೆ ಆರು ರಾಷ್ಟ್ರಗಳ ಆಟಗಾರರು ಇದ್ದಾರೆ.

ಸೂಪರ್ 12ರ ಮೊದಲ ಪಂದ್ಯದಲ್ಲಿ ಭಾರತ ಪಾಕಿಸ್ತಾನಕ್ಕೆ 10 ವಿಕೆಟ್‌ಗಳಿಂದ ಮಣಿದಿತ್ತು. ನ್ಯೂಜಿಲೆಂಡ್ ವಿರುದ್ಧವೂ ಸೋತ ನಂತರ ತಂಡದ ಸೆಮಿಫೈನಲ್ ಆಸೆ ಕಮರಿಹೋಗಿತ್ತು. ಅಫ್ಗಾನಿಸ್ತಾನ, ಸ್ಕಾಟ್ಲೆಂಡ್ ಮತ್ತು ನಮೀಬಿಯಾ ವಿರುದ್ಧ ಭರ್ಜರಿ ಗೆಲುವು ಸಾಧಿಸಿದರೂ ವಿರಾಟ್ ಕೊಹ್ಲಿ ಬಳಗಕ್ಕೆ ನಾಲ್ಕರ ಘಟ್ಟಕ್ಕೇರಲು ಸಾಧ್ಯವಾಗಲಿಲ್ಲ.

ಸೋಲಿನ ನಡುವೆಯೂ ಭಾರತದ ಕೆಲವು ಆಟಗಾರರು ಉತ್ತಮ ಸಾಮರ್ಥ್ಯ ತೋರಿದ್ದಾರೆ. ಆದರೆ ಅವರನ್ನು ಆಯ್ಕೆ ಮಾಡಲು ಸಮಿತಿ ಸದಸ್ಯರು ಮುಂದಾಗಲಿಲ್ಲ. ದಕ್ಷಿಣ ಆಫ್ರಿಕಾ ಮತ್ತು ಶ್ರೀಲಂಕಾ ಕೂಡ ಸೆಮಿಫೈನಲ್ ಪ್ರವೇಶಿಸಲಿಲ್ಲ. ಆದರೆ ದಕ್ಷಿಣ ಆಫ್ರಿಕಾದ ಏಡನ್ ಮರ್ಕರಮ್, ಎನ್ರಿಚ್ ನಾರ್ಕಿಯಾ, ಶ್ರೀಲಂಕಾದ ಚರಿತ್ ಅಸಲಂಕ ಮತ್ತು ವಾಣಿಂದು ಹಸರಂಗ ಅವರ ಹೆಸರು ತಂಡದಲ್ಲಿದೆ.

ಚಾಂಪಿಯನ್ ಆಸ್ಟ್ರೇಲಿಯಾ, ರನ್ನರ್ ಅಪ್ ನ್ಯೂಜಿಲೆಂಡ್, ಸೆಮಿಫೈನಲ್‌ಗೇರಿದ್ದ ಇಂಗ್ಲೆಂಡ್ ಮತ್ತು ಪಾಕಿಸ್ತಾನ ತಂಡಗಳ ಆಟಗಾರರು ಪಟ್ಟಿಯಲ್ಲಿ ಆದ್ಯತೆ ಪಡೆದುಕೊಂಡಿದ್ದಾರೆ.

ಟೂರ್ನಿಯ ಶ್ರೇಷ್ಠ ಆಟಗಾರ ಪ್ರಶಸ್ತಿ ಗಳಿಸಿರುವ ಆಸ್ಟ್ರೇಲಿಯಾದ ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್, ಲೆಗ್ ಸ್ಪಿನ್ನರ್ ಆ್ಯಡಂ ಜಂಪಾ ಮತ್ತು ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ ತಂಡದಲ್ಲಿದ್ದಾರೆ. ಫೈನಲ್ ಪಂದ್ಯದಲ್ಲಿ ಈ ಮೂವರು ತಂಡದ ಗೆಲುವಿಗೆ ಪ್ರಮುಖ ಕಾಣಿಕೆ ನೀಡಿದ್ದರು.

'ಯಾವುದೇ ತಂಡದ ಆಯ್ಕೆಯಂತೆ ಈ ತಂಡವನ್ನು ಕೂಡ ಸಾಕಷ್ಟು ಚರ್ಚೆಯ ನಂತರ, ಅನೇಕರ ಅಭಿಪ್ರಾಯಗಳನ್ನು ಸಂಗ್ರಹಿಸಿ ಆರಿಸಲಾಗಿದೆ. ಸೂಪರ್ 12ರ ಮತ್ತು ನಂತರದ ಹಂತದ ಪಂದ್ಯಗಳ ಆಧಾರದಲ್ಲಿ ಆಯ್ಕೆ ಮಾಡಲಾಗಿದೆ. ಇದು ಭಾರಿ ಸವಾಲಿನ ಕಾರ್ಯವಾಗಿತ್ತು' ಎಂದು ಸಮಿತಿ ಸದಸ್ಯರಲ್ಲಿ ಒಬ್ಬರಾಗಿರುವ ವೆಸ್ಟ್ ಇಂಡೀಸ್‌ನ ಮಾಜಿ ವೇಗದ ಬೌಲರ್ ಇಯಾನ್ ಬಿಷಪ್ ಅಭಿಪ್ರಾಯಪಟ್ಟಿದ್ದಾರೆ.

ತಂಡ: ಡೇವಿಡ್ ವಾರ್ನರ್ (ಆಸ್ಟ್ರೇಲಿಯಾ), ಜೋಸ್ ಬಟ್ಲರ್ (ವಿಕೆಟ್ ಕೀಪರ್; ಇಂಗ್ಲೆಂಡ್), ಬಾಬರ್ ಆಜಂ (ನಾಯಕ, ಪಾಕಿಸ್ತಾನ), ಚರಿತ್ ಅಸಲಂಕಾ (ಶ್ರೀಲಂಕಾ), ಏಡನ್ ಮರ್ಕರಮ್ (ದಕ್ಷಿಣ ಆಫ್ರಿಕಾ), ಮೋಯಿನ್ ಅಲಿ (ಇಂಗ್ಲೆಂಡ್), ವಾಣಿಂದು ಹಸರಂಗ (ಶ್ರೀಲಂಕಾ), ಆ್ಯಡಂ ಜಂಪಾ (ಆಸ್ಟ್ರೇಲಿಯಾ), ಜೋಶ್ ಹ್ಯಾಜಲ್‌ವುಡ್ (ಆಸ್ಟ್ರೇಲಿಯಾ), ಟ್ರೆಂಟ್ ಬೌಲ್ಟ್ (ನ್ಯೂಜಿಲೆಂಡ್), ಎನ್ರಿಚ್ ನಾರ್ಕಿಯಾ (ದಕ್ಷಿಣ ಆಫ್ರಿಕಾ). 12ನೇ ಆಟಗಾರ: ಶಹೀನ್ ಶಾ ಅಫ್ರಿದಿ (ಪಾಕಿಸ್ತಾನ).

ಬಾಬರ್ ಆಜಂ –ಎಎಫ್‌ಪಿ ಚಿತ್ರ

ಲೆಜೆಂಡ್ಸ್ ಲೀಗ್‌ಗೆ ರವಿಶಾಸ್ತ್ರಿ ಕಮಿಷನರ್

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಾಜಿ ಕೋಚ್ ರವಿಶಾಸ್ತ್ರಿ ಅವರು ಲೆಜೆಂಡ್ಸ್ ಲೀಗ್ ಕ್ರಿಕೆಟ್‌ನ ಕಮಿಷನರ್ ಆಗಿ ನೇಮಕವಾಗಿದ್ದಾರೆ. ಲೀಗ್ ಸೋಮವಾರ ಈ ವಿಷಯ ತಿಳಿಸಿದೆ.

ರವಿಶಾಸ್ತ್ರಿ ಭಾರತೀಯ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ತಮ್ಮ ಅವಧಿಯನ್ನು ಪೂರ್ಣಗೊಳಿಸಿದ್ದಾರೆ. ಲೆಜೆಂಡ್ಸ್ ಲೀಗ್ ಕ್ರಿಕೆಟ್ ಜತೆ ಹೊಸ ಇನಿಂಗ್ಸ್ ಆರಂಭಿಸಲಿದ್ದಾರೆ.

2022ರ ಮೊದಲ ಆವೃತ್ತಿ ಜನವರಿಯಲ್ಲಿ ಗಲ್ಫ್‌ನಲ್ಲಿ ನಡೆಯಲಿದೆ.

ಲೀಗ್‌ನಲ್ಲಿ ಭಾರತ, ಪಾಕಿಸ್ತಾನ, ಶ್ರೀಲಂಕಾ, ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತಿತರ ದೇಶಗಳ ಮಾಜಿ ಕ್ರಿಕೆಟಿಗರು ಆಡುತ್ತಾರೆ.

ಕರ್ನಾಟಕ–ಸೌರಾಷ್ಟ್ರ ಮುಖಾಮುಖಿ

ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯ ನಾಕೌಟ್ ಹಣಾಹಣಿ

ನವದೆಹಲಿ (ಪಿಟಿಐ): ಗುಂಪು ಹಂತದಲ್ಲಿ ಅಮೋಘ ಸಾಮರ್ಥ್ಯ ತೋರಿರುವ ಕರ್ನಾಟಕ ಮತ್ತು ಸೌರಾಷ್ಟ್ರ ತಂಡಗಳು ಮುಷ್ತಾಕ್ ಅಲಿ ಟ್ರೋಫಿ ಟ್ವೆಂಟಿ–20 ಕ್ರಿಕೆಟ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮಂಗಳವಾರ ಮುಖಾಮುಖಿಯಾಗಲಿವೆ.

ವಿಪರೀತ ವಾಯುಮಾಲಿನ್ಯದಿಂದಾಗಿ ಆತಂಕದಲ್ಲಿರುವ ದೆಹಲಿಯಲ್ಲಿ 16ರ ಘಟ್ಟದ ಕೊನೆಯ ಮೂರು ಪಂದ್ಯಗಳು ನಡೆಯಲಿವೆ. ವಿವಿಧ ತಂಡಗಳನ್ನು ಪ್ರಮುಖ ಆಟಗಾರರು ಪ್ರತಿನಿಧಿಸುತ್ತಿದ್ದಾರೆ. ಇವರೆಲ್ಲ ಮುಂದಿನ ಐಪಿಎಲ್ ಮೇಲೆ ಕಣ್ಣಿಟ್ಟು ಕಣಕ್ಕೆ ಇಳಿಯಲಿದ್ದಾರೆ. ಹೀಗಾಗಿ ಪಂದ್ಯಗಳು ರೋಚಕವಾಗುವ ಸಾಧ್ಯತೆ ಇದೆ.

ಕರ್ನಾಟಕ ಮತ್ತು ಸೌರಾಷ್ಟ್ರ ತಂಡಗಳು ಗುಂಪು ಹಂತದಲ್ಲಿ ತಲಾ ನಾಲ್ಕು ಪಂದ್ಯಗಳಲ್ಲಿ ಜಯ ಗಳಿಸಿವೆ. ಎಲೀಟ್ 'ಡಿ' ಗುಂಪಿನಲ್ಲಿದ್ದ ಕರ್ನಾಟಕ ಮತ್ತು ಎಲೀಟ್ 'ಇ' ಗುಂಪಿನಲ್ಲಿದ್ದ ಸೌರಾಷ್ಟ್ರ ಆಯಾ ಗುಂಪಿನಲ್ಲಿ ಎರಡನೇ ಸ್ಥಾನವನ್ನು ಗಳಿಸಿದ್ದವು.

ನಾಯಕ ಮನೀಷ್ ಪಾಂಡೆ ಕರ್ನಾಟಕದ ಪರ ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದ್ದಾರೆ. ದೇವದತ್ತ ಪಡಿಕ್ಕಲ್, ಕರುಣ್ ನಾಯರ್ ಬಲವೂ ತಂಡಕ್ಕೆ ಇದೆ. ಬೌಲಿಂಗ್ ವಿಭಾಗದಲ್ಲಿ ಸ್ಪಿನ್ನರ್ ಕೆ.ಸಿ.ಕಾರ್ಯಪ್ಪ ಉತ್ತಮ ಫಾರ್ಮ್‌ನಲ್ಲಿದ್ದು ಕೃಷ್ಣಪ್ಪ ಗೌತಮ್ ಕೂಡ ಮಿಂಚಬಲ್ಲರು.

ಸೌರಾಷ್ಟ್ರದ ಬೌಲಿಂಗ್ ವಿಭಾಗ ಬಲಿಷ್ಠವಾಗಿದೆ. ದೇಶಿ ಕ್ರಿಕೆಟ್‌ನಲ್ಲಿ

ಮನೀಷ್ ಪಾಂಡೆ– ಪ್ರಜಾವಾಣಿ ಚಿತ್ರ

ಮೊನಚಾದ ದಾಳಿ ಮೂಲಕ ಬ್ಯಾಟರ್‌ಗಳನ್ನು ಕಂಗೆಡಿಸಿರುವ ಎಡಗೈ ವೇಗಿ ಜಯದೇವ ಉನದ್ಕತ್ ಮತ್ತು ಐಪಿಎಲ್ ಪ್ರತಿಭೆ ಚೇತನ್ ಸಕಾರಿಯ ತಂಡದಲ್ಲಿದ್ದು ಶೆಲ್ಡನ್ ಜಾಕ್ಸನ್ ಮತ್ತು ಪ್ರೇರಕ್ ಮಂಕಡ್, ಹರ್ವಿಕ್ ದೇಸಾಯಿ, ವಿಶ್ವರಾಜ್ ಜಡೇಜ, ಧರ್ಮೇಂದ್ರ ಸಿಂಗ್ ಜಡೇಜ ಮುಂತಾದವರು ತಂಡದ ಶಕ್ತಿಯಾಗಿದ್ದಾರೆ.

ಋತುರಾಜ್ ಅಲಭ್ಯ: ಮಹಾರಾಷ್ಟ್ರ ತಂಡ ಸಾಂಪ್ರದಾಯಿಕ ಎದುರಾಳಿ ವಿದರ್ಭ ವಿರುದ್ಧ ಆಡಲಿದ್ದು ಋತುರಾಜ್ ಗಾಯಕವಾಡ್ ಅವರ ಅನುಪಸ್ಥಿತಿಯಲ್ಲಿ ಕಣಕ್ಕೆ ಇಳಿಯಲಿದೆ. ಐಪಿಎಲ್‌ನಲ್ಲಿ ಚೆನ್ನೈ ಗೆಲುವಿಗೆ ಪ್ರಮುಖ ಕಾರಣರಾಗಿದ್ದ ಋತುರಾಜ್ ಅವರು ಮುಷ್ತಾಕ್ ಅಲಿ ಟ್ರೋಫಿಯ ಲೀಗ್ ಹಂತದಲ್ಲಿ ಮಹಾರಾಷ್ಟ್ರಕ್ಕೆ ನೆರವಾಗಿದ್ದರು. ಈಗ ನ್ಯೂಜಿಲೆಂಡ್ ಎದುರಿನ ಟ್ವೆಂಟಿ–20 ಸರಣಿಗಾಗಿ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಪ್ರೀಕ್ವಾರ್ಟರ್ ಫೈನಲ್ ಇಂದಿನ ಪಂದ್ಯಗಳು

ತಂಡಗಳು	ಸ್ಥಳ	ಸಮಯ
ಮಹಾರಾಷ್ಟ್ರ–ವಿದರ್ಭ	ದೆಹಲಿ	ಬೆ 8.30
ಕೇರಳ–ಹಿಮಾಚಲಪ್ರದೇಶ	ದೆಹಲಿ	ಮ 12.00
ಕರ್ನಾಟಕ–ಸೌರಾಷ್ಟ್ರ	ದೆಹಲಿ	ಮ 1.00

'ಮಾರ್ಷ್ ಆಟ ಆ್ಯಷಸ್ ತಂಡದ ಆಯ್ಕೆ ಮೇಲೆ ಹೆಚ್ಚು ಪರಿಣಾಮ ಬೀರದು'

ಮೆಲ್ಬರ್ನ್ (ಪಿಟಿಐ): ಮಿಚೆಲ್ ಮಾರ್ಷ್, ಟಿ–20 ವಿಶ್ವಕಪ್ ಫೈನಲ್‌ನಲ್ಲಿ ಪ್ರದರ್ಶಿಸಿದ ಅತ್ಯಮೋಘ ಆಟ, ಆ್ಯಷಸ್ ಸರಣಿಗೆ ಆಸ್ಟ್ರೇಲಿಯಾ ತಂಡದ ಆಯ್ಕೆಯ ಮೇಲೆ ಅಂಥ ದೊಡ್ಡ ಪರಿಣಾಮ ಬೀರುವುದಿಲ್ಲ. ಎರಡೂ (ಚುಟುಕು ಮತ್ತು ಟೆಸ್ಟ್ ಕ್ರಿಕೆಟ್) ಸಂಪೂರ್ಣ ಭಿನ್ನ ಮಾದರಿಯವು ಎಂದು ಆಯ್ಕೆ ಸಮಿತಿ ಅಧ್ಯಕ್ಷ ಟ್ರೇವರ್ ಬೇಯ್ಲಿ ಹೇಳಿದ್ದಾರೆ.

ದುಬೈನಲ್ಲಿ ಭಾನುವಾರ ಹೊನಲು ಬೆಳಕಿನಡಿ ನಡೆದ ಫೈನಲ್‌ನಲ್ಲಿ ಮೂರನೇ ಕ್ರಮಾಂಕದಲ್ಲಿ ಆಡಲಿಳಿದ ಮಾರ್ಷ್ 50 ಎಸೆತಗಳಲ್ಲಿ 77 ರನ್ ಸಿಡಿಸಿ ಆಸ್ಟ್ರೇಲಿಯಾ ತಂಡ ಮೊದಲ ಬಾರಿ ಟಿ–20 ವಿಶ್ವಕಪ್ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕಾಂಗರೂ ಪಡೆ ಎಂಟು ವಿಕೆಟ್‌ಗಳ ಸುಲಭ ಜಯ ಗಳಿಸಿತ್ತು.

ಮಾರ್ಷ್ ಒಟ್ಟಾರೆ 62ರ ಸರಾಸರಿಯಲ್ಲಿ 185 ರನ್ ಗಳಿಸಿದ್ದರು. ಇದರಿಂದ, ಸಾಂಪ್ರದಾಯಿಕ ಎದುರಾಳಿ ಇಂಗ್ಲೆಂಡ್ ವಿರುದ್ಧದ ಆ್ಯಷಸ್ ಸರಣಿಗೆ ಮಾರ್ಷ್ ಅವರ ಪರಿಗಣಿಸಬಹುದೆಂದು ಮಾಜಿ ವಿಕೆಟ್ ಕೀಪರ್ ಇಯಾನ್ ಹೀಲಿ ಅಂಥ ಆಟಗಾರರರು ಬೆನ್ನಿಗೆ ನಿಂತಿದ್ದರು.

ಆದರೆ ಪಂದ್ಯದ ಆಟಗಾರನಾಗಿದ್ದ, 31 ವರ್ಷದ ಮಾರ್ಷ್ ಬಗ್ಗೆ ಆಯ್ಕೆ ಬಗ್ಗೆ ಬೇಯ್ಲಿ ಭರವಸೆ ನೀಡಲಿಲ್ಲ.

'ಒಂದು ಮಾದರಿಯಲ್ಲಿ ತೋರುವ ಫಾರ್ಮ್, ಇನ್ನೊಂದು ಮಾದರಿಯಲ್ಲೂ ಮುಂದುವರಿಯುತ್ತದೆ ಎಂದು ನಾನೇನೂ ಭಾವಿಸುವುದಿಲ್ಲ. ಟಿ–20 ವಿಶ್ವಕಪ್ ಗೆದ್ದಿರುವುದರಿದ ಆ್ಯಷಸ್ ಸರಣಿಗೆ ನಮಗೆ ಹೆಚ್ಚಿನ ಅನುಕೂಲವಾಗುತ್ತದೆಂದು ನನಗೇನೂ ಅನಿಸದು' ಎಂದು ಅವರು ಅಭಿಪ್ರಾಯಪಟ್ಟರು.

ಮಿಚೆಲ್ ಮಾರ್ಷ್

ಮಾರ್ಷ್ 32 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ. ಆದರೆ ತಂಡದಲ್ಲಿ ತಮ್ಮ ಸ್ಥಾನ ಗಟ್ಟಿಗೊಳಿಸಲು ಅವರಿಗೆ ಸಾಧ್ಯವಾಗಿಲ್ಲ. ಅವರು ದೀರ್ಘ ಮಾದರಿಯಲ್ಲಿ 25ರ ಸರಾಸರಿ ಹೊಂದಿದ್ದಾರೆ. 'ನಾವು ಟೂರ್ನಿಯಲ್ಲಿ ಸಂಭ್ರಮ ಆಚರಿಸಿರುವುದು ಮಹತ್ವದ ವಿಷಯ. ಅವರು ಆಸ್ಟ್ರೇಲಿಯಾ ಗೆಲುವಿನಲ್ಲಿ ಅಂದು ಹೀರೊ ಆದರು. ಅವರು ಟ್ರೋಫಿ ಎತ್ತಿಹಿಡಿಯುವಲ್ಲಿ ಪ್ರೇರಣಾದಾಯಿ ಆಗಿದ್ದರು' ಎಂದಿದ್ದಾರೆ

ಮೋಟರ್‌ಸ್ಪೋರ್ಟ್ಸ್: ಐಶ್ವರ್ಯ ಪಿಸ್ಸೆಗೆ ಜಯ

ಮಂಗಳೂರು (ಪಿಟಿಐ): ಹಾಲಿ ಚಾಂಪಿಯನ್ ಐಶ್ವರ್ಯಾ ಪಿಸ್ಸೆ ಅವರು ಪುತ್ತೂರಿನಲ್ಲಿ ನಡೆದ ರಾಷ್ಟ್ರೀಯ ಮೋಟರ್‌ಸ್ಪೋರ್ಟ್ಸ್ ರ‍್ಯಾಲಿ ಚಾಂಪಿಯನ್‌ಷಿಪ್‌ನಲ್ಲಿ ಸತತ ಮೂರನೇ ಸುತ್ತಿನಲ್ಲಿ ಜಯ ಸಂಪಾದಿಸಿದರು.

ಹಂಪಿ ರೇಸ್‌ನಲ್ಲಿ ಜಯ ಸಾಧಿಸಿದ್ದ ಐಶ್ವರ್ಯ, ಬೆಂಗಳೂರಿನಲ್ಲಿ ವಿಜೇತರಾಗಿದ್ದರು. ಪುತ್ತೂರಿನಲ್ಲಿ ನಡೆದ 3ನೇ ಸುತ್ತಿನಲ್ಲಿ ಅವರು 50 ನಿಮಿಷ 38.849 ಸೆಕೆಂಡುಗಳಲ್ಲಿ ಗುರಿ ತಲುಪಿದರು.

'ಗೆಲುವು ಸಾಧಿಸಲು ಸಾಧ್ಯವಾಗುವಂತಹ ಬೈಕ್ ನೀಡಿದ ನನ್ನ ತಂಡ, ಟಿವಿಎಸ್ ರೇಸಿಂಗ್ ಮತ್ತು ಮೆಕ್ಯಾನಿಕ್‌ಗಳಿಗೆ ಧನ್ಯವಾದ ಹೇಳುತ್ತೇನೆ' ಎಂದು ಆರು ಬಾರಿ ರಾಷ್ಟ್ರೀಯ ಚಾಂಪಿಯನ್ ಆಗಿರುವ ಐಶ್ವರ್ಯ ತಿಳಿಸಿದ್ದಾರೆ.

ಚಾಂಪಿಯನ್‌ಷಿಪ್‌ನ ನಾಲ್ಕನೇ ಸುತ್ತಿನ ರ‍್ಯಾಲಿಯು ಚಿಕ್ಕಮಗಳೂರಿನಲ್ಲಿ ನಿಗದಿಯಾಗಿದೆ. ಕೊಯಮುತ್ತೂರು ಮತ್ತು ನಾಶಿಕ್‌ನಲ್ಲಿ ಇನ್ನೆರಡು ಸುತ್ತುಗಳು ನಡೆಯಲಿದ್ದು, ಹೆಚ್ಚು ಪಾಯಿಂಟ್ಸ್ ಗಳಿಸಿದವರನ್ನು ಚಾಂಪಿಯನ್ ಎಂದು ಘೋಷಿಸಲಾಗುತ್ತದೆ.

ಏಷ್ಯನ್ ಆರ್ಚರಿ; ನಾಲ್ಕರ ಘಟ್ಟಕ್ಕೆ ಅಭಿಷೇಕ್ ವರ್ಮಾ

ಸೆಮಿಗೆ ಮೋಹಿತ್, ಜ್ಯೋತಿ

ಢಾಕಾ (ಪಿಟಿಐ): ಯುವ ಆರ್ಚರಿಪಟು ಮೋಹಿತ್ ದೇಸ್ವಾಲ್ ಅವರು ಅಗ್ರಶ್ರೇಯಾಂಕದ ಕೊರಿಯಾ ಬಿಲ್ಗಾರ ಚೊಯ್ ಯೊಂಗಿಗೆ ಆಘಾತ ನೀಡಿದರು. ಏಷ್ಯನ್ ಆರ್ಚರಿ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ತಲುಪಿದರು.

ಮೊದಲ ಬಾರಿ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿದಿರುವ ಮೋಹಿತ್ ಸೋಮವಾರ ಪುರುಷರ ಕಾಂಪೌಂಡ್ ವಿಭಾಗದಲ್ಲಿ ನಾಲ್ಕರ ಘಟ್ಟ ತಲುಪಿದ್ದು, ಭಾರತದವರೇ ಆದ ಅಭಿಷೇಕ್ ವರ್ಮಾ ಅವರೊಂದಿಗೆ ಸೆಣಸಲಿದ್ದಾರೆ.

ರಿಕರ್ವ್ ವಿಭಾಗದಲ್ಲಿ ಭಾರತದ ಆರ್ಚರಿಪಟುಗಳು ಕೊರಿಯಾ ಎದುರು ಮತ್ತೊಮ್ಮೆ ಪರದಾಡಿದರು. ಆದರೆ ಮಹಿಳೆಯರ ಕಾಂಪೌಂಡ್ ವಿಭಾಗದಲ್ಲಿ ಜ್ಯೋತಿ ಸುರೇಖಾ ವೆನ್ನಂ ಕೂಡ ಸೆಮಿಫೈನಲ್ ಪ್ರವೇಶಿಸಿದರು.

ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ವಿಜೇತ ಮೋಹಿತ್ ಅವರು, ಟೂರ್ನಿಯಲ್ಲಿ ಪದಕದ ಕನಸಿಗೆ ಮುನ್ನುಡಿ ಬರೆದರು. ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಅವರು ಚೊಯ್‌ಗೆ ಸೋಲುಣಿಸಿದರು. ಎಂಟರಘಟ್ಟದ ಹಣಾಹಣಿಯಲ್ಲಿ ಮೋಹಿತ್ ಇರಾನ್‌ನ ಅಮಿರ್ ಕಜೆಂಪೂರ್ ಸವಾಲು ಮೀರಿದರು.

ಜ್ಯೋತಿ ವೆನ್ನಂ– ಎಎಫ್‌ಪಿ ಚಿತ್ರ

ಅರ್ಹತಾ ಸುತ್ತಿನಲ್ಲಿ ಉತ್ತಮ ಸಾಮರ್ಥ್ಯ ತೋರಿದ್ದ ರಿಷಭ್ ಯಾದವ್ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಕಜಕಸ್ತಾನದ ಸೆರ್ಜೆಯ್ ಕ್ರಿಸ್ಟಿಚ್ ಎದುರು ಎಡವಿದರು.

ಈ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮೂರು ಬೆಳ್ಳಿ ಪದಕಗಳ ಒಡತಿಯಾಗಿರುವ ಸುರೇಖಾ ವೆನ್ನಂ ಭಾರತದವರೇ ಆದ ಪರ್ಣೀತ್ ಕೌರ್ ಅವರನ್ನು ಮಣಿಸಿ ಸೆಮಿಫೈನಲ್ ತಲುಪಿದರು.

ಪುರುಷರ ವೈಯಕ್ತಿಕ ವಿಭಾಗದಲ್ಲಿ ಪ್ರವೀಣ್ ಜಾಧವ್, ಪಾರ್ಥ್ ಸಾಳುಂಕೆ ಕೂಡ ಎಂಟರಘಟ್ಟದಲ್ಲಿ ಕೊರಿಯಾ ಪಟುಗಳ ಎದುರು ಮುಗ್ಗರಿಸಿದರು. ಮಹಿಳೆಯರ ವಿಭಾಗದಲ್ಲಿ ಕೋಮಲಿಕಾ ಬಾರಿ, ಮಧು ವೇದ್ವಾನ್ ಹಾಗೂ ರಿಧಿ ಕೂಡ ನಿರಾಸೆ ಅನುಭವಿಸಿದರು.

ಸ್ನೂಕರ್ ಟೂರ್ನಿ: ಕೆಎಸ್‌ಬಿಎ 'ಎ' ತಂಡ ಜಯಭೇರಿ

ಬೆಂಗಳೂರು: ಕೆಎಸ್‌ಬಿಎ 'ಎ' ತಂಡ ಇಲ್ಲಿ ನಡೆಯುತ್ತಿರುವ ಎಂ.ಚೆನ್ನಿಯಪ್ಪನ್ ಸ್ಮಾರಕ ಅಂತರ ಕ್ಲಬ್ ಸ್ನೂಕರ್ ಟೂರ್ನಿಯಲ್ಲಿ ಸೋಮವಾರ ಅಮೋಘ ಜಯ ಸಾಧಿಸಿತು.

ದಿನದ ಎರಡು ಲೀಗ್ ಪಂದ್ಯಗಳಲ್ಲಿ ತಂಡ ಸದಾಶಿವನಗರ ಕ್ಲಬ್ ಮತ್ತು ಎಚ್‌ಬಿಸಿಸಿ 'ಬಿ'ಯನ್ನು ಮಣಿಸಿತು. ಸದಾಶಿವನಗರ ಕ್ಲಬ್ ಮಿಶ್ರ ಫಲ ಕಂಡಿತು.

'ಎ' ಗುಂಪಿನ ಹಣಾಹಣಿಯಲ್ಲಿ ಕೆಎಸ್‌ಬಿಎ 'ಎ' ತಂಡ ಸದಾಶಿವನಗರ ಕ್ಲಬ್ ವಿರುದ್ಧ 2–0ಯಿಂದ ಜಯಿಸಿತು. ಎಚ್.ಇ. ಆನಂದ್ 38-52, 50-47, 50-34ರಲ್ಲಿ ವಿಜಯ್ ಗೌಡ ವಿರುದ್ಧ, ನವೀನ್ ಕುಮಾರ್ 47-08, 38-43, 44-43ರಲ್ಲಿ ಉದಯ್ ದೇವ್ ಎದುರು ಗೆದ್ದರು.

ಮತ್ತೊಂದು ಪಂದ್ಯದಲ್ಲಿ ಕೆಎಸ್‌ಬಿಎ 'ಎ' ತಂಡ ಎಚ್‌ಬಿಸಿಸಿಯನ್ನು 2–0ಯಿಂದ ಸೋಲಿಸಿತು. ನವೀನ್ ಕುಮಾರ್ 62-26, 41-37ರಲ್ಲಿ ಡೆನಿ ಜೇಮ್ಸ್ ವಿರುದ್ಧ ಮತ್ತು ದೀಪಕ್ ಎ 63-53, 28-67, 72-40ರಲ್ಲಿ ರಾಜಾ ಎಸ್ ವಿರುದ್ಧ ಜಯ ಸಾಧಿಸಿದರು.

ಎಂಆರ್‌ಎಲ್‌ಎಫ್ ಎದುರಿನ ಪಂದ್ಯದಲ್ಲಿ ಸದಾಶಿವನಗರ ಕ್ಲಬ್ 2–0ಯಿಂದ ಗೆಲುವು ಸಾಧಿಸಿತು. ಸಂತೋಷ್ 55-37, 33-47, 38-14ರಲ್ಲಿ ಮಧುಸೂದನ್ ವಿರುದ್ಧ, ವಿಜಯ್ ಗೌಡ 40-10, 24-39, 54-22ರಲ್ಲಿ ಹರೀಶ್ ವಿರುದ್ಧ ಗೆದ್ದರು.

ಪ್ರಜ್ವಲ್ ಶಿರೋಳ ಆರೋಗ್ಯದಲ್ಲಿ ಚೇತರಿಕೆ

ಹುಬ್ಬಳ್ಳಿ: ಮೊದಲ ಡಿವಿಷನ್ ಕ್ರಿಕೆಟ್ ಪಂದ್ಯದ ವೇಳೆ ಫೀಲ್ಡಿಂಗ್ ಮಾಡುವಾಗ ಡಿಕ್ಕಿಯಾಗಿ ಮಿದುಳಿಗೆ ಪೆಟ್ಟು ಬಿದ್ದು ನಗರದ ವಿವೇಕಾನಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಧಾರವಾಡದ ಎಸ್‌ಡಿಎಂ 'ಬಿ' ತಂಡದ ಆಟಗಾರ ಪ್ರಜ್ವಲ್ ಶಿರೋಳ ಆರೋಗ್ಯದಲ್ಲಿ ಸೋಮವಾರ ಚೇತರಿಕೆ ಕಂಡು ಬಂದಿದೆ.

ಮಿದುಳಿನ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಪ್ರಜ್ವಲ್ ಸದ್ಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಪ್ರಜ್ವಲ್ ಆರೋಗ್ಯದಲ್ಲಿ ಸುಧಾರಣೆ ಕಂಡಿದೆ. ಮಂಗಳವಾರ ಐಸಿಯುನಿಂದ ವಾರ್ಡ್‌ಗೆ ಸ್ಥಳಾಂತರ ಮಾಡಲಾಗುವುದು. ಪ್ರಾಣಾಪಾಯದಿಂದ ಪಾರಾಗಿದ್ದಾನೆ' ಎಂದು ವೈದ್ಯರು ತಿಳಿಸಿರುವುದಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಧಾರವಾಡ ವಲಯದ ಚೇರ್ಮನ್ ವೀರಣ್ಣ ಸವಡಿ ತಿಳಿಸಿದ್ದಾರೆ.

ಶನಿವಾರ ಎಸ್‌ಡಿಎಂ ಹಾಗೂ ಹುಬ್ಬಳ್ಳಿ ಕ್ರಿಕೆಟ್ ಅಕಾಡೆಮಿ ತಂಡಗಳ ನಡುವಿನ ಪಂದ್ಯದ ವೇಳೆ ಈ ಘಟನೆ ನಡೆದಿತ್ತು.

ಹಿಂದುತ್ವ ಕುರಿತ ಪುಸ್ತಕ ವಿವಾದ: ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ಮನೆಗೆ ಬೆಂಕಿ

ನೈನಿತಾಲ್: ಉತ್ತರಾಖಂಡದ ನೈನಿತಾಲ್‌ನಲ್ಲಿರುವ ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ಅವರ ನಿವಾಸಕ್ಕೆ ಸೋಮವಾರ ಸಂಜೆ ಗುಂಪೊಂದು ಹಾನಿಯುಂಟು ಮಾಡಿದೆ.ಗುಂಪೊಂದು ಮನೆ ಕಿಟಿಕಿ ಗಾಜುಗಳನ್ನು ಒಡೆದು, ಮನೆಯ ಬಾಗಿಲಿಗೆ ಬೆಂಕಿ ಹಚ್ಚಿದೆ.

ಸಲ್ಮಾನ್ ಖುರ್ಷಿದ್ ಅವರು ತಮ್ಮ ಇತ್ತೀಚಿನ ಪುಸ್ತಕದಲ್ಲಿ ಹಿಂದುತ್ವ ಮತ್ತು ಐಎಸ್‌ನಂತಹ ಭಯೋತ್ಪಾದಕ ಸಂಘಟನೆಗಳ ನಡುವೆ ಹೋಲಿಕೆ ಮಾಡುವ ವಿಷಯಗಳನ್ನು ಪ್ರಸ್ತಾಪಿಸಿದ್ದರು. ಅದು ವಿವಾದಕ್ಕೆ ಕಾರಣವಾಗಿದೆ. ಈ ಮಧ್ಯೆ ಅವರ ನಿವಾಸದ ಮೇಲೆ ದಾಳಿ ನಡೆಸಲಾಗಿದೆ.

ಖುರ್ಷಿದ್

'ಬೋವಾಲಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಖುರ್ಷಿದ್ ಮನೆಯ ಕಿಟಕಿಯ ಗಾಜುಗಳನ್ನು ಕೆಲವರು ಹಾನಿಗೊಳಿಸಿದ್ದಾರೆ ಮತ್ತು ಬಾಗಿಲಿಗೆ ಬೆಂಕಿ ಹಚ್ಚಿದ್ದಾರೆ,' ಎಂದು ನೈನಿತಾಲ್ (ನಗರ) ಪೊಲೀಸ್ ವರಿಷ್ಠಾಧಿಕಾರಿ ಜಗದೀಶ್ ಚಂದ್ರ ಹೇಳಿದ್ದಾರೆ

ಮನೆಯಲ್ಲಿ ಖುರ್ಷಿದ್ ಕುಟುಂಬಸ್ಥರು ಯಾರೂ ಇರಲಿಲ್ಲ. ಮನೆಯನ್ನು ನೋಡಿಕೊಳ್ಳುವವರು ಇದ್ದರಾದರೂ, ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ಎಸ್‌ಪಿ ತಿಳಿಸಿದ್ದಾರೆ.

ಘಟನೆ ನಂತರ ಖುರ್ಷಿದ್ ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೊ ತುಣುಕುಗಳನ್ನು ಪೋಸ್ಟ್ ಮಾಡಿದ್ದಾರೆ. ಕೆಲವರು ಅವರ ಪ್ರತಿಕೃತಿಯನ್ನು ಸುಡುತ್ತಿರುವುದು, ಅವರ ಮತ್ತು ಮುಸ್ಲಿಂ ಸಮುದಾಯದ ವಿರುದ್ಧ ಅವಹೇಳನಕಾರಿ ಘೋಷಣೆಗಳನ್ನು ಕೂಗುತ್ತಿರುವುದು ವಿಡಿಯೊದಲ್ಲಿದೆ.

ಖುರ್ಷಿದ್ ಅವರ 'ಸನ್‌ರೈಸ್ ಓವರ್ ಅಯೋಧ್ಯ: ನ್ಯಾಷನಲಿಸಂ ಇನ್ ಅವರ್ ಟೈಮ್ಸ್' ಎಂಬ ಪುಸ್ತಕ ಈಚೆಗೆ ಬಿಡುಗಡೆಯಾಗಿತ್ತು. ಪುಸ್ತಕದ ಕೆಲ ಅಂಶಗಳು ಬಿಜೆಪಿ, ಬಲ ಪಂಥೀಯ ಸಂಘಟನೆಗಳ ಟೀಕೆಗೆ ಗುರಿಯಾಗಿದೆ.

ತ್ರಿಪುರಾದ ಇಬ್ಬರು ಪತ್ರಕರ್ತೆಯರಿಗೆ ಜಾಮೀನು

ಅಗರ್ತಲಾ (ಪಿಟಿಐ): ತ್ರಿಪುರಾದಲ್ಲಿ ಇತ್ತೀಚೆಗೆ ನಡೆದ ಕೋಮು ಘಟನೆಗಳ ಕುರಿತು ಸಾಮಾಜಿಕ ತಾಣದಲ್ಲಿ ಪ್ರಚೋದನಕಾರಿ ಪೋಸ್ಟ್‌ಗಳನ್ನು ಹಾಕಿದ್ದ ಆರೋಪದ ಮೇಲೆ ಬಂಧಿಸಲಾಗಿದ್ದ ಇಬ್ಬರು ಪತ್ರಕರ್ತೆಯರಿಗೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಜಾಮೀನು ನೀಡಿದೆ.

ಎಚ್‌ಡಬ್ಲ್ಯು ನ್ಯೂಸ್ ನೆಟ್‌ವರ್ಕ್‌ನ ಪತ್ರಕರ್ತೆಯರಾದ ಸಮೃದ್ಧಿ ಸುಕುನಿಯಾ ಮತ್ತು ಸ್ವರ್ಣಾ ಝಾ ಅವರನ್ನು ಅಸ್ಸಾಂ ಪೊಲೀಸರು ಬಂಧಿಸಿದ್ದರು.

ಈ ಇಬ್ಬರ ವಿರುದ್ಧ ವಿಎಚ್‌ಪಿ ಬೆಂಬಲಿಗ ಕಾಂಚನ್‌ದಾಸ್ ಎಂಬವರು ದೂರು ನೀಡಿದ ಮೇರೆಗೆ ತ್ರಿಪುರಾದ ಪೊಲೀಸ್ ಠಾಣೆಯೊಂದರಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು.

ಗೋಮತಿ ಜಿಲ್ಲೆಯಲ್ಲಿ ಮಸೀದಿಗೆ ಬೆಂಕಿ ಹಚ್ಚಲಾಗಿದೆ ಮತ್ತು ಕುರಾನ್ ಪ್ರತಿಯನ್ನು ಹಾನಿಗೊಳಿಸಲಾಗಿದೆ ಎಂದು ಈ ಇಬ್ಬರು ಪತ್ರಕರ್ತೆಯರು ಸಾಮಾಜಿಕ ತಾಣದಲ್ಲಿ ಬರೆದುಕೊಂಡಿದ್ದರು ಎಂದು ಅಗರ್ತಲಾದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಇಬ್ಬರು ಪತ್ರಕರ್ತೆಯರ ಬಂಧನವನ್ನು ಭಾರತೀಯ ಸಂಪಾದಕರ ಒಕ್ಕೂಟ (ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ) ಮತ್ತು ಇಂಡಿಯನ್ ವುಮೆನ್ಸ್ ಪ್ರೆಸ್ ಕಾರ್ಪ್ಸ್(ಐಡಬ್ಲ್ಯುಪಿಸಿ) ಖಂಡಿಸಿತ್ತು.

ಗಾಂಧಿ ಪ್ರತಿಮೆ ಧ್ವಂಸ: ಆಸೀಸ್ ಪ್ರಧಾನಿ ಖಂಡನೆ

ಮೆಲ್ಬರ್ನ್: ಆಸ್ಟ್ರೇಲಿಯಾಕ್ಕೆ ಭಾರತ ಸರ್ಕಾರವು ಉಡುಗೊರೆಯಾಗಿ ನೀಡಿದ ಮಹಾತ್ಮ ಗಾಂಧಿ ಅವರ ಕಂಚಿನ ಪ್ರತಿಮೆಯನ್ನು ಧ್ವಂಸಗೊಳಿಸಲಾಗಿದೆ ಎಂದು ವರದಿಯಾಗಿದೆ.

ಆಸ್ಟ್ರೇಲಿಯಾದ ಪ್ರಧಾನಿ ಸ್ಕಾಟ್ ಮಾರಿಸನ್ ಘಟನೆಯನ್ನು ಖಂಡಿಸಿದ್ದು, 'ಈ ಕೃತ್ಯ ಅವಮಾನಕರವಾಗಿದ್ದು, ಭಾರತ ಹಾಗೂ ಆಸ್ಟ್ರೇಲಿಯಾ ಸಮುದಾಯದಲ್ಲಿ ಆಘಾತ ಮತ್ತು ಅತೀವ ಬೇಸರವನ್ನು ಉಂಟು ಮಾಡಿದೆ' ಎಂದು ಹೇಳಿದ್ದಾರೆ.

ಭಾರತದ 75ನೇ ವರ್ಷಗಳ ಸ್ವಾತಂತ್ರ್ಯದ ಆಚರಣೆಯ ಅಂಗವಾಗಿ ಶುಕ್ರವಾರ ವಿಕ್ಟೋರಿಯಾದ ರೋವಿಲ್‌ನಲ್ಲಿ ಆಸ್ಟ್ರೇಲಿಯಾದ ಭಾರತೀಯ ಸಮುದಾಯ ಕೇಂದ್ರದಲ್ಲಿ ಪ್ರತಿಮೆಯನ್ನು ಅನಾವರಣಗೊಳಿಸಿದ ಕೆಲವೇ ಗಂಟೆಗಳ ಬಳಿಕ ಈ ಘಟನೆ ಸಂಭವಿಸಿದೆ ಎಂದು 'ದಿ ಏಜ್' ಪತ್ರಿಕೆ ವರದಿ ಮಾಡಿದೆ. 'ದೇಶದಲ್ಲಿ ಸಾಂಸ್ಕೃತಿಕ ಸ್ಮಾರಕಗಳ ಮೇಲಿನ ದಾಳಿಯನ್ನು ಸಹಿಸಲಾಗುವುದಿಲ್ಲ. ಇದಕ್ಕೆ ಕಾರಣರಾದವರು ಯಾರೇ ಆದರೂ ಅವರಿಗೆ ನಾಚಿಕೆಯಾಗಬೇಕು' ಎಂದು ಮಾರಿಸನ್ ಹೇಳಿದ್ದಾರೆ.

ನೇಪಾಳ ಭೂಕಂಪ: 50 ಸಾವಿರ ಮನೆ ನಿರ್ಮಿಸಿದ ಭಾರತ

ಕಠ್ಮಂಡು: ನೇಪಾಳದಲ್ಲಿ 2015ರಲ್ಲಿ ಸಂಭವಿಸಿದ್ದ ಪ್ರಬಲ ಭೂಕಂಪದಿಂದ ಹಾನಿಗೀಡಾಗಿದ್ದ 50 ಸಾವಿರ ಮನೆಗಳನ್ನು ಭಾರತವು ಯಶಸ್ವಿಯಾಗಿ ಮರು ನಿರ್ಮಾಣ ಮಾಡಿದೆ.

ಗೂರ್ಖಾ ಮತ್ತು ನುವಾಕೋಟ್ ಜಿಲ್ಲೆಗಳಲ್ಲಿ ಮನೆಗಳ ಮರು ನಿರ್ಮಾಣ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ರಾಯಭಾರ ಕಚೇರಿಯು, ರಾಷ್ಟ್ರೀಯ ಪುನರ್ ನಿರ್ಮಾಣ ಪ್ರಾಧಿಕಾರ (ಎನ್‌ಆರ್‌ಎ), ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆ (ಯುಎನ್‌ಡಿಪಿ) ಮತ್ತು ವಿಶ್ವಸಂಸ್ಥೆಯ ಯೋಜನಾ ಸೇವೆಗಳ ಕಚೇರಿ (ಯುಎನ್‌ಒಪಿಎಸ್) ಸಹಯೋಗದಲ್ಲಿ ಕಠ್ಮಂಡುವಿನಲ್ಲಿ ಕಾರ್ಯಕ್ರಮ ಆಯೋಜಿಸಿತ್ತು.

'ಭಾರತ ಸರ್ಕಾರವು 50,000 ಖಾಸಗಿ ಮನೆಗಳ ಮರುನಿರ್ಮಾಣವನ್ನು ಪೂರ್ಣಗೊಳಿಸಿದೆ,' ಎಂದು ಭಾರತದ ಉಪ ಮುಖ್ಯ ರಾಯಭಾರ ಕಚೇರಿಯ ನಮ್‌ಗ್ಯಾ ಸಿ. ಖಂಪಾ ಅವರು ಕಾರ್ಯಕ್ರಮದಲ್ಲಿ ಘೋಷಿಸಿದರು.

ಭೂಕಂಪ ಪೀಡಿತ 50,000 ಫಲಾನುಭವಿಗಳಿಗೆ ಆರ್ಥಿಕ ಮತ್ತು ತಾಂತ್ರಿಕ ನೆರವು ಒದಗಿಸಲು, ಪುನರ್ ನಿರ್ಮಾಣ ಮಾಡಲು ಭಾರತ ಸರ್ಕಾರವು ವಸತಿ ವಲಯದ ಮೇಲೆ ₹1,116 ಕೋಟಿ ವಿನಿಯೋಗಿಸಿದೆ.

ದಕ್ಷಿಣ ಆಫ್ರಿಕಾದಲ್ಲಿ ಡಿಸೆಂಬರ್ 5ರಿಂದ ಮಹಿಳಾ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿ

ಭಾರತ ತಂಡಕ್ಕೆ ಲಾಲ್‌ರೆಮ್ಸಿಯಾಮಿ ನಾಯಕಿ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ಸೀನಿಯರ್ ಮಹಿಳಾ ಹಾಕಿ ತಂಡದಲ್ಲಿ ಆಡಿದ್ದ ಲಾಲ್‌ರೆಮ್ಸಿಯಾಮಿ ಅವರು ಎಫ್‌ಐಎಚ್ ವಿಶ್ವಕಪ್‌ನಲ್ಲಿ ದೇಶದ ಜೂನಿಯರ್ ತಂಡವನ್ನು ಮುನ್ನಡೆಸಲಿದ್ದಾರೆ.

ದಕ್ಷಿಣ ಆಫ್ರಿಕಾದಲ್ಲಿ ಡಿಸೆಂಬರ್ 5ರಂದು ಪ್ರಾರಂಭವಾಗುವ ಟೂರ್ನಿಗೆ ಭಾರತದ 18 ಆಟಗಾರ್ತಿಯರ ತಂಡವನ್ನು ಸೋಮವಾರ ಪ್ರಕಟಿಸಲಾಗಿದೆ.

ವಿಶ್ವದ ಪ್ರಮುಖ 16 ತಂಡಗಳು ಪ್ರಶಸ್ತಿಗಾಗಿ ಸೆಣಸಲಿದ್ದು, 2016ರ ಟೂರ್ನಿಯಲ್ಲಿ ಅರ್ಜೆಂಟೀನಾ ಚಾಂಪಿಯನ್ ಆಗಿತ್ತು.

21 ವರ್ಷದ ಲಾಲ್‌ರೆಮ್ಸಿಯಾಮಿ ತಂಡದ ನಾಯಕತ್ವ ವಹಿಸಿದ್ದರೆ, ಇಶಿಕಾ ಚೌಧರಿ ಉಪನಾಯಕಿಯ ಜವಾಬ್ದಾರಿ ನಿಭಾಯಿಸಲಿದ್ದಾರೆ. ಟೋಕಿಯೊ ಕೂಟದಲ್ಲಿ ಆಡಿದ್ದ ಸಲೀಮಾ ಟೆಟೆ ಹಾಗೂ ಶರ್ಮಿಳಾ ದೇವಿ ಕೂಡ ಜೂನಿಯರ್ ತಂಡದ ಪರ ಕಣಕ್ಕಿಳಿಯಲಿದ್ದಾರೆ.

ಪ್ರೀತಿ ಮತ್ತು ಪ್ರಭಲೀನ್ ಕೌರ್ ಅವರನ್ನು ಕಾಯ್ದಿರಿಸಿದ ಆಟಗಾರ್ತಿಯರಾಗಿ ತಂಡದೊಂದಿಗೆ ತೆರಳಲಿದ್ದಾರೆ.

2013ರ ಆವೃತ್ತಿಯಲ್ಲಿ ಇಂಗ್ಲೆಂಡ್‌ಅನ್ನು ಮಣಿಸಿ ಕಂಚಿನ ಪದಕ ಗೆದ್ದಿದ್ದು ಭಾರತ ಜೂನಿಯರ್ ತಂಡದ ಇದುವರೆಗಿನ ಶ್ರೇಷ್ಠ ಸಾಧನೆಯಾಗಿದೆ. ಈ ಬಾರಿ ತಂಡವು 'ಸಿ' ಗುಂಪಿನಲ್ಲಿ ಸ್ಥಾನ ಪಡೆದಿದ್ದು, ಡಿಸೆಂಬರ್ 6ರಂದು ಮೊದಲ ಪಂದ್ಯದಲ್ಲಿ ರಷ್ಯಾ ತಂಡವನ್ನು ಎದುರಿಸಲಿದೆ.

ಡಿಸೆಂಬರ್ 10 ಮತ್ತು 16ರಂದು ನಾಕೌಟ್ ಪಂದ್ಯಗಳು ನಿಗದಿಯಾಗಿವೆ.

ಭಾರತ ತಂಡ: ಲಾಲ್‌ರೆಮ್ಸಿಯಾಮಿ (ನಾಯಕಿ), ಇಶಿಕಾ ಚೌಧರಿ (ಉಪನಾಯಕಿ), ಬಿಚು ದೇವಿ ಖರಿಬಮ್, ಖುಷ್ಬೂ (ಇಬ್ಬರೂ ಗೋಲ್‌ಕೀಪರ್‌ಗಳು), ಅಕ್ಷತಾ ಅಬಾಸೊ ಧೇಖಾಲೆ, ಪ್ರಿಯಾಂಕಾ, ಮರೀನಾ ಲಾಲ್‌ರಾಮಘಾಕಿ, ಅಜ್ಮಿನಾ ಕುಜೂರ್, ಬಲ್ಜೀತ್ ಕೌರ್, ರೀತ್, ವೈಷ್ಣವಿ ವಿಠ್ಠಲ್ ಫಾಲ್ಕೆ, ಸಲೀಮಾ ಟೆಟೆ, ಶರ್ಮಿಳಾ ದೇವಿ, ಬ್ಯೂಟಿ ಡಂಗ್‌ಡಂಗ್, ದೀಪಿಕಾ, ಮುಮ್ತಾಜ್ ಖಾನ್, ಸಂಗೀತಾ ಕುಮಾರಿ, ಜೀವನ್ ಕಿಶೋರಿ ಟೊಪ್ಪೊ.

ಲಾಲ್‌ರೆಮ್ಸಿಯಾಮಿ– ರಾಯಿಟರ್ಸ್ ಚಿತ್ರ

ಪೋರ್ಚುಗಲ್‌ಗೆ ಸರ್ಬಿಯಾ ಆಘಾತ

ಲಿಸ್ಬನ್ (ಎಪಿ): ಪೋರ್ಚುಗಲ್ ತಂಡಕ್ಕೆ ಆಘಾತ ನೀಡಿದ ಸರ್ಬಿಯಾ ಮುಂದಿನ ವರ್ಷ ಕತಾರ್‌ನಲ್ಲಿ ನಡೆಯಲಿರುವ ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಗಳಿಸಿಕೊಂಡಿತು. ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಸರ್ಬಿಯಾ 2–1ರಲ್ಲಿ ಜಯ ಗಳಿಸಿತು. ಸ್ಪೇನ್ ಮತ್ತು ಕ್ರೊವೇಷ್ಯಾ ಕೂಡ ಟೂರ್ನಿಗೆ ಅರ್ಹತೆ ಪಡೆದುಕೊಂಡಿತು. ಸ್ವೀಡನ್, ಪೋರ್ಚುಗಲ್ ಮತ್ತು ರಷ್ಯಾ ಅತಂತ್ರ ಸ್ಥಿತಿಯಲ್ಲಿದೆ.

1–1ರಲ್ಲಿ ಸಮ ಪೋರ್ಚುಗಲ್–ಸರ್ಬಿಯಾ ನಡುವಿನ ಆಗಿದ್ದ ಪಂದ್ಯ ಕೊನೆಯ ನಿಮಿಷದಲ್ಲಿ ರೋಚಕವಾಯಿತು. ಅಲೆಕ್ಸಾಂಡರ್ ಮಿಟ್ರೊವಿಚ್ ಅವರು ಹೆಡರ್ ಮೂಲಕ ಗಳಿಸಿದ ಗೋಲು ಸರ್ಬಿಯಾ ಪಾಳಯದಲ್ಲಿ ಸಂಭ್ರಮ ಮೂಡಿಸಿತು. ಪೋರ್ಚುಗಲ್‌ಗೆ ಇನ್ನೂ ಅವಕಾಶವಿದೆ. ಮಾರ್ಚ್‌ನಲ್ಲಿ ನಡೆಯಲಿರುವ ನಾಲ್ಕು ತಂಡಗಳ ಪ್ಲೇ ಆಫ್ ಹಣಾಹಣಿಯಲ್ಲಿ ಗೆದ್ದರೆ ಅದಕ್ಕೆ ವಿಶ್ವಕಪ್ ಟಿಕೆಟ್ ಸಿಗಲಿದೆ.

ಸ್ವೀಡನ್ ಎದುರಿನ ಪಂದ್ಯವನ್ನು ಡ್ರಾ ಮಾಡಿಕೊಂಡರೂ ಸ್ಪೇನ್‌ಗೆ ಅರ್ಹತೆ ಗಳಿಸುವ ಅವಕಾಶವಿತ್ತು. ಆದರೆ ಅಲ್ವಾರೊ ಮೊರಾಟಾ 86ನೇ ನಿಮಿಷದಲ್ಲಿ ಗಳಿಸಿದ ಗೋಲು ತಂಡದ ಗೆಲುವನ್ನು ಮತ್ತು ಅರ್ಹತೆಯನ್ನು ಖಚಿತಪಡಿಸಿಕೊಂಡಿತು. ರಷ್ಯಾದ ಡಿಫೆಂಡರ್ 81ನೇ ನಿಮಿಷದಲ್ಲಿ ನೀಡಿದ ಉಡುಗೊರೆ ಗೋಲಿನ ಮೂಲಕ ಕ್ರೊವೇಷ್ಯಾ 1–0ಯಿಂದ ಗೆದ್ದಿತು.

ಪಿ.ವಿ.ಸಿಂಧು– ಪಿಟಿಐ ಚಿತ್ರ

ಇಂಡೊನೇಷ್ಯಾ ಮಾಸ್ಟರ್ಸ್: ಪ್ರಶಸ್ತಿ ಮೇಲೆ ಸಿಂಧು ಕಣ್ಣು

ಬಾಲಿ, ಇಂಡೊನೇಷ್ಯಾ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದಿರುವ ಭಾರತದ ಪಿ.ವಿ.ಸಿಂಧು ಅವರು ಇಂಡೊನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದು ಪ್ರಶಸ್ತಿ ಮೇಲೆ ಚಿತ್ತ ನೆಟ್ಟಿದ್ದಾರೆ.

ಮಂಗಳವಾರ ಇಲ್ಲಿ ಆರಂಭವಾಗುವ ಟೂರ್ನಿಯಿಂದ ಸೈನಾ ನೆಹ್ವಾಲ್ ಹಾಗೂ ಸಮೀರ್ ವರ್ಮಾ ಗಾಯದ ಹಿನ್ನೆಲೆಯಲ್ಲಿ ಆಡುತ್ತಿಲ್ಲ.

2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗರಿ ಮೂಡಿಸಿದ್ದ ಸಿಂಧು, ಟೋಕಿಯೊ ಕೂಟದಲ್ಲಿ ಕಂಚಿನ ಪದಕಕ್ಕೆ ಮುತ್ತಿಟ್ಟಿದ್ದರು. ಬಳಿಕ ಡೆನ್ಮಾರ್ಕ್ ಹಾಗೂ ಫ್ರಾನ್ಸ್ ಟೂರ್ನಿಗಳಲ್ಲಿ ಕ್ರಮವಾಗಿ ಕ್ವಾರ್ಟರ್‌ಫೈನಲ್ ಹಾಗೂ ಸೆಮಿಫೈನಲ್ ತಲುಪಿದ್ದರು. ನಂತರ ಜರ್ಮನಿಯಲ್ಲಿ ನಡೆದ ಹೈಲೊ ಓಪನ್‌ನಿಂದ ಹಿಂದೆ ಸರಿದಿದ್ದರು.

ಇಲ್ಲಿ ಮೂರನೇ ಶ್ರೇಯಾಂಕ ಪಡೆದಿರುವ ಭಾರತದ ಆಟಗಾರ್ತಿ, ಎರಡು ವರ್ಷಗಳ ಹಿಂದಿನ ಆವೃತ್ತಿಯಲ್ಲಿ ಫೈನಲ್ ತಲುಪಿದ್ದರು. ಈ ಬಾರಿ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಪಂದ್ಯದಲ್ಲಿ ಅವರಿಗೆ ಥಾಯ್ಲೆಂಡ್‌ನ ಸುಪಿನಿದಾ ಕೇಟ್‌ಥೊಂಗ್ ಸವಾಲು ಎದುರಾಗಿದ್ದು, ಶುಭಾರಂಭದ ನಿರೀಕ್ಷೆಯಲ್ಲಿದ್ದಾರೆ.

2012ರ ಲಂಡನ್ ಒಲಿಂಪಿಕ್ಸ್ ಕಂಚು ವಿಜೇತೆ ಸೈನಾ ಉಬರ್ ಕಪ್ ಟೂರ್ನಿಯಲ್ಲಿ ಗಾಯದಿಂದ ಬಳಲಿದ್ದರು. ಸಮೀರ್ ಅವರಿಗೆ ಡೆನ್ಮಾರ್ಕ್ ಓಪನ್ ಟೂರ್ನಿಯಲ್ಲಿ ಇಬ್ಬರೂ ಚೇತರಿಸಿಕೊಳ್ಳುತ್ತಿದ್ದು, ಈ ಟೂರ್ನಿಗೆ ಲಭ್ಯರಿಲ್ಲ.

ಹೈಲೊ ಓಪನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕರ ಘಟ್ಟ ತಲುಪಿದ್ದ ಕಿದಂಬಿ ಶ್ರೀಕಾಂತ್ ಮತ್ತು ಲಕ್ಷ್ಯ ಸೇನ್ ಅವರ ಮೇಲೂ ಎಲ್ಲರ ಗಮನವಿದೆ. ಈ ವಿಭಾಗದಲ್ಲಿ ಬಿ.ಸಾಯಿ ಪ್ರಣೀತ್, ಎಚ್.ಎಸ್.ಪ್ರಣಯ್, ಪರುಪಳ್ಳಿ ಕಶ್ಯಪ್ ಕೂಡ ಅದೃಷ್ಟಪರೀಕ್ಷೆಗೆ ಸಜ್ಜಾಗಿದ್ದಾರೆ. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ, ಉದಯೋನ್ಮುಖ ಆಟಗಾರರಾದ ಎಂ.ಆರ್.ಅರ್ಜುನ್–ಧ್ರುವ ಕಪಿಲ ಕಣಕ್ಕಿಳಿಯಲಿದ್ದರೆ, ಕರ್ನಾಟಕದ ಅಶ್ವಿನಿ ಪೊನ್ನಪ್ಪ–ಎನ್.ಸಿಕ್ಕಿರೆಡ್ಡಿ ಮಹಿಳಾ ಡಬಲ್ಸ್‌ನಲ್ಲಿ ಆಡಲಿದ್ದಾರೆ. ಅಶ್ವಿನಿ– ಬಿ.ಸುಮೀತ್ ರೆಡ್ಡಿ, ಸಿಕ್ಕಿ– ಧ್ರುವ ಕಪಿಲಾ ಮಿಶ್ರ ಡಬಲ್ಸ್‌ನಲ್ಲಿ ಜೋಡಿಯಾಗಲಿದ್ದಾರೆ.

ಬೆಂಗಳೂರು ಎಫ್‌ಸಿಯ ಲಾಲ್‌ಬಿಯಕ್ ಫಂಕಿಮಾ (ಎಡ) ಮತ್ತು ಎಡಿಇ ಎಫ್‌ಸಿಯ ವಿಕ್ರಂ ಸಿಂಗ್ ಸೆಣಸಾಡಿದರು –ಪ್ರಜಾವಾಣಿ ಚಿತ್ರ

ಫುಟ್‌ಬಾಲ್ ಟೂರ್ನಿ: ಬಿಯುಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಯ್ ಹರ್ಮನ್ ಅಟಿಮಲಿ ಬೆಲೆಕ್ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಬೆಂಗಳೂರು ಯುನೈಟೆಡ್ ಎಫ್‌ಸಿ ತಂಡ ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆಯ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ರೋಚಕ ಜಯ ಸಾಧಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಎಡಿಇ ಎಫ್‌ಸಿಯನ್ನು ಬಿಯುಎಫ್‌ಸಿ 1–0 ಅಂತರದಲ್ಲಿ ಮಣಿಸಿತು. ಕ್ಯಾಮರಾನ್‌ನ 21 ವರ್ಷದೊಳಗಿನವರ ತಂಡದ ಸದಸ್ಯ ಬೆಲೆಕ್ 14ನೇ ನಿಮಿಷದಲ್ಲಿ ಗೋಲು ಗಳಿಸಿದರು. ಕೊನೆಯ ವರೆಗೂ ಮುನ್ನಡೆ ಉಳಿಸಿಕೊಂಡು ಎದುರಾಳಿ ತಂಡವನ್ನು ನಿಯಂತ್ರಿಸುವಲ್ಲಿ ತಂಡ ಯಶಸ್ವಿಯಾಯಿತು.

ಎಫ್‌ಸಿ ಡೆಕ್ಕನ್ ಮತ್ತು ಎಂಇಜಿ–ಸೆಂಟರ್ ಎಫ್‌ಸಿ ನಡುವಿನ ಪಂದ್ಯ 1–1 ಗೋಲಿನಿಂದ ಸಮಬಲವಾಯಿತು. ಡೆಕ್ಕನ್ ಪರ ಲೆನಿನ್ ಮಿತ್ರನ್ (70ನೇ ನಿಮಿಷ) ಮತ್ತು ಎಂಇಜಿ ಪರ ಅರ್ಜುನ್ ಮಧು (72ನೇ ನಿ) ಗೋಲು ಗಳಿಸಿದರು.

ಥಾಂಕೋಸ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ಮತ್ತು ಜವಾಹರ್ ಯೂನಿಯನ್ ಎಫ್‌ಸಿ ನಡುವಿನ ಪಂದ್ಯವೂ 1–1ರಲ್ಲಿ ಸಮವಾಯಿತು. ಜವಾಹರ್‌ಗಾಗಿ ಮೊಹಮ್ಮದ್ ಜವಾಸಿನ್ (15ನೇ ನಿ) ಮತ್ತು ಥಾಂಕೋಸ್‌ಗಾಗಿ ಜಪಾನ್ ಆಟಗಾರ ತೈಕಿ ಯೊಶಿಡಾ (27ನೇ ನಿ) ಚೆಂಡನ್ನು ಗುರಿ ಮುಟ್ಟಿಸಿದರು.

ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ಮತ್ತು ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ನಡುವೆ ಪಂದ್ಯ ನಡೆಯಲಿದೆ.